## ಅಧ್ಯಾಯ 8

# ಆರ್ಥಿಕ ಪ್ರವೃತ್ತಿಗಳು

ಒಂದು ಪ್ರದೇಶದ ಆರ್ಥಿಕ ಪ್ರವೃತ್ತಿಗಳು ಆ ಪ್ರದೇಶದಲ್ಲಿನ ನೈಸರ್ಗಿಕ ಮತ್ತು ಆರ್ಥಿಕ ಸಂಪನ್ಮೂಲಗಳು, ಮಾನವಶಕ್ತಿ, ಮಾನವೋತ್ಸಾಹ, ಉದ್ಯೋಗ, ಜೀವನಮಟ್ಟ, ಉಳಿತಾಯದ ಕ್ಷಮತೆ, ಉಳಿತಾಯದ ಮನೋಭಾವನೆ ಮೊದಲಾದವುಗಳ ಜೊತೆಗೆ ಇತರ ಆಂತರಿಕ ಸೌಲಭ್ಯಗಳಾದ ಬ್ಯಾಂಕುಗಳು, ಸಾರಿಗೆ ಸೌಲಭ್ಯ, ಮಾರುಕಟ್ಟೆ ಸೌಲಭ್ಯ, ಮೊದಲಾದವುಗಳನ್ನು ಅವಲಂಬಿಸಿರುತ್ತವೆ. ಕೊಡಗು ಜಿಲ್ಲೆಯು ವ್ಯವಸಾಯ ಪ್ರಧಾನವಾಗಿದ್ದು ಬಹು ಸಂಖ್ಯಾತ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಜಿಲ್ಲೆಯಲ್ಲಿನ ವಾರ್ಷಿಕ ಮಳೆಯು ಸುಮಾರು 2,725 ಮಿ.ಮೀ. ಇಲ್ಲಿ ಹರಿಯುವ ನದಿಗಳು ಮತ್ತು ಝರಿಗಳು ರಭಸವಾಗಿ ಹರಿದು ಅಧಿಕ ಪ್ರಮಾಣದ ಭೂಸವೆತವನ್ನುಂಟು ಮಾಡುತ್ತವೆ. ಜಿಲ್ಲೆಯ ಮೂರನೇ ಒಂದು ಭಾಗದಷ್ಟು ಪ್ರದೇಶವು ಹೆಚ್ಚು ಬೆಲೆಬಾಳುವ ತೇಗ, ಬೀಟೆ, ಮತ್ತಿ, ಶ್ರೀಗಂಧ, ಬಿದುರು ಮೊದಲಾದ ಜಾತಿಯ ಮರಗಳಿಂದ ತುಂಬಿರುವ ಅರಣ್ಯಗಳಿಂದಾವೃತವಾಗಿದೆ. ರಾಜ್ಯ ಸರ್ಕಾರವು ಅರಣ್ಯ ಇಲಾಖೆಯ ಮೂಲಕ ವಿವಿಧ ಯೋಜನೆಗಳಡಿಯಲ್ಲಿ ಅರಣ್ಯ ಅಭಿವೃದ್ಧಿಗೆ ಹಣ ಪೂರೈಸಿ ಜಿಲ್ಲೆಯನ್ನು ನಿತ್ಯ ಹರಿದ್ವರ್ಣನ್ನಾಗಿ ಇರಿಸಲು ಶ್ರಮವಹಿಸಿದೆ. ಜಿಲ್ಲೆಯ ಬೆಟ್ಟಗುಡ್ಡಗಳ ಇಳಿಜಾರುಗಳಲ್ಲಿ ಕಾಫಿ, ಟೀ, ಕಿತ್ತಳೆ, ಏಲಕ್ಕಿ, ಮೆಣಸು ಮೊದಲಾದ ವಾಣಿಜ್ಯ ಬೆಳೆಗಳನ್ನೂ, ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ಮತ್ತು ಮೈದಾನ ಪ್ರದೇಶಗಳಲ್ಲಿ ಬತ್ತ, ದ್ವಿದಳ ಧಾನ್ಯಗಳನ್ನೂ ಬೆಳೆಯುತ್ತಾರೆ. ಸಾಂಬಾರು ವಸ್ತುಗಳಾದ ಏಲಕ್ಕಿ, ಕರಿಮೆಣಸು, ಮೊದಲಾದವುಗಳನ್ನು ಅಭಿವೃದ್ಧಿಪಡಿಸಲು ಸಾಂಬಾರ ಮಂಡಳಿಯು ಸಸಿಗಳ ವಿತರಣೆ, ತಾಂತ್ರಿಕ ಸಲಹೆ, ಸಹಾಯಧನ, ಕ್ರಿಮಿನಾಶಕ, ನೀರಾವರಿ ಸಲಕರಣೆ ಮೊದಲಾದವುಗಳನ್ನೊದಗಿಸುತ್ತದೆ. ಕಿತ್ತಳೆ ಅಭಿವೃದ್ಧಿ ಮಂಡಳಿಯು ಕಿತ್ತಳೆ ಬೆಳೆಗೆ ನೆರವನ್ನೊದಗಿಸುತ್ತಿದ್ದರೂ, ಅದು ಈಚಿನ ವರ್ಷಗಳಲ್ಲಿ ರೋಗಕ್ಕೆ ತುತ್ತಾಗಿ ಅವನತಿಗೊಳ್ಳುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಖನಿಜ ಸಂಪತ್ತು ಮತ್ತು ಬೃಹತ್ ಕೈಗಾರಿಕೆಗಳು ಕಂಡುಬರದೇ ಇದ್ದರೂ ಕೆಲವು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳು ಸಾಕಷ್ಟು ಪ್ರಗತಿಯಲ್ಲಿರುವುದನ್ನು ಕಾಣಬಹುದು. ಇಲ್ಲಿನ ಕೆಲವು ಸಣ್ಣ ಕೈಗಾರಿಕಾ ಸರಕುಗಳು ಬಹಳ ಹಿಂದಿನ ಕಾಲದಿಂದಲೂ ಹೆಸರುವಾಸಿಯಾಗಿವೆ. ಕೆತ್ತನೆ ಕೆಲಸವನ್ನು ಒಳಗೊಂಡ ಚಾಕುಗಳು, ಕುಸರಿ ಅಂಚಿನ ಬಟ್ಟೆಗಳು ಇಲ್ಲಿನ ಪ್ರಸಿದ್ಧ ಸರಕುಗಳು. ಕುಸರಿ ಅಂಚಿನ ಬಟ್ಟೆಗಳ ತಯಾರಿಕೆಗೆ ಕೊಡಗಿನ ಈಶಾನ್ಯ ಭಾಗದಲ್ಲಿರುವ ಶಿರಂಗಾಲ ಪ್ರಸಿದ್ಧಿ ಹೊಂದಿತ್ತು. ಶನಿವಾರ ಸಂತೆಯು ದಪ್ಪ ಹತ್ತಿ ಬಟ್ಟೆಗೂ ಫ್ರೆಜರ್‌ಪೇಟೆಯು (ಕುಶಾಲನಗರ) ಡಿಸ್ಟಿಲರಿ ಕಾರ್ಖಾನೆಗೂ ಪ್ರಸಿದ್ಧಿ ಹೊಂದಿದ್ದವು. ಹಿಂದೆ ಸಂಭವಿಸಿದ ಕಾಫಿ ವ್ಯವಸಾಯದ ಹಿನ್ನಡೆಯಿಂದಾಗಿ ಡಿಸ್ಟಿಲರಿಯ ಉತ್ಪಾದನೆಯು ಇಳಿಮುಖಗೊಂಡಿತು. 1882 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾದ ಹಂಚು ಮತ್ತು ಮಡಿಕೆ ಮಾಡುವ ಉದ್ಯಮವು 1898ರ ವರೆಗೂ ನಡೆಯಿತು.

ಕೂಡಿಗೆಯಲ್ಲಿನ ಹಾಲು ಉತ್ಪಾದನಾ ಕೇಂದ್ರ ಮತ್ತು ಕುಶಾಲನಗರದಲ್ಲಿರುವ ಕೊಡಗು ಕಾಫಿ ಸಂಸ್ಕರಣ ಘಟಕ ಮತ್ತು ಕಾವೇರಿ ಕಾಫಿ ಸಂಸ್ಕರಣ ಘಟಕ ಇವು ಜಿಲ್ಲೆಯಲ್ಲಿನ ಮಧ್ಯಮ ಪ್ರಮಾಣದ ಕೈಗಾರಿಕಾ ಘಟಕಗಳು. ಜಿಲ್ಲೆಯಲ್ಲಿ 1990ರ ಮಾರ್ಚ್ ಅಂತ್ಯದ ವೇಳೆಗೆ ನೋಂದಣಿಯಾದ 1,171 ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದವು. ಕುಂಬಾರಿಕೆ, ಕಮ್ಮಾರಿಕೆ, ಬಡಗಿ, ಚಮ್ಮಾರಿಕೆ, ಬೆತ್ತ ಹಾಗೂ ಬಿದಿರಿನ ಕೆಲಸ ಮೊದಲಾದವುಗಳಿಗೆ ಸಂಬಂಧಿಸಿದ ಸಣ್ಣ ಪ್ರಮಾಣದ ಕೈಗಾರಿಕೆಗಳು ಇಲ್ಲಿ ಅಧಿಕವಾಗಿವೆ. ಸಣ್ಣ ಕೈಗಾರಿಕಾ ಸೇವಾ ಸಂಸ್ಥೆ (ಎಸ್. ಐ. ಎಸ್. ಐ.)ಯು ಜಿಲ್ಲೆಯಲ್ಲಿನ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೋಸ್ಕರ ಎರಡು ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸಿದೆ. ಇವುಗಳಲ್ಲಿ ಒಂದು ಮಡಿಕೇರಿಯಲ್ಲಿದ್ದು 18 ಷೆಡ್ಡುಗಳನ್ನು ಹೊಂದಿದ್ದರೆ ಮತ್ತೊಂದು ಕುಶಾಲನಗರದಲ್ಲಿದ್ದು ಎಂಟು ಷೆಡ್ಡುಗಳನ್ನು ಹೊಂದಿದೆ. ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು (ಕೆ.ಐ.ಎ.ಡಿ.ಬಿ.) ಸೋಮವಾರಪೇಟೆ ತಾಲೂಕಿನ ಕೂಡ್ಲೂರಿನಲ್ಲಿ 250 ಎಕರೆ ವಿಸ್ತೀರ್ಣದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿ ಮಧ್ಯಮ ಮತ್ತು ಬೃಹತ್ ಕೈಗಾರಿಕೆಗೆ ನೆರವನ್ನು ಒದಗಿಸಿದೆ. ಅದರ ಸದುಪಯೋಗ ಇನ್ನೂ ಆಗಬೇಕಾಗಿದೆ.

ಕೊಡಗು ಜಿಲ್ಲೆಯು ತೋಟದ ಬೆಳೆಗಳಿಗೆ ಸೂಕ್ತವಾದ ಮಣ್ಣು ಹಾಗೂ ಹವಾಗುಣವನ್ನು ಹೊಂದಿದೆ. ತೋಟಗಾರಿಕೆ ಇಲಾಖೆಯು ಹಲವಾರು ಯೋಜನೆಗಳಡಿಯಲ್ಲಿ ಏಲಕ್ಕಿ, ಕರಿಮೆಣಸು, ತೆಂಗು, ಬಾಳೆ, ಕಿತ್ತಳೆ ಮೊದಲಾದವುಗಳಿಗೆ ಬೇಕಾಗುವ ಸಸಿಗಳನ್ನು ಉತ್ಪಾದಿಸಿ ಬೆಳೆಗಾರರಿಗೆ ವಿತರಿಸುತ್ತದೆ. ತರಕಾರಿ ಮತ್ತು ಹಣ್ಣು ಬೆಳೆಯ ಅಭಿವೃದ್ಧಿಗೂ ಇದು ಆದ್ಯತೆ ನೀಡಿದೆ. ಪರಿಸರ ಅಭಿವೃದ್ಧಿಗಾಗಿ ವಾರ್ಷಿಕ ಅಂದಾಜು ಐದು ಸಾವಿರ ರೂಪಾಯಿಗಳ ವೆಚ್ಚದ ಉದ್ಯಾನವನಗಳೂ ಇದರ ಕಾರ್ಯವ್ಯಾಪ್ತಿಗೊಳಪಟ್ಟಿವೆ.

ಭೂ ಸವಕಳಿಯಿಂದ ಭೂಸಾರ ವ್ಯರ್ಥವಾಗುವುದನ್ನು ಹಾಗೂ ಬಿದ್ದ ಮಳೆಯು ವ್ಯರ್ಥವಾಗುವುದನ್ನು ತಡೆಯಲು ಮತ್ತು ಕೃಷಿ ಭೂಮಿಯು ಪಾಳು ಬೀಳುವುದನ್ನು ತಪ್ಪಿಸಲು ರಾಜ್ಯ ಸರ್ಕಾರವು 1984-85 ರಿಂದ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಸೋಮವಾರಪೇಟೆ ತಾಲೂಕಿನ ಕ್ಯಾತೆಹೊಳೆ ಜಲಾನಯನ ಪ್ರದೇಶದ 13,500 ಹೆಕ್ಟೇರ್ ಪ್ರದೇಶದಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಇದರಲ್ಲಿ ಅರಣ್ಯ ಇಲಾಖೆಯು 160 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನೂ, 200 ಕೊರಕಲು ತಡೆಗಳನ್ನು ನಿರ್ಮಿಸಿದೆ. ತೋಟಗಾರಿಕೆ ಇಲಾಖೆಯು 18 ಹೆಕ್ಟೇರ್ ಪ್ರದೇಶದಲ್ಲಿ ಕೈತೋಟವನ್ನೂ, 54.40 ಹೆಕ್ಟೇರ್‌ನಲ್ಲಿ ಆರ್ಚಿಡ್ ತೋಟಗಾರಿಕೆಯನ್ನೂ ಮಾಡಿದೆ. ಭೂಸಾರ ಸಂರಕ್ಷಣಾ ಕಛೇರಿಯು 300 ಒಡ್ಡುಗಳನ್ನು ನಿರ್ಮಿಸಿದೆ.

ರೇಷ್ಮೆ ಕೃಷಿಯು ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಾರಂಭವಾಗಿದ್ದು 1984–85 ರಿಂದ 1989-90ರವರೆಗೆ ವಿವಿಧ ಯೋಜನೆಗಳಡಿಯಲ್ಲಿ ಸುಮಾರು 15 ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣವನ್ನು 1,048ಮಂದಿ ಫಲಾನುಭವಿಗಳಿಗೆ ಒದಗಿಸಿದೆ. ಸೋಮವಾರಪೇಟೆ ತಾಲೂಕಿನ ಕೂಡಿಗೆಯಲ್ಲಿ 25 ಎಕರೆ ವಿಸ್ತೀರ್ಣದ ರೇಷ್ಮೆ ಕೃಷಿ ಕ್ಷೇತ್ರವಿದೆ. ಇದು ಬೈವೋಲ್ಟಿನ್ ಬಿತ್ತನೆ ಗೂಡುಗಳನ್ನು ಉತ್ಪಾದಿಸುವುದರ ಜೊತೆಗೆ ಹಿಪ್ಪುನೇರಳೆ ಕಡ್ಡಿಗಳನ್ನು ಉತ್ಪಾದಿಸಿ ಕೃಷಿಕರಿಗೆ ಒದಗಿಸುತ್ತಿದೆ.

ಜಿಲ್ಲೆಯಲ್ಲಿ 1990ರ ಅಂತ್ಯದ ವೇಳೆಯಲ್ಲಿ ವಿದ್ಯುತ್ ಸರಬರಾಜಿಗಾಗಿ 1,798.32 ಕಿ.ಮೀ. ಉದ್ದದ 11 ಕೆ.ವಿ. ವಿದ್ಯುತ್ ಜಾಲ, 2,716.20 ಕಿ.ಮೀ. ಉದ್ದದ ಎಲ್.ಟಿ. ವಿದ್ಯುತ್ ಜಾಲ ಇದ್ದವು. ಇದೇ ಅವಧಿಯಲ್ಲಿ 426 ಗ್ರಾಮಗಳು (ಉಪಗ್ರಾಮಗಳು ಸೇರಿ) ವಿದ್ಯುತ್ ಸೌಲಭ್ಯ ಪಡೆದಿದ್ದವು. ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ 26,499 ಮನೆಗಳು ವಿದ್ಯುತ್ತನ್ನು ಪಡೆದಿದ್ದವು. ಇವುಗಳ ಪೈಕಿ ಮಡಿಕೇರಿ ತಾಲೂಕಿನಲ್ಲಿ 6,764 ಮನೆಗಳು, ಸೋಮವಾರಪೇಟೆ ತಾಲೂಕಿನಲ್ಲಿ 11,867 ಮನೆಗಳು ಮತ್ತು ವೀರರಾಜಪೇಟೆ ತಾಲೂಕಿನಲ್ಲಿ 7,859 ಮನೆಗಳು ವಿದ್ಯುತ್ ಪಡೆದಿದ್ದವು. 8,037 ಸರ್ವ ವಿದ್ಯುತ್ ಮನೆಗಳು, 6,984 ವಿದ್ಯುತ್ ಸೌಲಭ್ಯದ ವ್ಯಾಪಾರೀ ಉದ್ಯಮಗಳು, 2,554 ವಿದ್ಯುದೀಕೃತ ಪಂಪ್‌ಸೆಟ್‌ಗಳು, 1,576 ವಿದ್ಯುತ್ ಚಾಲಿತ ಕೈಗಾರಿಕೋದ್ಯಮಗಳು, 136 ವಿದ್ಯುತ್ ಚಾಲಿತ ಪಂಪ್‌ನ ಕುಡಿಯುವ ನೀರು ಬಾವಿಗಳು, 4,260 ಬೀದಿ ದೀಪಗಳು ಸೇರಿರುವುದು ಜಿಲ್ಲೆಯ ವಿದ್ಯುತ್ ಬಳಕೆಯ ವ್ಯಾಪ್ತಿಯನ್ನು ಸೂಚಿಸುತ್ತದೆ. ಆದರೂ 9.17 ಮೆ.ವ್ಯಾ. ನಷ್ಟು ಮನೆ ದೀಪಕ್ಕೂ, 24.15 ಮೆ.ವ್ಯಾ.ನಷ್ಟು ಸರ್ವ ವಿದ್ಯುತ್ ಮನೆಗಳಿಗೂ, 3.08 ಮೆ.ವ್ಯಾ. ವಾಣಿಜ್ಯ ಹಾಗೂ ವ್ಯಾಪಾರೋದ್ಯಮಕ್ಕೂ 18.59 ಮೆ.ವ್ಯಾ.ನಷ್ಟು ಐ.ಪಿ. ಸೆಟ್ಟಿಗೂ, 1.42 ಮೆ.ವ್ಯಾ. ಹೈಟೆನ್ಷನ್ ಉದ್ದೇಶಕ್ಕೂ 9.70 ಮೆ.ವ್ಯಾ. ಇತರೆ ಬಾಬ್ತುಗಳಿಗೂ ಸೇರಿ ಒಟ್ಟು

66.11 ಮೆ.ವ್ಯಾ.ನಷ್ಟು ಅಧಿಕ ವಿದ್ಯುತ್ತಿನ ಬೇಡಿಕೆ ಜಿಲ್ಲೆಯಲ್ಲಿತ್ತು. 1990-91ರಲ್ಲಿ 24,988 ಗೃಹಗಳು, 8,678 ಸರ್ವವಿದ್ಯುತ್ ಮನೆಗಳು 3,153 ಭಾಗ್ಯಜ್ಯೋತಿ, 7,298 ವಾಣಿಜ್ಯ ಕ್ಷೇತ್ರ, 1,636 ಕೈಗಾರಿಕಾ ಕ್ಷೇತ್ರ ಮತ್ತು 158 ಇತರೆ ಕ್ಷೇತ್ರಗಳು ವಿದ್ಯುತ್ ಸಂಪರ್ಕ ಪಡೆದಿದ್ದವು. ಇದೇ ಕಾಲಾವಧಿಯಲ್ಲಿ 2,824 ವಿದ್ಯುತ್ ಪಂಪ್‌ಸೆಟ್ಟುಗಳಿದ್ದು, ಮಡಿಕೇರಿ ತಾಲೂಕಿನಲ್ಲಿ 447, ಸೋಮವಾರಪೇಟೆ ತಾಲೂಕಿನಲ್ಲಿ 1,171 ಮತ್ತು ವೀರರಾಜಪೇಟೆ ತಾಲೂಕಿನಲ್ಲಿ 1,206 ಹಂಚಿಕೆಯಾಗಿದ್ದವು.

ಕಾಫಿ ಬೆಳೆ ಅಭಿವೃದ್ಧಿಗಾಗಿ 'ನಬಾರ್ಡ್'ನಿಂದ 1988ರ ಅಂತ್ಯದವರೆಗೆ 159 ಲಕ್ಷ ರೂಪಾಯಿ ದೀರ್ಘಾವಧಿ ಸಾಲ ಮಂಜೂರಾತಿ ದೊರಕಿದ್ದು, 323 ಸದಸ್ಯರಿಗೆ 100.82 ಲಕ್ಷ ರೂಪಾಯಿ ಸಾಲ ದೊರಕಿದೆ. ಇದೇ ಕಾಲಾವಧಿಯಲ್ಲಿ 8,773 ಮಂದಿ ವೃದ್ಧಾಪ್ಯವೇತನ, 9,053 ಮಂದಿ ವಿಧವಾ ವೇತನ ಮತ್ತು 3,242 ಮಂದಿ ಅಂಗವಿಕಲರ ಮಾಸಾಶನ ಪಡೆಯುತ್ತಿದ್ದರು. ರಾಜ್ಯ ಸರ್ಕಾರವು ಸಾಲ ಹಾಗೂ ಸಹಾಯಧನ ರೂಪದಲ್ಲಿ 59,600 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 952 ಬಯೋಗ್ಯಾಸ್ ಪ್ಲಾಂಟ್‌ಗಳನ್ನು 26,640 ರೂಪಾಯಿಗಳ ವೆಚ್ಚದಲ್ಲಿ 4,064 'ಅಸ್ತ್ರ' ಒಲೆಗಳನ್ನೂ ಒದಗಿಸಿದೆ. (ಮುಂದೆ ಕೋಷ್ಟಕದಲ್ಲಿ ಇತ್ತೀಚಿನ ವಿವರ ನೀಡಿದೆ).

ಸಾಕ್ಷರತೆಯಲ್ಲಿ ಜಿಲ್ಲೆಯು 1981ರಲ್ಲಿ ಶೇ. 50.15 ಸರಾಸರಿಯನ್ನು ಹೊಂದಿದ್ದು, 1991ರಲ್ಲಿ ಇದು ಸು. ಶೇ. 58 ಆಗಿದೆ. ಎರಡು ದಶಕಗಳ ಹಿಂದೆ ಈ ಕಿರುಜಿಲ್ಲೆಯು ಸಾಕ್ಷರತೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗಿಂತ ಮುಂದಿತ್ತು. ವಯಸ್ಕರ ಶಿಕ್ಷಣ ಕಾರ್ಯಕ್ರಮವು ಜಿಲ್ಲೆಯಲ್ಲಿ 1980-81ರಲ್ಲಿ ಪ್ರಾರಂಭವಾಗಿದ್ದು 1987-88ರ ವರೆಗೆ 15 ರಿಂದ 35ರ ವಯೋಮಿತಿಯಲ್ಲಿರುವ 74,409 ಅನಕ್ಷರಸ್ಥರನ್ನು ದಾಖಲು ಮಾಡಿಕೊಂಡು 51,492 ಜನರನ್ನು ಅಕ್ಷರಸ್ಥರನ್ನಾಗಿ ಮಾಡಲಾಗಿದೆ. ಅಕ್ಷರ ಸೇನಾ ಕಾರ್ಯಕ್ರಮವು 1986-87ನೇ ಸಾಲಿನಿಂದ ಜಾರಿಯಲ್ಲಿದೆ. ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯಡಿಯಲ್ಲಿ ಕಾಲೇಜು ವಿದ್ಯಾರ್ಥಿಗಳನ್ನು ಮತ್ತು ಸ್ವಯಂ ಸೇವಾ ಸಂಘ ಸಂಸ್ಥೆಗಳನ್ನು ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕಾಗಿ ಅಳವಡಿಸಿಕೊಳ್ಳಲಾಗಿದೆ.

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಕಳೆದ ಆರು ದಶಕಗಳಿಂದ ಸಹಕಾರಿ ರಂಗದಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿರುವುದೇ ಅಲ್ಲದೆ, ವ್ಯವಸಾಯ ಸಾಲ ರೂಪದಲ್ಲಿ ಜಿಲ್ಲೆಯ ಆರ್ಥಿಕ ಅವಶ್ಯಕತೆಯ ಒಟ್ಟು ಮೊತ್ತದ ಪ್ರತಿಶತ 60ಕ್ಕಿಂತಲೂ ಹೆಚ್ಚು ಭಾಗವನ್ನು ಇದು ಪೂರೈಸಿದೆ. 1991ರಲ್ಲಿ ಜಿಲ್ಲೆಯಲ್ಲಿ 108 ವಾಣಿಜ್ಯ ಬ್ಯಾಂಕುಗಳಿದ್ದು (ಗ್ರಾಮೀಣ ಬ್ಯಾಂಕೂ ಸೇರಿ) ಉಳಿತಾಯ ಠೇವಣಿಗಳ ಮೂಲಕ ಜನರಲ್ಲಿ ಉಳಿತಾಯಮನೋಭಾವವನ್ನು ವರ್ಧಿಸಿವೆ. ವಾಣಿಜ್ಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯು ವಿಶಾಲ ಮಾರುಕಟ್ಟೆಯ ಸೌಲಭ್ಯವನ್ನು ಹೊಂದಿದೆ. ಈಗಿರುವ ವ್ಯವಸಾಯ ನಿಯಂತ್ರಿತ ಮಾರುಕಟ್ಟೆಯ ಸ್ಥಾಪನೆಗೂ ಮೊದಲೇ ಕೆಲವು ಪಟ್ಟಣಗಳು ವ್ಯಾಪಾರಕ್ಕೆ ಪ್ರಸಿದ್ಧಿಯನ್ನು ಹೊಂದಿದ್ದವು. ಸೋಮವಾರಪೇಟೆ ಮತ್ತು ಕೊಡ್ಲಿಪೇಟೆಗಳು ಕೆಲವು ಸರಕುಗಳ ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದವು.

ಜಿಲ್ಲೆಯಲ್ಲಿ ರೈಲು, ವಾಯು ಮತ್ತು ಜಲಸಾರಿಗೆ ಸೌಲಭ್ಯಗಳಿಲ್ಲ. ರೈಲು ರಸ್ತೆ ನಿರ್ಮಾಣಕ್ಕಾಗಿ ಸರ್ವೆ ಕಾರ್ಯ ನಡೆದಿದೆ. ಇದರ ಬಗ್ಗೆ ಕೊಡಗಿನ ಜನರ ಪ್ರತಿರೋಧವೂ ಇದೆ ಎನ್ನಲಾಗಿದೆ. ಈಗ ಜಿಲ್ಲೆಯು ಸಂಪೂರ್ಣವಾಗಿ ಭೂಮಾರ್ಗಗಳನ್ನು ಮಾತ್ರ ಅವಲಂಬಿಸಿದೆ. ಜಿಲ್ಲೆಯ ಆರ್ಥಿಕ ಪ್ರಗತಿಯು ಪ್ರಧಾನವಾಗಿ ಅರಣ್ಯ, ಕಾಫಿ, ಕರಿಮೆಣಸು, ಕಿತ್ತಳೆ, ಏಲಕ್ಕಿ ಮತ್ತು ಬತ್ತ ಇವುಗಳನ್ನು ಅವಲಂಬಿಸಿದ್ದು, ಇಲ್ಲಿನ ಜನಗಳ ಆದಾಯ ಮಟ್ಟವು ಗಣನೀಯ ಪ್ರಮಾಣದಲ್ಲಿ ಹೆಚ್ಚಿದ್ದರೂ ಆದಾಯದ ಬಹುಭಾಗವು ಜೀವನಾವಶ್ಯಕಗಳಾದ ಆಹಾರ, ಬಟ್ಟೆ, ವಸತಿ ಮುಂತಾದವುಗಳಿಗೂ ಮತ್ತು ಅನುತ್ಪಾದಕಗಳಾದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿರುವುದರಿಂದ ಸಾಲಗಾರರ ಸಂಖ್ಯೆ ಹೆಚ್ಚುತ್ತಿದೆ.

## ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಗಳು

ಜನಗಣತಿ ಸಮಿತಿಯು 1961ರಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ತಣ್ಣಿಮಾನಿ ಮತ್ತು ಸೋಮವಾರಪೇಟೆ ತಾಲೂಕಿನ ಹೆಬ್ಬಾಲೆ ಗ್ರಾಮಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ನಡೆಸಿ ಸಮೀಕ್ಷಾ ಮಾಹಿತಿಯನ್ನು ಸಿದ್ಧಪಡಿಸಿದೆ. 1952ರಲ್ಲಿ ಪ್ರಾರಂಭವಾದ ಸಾಮೂಹಿಕಾಭಿವೃದ್ಧಿ (ಬ್ಲಾಕ್ ಡೆವಲಪ್‌ಮೆಂಟ್) ಯೋಜನೆಯ ಕಾಲಾವಧಿಯಿಂದ ಈ ಹಳ್ಳಿಗಳಲ್ಲಿ ಆಗಿರುವ ಬದಲಾವಣೆಗಳನ್ನು ಈ ಸಮೀಕ್ಷಾ ವರದಿ ಸ್ಪಷ್ಟಪಡಿಸುತ್ತದೆ.

ಸಮೀಕ್ಷೆಯ ಕಾಲಾವಧಿಯಲ್ಲಿ (1962) ತಣ್ಣಿಮಾನಿಯಲ್ಲಿ 112 ಕುಟುಂಬಗಳು ಹಾಗೂ 669 ಜನಸಂಖ್ಯೆ ಇತ್ತು.

ಇಲ್ಲಿನ ಕುಟುಂಬಗಳ ಪೈಕಿ ಬಹುಸಂಖ್ಯಾತ ಕುಟುಂಬಗಳು ಸ್ವಂತ ಜಮೀನಿನ ಪಕ್ಕದಲ್ಲಿದ್ದವು. ಒಟ್ಟು ಕುಟುಂಬಗಳ ಪೈಕಿ 90 ಕುಟುಂಬಗಳು ಗೌಡ ಜನಾಂಗದವರದಾಗಿದ್ದವು. ಇಲ್ಲಿನ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯು 610 ಎಕರೆಗಳಷ್ಟಿದ್ದು, ಗ್ರಾಮದ ಒಟ್ಟು ವಿಸ್ತೀರ್ಣದ ಸುಮಾರು ಪ್ರತಿಶತ 12 ರಷ್ಟಿತ್ತು. ಒಟ್ಟು ವ್ಯವಸಾಯಕ್ಕೊಳಪಟ್ಟ ಭೂಮಿಯಲ್ಲಿ ಸುಮಾರು 315 ಎಕರೆಯಷ್ಟು ಭೂಮಿಯಲ್ಲಿ ಬತ್ತವನ್ನು ಬೆಳೆಯುತ್ತಿದ್ದರು. ಈ ಗ್ರಾಮದಲ್ಲಿ 1,327 ಸಾಕು ಪ್ರಾಣಿಗಳು ಮತ್ತು ಸುಮಾರು 200 ಜೇನುಗೂಡುಗಳೂ ಇದ್ದವು. ದವಸದ ಸಾಲ ಸಹಕಾರ ಸಂಘ ಮತ್ತು ಭಾಗಮಂಡಲ–ಕರಿಕೆ ರಸ್ತೆಯ ನಿರ್ಮಾಣ ಮೊದಲಾದವುಗಳು ಈ ಗ್ರಾಮದ ಜನ ಜೀವನದ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ.

ತಣ್ಣಿಮಾನಿ ಗ್ರಾಮದ ಪ್ರತಿಶತ ಸುಮಾರು82ರಷ್ಟು ಜನ ವ್ಯವಸಾಯಗಾರರಾಗಿಯೂ, 12ರಷ್ಟು ಜನರು ವ್ಯವಸಾಯ ಕಾರ್ಮಿಕರಾಗಿಯೂ ಕೆಲಸ ಮಾಡುತ್ತಿದ್ದರು. ಇವರ ಸಂಪನ್ಮೂಲ ಭೂಮಿಯೇ ಆಗಿದೆ. 1982 ರಿಂದೀಚೆಗೆ 25 ಕುಟುಂಬಗಳು ಜೇನುಸಾಕಣೆ ಉದ್ಯಮದಲ್ಲಿ ತೊಡಗಿವೆ. ಇಲ್ಲಿನ ಕೆಲವು ಕುಟುಂಬಗಳು ಏಲಕ್ಕಿ ಬೆಳೆಯಲು ಪ್ರಾರಂಭಿಸಿವೆ. ಪ್ರತೀ ಕುಟುಂಬದ ಸರಾಸರಿ ಆದಾಯ ಮತ್ತು ವೆಚ್ಚ (ವೆಚ್ಚವನ್ನು ಆವರಣದಲ್ಲಿ ಕೊಟ್ಟಿದೆ)ಗಳನ್ನು ಅವರ ಉದ್ಯಮದೊಂದಿಗೆ ಮುಂದೆ ಕೊಟ್ಟಿದೆ :

ಸ್ವಂತ ಭೂಮಿಯ ವ್ಯವಸಾಯಗಾರರ ಕುಟುಂಬದಲ್ಲಿ ರೂ. 1,511 (ರೂ. 1,599); ಗುತ್ತಿಗೆದಾರರ ಕುಟುಂಬದಲ್ಲಿ ರೂ. 1,321 (ರೂ. 1,329) ; ವ್ಯವಸಾಯ ಕಾರ್ಮಿಕ ಕುಟುಂಬದಲ್ಲಿ ರೂ. 929 (ರೂ. 928) ಮತ್ತು ಇತರ ಕುಟುಂಬಗಳಲ್ಲಿ ಅದು ರೂ. 480 (ರೂ.462) ಇತ್ತು. ಭೂವ್ಯವಸಾಯಗಾರರ ಒಟ್ಟು ವೆಚ್ಚದ ಪೈಕಿ ಪ್ರತೀಶತ 65.95 ಆಹಾರಕ್ಕೂ, 5.11 ತಂಬಾಕಿಗೂ, 17.10 ಬಟ್ಟೆಗೂ, 0.71 ಉರವಲು ಮತ್ತು ದೀಪಕ್ಕೂ, 3.54 ವಿದ್ಯಾಭ್ಯಾಸಕ್ಕೂ ಮತ್ತು 7.59 ಇತರ ಬಾಬುಗಳಿಗೂ ವೆಚ್ಚ ಮಾಡುತ್ತಿದ್ದರು. ಗೇಣಿದಾರರ, ವ್ಯವಸಾಯ ಕಾರ್ಮಿಕರ ಮತ್ತು ಇತರ ಕುಟುಂಬದವರ ವೆಚ್ಚವು ಅನುಕ್ರಮವಾಗಿ ಪ್ರತಿಶತ 71.95, 74.52 ಮತ್ತು 73.63 ಆಹಾರಕ್ಕೂ, 3.44, 7.6 ಮತ್ತು 4.73 ತಂಬಾಕಿಗೂ, 16.5, 11.95 ಮತ್ತು 12.37 ಬಟ್ಟೆಗೂ ಮತ್ತು 0.18, 0.65 ಮತ್ತು 1.06 ಉರವಲು ಮತ್ತು ದೀಪಕ್ಕೂ ವ್ಯಯ ಮಾಡುತ್ತಿದ್ದರು. ವ್ಯವಸಾಯ ಕಾರ್ಮಿಕ ಕುಟುಂಬಗಳಲ್ಲಿ ವಿದ್ಯಾಭ್ಯಾಸ ವೆಚ್ಚವು ಶೂನ್ಯವಾಗಿದ್ದರೆ ಗೇಣಿದಾರರ ಕುಟುಂಬದಲ್ಲಿ ಪ್ರತೀಶತ 0.89 ರಷ್ಟಿತ್ತು. ಈ ಗ್ರಾಮದ 112 ಕುಟುಂಬಗಳ ಸಾಲದ ಮೊತ್ತವು 60,562 ರೂಪಾಯಿಗಳಷ್ಟಿದ್ದು, ಇದು ವಿವಿಧ ಆದಾಯದ ಗುಂಪುಗಳಲ್ಲಿ ಹಂಚಿಕೆಯಾಗಿದೆ. ಪ್ರತೀಶತ ಸುಮಾರು 81 ರಷ್ಟು ಸಾಲವು ಆದಾಯದ ಮಟ್ಟ 100 ರೂ. ಮತ್ತು ಅದಕ್ಕೂ ಹೆಚ್ಚು ಇರುವ ಕುಟುಂಬಗಳಲ್ಲಿಯೂ, 14.95 ರಷ್ಟು ಸಾಲವು ಆದಾಯದ ಮಟ್ಟ 76 ರೂಪಾಯಿಗಳಿಂದ 100 ರೂ. ಇರುವ ಕುಟುಂಬಗಳಲ್ಲಿಯೂ, 2.38 ರಷ್ಟು ಸಾಲವು ಆದಾಯದ ಮಟ್ಟ 51 ರೂಪಾಯಿಗಳಿಂದ 75 ರೂ.ಗಳಿರುವ ಕುಟುಂಬಗಳಲ್ಲಿಯೂ ಮತ್ತು 1.76 ರಷ್ಟು ಸಾಲವು ಆದಾಯದ ಮಟ್ಟ 26 ರೂಪಾಯಿಗಳಿಂದ 50 ರೂಪಾಯಿಗಳಿರುವ ಕುಟುಂಬಗಳಲ್ಲಿಯೂ ಹಂಚಿಗೆಯಾಗಿತ್ತು. ಇಲ್ಲಿನ ಒಟ್ಟು ಸಾಲದಲ್ಲಿ ವ್ಯವಸಾಯೋಪಕರಣಗಳನ್ನು ಕೊಳ್ಳಲು 21,044 ರೂಪಾಯಿಗಳನ್ನು, ಮನೆ ಕಟ್ಟಲು ಮತ್ತು ಮನೆ ದುರಸ್ತಿ ಕೆಲಸಕ್ಕೆ 19,370 ರೂಪಾಯಿಗಳನ್ನು, ಗೃಹ ಖರ್ಚಿಗೆ 7,955 ರೂಪಾಯಿಗಳನ್ನು, ಸಾಲದ ಮರು ಪಾವತಿಗೆ 7,500 ರೂಪಾಯಿಗಳನ್ನು, ಮದುವೆ ಕಾರ್ಯಗಳಿಗೆ 3,925 ರೂ.ಗಳನ್ನು ಬಳಸಿಕೊಂಡಿದ್ದರು. ಒಟ್ಟು ಸಾಲಗಾರ ಕುಟುಂಬಗಳ ಪೈಕಿ 40 ಕುಟುಂಬಗಳು ಗೃಹ ಕೃತ್ಯಕ್ಕೋಸ್ಕರವು ಮತ್ತು 31 ಕುಟುಂಬಗಳು ವ್ಯವಸಾಯೋಪಕರಣಗಳನ್ನು ಕೊಳ್ಳಲು ಸಾಲ ಮಾಡಿದ್ದರು.

ಸೋಮವಾರಪೇಟೆ ತಾ|| ಹೆಬ್ಬಾಲೆಯಲ್ಲಿ 1962 ರಲ್ಲಿ 436 ಕುಟುಂಬಗಳಿದ್ದು 2,229 ಜನರಿದ್ದರು. ಈ ಗ್ರಾಮದ ವಿಸ್ತೀರ್ಣ 540 ಎಕರೆಗಳಷ್ಟಿದ್ದು ಒಟ್ಟು ಜಮೀನಿನ ವಿಸ್ತೀರ್ಣ 1,107 ಎಕರೆ ಇತ್ತು. 1956 ರಿಂದ ಈ ಗ್ರಾಮಕ್ಕೆ ಕುಡಿಯುವ ನೀರನ್ನು ಕೊಳಾಯಿ ಮೂಲಕ ಒದಗಿಸಲಾಗುತ್ತದೆ. ಸಮೀಕ್ಷೆಯ ಕಾಲದಲ್ಲಿ 15 ಕೊಳಾಯಿ ಸಂಪರ್ಕಗಳಿದ್ದವು. ಇಲ್ಲಿ ವಾಸಿಸುತ್ತಿದ್ದವರೆಲ್ಲಾ ಹಿಂದುಗಳಾಗಿದ್ದು 22 ಜಾತಿಗಳಲ್ಲಿ ಹಂಚಿಕೆಯಾಗಿದ್ದರು. ಈ ಎಲ್ಲಾ ಜಾತಿಗಳನ್ನು ಪ್ರಧಾನವಾಗಿ ವ್ಯವಸಾಯಗಾರರು, ಕುಲಕಸುಬುದಾರರು ಮತ್ತು ಕೂಲಿಗಾರರೆಂದು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಇಲ್ಲಿನ 436 ಕುಟುಂಬಗಳ ಪೈಕಿ 294 (67 ಶೇ.) ಕುಟುಂಬಗಳು ತಮ್ಮ ಆದಾಯವನ್ನು ವ್ಯವಸಾಯದಿಂದ ಪಡೆಯುತ್ತಿದ್ದರು. ಇಲ್ಲಿನ 185 ಕುಟುಂಬಗಳ 1,138 ಜನರು ವ್ಯವಸಾಯದಿಂದಲೂ, 109 ಕುಟುಂಬಗಳ 433 ಜನರು ವ್ಯವಸಾಯ ಕಾರ್ಮಿಕರಾಗಿಯೂ

ಜೀವನ ನಡೆಸುತ್ತಿದ್ದರು. ವ್ಯವಸಾಯ ಪ್ರಧಾನವಾದ 185 ಕುಟುಂಬಗಳ ಪೈಕಿ 115 ಕುಟುಂಬಗಳು ವ್ಯವಸಾಯವನ್ನು 27 ಕುಟುಂಬಗಳು ವ್ಯವಸಾಯದ ಜೊತೆಗೆ ವ್ಯವಸಾಯ ಕಾರ್ಮಿಕರಾಗಿಯೂ, 24 ಕುಟುಂಬಗಳು ವ್ಯಾಪಾರ ಮತ್ತು ಇತರ ಉಪ–ಕಸುಬನ್ನೂ ಅವಲಂಬಿಸಿದ್ದರು. ಉಳಿದ 19 ಕುಟುಂಬಗಳು ಸಾರಿಗೆ, ಕೈಗಾರಿಕೆ, ಹೋಟೇಲುಗಳು ಮತ್ತು ಇತರ ಕಸುಬುಗಳನ್ನು ಆದಾಯದ ಮೂಲವನ್ನಾಗಿ ಹೊಂದಿದ್ದರು. 109 ವ್ಯವಸಾಯ ಕಾರ್ಮಿಕರ ಪೈಕಿ 82 ಕುಟುಂಬಗಳು ವ್ಯವಸಾಯ ಕಾರ್ಮಿಕರಾಗಿ, 16 ಕುಟುಂಬಗಳು ವ್ಯವಸಾಯವನ್ನು ಉಪ–ಕಸುಬನ್ನಾಗಿ, 11 ಕುಟುಂಬಗಳು ಕೈಗಾರಿಕೆ, ವ್ಯಾಪಾರ ಮತ್ತು ಇತರ ಕೆಲಸಗಳನ್ನು ಉಪ–ಕಸುಬನ್ನಾಗಿ ಮಾಡಿಕೊಂಡಿದ್ದರು. ಇಲ್ಲಿನ 23 ಕುಟುಂಬಗಳಿಗೆ ಆನುವಂಶಿಕ ಕಸುಬು ಜೀವನಾಧಾರವಾಗಿತ್ತು.

ಈ ಗ್ರಾಮದ ಜನಸಂಖ್ಯೆಯು 1951 ಮತ್ತು 1961ರ ಜನಗಣತಿಯ ಪ್ರಕಾರ ಅನುಕ್ರಮವಾಗಿ 2,124 ಮತ್ತು 2,325. ದಶಕದ ಜನಸಂಖ್ಯೆ ಬೆಳವಣಿಗೆ ಪ್ರತಿಶತ 9.4. ಇದೇ ಕಾಲಾವಧಿಯಲ್ಲಿ ಜಿಲ್ಲೆಯ ಮತ್ತು ರಾಜ್ಯದ ಜನಸಂಖ್ಯೆಯ ಬೆಳವಣಿಗೆಯು ಅನುಕ್ರಮವಾಗಿ ಪ್ರತಿಶತ 40.1 ಮತ್ತು 21.4. ಇಲ್ಲಿನ 436 ಕುಟುಂಬಗಳ ಪೈಕಿ 172 ಕುಟುಂಬಗಳ 1,062 ಜನರು ಸ್ವಂತ ಭೂಮಿಯ ಬೇಸಾಯಗಾರರಾಗಿಯೂ 13 ಕುಟುಂಬಗಳ 76 ಜನರು ಗುತ್ತಿಗೆಗೆ ಪಡೆದ ಜಮೀನಿನ ಬೇಸಾಯಗಾರರಾಗಿಯೂ, 109ಕುಟುಂಬಗಳ 433 ಜನರು ವ್ಯವಸಾಯ ಕಾರ್ಮಿಕರಾಗಿಯೂ ಮತ್ತು 119 ಕುಟುಂಬಗಳ 530 ಜನರು ಇತರೆ ಉದ್ಯಮದಲ್ಲೂ ತೊಡಗಿದ್ದರು. ಸ್ವಂತ ಭೂಮಿಯ ವ್ಯವಸಾಯಗಾರರ ಪ್ರತೀ ಕುಟುಂಬದ ವಾರ್ಷಿಕ ಸರಾಸರಿ ಆದಾಯವು ರೂ. 1,346 ಇದ್ದರೆ, ಗೇಣಿ ವ್ಯವಸಾಯಗಾರರ ವಾರ್ಷಿಕ ತಲಾದಾಯವು (ದೊಡ್ಡವರಿಗೆ) 275.76 ರೂಪಾಯಿಗಳು; ಗೇಣಿದಾರ ಕುಟುಂಬದ ವಾರ್ಷಿಕ ಸರಾಸರಿ ಆದಾಯವು 896 ರೂ.ಗಳಿದ್ದರೆ, ವಾರ್ಷಿಕ ತಲಾದಾಯವು 205.50 ರೂಪಾಯಿಗಳು; ವ್ಯವಸಾಯ ಕಾರ್ಮಿಕ ಕುಟುಂಬದ ವಾರ್ಷಿಕ ಸರಾಸರಿ ಆದಾಯವು 508 ರೂಪಾಯಿಗಳಿದ್ದರೆ, ವಾರ್ಷಿಕ ತಲಾದಾಯವು 164.94 ರೂಪಾಯಿಗಳು; ಗೃಹಕೈಗಾರಿಕೋದ್ಯಮ ಕುಟುಂಬದ ವಾರ್ಷಿಕ ಸರಾಸರಿ ಆದಾಯವು 810 ರೂಪಾಯಿಗಳಿದ್ದರೆ, ತಲಾ ಆದಾಯವು 188.81 ರೂಪಾಯಿಗಳು; ಮತ್ತು ಇತರ ಕಸುಬುದಾರ ಕುಟುಂಬದ ವಾರ್ಷಿಕ ಸರಾಸರಿ ಆದಾಯವು 847 ರೂಪಾಯಿಗಳಿದ್ದರೆ ತಲಾದಾಯವು 248.39 ರೂಪಾಯಿಗಳಷ್ಟು ಇತ್ತು. ಸ್ವಂತ ಬೇಸಾಯಗಾರ ಕುಟುಂಬದ ವಾರ್ಷಿಕ ಸರಾಸರಿ ವೆಚ್ಚವು 97.76 ರೂಪಾಯಿಗಳು, ಗೇಣಿದಾರ ಕುಟುಂಬದ್ದು 74.32 ರೂಪಾಯಿಗಳು, ವ್ಯವಸಾಯ ಮತ್ತು ಇತರ ಕಾರ್ಮಿಕ ವರ್ಗಕ್ಕೆ ಸೇರಿದ ಕುಟುಂಬದ ವೆಚ್ಚವು 41.50 ರೂಪಾಯಿಗಳು, ಕಸುಬುದಾರ ಕುಟುಂಬ ಹೊಂದಿರುವ ವೆಚ್ಚವು 67.83 ರೂಪಾಯಿಗಳು ಮತ್ತು ಇತರ ಕುಟುಂಬಗಳ ಸರಾಸರಿ ವೆಚ್ಚವು 67.21 ರೂಪಾಯಿ ಇತ್ತು. ಇಲ್ಲಿನ 436 ಕುಟುಂಬಗಳ ಪೈಕಿ 174 ಕುಟುಂಬಗಳು ಸಾಲಗಾರ ಕುಟುಂಬಗಳಿದ್ದು ಅವುಗಳ ಸಾಲದ ಮೊತ್ತವು 1,12,325 ರೂಪಾಯಿಗಳು. ಈ 174 ಕುಟುಂಬಗಳ ಪೈಕಿ 44 ಕುಟುಂಬಗಳು 24,120 ರೂಪಾಯಿಗಳನ್ನು ಮದುವೆಗಾಗಿಯೂ, 24 ಕುಟುಂಬಗಳು 20,275 ರೂಪಾಯಿಗಳನ್ನು ಮನೆಕಟ್ಟಲು, ಮನೆ ದುರಸ್ತಿಗಾಗಿಯೂ, 12 ಕುಟುಂಬಗಳು 16,380 ರೂಪಾಯಿಗಳನ್ನು ಸಾಮಾನ್ಯ ಬೇಡಿಕೆಯ ಪೂರೈಕೆಗಾಗಿಯೂ, 51 ಕುಟುಂಬಗಳು 12,125 ರೂಪಾಯಿಗಳನ್ನು ಹಳೆಯ ಸಾಲದ ಮರುಪಾವತಿಗಾಗಿಯೂ, 16 ಕುಟುಂಬಗಳು 9,835 ರೂಪಾಯಿಗಳನ್ನು ವ್ಯಾಪಾರ ಮಾಡುವ ಉದ್ದೇಶಕ್ಕಾಗಿಯೂ, ಮೂರು ಕುಟುಂಬಗಳು 9,400 ರೂಪಾಯಿಗಳನ್ನು ದನಕರುಗಳನ್ನು ಕೊಳ್ಳುವುದಕ್ಕಾಗಿಯೂ, 34 ಕುಟುಂಬಗಳು 9,035 ರೂಪಾಯಿಗಳನ್ನು ವ್ಯವಸಾಯಕ್ಕಾಗಿಯೂ, 14 ಕುಟುಂಬಗಳು 8,430 ರೂಪಾಯಿಗಳನ್ನು ಪಂಪುಸೆಟ್ಟುಗಳನ್ನು ಕೊಳ್ಳುವುದಕ್ಕಾಗಿಯೂ, ಒಂದು ಕುಟುಂಬವು 925 ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿಯೂ, ಮೂರು ಕುಟುಂಬಗಳು 900 ರೂಪಾಯಿಗಳನ್ನು ವ್ಯಾಜ್ಯಕ್ಕಾಗಿಯೂ ಎರಡು ಕುಟುಂಬಗಳು 900 ರೂಪಾಯಿಗಳನ್ನು ಕುಟುಂಬದ ಇತರ ಖರ್ಚಿಗಾಗಿಯೂ ಸಾಲ ಮಾಡಿದ್ದವು. ಇವರ ಸಾಲದ ಮೂಲವು ಪ್ರಧಾನವಾಗಿ ಸಂಬಂಧಿಕರು, ಸ್ನೇಹಿತರು, ದೀರ್ಘಾವಧಿ ಸಾಲ ಸಹಕಾರ ಸಂಘ, ಭೂ ಅಭಿವೃದ್ಧಿ ಬ್ಯಾಂಕು ತಕಾವಿ (ಸರ್ಕಾರ), ಕೆನರಾ ಬ್ಯಾಂಕ್ ಮತ್ತು ಜೀವವಿಮಾ ನಿಗಮ ಹಾಗೂ ಭೂ ಮಾಲಿಕರು. ಇವರು ಮಾಡಿರುವ ಒಟ್ಟು ಸಾಲ ಮತ್ತು ಬ್ಯಾಂಕಿನಿಂದ ಪಡೆದಿರುವ ಸಾಲದ ಮೊತ್ತ (ಆವರಣದಲ್ಲಿ ಕೊಟ್ಟಿರುವುದು) ಅನುಕ್ರಮವಾಗಿ ಕೆಳಗೆ ಕೊಟ್ಟಿರುವಂತೆ ಇದೆ. ಮೂರು ಎಕರೆಗೂ ಕಡಿಮೆ ಜಮೀನನ್ನು ಹೊಂದಿರುವವರ ಸಾಲದ ಮೊತ್ತ 19,045 ರೂಪಾಯಿಗಳು (16,520 ರೂಪಾಯಿಗಳು); 3 ರಿಂದ 10 ಎಕರೆ ಜಮೀನನ್ನು ಹೊಂದಿರುವವರ ಸಾಲದ ಮೊತ್ತವು 54,250 ರೂಪಾಯಿಗಳು (46,880 ರೂಪಾಯಿಗಳು); 10 ಎಕರೆಗೂ ಮೇಲ್ಪಟ್ಟವರ ಸಾಲದ ಮೊತ್ತವು 52,395

ರೂಪಾಯಿಗಳು (41,350 ರೂಪಾಯಿಗಳು). ವ್ಯವಸಾಯಗಾರರಲ್ಲದವರ ಸಾಲದ ಮೊತ್ತ 7,950 ರೂಪಾಯಿಗಳಿದ್ದು ಸಾಲದ ಬಾಕಿ 7,575 ರೂಪಾಯಿಗಳಷ್ಟಿತ್ತು.

## ನಗರೀಕರಣ

ನಗರೀಕರಣಕ್ಕೆ ಸಂಬಂಧಿಸಿದಂತೆ ಕೊಡಗು ಕರ್ನಾಟಕದಲ್ಲಿ ಕೊನೆಯ ಸ್ಥಾನವನ್ನು ಪಡೆದ ಜಿಲ್ಲೆಯಾಗಿದೆ. 1981ರ ಜನಗಣತಿಯಂತೆ ಜಿಲ್ಲೆಯ 15.52 ರಷ್ಟು ಜನರು ನಗರ ಪ್ರದೇಶದಲ್ಲೂ 84.48 ರಷ್ಟು ಜನರು ಗ್ರಾಮಾಂತರ ಪ್ರದೇಶದಲ್ಲೂ ವಾಸಿಸುತ್ತಿದ್ದರು. ಇದೇ ಕಾಲಾವಧಿಯಲ್ಲಿ 10 ಪಟ್ಟಣಗಳಿದ್ದವು. ಇವುಗಳ ಪೈಕಿ ಒಂಬತ್ತರಲ್ಲಿ ಪುರಸಭೆಯೂ, ಒಂದರಲ್ಲಿ ಪಟ್ಟಣ ಪಂಚಾಯಿತಿಯೂ ಇದ್ದವು. 1901ರಲ್ಲಿ ಜಿಲ್ಲೆಯಲ್ಲಿ ಐದು ಪಟ್ಟಣಗಳಿದ್ದು, ಅವುಗಳ ಹೆಸರು ಮತ್ತು ಅವುಗಳಲ್ಲಿದ್ದ ಜನಸಂಖ್ಯೆಯು ಆವರಣದಲ್ಲಿ ಕೊಟ್ಟಿರುವಂತೆ ಇದ್ದವು. ಕೊಡ್ಲಿಪೇಟೆ (889), ಕುಶಾಲನಗರ (1,600), ಮಡಿಕೇರಿ (6,732), ಸೋಮವಾರಪೇಟೆ (1,745) ಮತ್ತು ವೀರರಾಜಪೇಟೆ (4,283). 1911 ರಿಂದ 1951 ರವರೆಗೆ ಮಡಿಕೇರಿ ಮತ್ತು ವೀರರಾಜಪೇಟೆಗಳನ್ನು ಬಿಟ್ಟು ಉಳಿದವುಗಳು ಪಿಂಗಡಣೆಯಿಂದ ಹೊರಗುಳಿದವು. 1961 ರಲ್ಲಿ ಎಂಟು ಪಟ್ಟಣಗಳು ನಗರೀಕರಣ ಗುಂಪಿಗೆ ಸೇರಿಸಲ್ಪಟ್ಟವು. ಇವುಗಳು ಗೋಣಿಕೊಪ್ಪಲು (2,749), ಹೆಬ್ಬಾಲೆ (2,325), ಕೊಡ್ಲಿಪೇಟೆ (1,667), ಕುಶಾಲನಗರ (2,902), ಪೊನ್ನಂಪೇಟೆ (2,621), ಶನಿವಾರಸಂತೆ (1,391), ಸೋಮವಾರಪೇಟೆ (5,137) ಮತ್ತು ಸುಂಟಿಕೊಪ್ಪ (1,306). 1971 ರಲ್ಲಿ ಉಲುಗುಲಿ (4,232) ಸೇರಿ ಹನ್ನೊಂದು ಪಟ್ಟಣಗಳಿದ್ದವು. 1981ರಲ್ಲಿ ಪಟ್ಟಣದ ಗುಂಪಿನಿಂದ ಉಲುಗುಲಿ ಹೊರಗುಳಿದುದರಿಂದ ಜಿಲ್ಲೆಯ ಒಟ್ಟು ಪಟ್ಟಣಗಳ ಸಂಖ್ಯೆ 10ಕ್ಕಿಳಿಯಿತು.

ಕೊಡಗು ಜಿಲ್ಲೆಯಲ್ಲಿನ ನಗರಗಳ ಜನಸಂಖ್ಯೆಯು 1901 ರಿಂದ 1921ರ ವರೆಗಿನ ಕಾಲಾವಧಿಯನ್ನುಳಿದು ಇತರ ದಶಕಗಳಲ್ಲಿ ಹೆಚ್ಚುತ್ತಾ ಹೋಗಿದೆ. ನಗರಗಳ ಜನಸಂಖ್ಯೆಯು 1901 ರಲ್ಲಿ 15,249 ಇತ್ತು. ಮುಂದಿನ ಎರಡು ದಶಕಗಳಲ್ಲಿ ಅದು ಋಣಾತ್ಮಕವಾಗಿದ್ದು, ಉಳಿದ ದಶಕಗಳಲ್ಲಿ ಧನಾತ್ಮಕವಾಗಿರುವುದನ್ನು ಕಾಣಬಹುದು. ಜಿಲ್ಲೆಯಲ್ಲಿನ 1911 ರಿಂದ 1981 ರ ದಶಕದ ಪಟ್ಟಣದ ಜನಸಂಖ್ಯೆ ಮತ್ತು ಪ್ರತಿಶತ ಬೆಳವಣಿಗೆ (ಆವರಣದಲ್ಲಿ ಕೊಟ್ಟಿರುವುದು) ಯನ್ನು ಇಲ್ಲಿ ಕೊಡಲಾಗಿದೆ. ಅದು 1911 ರಲ್ಲಿ 9,981 (—34.5), 1921ರಲ್ಲಿ 8,841 (—11.4), 1931 ರಲ್ಲಿ 9,827 (11.2), 1941ರಲ್ಲಿ 11,218 (14.2), 1951ರಲ್ಲಿ 16,255 (44.9), 1961 ರಲ್ಲಿ 42,689 (162.6), 1971 ರಲ್ಲಿ 58,699 (37.5) ಮತ್ತು 1981 ರಲ್ಲಿ 71,663 (22.1).

1901 ರಿಂದ 1991ರವರೆಗಿನ ಜಿಲ್ಲೆಯಲ್ಲಿರುವ ಮೂರು ತಾಲೂಕು ಕೇಂದ್ರ ಪಟ್ಟಣಗಳ ದಶಕವಾರು ಜನಸಂಖ್ಯೆಯ ಬೆಳವಣಿಗೆಯ ಪಟ್ಟಿ :

| | ಮಡಿಕೇರಿ | | ವೀರರಾಜಪೇಟೆ | | ಸೋಮವಾರಪೇಟೆ | |
|---|---|---|---|---|---|---|
| ದಶಕವರ್ಷ | ಜನಸಂಖ್ಯೆ | ಪ್ರತಿಶತ ಬೆಳವಣಿಗೆ | ಜನಸಂಖ್ಯೆ | ಪ್ರತಿಶತ ಬೆಳವಣಿಗೆ | ಜನಸಂಖ್ಯೆ | ಪ್ರತಿಶತ ಬೆಳವಣಿಗೆ |
| 1 | 2 | 3 | 4 | 5 | 6 | 7 |
| 1901 | 6,732 | — | 4,283 | — | 1,745 | — |
| 1911 | 6,269 | —6.88 | 3,712 | —13.33 | — | — |
| 1921 | 5,675 | —9.48 | 3,166 | —14.71 | — | — |
| 1931 | 5,995 | 5.64 | 3,832 | 21.04 | — | — |
| 1941 | 7,112 | 18.63 | 4,106 | 7.15 | — | — |
| 1951 | 10,117 | 42.25 | 6,138 | 49.49 | — | — |
| 1961 | 14,453 | 42.86 | 8,138 | 32.58 | 5,137 | *32.40 |

| 1 | 2 | 3 | 4 | 5 | 6 | 7 |
|---|---|---|---|---|---|---|
| 1971 | 19,357 | 33.93 | 9,782 | 20.20 | 6,281 | 22.27 |
| 1981 | 24,724 | 27.73 | 11,676 | 19.36 | 6,936 | 10.43 |
| | | | (21,434) | | (25,505) | |
| 1991 | 28,729 | 16.19 | 13,136 | 12.50 | 7,092 | 2.25 |
| | | | (24,010) | 12.02 | (25,168) | —1.32 |

* 1901 ರಿಂದ 1961ರವರೆಗಿನ ಸರಾಸರಿ.

ಆವರಣದಲ್ಲಿರುವುದು ತಾಲೂಕಿನ ಒಟ್ಟು ಪಟ್ಟಣಗಳ ಜನಸಂಖ್ಯೆ.

ಕೊಡಗು ಜಿಲ್ಲೆಯ ತಾಲೂಕು ಕೇಂದ್ರ ಪಟ್ಟಣಗಳನ್ನುಳಿದು ಇತರ ಪಟ್ಟಣಗಳ ಜನಸಂಖ್ಯಾ ಬೆಳವಣಿಗೆಯ ಪ್ರಮಾಣವು 1971 ಮತ್ತು 1981 ರಲ್ಲಿ ಅನುಕ್ರಮವಾಗಿ ಈ ಕೆಳಗೆ ಕೊಟ್ಟಿರುವಂತೆ ಇತ್ತು. ಗೋಣಿಕೊಪ್ಪಲು 0.29 ಮತ್ತು 95.54; ಕೊಡ್ಲಿಪೇಟೆ 23.52 ಮತ್ತು 9.47 ; ಕುಶಾಲನಗರ 72.29 ಮತ್ತು 38.72 ; ಪೊನ್ನಂಪೇಟೆ 24.57 ಮತ್ತು 33.75 ; ಶನಿವಾರಸಂತೆ 44.00 ಮತ್ತು 34.35. ಈ ಪಟ್ಟಣಗಳು 1961 ರಿಂದಲೂ ನಗರೀಕರಣದ ವ್ಯಾಪ್ತಿಗೊಳಪಟ್ಟಿವೆ. ಮಡಿಕೇರಿಯು 1901 ರಿಂದ 1971ರ ವರೆಗೆ ನಾಲ್ಕನೇ ಗುಂಪಿನ ಪಟ್ಟಣವಾಗಿತ್ತು. ಅದು 1981 ರಲ್ಲಿ ಮೂರನೇಯ ದರ್ಜೆಗೆ ಸೇರಿದ ಪಟ್ಟಣವಾಗಿದೆ. ವೀರರಾಜಪೇಟೆಯು 1901 ರಿಂದ ಆರನೇ ಗುಂಪಿನ ಪಟ್ಟಣವಾಗಿದ್ದು 1951 ರಲ್ಲಿ ಐದನೇ ಗುಂಪಿಗೂ 1981 ರಲ್ಲಿ ನಾಲ್ಕನೇ ಗುಂಪಿಗೂ ಮೇಲ್ದರ್ಜೆ ಪಡೆದಿದೆ.

ಜಿಲ್ಲೆಯಲ್ಲಿನ ಇತರ ಪಟ್ಟಣಗಳು ಹೊಂದಿರುವ ಬದಲಾವಣೆಯನ್ನು ಈ ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ತೋರಿಸಲಾಗಿದೆ.

| ಕ್ರ. ಸಂ. | ಜಿಲ್ಲೆಯ ಇತರ ಪಟ್ಟಣಗಳ ಹೆಸರು | ವರ್ಷಗಳು 1901 | 1951 | 1961 | 1971 | 1981 |
|---|---|---|---|---|---|---|
| 1. | ಗೋಣಿಕೊಪ್ಪಲು | — | — | ಆರು | ಆರು | ಐದು |
| 2. | ಹೆಬ್ಬಾಲೆ | — | — | ಆರು | ಆರು | — |
| 3. | ಕೊಡ್ಲಿಪೇಟೆ | ಆರು | — | ಆರು | ಆರು | ಆರು |
| 4. | ಕೂಡುಮಂಗಳೂರು | — | — | — | — | ಆರು |
| 5. | ಕುಶಾಲನಗರ | ಆರು | — | ಆರು | ಐದು | ಐದು |
| 6. | ಪೊನ್ನಂಪೇಟೆ | — | — | ಆರು | ಆರು | ಆರು |
| 7. | ಶನಿವಾರಸಂತೆ | — | — | ಆರು | ಆರು | ಆರು |
| 8. | ಸೋಮವಾರಪೇಟೆ | ಆರು | — | ಐದು | ಐದು | ಐದು |
| 9. | ಸುಂಟಿಕೊಪ್ಪ | — | — | ಆರು | ಆರು | ಆರು |
| 10. | ಉಲುಗುಲಿ | — | — | — | ಆರು | — |

1981ರಲ್ಲಿದ್ದ ಕೊಡಗು ಜಿಲ್ಲೆಯ ಜನಸಂಖ್ಯೆಯ ವರ್ಗೀಕರಣಕ್ಕೆ ಅನುಗುಣವಾಗಿದ್ದ ಪಟ್ಟಣಗಳ ಸಂಖ್ಯೆಯನ್ನು ಮತ್ತು ಅವುಗಳಲ್ಲಿದ್ದ ಜನಸಂಖ್ಯೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಕ್ರ. ಸಂ. | ಜನಸಂಖ್ಯೆಯ ಪ್ರಮಾಣದ ವರ್ಗೀಕರಣ | ಒಟ್ಟು ಪಟ್ಟಣಗಳ ಸಂಖ್ಯೆ | ಜನಸಂಖ್ಯೆ ಗಂಡಸರು | ಜನಸಂಖ್ಯೆ ಹೆಂಗಸರು | ಜನಸಂಖ್ಯೆ ಒಟ್ಟು |
|---|---|---|---|---|---|
| 1. | ಒಂದು ಲಕ್ಷಕ್ಕೂ ಹೆಚ್ಚು | — | — | — | — |
| 2. | 50,000–99,999 | — | — | — | — |
| 3. | 20,000–49,999 | 1 | 12,903 | 11,821 | 24,724 |
| 4. | 10,000–19,999 | 1 | 6,217 | 5,459 | 11,676 |
| 5. | 5,000–9,999 | 3 | 8,443 | 7,577 | 16,020 |
| 6. | 5,000ಕ್ಕೂ ಕಡಿಮೆ | 5 | 8,443 | 7,557 | 16,000 |
| | ಒಟ್ಟು | 10 | 36,006 | 32,414 | 68,420 |

ಆಧಾರ : ಜನಗಣತಿಯ ಕೈಪಿಡಿ.

1981 ಮತ್ತು 1991ರಲ್ಲಿ ಜಿಲ್ಲೆಯ ಪಟ್ಟಣಗಳಲ್ಲಿದ್ದ ಜನಸಂಖ್ಯೆಯ ವಿವರವನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರ. ಸಂ. | ಪಟ್ಟಣಗಳ ಹೆಸರು | ಜನಸಂಖ್ಯೆ 1981 | ಜನಸಂಖ್ಯೆ 1991 (ತಾತ್ಕಾಲಿಕ) | ಪ್ರತಿಶತ ವ್ಯತ್ಯಾಸ |
|---|---|---|---|---|
| 1. | ಮಡಿಕೇರಿ | 24,724 | 28,729 | +16.19 |
| 2. | ಸೋಮವಾರಪೇಟೆ | 6,936 | 7,092 | + 2.25 |
| 3. | ಕೊಡ್ಲಿಪೇಟೆ | 2,254 | 2,179 | — 3.32 |
| 4. | ಕೂಡುಮಂಗಳೂರು | 4,522 | — | — |
| 5. | ಕುಶಾಲನಗರ | 6,936 | 9,461 | +36.40 |
| 6. | ಶನಿವಾರಸಂತೆ | 2,691 | 3,596 | +33.63 |
| 7. | ಸುಂಟಿಕೊಪ್ಪ | 2,166 | 2,840 | +31.11 |
| 8. | ವೀರರಾಜಪೇಟೆ | 11,676 | 13,136 | +12 50 |
| 9. | ಗೋಣಿಕೊಪ್ಪಲು | 5,391 | 5,911 | + 9.64 |
| 10. | ಪೊನ್ನಂಪೇಟೆ | 4,367 | 4,963 | +13 64 |

ಆಧಾರ : ಕೊಡಗು ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ – 1990 – 91.

## ಮಾನವಶಕ್ತಿ ಸಂಪತ್ತು

ಒಂದು ಜಿಲ್ಲೆಯಲ್ಲಿ ವಾಸಿಸುತ್ತಿರುವ ಜನಸಂಖ್ಯೆ ಮತ್ತು ಉದ್ಯೋಗ ನಿರತ ಮಾನವ ಶಕ್ತಿಯು ಅಲ್ಲಿನ ಆರ್ಥಿಕ ಪುನರ್ ನಿರ್ಮಾಣಕ್ಕೆ ಮೂಲಾಧಾರವಾಗಿರುತ್ತವೆ. ಕೊಡಗು ಜಿಲ್ಲೆಯಲ್ಲಿ 1901ರಲ್ಲಿದ್ದ ಜನಸಂಖ್ಯೆ 1,80,607. ಇದು 1911ರಲ್ಲಿ 1,74,976 (–3.12), 1921ರಲ್ಲಿ 1,63,838 (–6.37), 1931ರಲ್ಲಿ 1,63,327 (–0.31) ಮತ್ತು 1941ರಲ್ಲಿ 1,68,726 (+3.31) ಆವರಣದಲ್ಲಿ ಕೊಟ್ಟಿರುವುದು ಪ್ರತೀಶತ ಜನಸಂಖ್ಯೆಯ ಬದಲಾವಣೆ. ಜಿಲ್ಲೆಯ ಜನಸಂಖ್ಯೆ 1941ರ ವರೆಗೂ ಕಡಿಮೆ ಇರುವುದಕ್ಕೆ ಬಹುಮಟ್ಟಿನ ಕಾರಣ ಎಸ್ಟೇಟ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ನೆರೆ ಮೈಸೂರು ಮತ್ತು ಹಾಸನ ಜಿಲ್ಲೆಗಳಿಂದ ಹಾಗೂ ನೆರೆರಾಜ್ಯ ಕೇರಳದಿಂದ ಬಂದವರಾಗಿದ್ದು, ಇವರುಗಳ ತೋಟದ ಕೆಲಸ ಕಾರ್ಯಗಳು ಮುಗಿದ ತರುವಾಯ ತಮ್ಮ ಸ್ವಗ್ರಾಮಗಳಿಗೆ ತೆರಳುತ್ತಿದ್ದುದು ; ವಿದ್ಯಾವಂತರಾದ ಹಲವರು ಉದ್ಯೋಗಕ್ಕಾಗಿ ಜಿಲ್ಲೆಯನ್ನು ಬಿಟ್ಟದ್ದು ; ಹಾಗೂ ಮಲೇರಿಯಾ ಪೀಡೆ. 1941 ರಿಂದ ಈಚೆಗೆ ಜಿಲ್ಲೆಯ ಜನಸಂಖ್ಯೆಯಲ್ಲಿ ಹೆಚ್ಚಳವನ್ನು ಕಾಣಬಹುದು. ಇದು 1951ರಲ್ಲಿ 2,29,405 (+35.96), 1961ರಲ್ಲಿ 3,22,829 (+40.72), 1971ರಲ್ಲಿ 3,78,291 (+17.18) ಮತ್ತು 1981 ರಲ್ಲಿ 4,61,888 (+28.93)ಇದ್ದಿತು. 1971–81ರ ದಶಕದಲ್ಲಿ ಜಿಲ್ಲೆಯ ಜನಸಂಖ್ಯೆ ಬೆಳವಣಿಗೆಯು ವಾರ್ಷಿಕ ಪ್ರತೀಶತ 2.61 ಇದ್ದು, ದಶಕದ ಅಂತ್ಯದಲ್ಲಿ ಪ್ರತೀ ಚ. ಕಿ.ಮೀ.ಗೆ 113 ಜನ ವಾಸಿಸುತ್ತಿದ್ದರು. ಒಟ್ಟು ಜನಸಂಖ್ಯೆಯ ಪ್ರತೀ ಶತ 15.52ರಷ್ಟು ಪಟ್ಟಣಗಳಲ್ಲೂ, 84.48ರಷ್ಟು ಗ್ರಾಮಾಂತರ ಪ್ರದೇಶಗಳಲ್ಲೂ ವಾಸಿಸುತ್ತಿದ್ದರು. ಹೀಗಾಗಿ ಈ ಜಿಲ್ಲೆಯು ಪಟ್ಟಣ ಪ್ರಧಾನವಲ್ಲ.

ಕೊಡಗು ಜಿಲ್ಲೆಯಲ್ಲಿ 1901ರಲ್ಲಿದ್ದ ಒಟ್ಟು ಜನಸಂಖ್ಯೆಯ ಪ್ರತೀಶತ 70.14ರಷ್ಟು ಜನ ಅಂದರೆ 1,26,682 ಜನರು 24 ವಿವಿಧ ಉದ್ಯಮ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು, ಉದ್ಯಮ ಮತ್ತು ಕಾರ್ಮಿಕರ ಸಂಖ್ಯೆ ಆವರಣದಲ್ಲಿ ತೋರಿಸಿರುವಂತೆ ಈ ರೀತಿ ಇದೆ. ಆಡಳಿತ (685); ರಕ್ಷಣೆ (ಸೇನೆ) (09); ದೇಶೀಯ ಮತ್ತು ವಿದೇಶಿಯ ಸೇವೆ (05); ಪಶುಪಾಲನೆ (504); ವ್ಯವಸಾಯ (1,04,911); ವೈಯಕ್ತಿಕ ಕೆಲಸ (ಗೃಹಕೃತ್ಯ) ಮತ್ತು ನಿರ್ಮಲೀಕರಣ ಸೇವೆ (3,040); ಆಹಾರ ಪಾನೀಯ ಮತ್ತು ಪೌಷ್ಟಿಕ ಪದಾರ್ಥಗಳ ಉತ್ಪಾದನೆ, (5,982), ಕಟ್ಟಿಗೆ ಮತ್ತು ಹುಲ್ಲು ತರುವುದು (139); ಕಟ್ಟಡ ನಿರ್ಮಾಣ (513); ವಾಹನಗಳು ಮತ್ತು ದೋಣಿಗಳ ನಿರ್ಮಾಣ (60); ಪೂರಕ ಸರಕುಗಳ ಉತ್ಪಾದನೆ (177); ಬಟ್ಟೆ ಮತ್ತು ಉಡುಪುಗಳ ತಯಾರಿಕೆ (799); ಲೋಹ ಮತ್ತು ಅಮೂಲ್ಯ ಹರಳುಗಳ ಉದ್ಯಮ (1,079); ಗಾಜು, ಮಣ್ಣು ಮತ್ತು ಕಲ್ಲಿನಪಾತ್ರೆಗಳ ತಯಾರಿಕೆ (483); ಮರ, ಬೆತ್ತ, ಮತ್ತು ಎಲೆ ಮೊದಲಾದವುಗಳ ಉತ್ಪನ್ನ (1,355); ಔಷಧಿ, ಮೇಣ ಮತ್ತು ಬಣ್ಣ ಮೊದಲಾದವುಗಳ ತಯಾರಿಕೆ (17); ಚರ್ಮದ ಕೆಲಸ (95); ವಾಣಿಜ್ಯ (248); ಸಂಗ್ರಹಣೆ ಮತ್ತು ಸಾಗಾಣಿಕೆ (1,698); ಪ್ರಬುದ್ಧ ಮತ್ತು ಕುಶಲ ಕೆಲಸ (828); ಕ್ರೀಡೆ (100); ಮಣ್ಣು ಕೆಲಸ ಮತ್ತು ಸಾರ್ವತ್ರಿಕ ಕಾಮಗಾರಿ (2,972); ಅನಿಶ್ಚಿತ ಮತ್ತು ಪ್ರಾಮುಖ್ಯವಲ್ಲದ ಉದ್ಯಮ (46); ಮತ್ತು ಸ್ವತಂತ್ರ ಉದ್ಯಮ (937). ಮೇಲಿನ ಪ್ರಭೇದಗಳನ್ನು ಅವಲೋಕಿಸಿದಾಗ ಬಹುಸಂಖ್ಯಾತ ಕೆಲಸಗಾರರು ವ್ಯವಸಾಯದಲ್ಲೂ, ಅತ್ಯಲ್ಪ ಕೆಲಸಗಾರರು ರಕ್ಷಣೆ ಹಾಗೂ ದೇಶೀಯ ಮತ್ತು ವಿದೇಶೀಯ ಸೇವೆಯಲ್ಲಿ ತೊಡಗಿದ್ದುದು ಸ್ಪಷ್ಟ. 1921ರಲ್ಲಿ ಜಿಲ್ಲೆಯ ಪ್ರತೀ 10,000 ಜನಸಂಖ್ಯೆಯಲ್ಲಿ 8,475 ಜನರು ಪ್ರಾಥಮಿಕ ರಂಗ ಎನಿಸಿರುವ ವ್ಯವಸಾಯ, ಅರಣ್ಯ, ಮೀನುಗಾರಿಕೆ, ಗಣಿ ಕೆಲಸ, ಮೊದಲಾದವುಗಳಲ್ಲಿ ತೊಡಗಿದ್ದರು. ಉಳಿದವರು ಈ ಕೆಳಗೆ ಕೊಟ್ಟಿರುವ ವಿವಿಧ ಕಾರ್ಯಗಳಲ್ಲಿ ತೊಡಗಿದ್ದರು : ಕೈಗಾರಿಕೆ (491), ಸಾರಿಗೆ (166), ವಾಣಿಜ್ಯ (409), ಸಾರ್ವಜನಿಕ ರಕ್ಷಣೆ (30), ಸಾರ್ವಜನಿಕ ಆಡಳಿತ (71), ಉದ್ದಿಮೆ ಮತ್ತು ವೃತ್ತಿಪರ ಕಸುಬು ಹಾಗೂ ಕುಶಲಕಲೆ (143), ಮತ್ತು ವಿವಿಧ ಉದ್ದಿಮೆಗಳಲ್ಲಿ (215).

1921 ರಲ್ಲಿದ್ದ ಒಟ್ಟು ಜನಸಂಖ್ಯೆ 1,63,838. ಈ ಪೈಕಿ ವ್ಯವಸಾಯ ಕ್ಷೇತ್ರದಲ್ಲಿ ಪ್ರತೀ ಶತ 83.19, ಕೈಗಾರಿಕೆಯಲ್ಲಿ 4.91, ವಾಣಿಜ್ಯದಲ್ಲಿ 5.75, ಉದ್ಯೋಗ ಉದ್ದಿಮೆಯಲ್ಲಿ 1.43 ಮತ್ತು ಇತರ ಉದ್ದಿಮೆಗಳಲ್ಲಿ 4.72 ರಷ್ಟು ತೊಡಗಿದ್ದುದು ಕಂಡು ಬರುತ್ತದೆ.

1951 ರಲ್ಲಿ ಪ್ರತಿ 10,000 ಜನರಲ್ಲಿ (1) 3,380 ಜನರು ಜೀವನಾವಶ್ಯಕ ವ್ಯಾಪ್ತಿಗೊಳಪಟ್ಟಿರುವ ಸ್ವಂತ ಭೂಮಿಯ ವ್ಯವಸಾಯಗಾರರಾಗಿಯೂ, (2) 1,006 ಜನರು ಅನ್ಯ ಭೂಮಿಯಲ್ಲಿ ವ್ಯವಸಾಯಗಾರರಾಗಿಯೂ (3) 1069 ಮಂದಿ ವ್ಯವಸಾಯ ಕಾರ್ಮಿಕರಾಗಿಯೂ

(4) 313 ಮಂದಿ ವ್ಯವಸಾಯೋಪ್ಯಮದಲ್ಲಿರದ ಭೂಮಾಲಿಕರಾಗಿಯೂ (5) 2,374 ಮಂದಿ ವ್ಯವಸಾಯೇತರ ಉತ್ಪಾದನೆಯಲ್ಲೂ (6) 346 ಜನರು ವಾಣಿಜ್ಯದಲ್ಲೂ, (7) 92 ಮಂದಿ ಸಾರಿಗೆಯಲ್ಲೂ ಮತ್ತು (8) 1,400 ಜನರು ಇತರೆ ಸೇವೆಯಲ್ಲೂ ತೊಡಗಿದ್ದರು.

1951ರಲ್ಲಿದ್ದ ಸ್ವಯಂ ಆಧಾರಿತ ಮತ್ತು ಕೂಲಿ ಆಧಾರಿತ ಕೆಲಸಗಾರರನ್ನು ಅನುಕ್ರಮವಾಗಿ 1931ಕ್ಕೆ ಹೋಲಿಸಿದರೆ ಈ ರೀತಿ ಇರುತ್ತದೆ. ಆವರಣದಲ್ಲಿ ಕೊಟ್ಟಿರುವುದು 1931ರ ಸಂಖ್ಯೆ 1) ಸ್ವಂತ ಭೂಮಿ ಬೇಸಾಯಗಾರರು 17,054 (25, 355) ಮತ್ತು 472 (30), 2) ಅನ್ಯರ ಭೂಮಿಯ ವ್ಯವಸಾಯಗಾರರು 6,187 (1,161) ಮತ್ತು 275 (76), 3) ವ್ಯವಸಾಯ ಕಾರ್ಮಿಕರು 10,374 (17,771) ಮತ್ತು 1,017 (219), 4) ವ್ಯವಸಾಯ ಮಾಡದೇ ಇರುವ ಭೂಮಾಲಿಕರು 2,052, (2,357) ಮತ್ತು 145(13), 5) ವ್ಯವಸಾಯೇತರ ಉತ್ಪಾದಕರು 27,818(16,264) ಮತ್ತು 3,803 (378),6) ವಾಣಿಜ್ಯ 2.693 (2,788) ಮತ್ತು 241 (38), 7) ಸಾರಿಗೆ 875 (1,236) ಮತ್ತು 58 (25) ಹಾಗೂ ಇತರೆ ಸೇವೆ 14,107 (17,641) ಮತ್ತು 4,615 (26,321). 1931 ಮತ್ತು 1951ರಲ್ಲಿ ಕೂಲಿಗಾಗಿ ದುಡಿಯುವವರೂ ಸೇರಿದಂತೆ ಒಟ್ಟು ಕೆಲಸಗಾರರ ಸಂಖ್ಯೆ ಅನುಕ್ರಮವಾಗಿ 1,11,673 ಮತ್ತು 91,786. 1951ರಲ್ಲಿ ಬಹುಸಂಖ್ಯಾತ ಕೆಲಸಗಾರರು ವ್ಯವಸಾಯೇತರ ಉದ್ದಿಮೆಗಳಿಂದ ಪೋಷಿತರಾಗಿರುವುದು ಕಂಡು ಬರುತ್ತದೆ. ಕಾಫಿ ತೋಟ (20,357), ಹೋಟೆಲ್‌ಗಳು ಮತ್ತು ಭೋಜನಗೃಹ (1,026), ಮರಗೆಲಸ (1,100), ರಸ್ತೆ ಸಾರಿಗೆ (865), ಮನೆಗೆಲಸ (827), ರಬ್ಬರ್ ತೋಟ (674), ರಾಜ್ಯ ಸರ್ಕಾರಿ ಉದ್ಯೋಗ (563), ಇತರೆ ಉದ್ದಿಮೆ (ಉಪಾಧ್ಯಾಯ, ಪ್ರಾಧ್ಯಾಪಕ) (541) ಮತ್ತು ಉಳಿದವರು, ಇತರೆ ಚಿಕ್ಕ ಪ್ರಮಾಣದಲ್ಲಿ ಬೇರೆ ಬೇರೆ ಕೆಲಸಗಳಲ್ಲಿ ಹಂಚಿಕೆಯಾಗಿದ್ದರು. ಎಲ್ಲಾ ವಯೋಮಾನಕ್ಕೂ ಸೇರಿದಂತೆ 1951 ರಲ್ಲಿದ್ದ ಕೆಲಸಗಾರರು ಅಂದಿನ ಒಟ್ಟು ಜನಸಂಖ್ಯೆಯ ಪ್ರತೀಶತ 39.14 ರಷ್ಟಿದ್ದು, ಪ್ರತೀಶತ ಗಂಡಸರು 54.22 ಮತ್ತು ಹೆಂಗಸರು 20.99 ಇದ್ದರು.

ಕೊಡಗು ಜಿಲ್ಲೆಯಲ್ಲಿ 1961, 1971 ಮತ್ತು 1981 ರಲ್ಲಿದ್ದ ಉದ್ಯೋಗ ನಿರತರ ಪ್ರಮಾಣವು ಅನುಕ್ರಮವಾಗಿ 46.93, 40.40 ಮತ್ತು 45.18 ರಷ್ಟಿದ್ದು ಕೆಲಸಗಾರರ ಸಂಖ್ಯೆಯು ಅನುಕ್ರಮವಾಗಿ 1,51,506, 1,52,838 ಮತ್ತು 2,08,700 ಇತ್ತು. 1981ರಲ್ಲಿ ಕೆಲಸಗಾರರ ಸಂಖ್ಯೆಯು 2,08,700 ಆಗಿದ್ದು ಇದರಲ್ಲಿ ಅರೆ ಕೆಲಸಗಾರರ ಸಂಖ್ಯೆ 34,841 ಸೇರಿಲ್ಲ. ಲಿಂಗಪ್ರಭೇದದಂತೆ ಕೆಲಸಗಾರರ ಪ್ರಮಾಣವು ಒಟ್ಟು ಜನಸಂಖ್ಯೆಗನುಗುಣವಾಗಿ 1961ರಲ್ಲಿ ಗಂಡಸರು 57.93 ಮತ್ತು ಹೆಂಗಸರು 24.17; 1971ರಲ್ಲಿ ಗಂಡಸರು 55.34 ಮತ್ತು ಹೆಂಗಸರು 23.98; 1981ರಲ್ಲಿ ಗಂಡಸರು 58.86 ಮತ್ತು ಹೆಂಗಸರು 30.54. 1991ರಲ್ಲಿ ಒಟ್ಟು 2,27,068 ಇವು ತಾತ್ಕಾಲಿಕ ಅಂಕೆಗಳು ಉದ್ಯೋಗ ನಿರತರ ಪೈಕಿ ಮುಖ್ಯ ಉದ್ಯೋಗಸ್ಥರು 2,17,708 ಮತ್ತು ಸಾಮಾನ್ಯ ಉದ್ಯೋಗಸ್ಥರು 9,360. ಒಟ್ಟು ಉದ್ಯೋಗ ನಿರತರಲ್ಲಿ 1,98,834 ಮಂದಿ ಗ್ರಾಮಾಂತರ ಪ್ರದೇಶದಲ್ಲೂ ಮತ್ತು 28,234 ಮಂದಿ ನಗರ ಪ್ರದೇಶದಲ್ಲೂ ಒಟ್ಟು ಮುಖ್ಯ ಉದ್ಯೋಗಸ್ಥರ ಪೈಕಿ 1,89,742 ಮಂದಿ ಗ್ರಾಮಾಂತರ ಪ್ರದೇಶದಲ್ಲೂ ಮತ್ತು 27,966ಮಂದಿ ನಗರ ಪ್ರದೇಶದಲ್ಲೂ ಇದ್ದರು. ಸಾಮಾನ್ಯ ಕೆಲಸಗಾರರ ಪೈಕಿ 9,092 ಮಂದಿ ಗ್ರಾಮಾಂತರ ಪ್ರದೇಶದಲ್ಲೂ ಮತ್ತು 268 ಮಂದಿ ನಗರ ಪ್ರದೇಶದಲ್ಲೂ ಇದ್ದರು.

ಜಿಲ್ಲೆಯ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹಂಚಿಕೆಯಾಗಿರುವ ಕೆಲಸಗಾರರ ಪ್ರಮಾಣವು (ಒಟ್ಟು ಕೆಲಸಗಾರರ ಪ್ರತೀಶತ) ಅನುಕ್ರಮವಾಗಿ 1961 ರಲ್ಲಿ 10.9 ಮತ್ತು 89.1; 1971ರಲ್ಲಿ 13.6 ಮತ್ತು 86.4; 1981ರಲ್ಲಿ 12.32 ಮತ್ತು 87.68 ಇತ್ತು. 1991ರ ಜನಗಣತಿಯ ತಾತ್ಕಾಲಿಕ ಅಂಕಿ ಅಂಶದ ಪ್ರಕಾರ ಆವರಣದಲ್ಲಿ ಕೊಟ್ಟಿರುವುದು 1981ರ ಮಾಹಿತಿ ಪ್ರತೀಶತ ಉಳುವವರು 20.07 (23.31), ಕೃಷಿಕಾರ್ಮಿಕರು 15.18 (15.82), ಗೃಹಕೃತ್ಯ ಸರಕು ತಯಾರಿಸುವವರು (0.93) ಮತ್ತು ಇತರ ಕಾರ್ಮಿಕರು 63.82 (59.88). ಕೆಲಸಗಾರರಲ್ಲದವರ (ನಾನ್‌ವರ್ಕರ್ಸ್) ಪ್ರಮಾಣವು ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಕ್ಕೆ ಸಂಬಂಧಿಸಿದಂತೆ (ಗೊತ್ತಾದ ಪ್ರದೇಶದ ಜನಸಂಖ್ಯೆಗನುಗುಣವಾದ ಪ್ರತೀಶತ) ಅನುಕ್ರಮವಾಗಿ 1961ರಲ್ಲಿ 38.77 ಮತ್ತು 48.17; 1971ರಲ್ಲಿ 35.35 ಮತ್ತು 41.3 ಮತ್ತು 1981ರಲ್ಲಿ 35.87 ಮತ್ತು 46 89.

1951ರ ನಂತರದ ದಶಕಗಳಲ್ಲಿ ಜಿಲ್ಲೆಯ ಕೆಲಸಗಾರರಲ್ಲಿ ಆಗಿರುವ ಹೆಚ್ಚಳದ ಪ್ರಮಾಣವು ಈ ರೀತಿ ಇದೆ. 1951–

61ರ ದಶಕದಲ್ಲಿ 68.71ರಷ್ಟು, 1961–71ರಲ್ಲಿ 0.88 ರಷ್ಟು, 1971–81ರಲ್ಲಿ 36.55ರಷ್ಟು ಇತ್ತು. 1951–61ರ ದಶಕದಲ್ಲಿ ವ್ಯವಸಾಯಗಾರರ ಪ್ರಮಾಣವು 25.7ರಷ್ಟು ಮತ್ತು ವ್ಯವಸಾಯ ಕಾರ್ಮಿಕರ ಪ್ರಮಾಣವು 57.2ರಷ್ಟು ಕಡಿಮೆಯಾಗಿತ್ತು. ಆದರೆ 1971—1981ರ ದಶಕದಲ್ಲಿ ವ್ಯವಸಾಯಗಾರರ ಪ್ರಮಾಣವು 35.1 ಮತ್ತು ವ್ಯವಸಾಯ ಕಾರ್ಮಿಕರ ಪ್ರಮಾಣವು 9.9ರಷ್ಟು ಹೆಚ್ಚಾಗಿದೆ. ಕೆಳಗೆ ಕೊಟ್ಟಿರುವ ಪಟ್ಟಿಯು 1961 ರಿಂದ 1981ರ ವರೆಗೆ ವಿವಿಧ ಕಸುಬಿನಲ್ಲಿದ್ದ ಕಾರ್ಮಿಕರ ಸಂಖ್ಯೆಯನ್ನೂ, ಆವರಣದಲ್ಲಿರುವುದು ಒಟ್ಟು ಕಾರ್ಮಿಕರಿಗನುಗುಣವಾಗಿ ಪ್ರತಿಶತ ಪ್ರಮಾಣವನ್ನೂ ಸೂಚಿಸುತ್ತದೆ.

| ಕೆಲಸಗಾರರ ಉದ್ದಿಮೆಯ ಪ್ರಕಾರ | 1961 | 1971 | 1981 | ಪ್ರತಿಶತ ಬದಲಾವಣೆ 1961–1981 |
|---|---|---|---|---|
| ವ್ಯವಸಾಯಗಾರರು | 48,433 [31.96] | 35,996 [23.55] | 48,643 [23.31] | 0.43 |
| ವ್ಯವಸಾಯ ಕಾರ್ಮಿಕರು | 19,115 [12.62] | 30,053 [19.66] | 33,024 [15.82] | 72.76 |
| ಗಣಿ, ಕಲ್ಲಿಗಣಿ, ಪಶುಪಾಲನೆ, ಅರಣ್ಯ ಇತ್ಯಾದಿ | 45,027 [29.72] | 44,831 [29.33] | 75,754 [36.30] | 68.24 |
| ಉತ್ಪಾದನೆ (ಗೃಹಕೈಗಾರಿಕೆಯನ್ನುಳಿದು) | 4,893 [3.23] | 4,925 [3.22] | 9,128 [4.37] | 86 55 |
| ಗೃಹ ಕೈಗಾರಿಕೆ | 2,832 [1.87] | 2,484 [1.63] | 2,071 [0.99] | —26.87 |
| ನಿರ್ಮಾಣ | 4,076 [2.69] | 4,963 [3.35] | 5,214 [2.50] | 27.92 |
| ವಾಣಿಜ್ಯ ಮತ್ತು ವ್ಯಾಪಾರ | 5,088 [3.36] | 8,689 [5.69] | 12,382 [5.93] | 143.36 |
| ಸಾರಿಗೆ ಸಂಗ್ರಹ ಮತ್ತು ಸಂಪರ್ಕ | 1,426 [0.94] | 2,824 [1.85] | 5,291 [2.54] | 271.04 |
| ಇತರ ಸೇವೆಗಳು | 20,616 [13.61] | 18,073 [11.82] | 17,193 [8.24] | —16.60 |
| ಒಟ್ಟು | 1,51,526 | 1,52,838 | 2,08,700 | |

ಸೂಚನೆ : 1981ರ ಸಂಖ್ಯೆಯು ಪ್ರತಿಶತ 20ರ ಸ್ಯಾಂಪಲ್ ಆಧಾರಿತ.

1981ರಲ್ಲಿ ಜಿಲ್ಲೆಯಲ್ಲಿದ್ದ ವಲಸೆ ಕೆಲಸಗಾರರ ಪೂರ್ಣ ಮಾಹಿತಿಯನ್ನೊದಗಿಸಲು ಸಾಧ್ಯವಾಗಿಲ್ಲ. ಇದಕ್ಕೆ ಬಹು ಮಟ್ಟಿನ ಕಾರಣ ವಲಸೆಗಾರರು ಹುಟ್ಟೂರಿನಲ್ಲಿರದೇಇರುವುದು. 1981ರಲ್ಲಿ ಜಿಲ್ಲೆಯಲ್ಲಿದ್ದ ವಲಸೆಗಾರರ ಸಂಖ್ಯೆ 1,99,505. ಇವರ ಪೈಕಿ 86,054 ಇದೇ ಜಿಲ್ಲೆಯಲ್ಲೂ 56,657 ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲೂ, 54,638 ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲೂ, ಮತ್ತು 2,156 ಹೊರ ರಾಷ್ಟ್ರಗಳಲ್ಲೂ ಜನಿಸಿದವರಾಗಿದ್ದರು. 1981ರಲ್ಲಿ ರಾಜ್ಯದೊಳಗಿನ ವಲಸೆ ಕಾರ್ಮಿಕರ ಸಂಖ್ಯೆಯನ್ನು ಗಮನಿಸಿದಾಗ, ದಕ್ಷಿಣ ಕನ್ನಡ ಜಿಲ್ಲೆಯು ಮೊದಲ ಸ್ಥಾನದಲ್ಲಿದ್ದು, ಮೈಸೂರು, ಹಾಸನ, ಬೆಂಗಳೂರು ಜಿಲ್ಲೆಗಳು ಮುಂದಿನ ಅನುಕ್ರಮದಲ್ಲಿವೆ. 1961 ಮತ್ತು 1971 ರಲ್ಲಿದ್ದ ಒಟ್ಟು ವಲಸೆ ಬಂದ ಕೆಲಸಗಾರರು ಅನುಕ್ರಮವಾಗಿ 99,814 ಮತ್ತು 91,250 ಇದ್ದು, ಜಿಲ್ಲೆಯ ಒಟ್ಟು ಕೆಲಸಗಾರರ ಪ್ರತಿಶತ 65.9 ಮತ್ತು 59.7ರಷ್ಟು ಸ್ಥಾನವನ್ನಾಕ್ರಮಿಸಿಕೊಂಡಿದ್ದರು. 1971ರಲ್ಲಿ ವಲಸೆ ಬಂದ ಕೆಲಸಗಾರರ ಹಾಗೂ 1961ರಲ್ಲಿ ವಲಸೆ ಬಂದವರ ಸಂಖ್ಯೆಯನ್ನು ಆವರಣದಲ್ಲಿ ಸೇರಿಸಿ ಈ ಮುಂದೆ ಕೊಡಲಾಗಿದೆ. ಜಿಲ್ಲೆಯೊಳಗಿಂದ ವಲಸೆ ಬಂದವರು 43,365 (33,846) ರಾಜ್ಯದ ಇತರ ಜಿಲ್ಲೆಗಳಿಂದ ಬಂದವರು 21,265 (26,674) ; ರಾಷ್ಟ್ರದ ಬೇರೆ ಬೇರೆ ರಾಜ್ಯಗಳಿಂದ ಬಂದವರು 26,345 (39,176) ಮತ್ತು ಹೊರ ರಾಷ್ಟ್ರಗಳಿಂದ ಬಂದವರು 275 (118). 1961 ಮತ್ತು 1971ರ ಕಾಲಾವಧಿಯಲ್ಲಿ ವಲಸೆ ಬಂದ ಮಹಿಳೆಯರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುವುದು ಕಂಡು ಬಂದಿದೆ. ಅದು 1961ರಲ್ಲಿ 36,585 ಇದ್ದು 1971 ರಲ್ಲಿ 28,365 ಇತ್ತು. ಇದೇ ಕಾಲಾವಧಿಯಲ್ಲಿ ವಲಸೆ ಬಂದ ಪುರುಷ ಕೆಲಸಗಾರರ ಸಂಖ್ಯೆಯು ಅಲ್ಪ ಪ್ರಮಾಣದಲ್ಲಿ ವ್ಯತ್ಯಾಸ ಹೊಂದಿರುವುದು ಕಂಡು ಬಂದಿದೆ. ವಲಸೆ ಬಂದ ಪುರುಷರ ಸಂಖ್ಯೆಯು 1961ರಲ್ಲಿ 63,229 ಇತ್ತು ; 1971ರಲ್ಲಿ ಅದು 62,885 ಇದ್ದು ಅಲ್ಪ ಪ್ರಮಾಣದಲ್ಲಿ ಈ ಸಂಖ್ಯೆಯಲ್ಲಿ ಕುಸಿತವಾಗಿದೆ. ಈ ಕೆಳಗೆ ಕೊಟ್ಟಿರುವ ಪಟ್ಟಿಯು 1961 ಮತ್ತು 1971ರ ಗ್ರಾಮಾಂತರ ಮತ್ತು ಪಟ್ಟಣಗಳಲ್ಲಿದ್ದ ಪುರುಷರ ಮತ್ತು ಮಹಿಳಾ ವಲಸೆ ಕೆಲಸಗಾರರ ಸಂಖ್ಯೆಯನ್ನು ವಿವರಣೆಯೊಂದಿಗೆ ಮಾಹಿತಿಯನ್ನೊದಗಿಸುತ್ತದೆ.

| ಕ್ರ. ಸಂ. | ವಲಸೆ ವಿವರಣೆ | | 1961 ಪುರುಷರು | 1961 ಮಹಿಳೆಯರು | 1971 ಪುರುಷರು | 1971 ಮಹಿಳೆಯರು |
|---|---|---|---|---|---|---|
| 1. | ಜಿಲ್ಲೆಯ ಬೇರೆ ಭಾಗಗಳಿಂದ ಬಂದವರು | ಗ್ರಾ. | 15,605 | 16,252 | 20,365 | 13,930 |
| | | ಪ. | 1,335 | 654 | 6,925 | 1,895 |
| 2. | ರಾಜ್ಯದ ಬೇರೆ ಜಿಲ್ಲೆಗಳಿಂದ ಬಂದವರು | ಗ್ರಾ. | 14,109 | 8,601 | 8,735 | 4,080 |
| | | ಪ. | 2,962 | 1,002 | 5,795 | 2,330 |
| 3. | ರಾಷ್ಟ್ರದ ಬೇರೆ ರಾಜ್ಯಗಳಿಂದ ಬಂದವರು | ಗ್ರಾ. | 24,537 | 8,929 | 11,740 | 3,730 |
| | | ಪ. | 4,573 | 1,137 | 7,330 | 2,015 |
| 4. | ಬೇರೆ ರಾಷ್ಟ್ರಗಳಿಂದ ಬಂದವರು | | 108 | 10 | 270 | 05 |

1971ರಲ್ಲಿ ಮೇಲೆ ಕೊಟ್ಟಿರುವ ಸಂಖ್ಯೆಯ ಜೊತೆಗೆ 1,725 ಪುರುಷರು ಮತ್ತು 65 ಮಹಿಳೆಯರನ್ನು ಗ್ರಾಮಾಂತರ ಪ್ರದೇಶದವರು ಅಥವಾ ಪಟ್ಟಣ ಪ್ರದೇಶದವರು ಎಂಬುದನ್ನು ಗುರುತಿಸಿಲ್ಲ.

ಜಿಲ್ಲೆಯಲ್ಲಿನ ವಲಸೆ ಕೆಲಸಗಾರರ ಪೈಕಿ ನೆರೆ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡು ರಾಜ್ಯಗಳಿಂದ ಬಂದವರ ಸಂಖ್ಯೆ ಪ್ರಮುಖವೆನಿಸಿದೆ, ಆಂಧ್ರ ಪ್ರದೇಶವೂ ಇವುಗಳ ಜೊತೆಗೆ ಸೇರುತ್ತದೆ. 1961ರಲ್ಲಿ 21,181 ಪುರುಷರು ಮತ್ತು 5,062 ಮಹಿಳೆಯರು ಕೇರಳದಿಂದಲೂ, 7,754 ಪುರುಷರು ಮತ್ತು 4,939 ಮಹಿಳೆಯರು ತಮಿಳುನಾಡಿನಿಂದಲೂ, ಬಂದವರಾಗಿದ್ದಾರೆ. ಇದೇ ವಲಸೆಗಾರರ ಪೈಕಿ 1971ರಲ್ಲಿ13,935 ಪುರುಷರು ಮತ್ತು 3,010 ಮಹಿಳೆಯರು ಕೇರಳದಿಂದಲೂ, 5,825 ಪುರುಷರು ಮತ್ತು 3,010 ಮಹಿಳೆಯರು ಆಂಧ್ರಪ್ರದೇಶದಿಂದಲೂ ಬಂದು

ಸೇರಿದ್ದಾರೆ. ಹೀಗೆ ವಲಸೆ ಕೆಲಸಗಾರರು ಬೇರೆಬೇರೆ ರಾಜ್ಯ, ಜಿಲ್ಲೆ ಮತ್ತು ಜಿಲ್ಲೆಯ ಇತರ ಭಾಗಗಳಿಂದ ಬಂದವರು ಗಣಿ, ಕಲ್ಲುಗಣಿ, ಪಶುಪಾಲನೆ, ಮೀನುಗಾರಿಕೆ, ಅರಣ್ಯ, ತೋಟ ಗಾರಿಕೆ ಮೊದಲಾದ ಕೆಲಸಗಳಲ್ಲಿ ತೊಡಗಿಸಲ್ಪಟ್ಟಿದ್ದಾರೆ. 1961 ಮತ್ತು 1971ರಲ್ಲಿದ್ದ ಜೀವನ ನಿರ್ವಹಣೆಯ ಕಸುಬಿನಲ್ಲಿ ತೊಡಗಿಸಲ್ಪಟ್ಟವರ ಸಂಖ್ಯೆ ಅನುಕ್ರಮವಾಗಿ 38,166 ಮತ್ತು 33,440. ವ್ಯವಸಾಯದಲ್ಲಿ 18,492 ಮತ್ತು 9,886 ; ವ್ಯವಸಾಯ ಕಾರ್ಮಿಕರು 12,594 ಮತ್ತು 15,579 ; ಗೃಹ ಕೈಗಾರಿಕೆಯಲ್ಲಿ 6,203 ಮತ್ತು 5,995 ; ಇತರೆ ಸೇವೆಯಲ್ಲಿ 15,581 ಮತ್ತು 12,890. (ವಲಸೆ ಕೆಲಸಗಾರ ಪ್ರವೃತ್ತಿಯ ವಿವರವಾದ ಪಟ್ಟಿಯನ್ನು ಪುಟ 456ರಲ್ಲಿ ಕೊಟ್ಟಿದೆ.)

### ಕೃಷಿ ಭೂಮಿ ಹಾಗೂ ಬೆಳೆಗಳು

ಕೊಡಗು ಜಿಲ್ಲೆಯ ಗ್ರಾಮ ಲೆಕ್ಕದ ಪ್ರಕಾರ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 1990-91 ರಲ್ಲಿ 4,10,775 ಹೆಕ್ಟೇರ್‌ನಷ್ಟಿದ್ದು, ಈ ಪೈಕಿ 1,34,597 ಹೆ. ಅರಣ್ಯ, 31,010 ಹೆ. ಬಂಜರು ಭೂಮಿ, 23,691 ಹೆ. ವ್ಯವ ಸಾಯೇತರ ಭೂಮಿ, 17,804 ಹೆ. ಹುಲ್ಲುಗಾವಲು, 37,878 ಹೆ. ವಿವಿಧ ಮರಗಳ ತೋಪು, 11,915 ಹೆ. ಬೀಳು ಭೂಮಿ ಮತ್ತು 5,691 ಹೆ. ಇತರ ಬೀಳು ಭೂಮಿ ಇತ್ತು. ಇದೇ ಸಾಲಿನಲ್ಲಿ ಜಿಲ್ಲೆಯಲ್ಲಿ 1,47,680 ನಿವ್ವಳ ಭೂಮಿಯು ಬಿತ್ತನೆ ಪ್ರದೇಶವಾಗಿದ್ದು ಅದರಲ್ಲಿ 3,038ಹೆ. ಭೂಮಿಯನ್ನು ಒಂದಕ್ಕಿಂತ ಹೆಚ್ಚು ಬೆಳೆಗೆ ಬಳಸಿಕೊಂಡಿದ್ದರಿಂದ ಒಟ್ಟು ಬೆಳೆಯಿಡಲಾದ ಭೂಮಿಯ ವಿಸ್ತೀರ್ಣವು 1,50,727 ಹೆ. ನಷ್ಟಿತ್ತು.

ಜಿಲ್ಲೆಯ ಬಿತ್ತನೆಯಾದ ಒಟ್ಟು ಪ್ರದೇಶದಲ್ಲಿ 73,000 ಹೆ. ಪ್ರದೇಶದಲ್ಲಿ ಆಹಾರ ಬೆಳೆಯನ್ನು ಮತ್ತು 78,000ಹೆ. ಪ್ರದೇಶದಲ್ಲಿ ಆಹಾರೇತರ ಬೆಳೆಯನ್ನು ಬೆಳೆಯಲಾಗಿತ್ತು. ಪ್ರಸ್ತುತ (1990-91) ಹಾಗೂ ಹಿಂದಿನ ಸಾಲಿನಲ್ಲಿ ಬೆಳೆದ ಬೆಳೆಗಳ ವಿವರ ಹಾಗೂ ಅವುಗಳು ಹೊಂದಿದ್ದ ವಿಸ್ತೀರ್ಣ ವನ್ನು ಈ ಮುಂದೆ ಕೊಟ್ಟಿದೆ. ವಿಸ್ತೀರ್ಣವು ಹೆಕ್ಟೇರ್ ನಲ್ಲಿದೆ. ಆವರಣದಲ್ಲಿ ಕೊಟ್ಟಿರುವುದು 1989-90ರ ವಿಸ್ತೀರ್ಣ. ಬತ್ತ 45,269 (45,565), ರಾಗಿ 1,393 (1,210), ದ್ವಿದಳ ಧಾನ್ಯಗಳು 966 (697), ಕಬ್ಬು 22 (8), ಮೆಣಸಿನಕಾಯಿ 375 (381), ಏಲಕ್ಕಿ 13,463 (13,768), ಕರಿಮೆಣಸು 1,297 (1,274) ಇತರ ಸಾಂಬಾರು ಪದಾರ್ಥಗಳು 93 (92), ಅಡಿಕೆ 360 (856), ಹಣ್ಣುಗಳು 5,574 (5,883), ಗೋಡಂಬಿ 1,694 (1,694), ತರಕಾರಿಗಳು 2,294 (2,335), ಎಣ್ಣೆಕಾಳುಗಳು 93 (175), ಹತ್ತಿ 12 (12), ಕಾಫಿ 74,272 (74,057), ಟೀ 470 (470), ಹೊಗೆ ಸೊಪ್ಪು 194 (86), ಕೋಕೋ 55 (50), ಹಿಪ್ಪುನೇರಳೆ 140 (137), ರಬ್ಬರ್ 1,935 (1,935) ಮತ್ತು ಮೇವಿನ ಬೆಳೆ 30 (30).

1990-91ರಲ್ಲಿ ಜಿಲ್ಲೆಯ ಅಧಿಕ ಇಳುವರಿ ಬೆಳೆಗಳ ಪೈಕಿ ಬತ್ತ 26,000 ಹೆಕ್ಟೇರ್‌ಗಳಲ್ಲೂ, ಮುಸುಕಿನ ಜೋಳ 1,200 ಹೆ.ನಲ್ಲೂ ರಾಗಿ 11,000 ಹೆ.ಗಳಲ್ಲೂ, ಇತರ ಬೆಳೆಗಳು 1,200 ಹೆ.ಗಳಲ್ಲೂ ಇತ್ತು. 1988-89 ರಲ್ಲಿ ಬತ್ತವು ಮಡಿಕೇರಿ ತಾಲೂಕಿನಲ್ಲಿ 5,942 ಹೆಕ್ಟೇರ್ ನಲ್ಲೂ, ಸೋಮವಾರಪೇಟೆ ತಾಲೂಕಿನಲ್ಲಿ 8.139 ಹೆಕ್ಟೇರ್ ನಲ್ಲೂ ವೀರರಾಜಪೇಟೆ ತಾಲೂಕಿನಲ್ಲಿ 9,996 ಹೆಕ್ಟೇರ್ ನಲ್ಲೂ ಇತ್ತು. ಮುಸುಕಿನ ಜೋಳವನ್ನು ಜಿಲ್ಲೆಯ ಎರಡು ತಾಲೂಕುಗಳಲ್ಲಿ ಮಾತ್ರ ಬೆಳೆಯಲಾಗಿತ್ತು. ಇದು ಸೋಮ ವಾರಪೇಟೆ ತಾಲೂಕಿನ 1,060 ಹೆ.ನಲ್ಲೂ ಮತ್ತು ವೀರರಾಜ ಪೇಟೆ ತಾಲೂಕಿನ 8ಹೆ.ನಲ್ಲೂ ಇತ್ತು. ಅಧಿಕ ಇಳುವರಿ ರಾಗಿ ಮತ್ತು ಹತ್ತಿ ಬೆಳೆಯುವ ಪ್ರದೇಶವು ಸೋಮವಾರಪೇಟೆ ತಾಲೂಕಿನಲ್ಲಿ ಮಾತ್ರವಿದ್ದು ಅವು ಅನುಕ್ರಮವಾಗಿ 2,478 ಹೆ. ಮತ್ತು 14 ಹೆ.ಗಳಲ್ಲಿ ಬಿತ್ತನೆಗೊಂಡಿದ್ದವು. 1989-90 ರಲ್ಲಿ, 43,135 ಹೆ. ಪ್ರದೇಶದಲ್ಲಿ ಬತ್ತವನ್ನು, 1,150 ಹೆ. ಯಲ್ಲಿ ರಾಗಿಯನ್ನು 922 ಹೆ.ನಲ್ಲಿ ಮುಸುಕಿನ ಜೋಳ ವನ್ನು, 342 ಹೆ.ನಲ್ಲಿ ದ್ವಿದಳ ಧಾನ್ಯಗಳನ್ನು 113 ಹೆ. ನಲ್ಲಿ ಎಣ್ಣೆಕಾಳುಗಳನ್ನು ಮತ್ತು 86 ಹೆ.ನಲ್ಲಿ ಹೊಗೆ ಸೊಪ್ಪನ್ನು ಬೆಳೆಯಲಾಗಿದ್ದು 97,589 ಎಕರೆ ಪ್ರದೇಶದಲ್ಲಿ ತೋಟದ ಬೆಳೆಗಳಾದ ಕಾಫಿ, ಏಲಕ್ಕಿ, ಕರಿಮೆಣಸು, ಕಿತ್ತಳೆ, ತೆಂಗು ಮತ್ತು ರಬ್ಬರ್ ಬೆಳೆಗಳನ್ನು ಬೆಳೆಯಲಾಗಿತ್ತು. ಕೃಷಿಗೆ ಯೋಗ್ಯವಾಗಿದ್ದರೂ ಬಿತ್ತನೆ ಆಗದಿರುವ ಪ್ರದೇಶ 8,356ಹೆ. ಮತ್ತು ಕೃಷಿಗೆ ಯೋಗ್ಯವಲ್ಲದ ಜಮೀನಿನ ವಿಸ್ತೀರ್ಣ 20, 388 ಹೆ. ಇತ್ತು. ಇಳುವರಿಯ ಪ್ರಮಾಣವು ಹೆ. ಒಂದಕ್ಕೆ ಟನ್‌ಗಳ ಪ್ರಮಾಣದಲ್ಲಿ ನೋಡಿದಾಗ ಬತ್ತ 2.300, ರಾಗಿ 1.200 ಮುಸುಕಿನ ಜೋಳ 4.000 ದ್ವಿದಳಧಾನ್ಯ 0.800, ಎಣ್ಣೆಕಾಳು, ನೆಲಗಡಲೆ 1.50, ಮತ್ತು ಹೊಗೆಸೊಪ್ಪು 0.650 ಇತ್ತು. ಈ ಕಾರ್ಯಕ್ರಮ ಕೈಕೊಳಪಟ್ಟ ಪ್ರದೇಶದಲ್ಲಿ ಸಸಿಗಳ ಪ್ರಮಾಣವನ್ನು ಕ್ರಮ ಗೊಳಿಸುವುದು, ಹೆಚ್ಚು ಇಳುವರಿ ಕೊಡುವ ಪ್ರಮಾಣೀಕೃತ ಬಿತ್ತನೆ ಬೀಜ ಬಳಕೆ, ಸರಿ ವಯಸ್ಸಿನ ಸಸಿಗಳನ್ನು ನಾಟಿ

ಕೊಡಗು ಜಿಲ್ಲೆಯಲ್ಲಿನ ಪ್ರತೀ ತಾಲೂಕಿನಲ್ಲೂ ಜೀವನ ನಿರ್ವಹಣಾ ಕಸುಬಿಗನುಗುಣವಾಗಿ 1961, 1971 ಮತ್ತು 1981 ರಲ್ಲಿದ್ದ ವಲಸಿ ಕೆಲಸಗಾರರ ಪ್ರವೃತ್ತಿಯನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ.

| ಕ್ರ. ಸಂ. | ಜೀವನ ನಿರ್ವಹಣೆ ಕಸುಬು | ಮಡಿಕೇರಿ 1961 | ಮಡಿಕೇರಿ 1971 | ಮಡಿಕೇರಿ 1981 | ಸೋಮವಾರಪೇಟೆ 1961 | ಸೋಮವಾರಪೇಟೆ 1971 | ಸೋಮವಾರಪೇಟೆ 1981 | ವೀರರಾಜಪೇಟೆ 1961 | ವೀರರಾಜಪೇಟೆ 1971 | ವೀರರಾಜಪೇಟೆ 1981 |
|---|---|---|---|---|---|---|---|---|---|---|
| 1. | ವ್ಯವಸಾಯಗಾರರು | 14,966 | 10,219 | 13,741 | 15,257 | 12,552 | 16,396 | 18,210 | 13,225 | 18,506 |
| | | (42.76) | (30.35) | (27.83) | (29.11) | (21.63) | (22.89) | (28.41) | (21.63) | (21.10) |
| 2. | ವ್ಯವಸಾಯ ಕಾರ್ಮಿಕರು | 3,244 | 5,218 | 6,754 | 4,806 | 7,566 | 7,162 | 11,065 | 17,269 | 19,108 |
| | | (9.27) | (15.49) | (13.68) | (9.17) | (13.06) | (10.00) | (17.26) | (28.24) | (21,79) |
| 3. | ಗೃಹಕೃತ್ಯ ಕೈಗಾರಿಕೆ | 754 | 815 | 618 | 1,063 | 792 | 697 | 1,015 | 877 | 756 |
| | | (2.16) | (2.42) | (1.25) | (2.03) | (1.37) | (0.97) | (1.59) | (1.43) | (0.86) |
| 4. | ಇತರ ಕೆಲಸಗಾರರು | 16,033 | 17,423 | 28,260 | 31,288 | 37,106 | 47.367 | 33,805 | 29,776 | 49,335 |
| | | (45.81) | (51.74) | (57.24) | (59.69) | (63.96) | (66.14) | (52.74) | (48.70) | (56.25) |
| | ಒಟ್ಟು ಕಾರ್ಮಿಕರು | 34,997 | 33,675 | 49,373 | 52,414 | 58,016 | 71,622 | 64,095 | 61,147 | 87,705 |
| | | (100.00) | (100.00) | (100.00) | (100.00) | (100.00) | (100.00) | (100.00) | (100.00) | (100.00) |

ಸೂಚನೆ : ಮೇಲಿನ ಸಂಖ್ಯೆಯಲ್ಲಿ ಮಡಿಕೇರಿ ತಾಲೂಕಿನ 4,892, ಸೋಮವಾರಪೇಟೆ ತಾಲೂಕಿನ 2,827, ಮತ್ತು ವೀರರಾಜಪೇಟೆ ತಾಲೂಕಿನ 1,928 ಅರೆ ಕೆಲಸಗಾರರನ್ನು ಹೊರತುಪಡಿಸಿದೆ.

ಮಾಡುವುದು, ಮಣ್ಣು ಪರೀಕ್ಷೆಯ ಆಧಾರದಲ್ಲಿ ರಸಗೊಬ್ಬರವನ್ನು ಬಳಸುವುದು, ಕಳೆನಾಶಕ ಬಳಸುವುದು ಮತ್ತು ನೀರು ಪೂರೈಕೆಯನ್ನು ಸಮರ್ಪಕವಾಗಿ ನಿರ್ವಹಿಸುವುದರ ಮೂಲಕ ಹೆಚ್ಚು ಇಳುವರಿಯನ್ನು ಪಡೆಯುವ ಅವಕಾಶವಿದೆ. ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಮುಂಗಾರಿನಲ್ಲಿ ಬತ್ತವನ್ನು, ಹಿಂಗಾರಿನಲ್ಲಿ ನೆಲಗಡಲೆ ಬೆಳೆಯನ್ನು ಮತ್ತು ಮಳೆ ಆಧಾರಿತ ಪ್ರದೇಶದಲ್ಲಿ ಬತ್ತ ಮತ್ತು ರಾಗಿಯನ್ನು, ಖುಷ್ಕಿ ಪ್ರದೇಶದಲ್ಲಿ ದ್ವಿದಳ ಧಾನ್ಯ ಮತ್ತು ಹಿಪ್ಪನೇರಳೆ ಬೆಳೆಯನ್ನು ಬೆಳೆಯುವುದು ಲಾಭದಾಯಕವಾಗಬಲ್ಲದು. ಸಮಗ್ರ ಬತ್ತ ಅಭಿವೃದ್ಧಿ ಕಾರ್ಯಕ್ರಮವು ಕಳೆದ ಮೂರು ವರ್ಷಗಳಿಂದಲೂ ಜಿಲ್ಲೆಯಲ್ಲಿ ಜಾರಿಯಲ್ಲಿದ್ದು ರೈತರಿಗೆ ರಿಯಾಯ್ತಿ ದರದಲ್ಲಿ ಕೃಷಿ ಸಾಮಗ್ರಿಗಳನ್ನು ಮತ್ತು ತಾಂತ್ರಿಕ ಜ್ಞಾನವನ್ನು ಒದಗಿಸುತ್ತಿರುವುದರಿಂದ ಬತ್ತದ ಇಳುವರಿಯಲ್ಲಿ ಹೆಚ್ಚಳ ಕಂಡುಬರುತ್ತಿದೆ.

ಬತ್ತ, ರಾಗಿ, ಮೆಕ್ಕೆ ಜೋಳ, ಧಾನ್ಯಗಳು, ಎಣ್ಣೆ ಬೀಜಗಳು ಮತ್ತು ತಂಬಾಕು ಇವು ಜಿಲ್ಲೆಯ ಪ್ರಮುಖ ಕೃಷಿ ಉತ್ಪಾದನೆಗಳು. ಬತ್ತ ಮತ್ತು ಧಾನ್ಯಗಳು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ, ಅಧಿಕ ಇಳುವರಿಯ ರಾಗಿಯು ಮಡಿಕೇರಿ ತಾಲೂಕಿನಲ್ಲೂ, ಎಣ್ಣೆ ಬೀಜಗಳು ಮತ್ತು ತಂಬಾಕು ಸೋಮವಾರಪೇಟೆ ತಾಲೂಕಿನಲ್ಲೂ ಅಧಿಕ ಪ್ರಮಾಣದಲ್ಲಿ ಕಂಡುಬರುತ್ತವೆ. ತೋಟದ ಬೆಳೆಗಳಾದ ಕಿತ್ತಳೆ, ಬಾಳೆ, ಮಾವು, ಸೀಬೆ ಮೊದಲಾದ ಹಣ್ಣುಗಳ ಉತ್ಪಾದನೆಗೆ ಜಿಲ್ಲೆಯು ಹೆಸರುವಾಸಿಯಾಗಿದೆ. 1987–88ರಲ್ಲಿ ಜಿಲ್ಲೆಯಲ್ಲಿದ್ದ ಹಣ್ಣು ಬೆಳೆಯುವ ಪ್ರದೇಶ ಮತ್ತು ಅವುಗಳ ಉತ್ಪಾದನೆಯ ಪ್ರಮಾಣವನ್ನು ಈ ಮುಂದೆ ಕೊಟ್ಟಿದೆ. ಉತ್ಪಾದನಾ ಪ್ರದೇಶವನ್ನು ಹೆಕ್ಟೇರ್‌ಗಳಲ್ಲಿ ಕೊಟ್ಟಿದ್ದು ಉತ್ಪಾದನಾ ಪ್ರಮಾಣವನ್ನು ಟನ್‌ಗಳಲ್ಲಿ ಕೊಟ್ಟಿರುವುದೇ ಅಲ್ಲದೆ ಅವುಗಳನ್ನು ಆವರಣದಲ್ಲಿ ಕೊಟ್ಟಿದೆ. ಬಾಳೆ 1,974 (17,462), ಕಿತ್ತಳೆ 19,110 (1,29,616), ಸೀಬೆ 296 (1,622) ಮತ್ತು ಇತರ ಹಣ್ಣುಗಳು 673 (5,250).

### ಕೃಷಿ ಹಿಡುವಳಿ

1980–81ರ ಕೃಷಿ ಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 42,864 ಹಿಡುವಳಿದಾರರಿದ್ದು 1,73,982 ಹೆ. ನಷ್ಟು ಭೂಮಿಯನ್ನು ಹೊಂದಿದ್ದರು. ಒಟ್ಟು ಹಿಡುವಳಿ ಭೂಮಿಯ ಪೈಕಿ 1,64,095 ಹೆ. ಭೂಮಿಯು 42,281 ಸ್ವತಂತ್ರ ಹಿಡುವಳಿದಾರರ ವಶದಲ್ಲೂ, 3,484 ಹೆ. ಭೂಮಿಯು 353 ಜಂಟಿ ಹಿಡುವಳಿದಾರರ ವಶದಲ್ಲೂ ಮತ್ತು 6,403 ಹೆ. ಭೂಮಿಯು 230 ಸಂಸ್ಥೆಗಳ ವಶದಲ್ಲೂ ಇತ್ತು. ಒಟ್ಟು 42,864 ಹಿಡುವಳಿದಾರರ ಪೈಕಿ 1,411 ಹಿಡುವಳಿದಾರರು ಪರಿಶಿಷ್ಟ ಜಾತಿಯವರಾಗಿದ್ದು 1,786 ಹೆ. ಹಿಡುವಳಿಯನ್ನೂ, 313 ಹಿಡುವಳಿದಾರರು ಪರಿಶಿಷ್ಟ ವರ್ಗದವರಾಗಿದ್ದು 376 ಹೆ. ಹಿಡುವಳಿಯನ್ನೂ ಮತ್ತು 41,140 ಹಿಡುವಳಿದಾರರು ಇತರ ವರ್ಗಕ್ಕೆ ಸೇರಿದವರಾಗಿದ್ದು 1,71,820 ಹೆ. ಭೂ ಹಿಡುವಳಿಯನ್ನೂ ಹೊಂದಿದ್ದರು. ಜಿಲ್ಲೆಯ ಮೂರನೇಯ ಪಂಚವಾರ್ಷಿಕ ಯೋಜನೆಯ ವರದಿಯ ಪ್ರಕಾರ ಜಿಲ್ಲೆಯ ಸರಾಸರಿ ಕೃಷಿ ಹಿಡುವಳಿಯು 6.1 ಎಕರೆ. ಇದು ವೀರರಾಜಪೇಟೆ ತಾಲೂಕಿನಲ್ಲಿ ಅಧಿಕವಾಗಿದ್ದು 10 ಎಕರೆಯಿಂದ 200 ಎಕರೆಯವರೆಗೂ ಇತ್ತು. ಆದರೆ ವಿಭಜಿತ ಭೂಮಿಯ ಪ್ರಮಾಣವೂ ಸಾಕಷ್ಟಿತ್ತು. 1985–86ರ ಕೃಷಿ ಗಣತಿಯ ಪ್ರಕಾರ ಜಿಲ್ಲೆಯಲ್ಲಿ 55,000 ಹಿಡುವಳಿದಾರರಿದ್ದು 1,80,000 ಹೆ. ಭೂ ಹಿಡುವಳಿಯನ್ನು ಹೊಂದಿದ್ದರು. ಈ 55,000 ಹಿಡುವಳಿದಾರರ ಪೈಕಿ 2,000 ಹಿಡುವಳಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರೆ 1,000 ಹಿಡುವಳಿದಾರರು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿದ್ದರು. ಉಳಿದ 52,000 ಹಿಡುವಳಿದಾರರು ಇತರ ಗುಂಪಿಗೆ ಸೇರಿದವರಾಗಿದ್ದರು. ಜಿಲ್ಲೆಯ ಒಟ್ಟು 1.80,000 ಹೆ. ಭೂ ಹಿಡುವಳಿಯ ಪೈಕಿ 2,000 ಹೆ. (0.2 ಶೇ.) ಪರಿಶಿಷ್ಟ ಜಾತಿಯವರ ವಶದಲ್ಲೂ 1,000 ಹೆ. ಪರಿಶಿಷ್ಟ ವರ್ಗದವರ ವಶದಲ್ಲೂ ಮತ್ತು 1,77,000 ಹೆ. ಇತರರ ವಶದಲ್ಲೂ ಇತ್ತು.

1980–81 ಮತ್ತು 1985–86ರಲ್ಲಿದ್ದ ಜಿಲ್ಲೆಯ ಸರಾಸರಿ ಭೂ ಹಿಡುವಳಿಯ ಹಂಚಿಕೆಯು ಕಾಲಕ್ಕೆ ಅನುಕ್ರಮವಾಗಿ 000 ಹೆ.ಗಳಲ್ಲಿ ಈ ಕೆಳಗೆ ತೋರಿಸಿರುವಂತೆ ಇತ್ತು. ಆವರಣದಲ್ಲಿ ಪ್ರತೀಶತ ಬದಲಾವಣೆಯನ್ನು ಕೊಟ್ಟಿದೆ. ಪರಿಶಿಷ್ಟ ಜಾತಿಯವರ ವಶದಲ್ಲಿ 1.27, 0.82 (–35.4), ಪರಿಶಿಷ್ಟ ವರ್ಗದವರ ವಶದಲ್ಲಿ 1.21, 1.23 (+1.7) ಇತ್ತು. ಇದೇ ಕಾಲಾವಧಿಯಲ್ಲಿದ್ದ ವಿವಿಧ ಹಿಡುವಳಿದಾರರ ಸಂಖ್ಯೆಯನ್ನು ಕಾಲಾವಧಿಗೆ ಅನುಕ್ರಮವಾಗಿಯೂ ಮತ್ತು ಪ್ರತೀಶತ ಹಿಡುವಳಿದಾರರ ಸಂಖ್ಯೆಯನ್ನು ಆವರಣದಲ್ಲೂ ಮತ್ತು ಪ್ರತೀಶತ ಬದಲಾವಣೆಯನ್ನು ಎರಡನೇಯ ಆವರಣದ ನಂತರವೂ ಕೊಟ್ಟಿದೆ. ಒಟ್ಟು ಹಿಡುವಳಿದಾರರು 42,000 (98.6) ಮತ್ತು 55,000 (99.1) 29.6 ಜಂಟಿ ಹಿಡುವಳಿದಾರರ ಮತ್ತು ಸಂಸ್ಥೆಗಳ ಹಿಡುವಳಿದಾರರ ಸಂಖ್ಯೆ ಲಭ್ಯವಿಲ್ಲದಿರುವುದರಿಂದ ಅವರ ಪ್ರತೀಶತ ಮಾಹಿತಿಯನ್ನು ಮಾತ್ರ ಕೊಟ್ಟಿದೆ. ಜಂಟೀ ಹಿಡುವಳಿದಾರರ ಸಂಖ್ಯೆಯು ಕಾಲಾವಧಿಗೆ

ಅನುಕ್ರಮವಾಗಿ 0.8 ಮತ್ತು 0.5 ಇದ್ದು ಪ್ರತಿಶತ–23.5 ವ್ಯತ್ಯಾಸವನ್ನು ಹೊಂದಿತ್ತು. ಸಂಸ್ಥೆಗಳ ಹಿಡುವಳಿಯ ಪ್ರಮಾಣ ಕಾಲಾವಧಿಗೆ ಅನುಕ್ರಮವಾಗಿ ಪ್ರತಿಶತ 0.6 ಮತ್ತು 0.4 ಇದ್ದು–5.2 ವ್ಯತ್ಯಾಸದಿಂದ ಕೂಡಿತ್ತು. ಇದೇ ಕಾಲಾವಧಿಯಲ್ಲಿ ಹಿಡುವಳಿಯ ಪ್ರಮಾಣವು ಕಾಲಾವಧಿಗೆ ಅನುಕ್ರಮವಾಗಿ 000 ಹೆ. ವಿಸ್ತೀರ್ಣದಲ್ಲಿ ಕೊಟ್ಟಿದೆ. ಆವರಣದಲ್ಲಿ ಪ್ರತಿಶತ ಹಿಡುವಳಿಯ ಪ್ರಮಾಣವನ್ನು ಮತ್ತು ಆವರಣದ ನಂತರ ಅವುಗಳಲ್ಲಿ ಉಂಟಾಗಿದ್ದ ಪ್ರತಿಶತ ವ್ಯತ್ಯಾಸವನ್ನು ಕೊಟ್ಟಿದೆ. ಸ್ವತಂತ್ರ ಹಿಡುವಳಿದಾರರ ಹಿಡುವಳಿಯು 164 (94.3), 174 (96.5), 5.8. ಜಂಟಿ ಹಿಡುವಳಿದಾರರ ಹಿಡುವಳಿಯು 4 (2.0), 2 (1.1) –42.3 ಮತ್ತು ಸಂಸ್ಥೆಗಳ ಹಿಡುವಳಿಯು 6 (3.7), 4 (2.4)–32.9 ಇತ್ತು.

(ಭೂ ಹಿಡುವಳಿದಾರರ ಸಂಖ್ಯೆ ಹಾಗೂ ಅವರು ಹೊಂದಿದ್ದ ಒಟ್ಟು ಭೂಮಿಯ ವಿವರವಾದ ಪಟ್ಟಿಗೆ ಪುಟ 459 ನೋಡಿ)

1970–71, 1976–77, 1980–81 ಮತ್ತು 1985–86 ರಲ್ಲಿದ್ದ ಭೂ ಹಿಡುವಳಿಯ ವಿಸ್ತೀರ್ಣವನ್ನು ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಲಾಗಿದೆ.

| ವರ್ಷ | ಹಿಡುವಳಿದಾರರ ಸಂಖ್ಯೆ | ಹಿಡುವಳಿಯ ವಿಸ್ತೀರ್ಣ ಹೆ. | ಪ್ರತಿಶತ ಹಿಡುವಳಿದಾರರ ಸಂಖ್ಯೆ | ಪ್ರತಿಶತ ವಿಸ್ತೀರ್ಣ ಹೆ. | ಹಿಡುವಳಿದಾರರ ಪ್ರತಿಶತ ಬದಲಾವಣೆ | ವಿಸ್ತೀರ್ಣದ ಪ್ರತಿಶತ ಬದಲಾವಣೆ |
|---|---|---|---|---|---|---|
| 1970–71 | 36,786 | 1,36,258 | 1.04 | 1.20 | 10.01 | 7.65 |
| 1976–77 | 40,467 | 1,46,683 | 1.06 | 1.29 | 16.52 | 27.69 |
| 1980–81 | 42,864 | 1,73,982 | 1.00 | 1.48 | 5.92 | 18 61 |
| 1985–86 | 55,000 | 1,80,000 | 1.1 | 1.5 | 2.90 | 3.4 |

ಆಧಾರ : ಕೃಷಿ ಗಣತಿ 1980–81 ಮತ್ತು 1985–86.

## ಪ್ರಮುಖ ವಾಣಿಜ್ಯ ಬೆಳೆಗಳು

ಕೊಡಗು ಜಿಲ್ಲೆಯ ತೋಟಗಾರಿಕೆ ಉತ್ಪಾದನೆಯಲ್ಲಿ ಕಿತ್ತಳೆ ಹಣ್ಣು ಹೆಸರುವಾಸಿಯಾಗಿದ್ದು 1989–90ರಲ್ಲಿ ಅದರ ವಿಸ್ತೀರ್ಣ 5,061 ಹೆ. ಇತ್ತು. 1988–89ರಲ್ಲಿ ಇದರ ವಿಸ್ತೀರ್ಣ 5,112 ಹೆ. ಈ ಕಿತ್ತಳೆ ಬೆಳೆಯ ವಿಸ್ತೀರ್ಣವು1988–89ಕ್ಕಿಂತ ಕಡಿಮೆಯಾಗಿರುವುದು ಬಹುಮಟ್ಟಿನ ಕಾರಣ "ಬೇವು ಹಿಡಿಯುವುದು" ಎಂಬ ರೋಗಕ್ಕೆ ಈ ಬೆಳೆಯು ತುತ್ತಾಗಿರುವುದು. ಜಿಲ್ಲೆಯ ವಾಣಿಜ್ಯ ಬೆಳೆಗಳಲ್ಲಿ ಏಲಕ್ಕಿ, ಕರಿಮೆಣಸು, ಗೋಡಂಬಿ, ರಬ್ಬರ್, ಅಡಿಕೆ ಮತ್ತು ತೆಂಗು ಸೇರಿವೆ. 1990–91ರಲ್ಲಿ ಏಲಕ್ಕಿ ಬೆಳೆಯ ವಿಸ್ತೀರ್ಣ 13,468 (13,768) ಹೆಕ್ಟೇರುಗಳು, ಕರಿಮೆಣಸು 1,297 (1,274) ಹೆಕ್ಟೇರುಗಳು, ಗೋಡಂಬಿ 1,694 (1,694) ಹೆಕ್ಟೇರುಗಳು, ರಬ್ಬರ್ 1,935 (1,935) ಹೆಕ್ಟೇರುಗಳು, ಅಡಿಕೆ 360 (856) ಹೆಕ್ಟೇರುಗಳು ಮತ್ತು ತೆಂಗು 665 ಹೆಕ್ಟೇರುಗಳು. ಆವರಣದಲ್ಲಿ ಕೊಟ್ಟಿರುವುದು 1989–90ರ ಮಾಹಿತಿ.

ಇತ್ತೀಚಿನ ವರ್ಷಗಳಲ್ಲಿ ಏಲಕ್ಕಿಯು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಜಿಲ್ಲೆಯಲ್ಲಿ ಮಳೆಯು ಇಳಿಮುಖವಾಗಿರುವುದು ಒಂದು ಕಾರಣವಾದರೆ, ಇದಕ್ಕೆ ತಗಲುವ 'ಕಟ್ಟೆರೋಗ' ಮತ್ತೊಂದು ಕಾರಣ. ಇದಲ್ಲದೆ ಇದರ ಬೆಳೆಗಾರರು ಗ್ವಾಟೆಮಾಲಾದ (ಮಧ್ಯ ಅಮೇರಿಕ) ಪೈಪೋಟಿಯನ್ನು ಎದುರಿಸಬೇಕಾಗಿದೆ. ಇದರ ಪರಿಣಾಮವಾಗಿ ಇದರ ಬೆಳೆಗಾರರ ಪೈಕಿ ಕೆಲವರು ಬೇರೆ ಬೆಳೆ ಬೆಳೆಯಲು ತೊಡಗಿದರೆ ಮತ್ತೆ ಕೆಲವರು ವೈಜ್ಞಾನಿಕವಾಗಿ ಈ ಬೆಳೆಯನ್ನೇ ಅಧಿಕ ಪ್ರಮಾಣದಲ್ಲಿ ಬೆಳೆದು ಬೆಳೆಗಾರರಲ್ಲಿ ಆಶಾಭಾವನೆಯನ್ನು ಮೂಡಿಸಿದ್ದಾರೆ. ಅಂತರ ರಾಷ್ಟ್ರೀಯ ಮಾರುಕಟ್ಟೆ

ಹಿಡುವಳಿಯ ಗುಂಪು ಮತ್ತು ಹಿಡುವಳಿಯ ಪ್ರಕಾರಕ್ಕೆ ಅನುಗುಣವಾಗಿ ಭೂಹಿಡುವಳಿದಾರರ ಸಂಖ್ಯೆ ಹಾಗೂ ಅವರು ಹೊಂದಿದ್ದ ಒಟ್ಟು ಭೂಮಿಯನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

| ಹಿಡುವಳಿಯ ಗುಂಪು | ಒಟ್ಟು ಹಿಡುವಳಿ | | ಸ್ವತಂತ್ರ ಹಿಡುವಳಿ | | ಜಂಟಿ ಹಿಡುವಳಿ | | ಸಂಸ್ಥೆಗಳ ಹಿಡುವಳಿ | |
|---|---|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) | ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) | ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) | ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) |
| 0.49 ವರೆಗೆ | 5,298 | 1,438 | 5,182 | 1,403 | 78 | 26 | 38 | 9 |
| 0.50— 0.99 | 6,090 | 4,577 | 6,001 | 4,510 | 60 | 44 | 29 | 23 |
| 1.00— 1.99 | 9,630 | 13,791 | 9,540 | 13,659 | 56 | 82 | 34 | 50 |
| 2.00— 2.99 | 5,864 | 4,284 | 5,813 | 14,161 | 35 | 83 | 16 | 40 |
| 3.00— 3.99 | 3,806 | 13,138 | 3,756 | 12,965 | 31 | 107 | 19 | 66 |
| 4.00— 4.99 | 2,935 | 13,001 | 2,907 | 12,877 | 10 | 45 | 18 | 79 |
| 5.00— 7.49 | 3,794 | 23,119 | 3,760 | 22,916 | 20 | 124 | 14 | 79 |
| 7.50— 9.99 | 1,979 | 17,110 | 1,956 | 16,914 | 13 | 111 | 10 | 85 |
| 10.00—19.99 | 2,578 | 35,030 | 2,544 | 34,542 | 23 | 331 | 11 | 157 |
| 20.00—29.99 | 531 | 12,645 | 576 | 12,286 | 7 | 162 | 8 | 197 |
| 30.00—39.99 | 137 | 4,668 | 131 | 4,472 | 4 | 134 | 2 | 62 |
| 40.00—49.99 | 59 | 2,597 | 57 | 2,503 | 1 | 45 | 1 | 49 |
| 50.00ಕ್ಕೂ ಹೆಚ್ಚು | 163 | 18,584 | 118 | 10,887 | 15 | 2,190 | 30 | 5,507 |
| ಒಟ್ಟು | 42,864 | 1,73,982 | 42,281 | 1,64,095 | 353 | 3,484 | 230 | 6,403 |

ಆಧಾರ : ಕೃಷಿ ಗಣತಿ 1980–81

ಯಲ್ಲಿ ಏಲಕ್ಕಿಯು ಪೈಪೋಟಿ ನಡೆಸಲು ಅಸಮರ್ಥವಾಗಿದ್ದರೂ, ಇದರ ರಫ್ತು ವ್ಯಾಪಾರ ಇನ್ನೂ ಉಳಿದಿರುವುದಕ್ಕೆ ಬಹುಮಟ್ಟಿನ ಕಾರಣ ಸಾಂಪ್ರದಾಯಿಕ ಆಮದು ಮಾಡಿಕೊಳ್ಳುತ್ತಿರುವ ಸೌದಿ ಅರೇಬಿಯಾ.

ಭಾರತದಲ್ಲಿ ಏಲಕ್ಕಿ ಬೆಳೆಯುತ್ತಿರುವ ರಾಜ್ಯಗಳು ಅನುಕ್ರಮವಾಗಿ ಕೇರಳ, ಕರ್ನಾಟಕ ಮತ್ತು ತಮಿಳುನಾಡು. 1980–81ರಲ್ಲಿ 3,100 ಟನ್ ಏಲಕ್ಕಿಯು ಕೇರಳದಲ್ಲಿಯು, 1,000 ಟನ್ ಕರ್ನಾಟಕದಲ್ಲೂ ಮತ್ತು 300 ಟನ್ ತಮಿಳುನಾಡಿನಲ್ಲೂ ಉತ್ಪಾದನೆಯಾಗಿತ್ತು. ರಾಷ್ಟ್ರದ ಒಟ್ಟು ಏಲಕ್ಕಿ ಉತ್ಪಾದನೆಯ ಪ್ರತಿಶತ 20ರಷ್ಟು ಕೊಡಗು ಜಿಲ್ಲೆಯದು. ಏಲಕ್ಕಿಯ ಸರಾಸರಿ ಬೆಲೆಯು 1960–61ರಲ್ಲಿ ಕೆ.ಜಿ. 1ಕ್ಕೆ ರೂ. 18 ಇದ್ದುದು 1975–76ರಲ್ಲಿ ರೂ. 100ಕ್ಕೂ ಮತ್ತು 1978–79ರಲ್ಲಿ ರೂ. 203ಕ್ಕೂ ಹೆಚ್ಚಿದೆ. 1985–86ರಲ್ಲಿ ಭಾರತ ಸರಕಾರವು ಏಲಕ್ಕಿ ಮಂಡಳಿಯನ್ನು ವಿಸರ್ಜಿಸಿ ಇದನ್ನು ಸಾಂಬಾರ ಪದಾರ್ಥಗಳ ಮಂಡಳಿ (ಸ್ಪೈಸರ್ ಬೋರ್ಡ್) ಯ ವ್ಯಾಪ್ತಿಗೆ ಸೇರಿಸಿದೆ.

ಕಾಫಿಯು ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ. ಕಾಫಿ ಬೆಳೆಯುವ ಪ್ರದೇಶವು 1943-44ರಲ್ಲಿ 38,886 ಎಕರೆಗಳಿದ್ದು ಅದು 1945-46 ರಲ್ಲಿ 40,938 ಎಕರೆಯಷ್ಟಕ್ಕೆ ಹೆಚ್ಚಳಗೊಂಡಿತು. ಇದು 1962-63 ರಲ್ಲಿ 86,775 ಎಕರೆಯಷ್ಟಿತ್ತು. ಏಲಕ್ಕಿಯು 1945-46 ರಲ್ಲಿ 3,911 ಎಕರೆಯಷ್ಟಿದ್ದು 1960-61 ರಲ್ಲಿ 14,418.93 ಎಕರೆಗೆ ಹೆಚ್ಚಳಗೊಂಡಿತು. ಟೀ, ಮೆಣಸು, ಅಡಿಕೆ, ಗೋಡಂಬಿ ಮೊದಲಾದವುಗಳನ್ನು ಕೊಡಗಿನ ಕೆಲವು ಸ್ಥಳಗಳಲ್ಲಿ ವ್ಯಾಪಕವಾಗಿಲ್ಲದಿದ್ದರೂ ಸಾಕಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಅಡಿಕೆಯು ದಕ್ಷಿಣ ಕನ್ನಡ ಜಿಲ್ಲಾ ಗಡಿ ಪ್ರದೇಶವನ್ನು ಸೇರಿಕೊಂಡು ಎಲ್ಲಾ ಭಾಗಗಳಲ್ಲೂ ಸ್ವಲ್ಪ ಪ್ರಮಾಣದಲ್ಲಿ ಕಂಡುಬರುತ್ತದೆ. ಕಿತ್ತಳೆಯು ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಇದು 1962-63 ರಲ್ಲಿ 28,153 ಎಕರೆಯಷ್ಟಿತ್ತು.

**ಕಾಫಿ ತೋಟಗಳು**

ತೋಟದ ಬೆಳೆಯ ವ್ಯಾಪ್ತಿಯಲ್ಲಿ ಬರುವ ಕಾಫಿಯು, ಕೊಡಗು ಜಿಲ್ಲೆಯಲ್ಲಿನ ಅತಿ ಮುಖ್ಯ ವಾಣಿಜ್ಯ ಬೆಳೆಯಾಗಿದೆ.

1870ಕ್ಕೂ ಹಿಂದೆ ಕೊಡಗಿನಲ್ಲಿದ್ದ ಐರೋಪ್ಯರ 134 ಕಾಫಿ ತೋಟಗಳ ಪಟ್ಟಿಯನ್ನು ರಿಕ್ಟರ್ ಕೊಟ್ಟಿದ್ದು, ಆ ಪೈಕಿ ಗ್ಲೆನ್ ಕೂರ್ಗ್ 3,012 ಎಕರೆ ವಿಸ್ತೀರ್ಣದ, ಕೂರ್ಗ್ ಕಾಫಿ ಕಂಪನಿ 2,095 ಎಕರೆ ವಿಸ್ತೀರ್ಣದ ತೋಟಗಳನ್ನು ಹೊಂದಿದ್ದ ದೊಡ್ಡ ಸಂಸ್ಥೆಗಳಾಗಿದ್ದವು. 1870ರಲ್ಲಿದ್ದ ಕೊಡಗಿನ ಅತ್ಯಂತ ಹಳೆಯ ಮತ್ತು ದೊಡ್ಡ ಕಾಫಿ ತೋಟ ಕರ್ನಾಟಕ ಕಾಫಿ ಕಂಪನಿ ನಿಯಮಿತ ; ಇದರ ವಿಸ್ತೀರ್ಣ 3,000 ಎಕರೆಗಳು. ಸೋಮವಾರಪೇಟೆ ಸಮೀಪ ಚನ್ನಬಸಪ್ಪ ಎಂಬುವರು ಮೊಟ್ಟಮೊದಲ ದೇಶೀಯ ಕಾಫಿ ತೋಟವನ್ನು ಪ್ರಾರಂಭಿಸಿದರು. ಇವರ ಕಾಫಿ ತೋಟಗಳು ಭೂತಕಾಡು, ಕುಸ್ಬೂರ್ ಮತ್ತು ಸುಂಟಿಕೊಪ್ಪಗಳಲ್ಲಿದ್ದವು. ಕೆಲವು ಕಾಲಾನಂತರ ಈ ಕಾಫಿ ತೋಟಗಳನ್ನು ಬೆಂಗಳೂರಿನ ಸಾಕಮ್ಮ ಕಾಫಿ ವರ್ಕ್ಸ್‌ನ ಮಾಲೀಕರಾದ ಶ್ರೀಮತಿ ಸಾಕಮ್ಮ ಎಂಬುವರು ಅಭಿವೃದ್ಧಿಪಡಿಸಿದರು. ದಿ ಮ್ಯಾಂಫಿಸ್ ಕಾಫಿ ಕಂಪನಿ ಎಂಬುದು ಸಹ ಕೊಡಗಿನ ದೊಡ್ಡ ಕಾಫಿ ತೋಟಗಳಲ್ಲಿ ಒಂದು. ದಿ ಪಲೆತೋಡು, ದಿ ಫೈತ್, ವಿವಾಟ ಕಾಡು ಮತ್ತು ಹೂವಿನ ಕಾಡು ಕಾಫಿ ತೋಟಗಳು ಕೊಡಗಿನ ಕಾಫಿಯ ವ್ಯಾಪಾರ ಸ್ಥಾನವನ್ನು ಹೆಚ್ಚಿಸಿವೆ. ದಕ್ಷಿಣ ಕೊಡಗಿನಲ್ಲಿನ ಬ್ರಹ್ಮಗಿರಿಯಲ್ಲಿ ದೊಡ್ಡ ಕಾಫಿ ತೋಟಗಳು ಪ್ರಾರಂಭಿಸಲ್ಪಟ್ಟವು. ದಿ ಹೋಪ್, ದಿ ಹೊರೂರ್ ಮತ್ತು ಜಂಬೂರ್ ಎಸ್ಟೇಟ್‌ಗಳು ಆಗಿನ ಕಾಲದಲ್ಲೇ ಪ್ರಸಿದ್ಧಿ ಹೊಂದಿದ್ದವು.

ಕಾಫಿ ಉದ್ಯಮಕ್ಕೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳು ಉದ್ಭವಿಸಿದಾಗ ಕಾಫಿ ಬೆಳೆಗಾರರು ಒಂದಾಗಿ ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದು ದಿ ಕನ್‌ಸಾಲಿಡೇಟೆಡ್ ಕಾಫಿ ಎಸ್ಟೇಟ್ಸ್, ಲಿಮಿಟೆಡ್‌ನ್ನು 1943ರಲ್ಲಿ ಪೊಲ್ಲಿಬೆಟ್ಟದಲ್ಲಿ ಸ್ಥಾಪಿಸಿದರು. ಇದು ಒಂದು ಕೂಡು ಬಂಡವಾಳ ಸಂಸ್ಥೆ. ಈ ಸಂಸ್ಥೆಯು ಕುಶಾಲನಗರ ಕಾಫಿ ವರ್ಕ್ಸ್ ಮತ್ತು ಹುಣಸೂರು ಕಾಫಿ ವರ್ಕ್ಸ್‌ನ್ನು ನಡೆಸುತ್ತಿದ್ದುದೇ ಅಲ್ಲದೆ ಕಾಫಿ ಪ್ರದೇಶ ಮತ್ತು ಕಾಫಿ ಉದ್ದಿಮೆಯ ಸಂಪರ್ಕ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಇದು ರಸಗೊಬ್ಬರಗಳಿಗೆ ಸಂಬಂಧಿಸಿದಂತೆ ಮಾರಾಟದ ಪ್ರತಿನಿಧಿಯಂತೆ ಕಾರ್ಯ ನಿರ್ವಹಿಸುತ್ತಿದ್ದುದರ ಜೊತೆಗೆ ಕಾಫಿ ತೋಟಗಳ ಸಾಮಾನ್ಯ ಅವಶ್ಯಕತೆಗಳ ಪೂರೈಕೆಗೂ ಗಮನ ಕೊಡುತ್ತಿತ್ತು. ಈ ಕಂಪನಿಯ ಷೇರುದಾರರು ಮೈಸೂರು ರಾಜ್ಯದ (ಈಗಿನ ಕರ್ನಾಟಕದ) ಕಾಫಿ ತೋಟಗಾರರಾಗಿದ್ದರು. ನಲ್ಲೂರು; ಜಂಬೂರು, ಮಾರ್ಗಳ್ಳಿ ಮತ್ತು ಕೋಟೆಬೆಟ್ಟ ಕಾಫಿ ತೋಟಗಳು ಈ ಕಂಪನಿಯ ನೇರ ವ್ಯವಸ್ಥಾಪಕತ್ವಕ್ಕೆ ಒಳಪಟ್ಟಿದ್ದವು.

ಜಿಲ್ಲೆಯಲ್ಲಿ ಕಾಫಿ ಬೆಳೆಯುವ ಪ್ರದೇಶದ ವಿಸ್ತೀರ್ಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. 1989-90ರಲ್ಲಿ ಕಾಫಿ

ಬೆಳೆಯ ವಿಸ್ತೀರ್ಣ 74,057 ಹೆಕ್ಟೇರುಗಳು. 1988–89 ನೇ ಸಾಲಿನಲ್ಲಿ ಇದರ ವಿಸ್ತೀರ್ಣ 73,737 ಹೆಕ್ಟೇರುಗಳಾಗಿತ್ತು. ಒಟ್ಟು ಕಾಫಿ ವಿಸ್ತೀರ್ಣದಲ್ಲಿ 15,760 ಹೆ. ಪ್ರದೇಶವು ಮಡಿಕೇರಿ ತಾಲೂಕಿನಲ್ಲಿಯೂ, 23,497 ಹೆ. ಪ್ರದೇಶವು ಸೋಮವಾರಪೇಟೆ ತಾಲೂಕಿನಲ್ಲಿಯೂ ಮತ್ತು 34,800ಹೆ. ಪ್ರದೇಶವು ವೀರರಾಜಪೇಟೆ ತಾಲೂಕಿನಲ್ಲಿಯೂ ಹಂಚಿಕೆಯಾಗಿದೆ. 1990–91 ರಲ್ಲಿ ಒಟ್ಟು ವಿಸ್ತೀರ್ಣವು 74,272 ಹೆಕ್ಟೇರುಗಳು.

ಕೊಡಗಿನ ಸಿದ್ದಾಪುರ, ಚೆಟ್ಟಳ್ಳಿ, ಸೂದಾಪುರ ಮೊದಲಾದ ಭಾಗಗಳು ಕಾಫಿ ತೋಟಗಳಿಗೆ ಹೆಸರುವಾಸಿಯಾಗಿವೆ. ಕಾಫಿ ಹೂ ಅರಳುವ ಸಂಧಿಗ್ಧ ಅವಧಿಯಲ್ಲಿ ಮಳೆಯು ಬಾರದೇ ಹೋದರೆ ಇದರ ಪರಿಣಾಮ ಇಡೀ ವರ್ಷದ ಫಸಲಿನ ಮೇಲಾಗುತ್ತದೆ. ಹೂ ಅರಳಿದ ಮೂರನೇ ದಿನವೇ ಮಳೆ ಬಿದ್ದರೂ ನಷ್ಟವುಂಟಾಗುತ್ತದೆ. ಮಳೆ ಹೆಚ್ಚು ಅಥವಾ ತುಂಬಾ ಕಡಿಮೆ ಬಿದ್ದರೂ ಕಾಫಿ ಇಳುವರಿಯಲ್ಲಿ ಏರುಪೇರು ಉಂಟಾಗುತ್ತದೆ. ಇದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಹಣ ಮತ್ತು ಸೌಕರ್ಯವಿರುವವರು ತುಂತುರು ನೀರಾವರಿ ಸೌಲಭ್ಯವನ್ನು ಹೊಂದಿರುತ್ತಾರೆ. ಈ ಅನಿಶ್ಚಿತ ಫಸಲು ಕೊಡುವ ಕಾಫಿ ಬೆಳೆಯ ಮೇಲೆ ಬೆಳೆಗಾರರು ಹೂಡಿರುವ ಭಂಡವಾಳ ಅಧಿಕವಾಗಿರುತ್ತದೆ. ಕ್ರಿಮಿನಾಶಕ, ರಸಗೊಬ್ಬರ ಮೈಲುತುತ್ತ ಮೊದಲಾದವುಗಳ ಬೆಲೆ ಕಳೆದ ಹತ್ತು ವರ್ಷಗಳಲ್ಲಿ 3-4 ಪಟ್ಟು ಹೆಚ್ಚಾಗಿದೆ. ಕಾರ್ಮಿಕ ವೇತನದಲ್ಲಿ ಹೆಚ್ಚಳವಾಗಿದೆ. ಆದರೆ ಬೆಳಗಾರರಿಗೆ ಕಾಫಿ ಮಂಡಳಿಯು ನೀಡುತ್ತಿರುವ ಬೆಲೆಯು ಮಾತ್ರ ಉತ್ಪಾದನಾ ವೆಚ್ಚಕ್ಕನುಗುಣವಾಗಿ ಇಲ್ಲದೆ ಇರುವುದರಿಂದ ಕಾಫಿ ಬೆಳೆಗಾರರಿಗೆ ಕಾಫಿ ಮಂಡಳಿಯ ವಿಚಾರದಲ್ಲಿ ಅತೃಪ್ತಿ ಮತ್ತು ಅಸಮಾಧಾನವಿದೆಯೆಂದು ಅನೇಕ ಬೆಳೆಗಾರರ ಹೇಳಿಕೆಯಿಂದ ಕಂಡುಬರುತ್ತದೆ. ರಸಗೊಬ್ಬರ, ಮೈಲುತುತ್ತ ಮೊದಲಾದವುಗಳನ್ನು ಸಾಕಷ್ಟು ಕೊಡಲು ಸಾಧ್ಯವಾಗದೆ ಎಷ್ಟೋ ತೋಟಗಳು ತಮ್ಮ ಇಳುವರಿಯ ಸಾಮರ್ಥ್ಯವನ್ನು ಕಳೆದುಕೊಂಡಿವೆ. 1989 ರಲ್ಲಿ ರಾಜ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು ಬಿಟ್ಟರೆ ಕೊಡಗು ಜಿಲ್ಲೆಯು 49,630 ಹೆಕ್ಟೇರ್ ವಿಸ್ತೀರ್ಣದಲ್ಲಿ ಕಾಫಿ ತೋಟವನ್ನು ಹೊಂದಿದ್ದು ಎರಡನೇ ಸ್ಥಾನದಲ್ಲಿದೆ.

ಬ್ರಿಟಿಷರು 1942 ರಲ್ಲಿ ಕಾಫಿ (ಮಾರುಕಟ್ಟೆ ಮತ್ತು ವಿಸ್ತರಣೆ) ಕಾಯಿದೆ ತರುವುದರ ಮೂಲಕ ಭಾರತದಲ್ಲಿ ಕೇಂದ್ರೀಕೃತ ವ್ಯವಸ್ಥೆಯೊಂದಕ್ಕೆ ತಳಪಾಯ ಹಾಕಿದರು. ಅದು ತಾತ್ಕಾಲಿಕ ವ್ಯವಸ್ಥೆಯಾಗಿದ್ದರೂ ಬೆಳೆಗಾರರ ಒತ್ತಡದ ಪರಿಣಾಮವಾಗಿ ಅದನ್ನು ಮುಂದುವರಿಸಿಕೊಂಡು ಬರಲಾಯಿತೆಂಬುದು ಅನೇಕರ ಅಭಿಪ್ರಾಯ. ಇದಕ್ಕೆ ಬಹುಮುಟ್ಟಿನ ಕಾರಣ, ಕಾಫಿಯನ್ನು ಮಧ್ಯವರ್ತಿಗಳಿಗೆ ಮಾರಾಟ ಮಾಡುವುದಕ್ಕಿಂತ ಕೇಂದ್ರೀಕೃತ ವ್ಯವಸ್ಥೆ ಮಾಡುವುದು ಉತ್ತಮವಾಗಿ ಕಂಡಿರಬಹುದು. ಸ್ವಾತಂತ್ರ್ಯಾನಂತರ 1955ರಲ್ಲಿ ಕೇಂದ್ರ ಸರ್ಕಾರ ಕೆಲವು ತಿದ್ದುಪಡಿಗಳ ಮೂಲಕ ಕಾಫಿ ಮಂಡಳಿಯ ಮೇಲಿದ್ದ ತನ್ನ ಅಧಿಕಾರವನ್ನು ಬಲಪಡಿಸಿಕೊಂಡಿತು. ಅದರ ಅಧ್ಯಕ್ಷರಿಂದ ಹಿಡಿದು ಸದಸ್ಯರು ಮತ್ತು ನೌಕರರನ್ನು ನೇಮಿಸುವ ಅಧಿಕಾರ ಕೇಂದ್ರ ಸರ್ಕಾರದಲ್ಲಿ ಕೇಂದ್ರೀಕೃತವಾಗಿದೆ. ಅದರ ಹಿಂದೆ ಈ ಮಂಡಳಿಯು ಮೇಲೆ ತಮಗಿದ್ದ ವಿಶ್ವಾಸ ಈಗ ಉಳಿದಿಲ್ಲವೆಂದು ಅನೇಕ ಬೆಳೆಗಾರರರು ಹೇಳುತ್ತಾರೆ. ಇದರ ವಿರುದ್ಧ ಬೆಳೆಗಾರರ ಸಂಘಗಳು ಮತ್ತು ಸಹಕಾರಿ ಸಂಸ್ಥೆಗಳು ಗುರುತರ ಆರೋಪ ಮಾಡಿವೆ. ಈಗಿರುವ ಕಾಯ್ದೆಯ ಪ್ರಕಾರ ಬೆಳೆದ ಎಲ್ಲಾ ಬೆಳೆಯನ್ನು ಕಾಫಿ ಮಂಡಳಿಗೇ ಜಮಾ ಮಾಡಬೇಕು ಎಂಬ ನಿಯಮವು ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂದು ಕಾಫಿ ಮಂಡಳಿಯ ಸದಸ್ಯರೇ ಒಬ್ಬರು ನ್ಯಾಯಾಲಯದ ಕಟ್ಟೆ ಹತ್ತಿದ್ದಾರೆ. ಮಂಡಳಿಯ 33 ಸದಸ್ಯರನ್ನು ಸರ್ಕಾರವೇ ನೇಮಿಸುತ್ತದೆ. ಅದರಲ್ಲಿ 10 ಜನರನ್ನು ಬೆಳೆಗಾರರ ಪ್ರತಿನಿಧಿಗಳೆಂದು ಹೆಸರಿಸಲಾಗಿದೆ. ಈ 10 ಜನರು ಪೈಕಿ ಬಹಳಷ್ಟು ಜನರು ಸಂಸ್ಕರಣ ಕೇಂದ್ರಗಳ ಮಾಲಿಕರು ಅಥವಾ ಪಾಲುದಾರರಾಗಿರುವುದೇ ಹೆಚ್ಚು ಎಂದು ಆಪಾದಿಸಲಾಗುತ್ತದೆ. ಇದರಿಂದ ಬೆಳೆಗಾರರ ಪರ ಕೆಲಸ ಕಾರ್ಯಗಳು ನಡೆಯಲು ಅಡಚಣೆಯಾಗಿದೆ ಎಂದು ಹಲವು ಬೆಳೆಗಾರರ ಅಭಿಪ್ರಾಯ. ಕಾಫಿ ಮಂಡಳಿ ತೆಗೆದುಕೊಂಡ ಹಲವಾರು ನಿರ್ಣಯಗಳು ಬೆಳೆಗಾರರ ವಿರುದ್ಧವಾಗಿ ಹಾಗೂ ಸಂಸ್ಕರಣ ಕೇಂದ್ರಗಳ ಮಾಲಿಕರ ಪರವಾಗಿ ಇರುವವೆಂದು ವಾದಿಸಿದವರಿದ್ದಾರೆ. ಕಲ್ಕತ್ತಾದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಯು ನಡೆಸಿದ ಅಧ್ಯಯನದ ಪ್ರಕಾರ ಕಾಫಿ ಮಂಡಳಿಯು ಯಾವುದೇ ಬಂಡವಾಳ ಹೂಡಿಲ್ಲವಾದ ಕಾರಣ ಅದರ ಕರ್ತವ್ಯ ನಿರ್ವಹಣೆಯಲ್ಲಿ ದಕ್ಷತೆ ಕಾಣಬರುತ್ತಿಲ್ಲ. ತನಗೆ ಇಷ್ಟ ಬಂದಾಗ ಹಣ ನೀಡುವ ಅವಕಾಶವಿರುವುದರಿಂದ ಮಾರುಕಟ್ಟೆ ವ್ಯವಸ್ಥೆ ಚೆನ್ನಾಗಿರಬೇಕೆಂಬ ಜವಾಬ್ದಾರಿಯೂ ಅದಕ್ಕೆ ಇಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ. ಸಕಾಲಕ್ಕೆ ತೋಟಗಾರರಿಗೆ ಹಣ ಪಾವತಿಯಾಗದೆ ಅವರು ಮುಂದಿನ ಬೆಳೆಗಾಗಿ ಭಾರೀ ಬಡ್ಡಿ ತೆತ್ತು ಬ್ಯಾಂಕ್‌ನಿಂದ ಸಾಲ ಪಡೆಯಬೇಕಾಗುತ್ತದೆ.

ಕಾಫಿ ಬೆಳೆಗಾರರ ಮತ್ತು ಪ್ಲಾಂಟರುಗಳ ಜಡತನವೇ ಕಾಫಿ ಮಂಡಳಿಯ ಈ ಸ್ಥಿತಿಗೆ ಬಹುಮುಟ್ಟಿನ ಕಾರಣ ಎಂದು

ಪತ್ರಕರ್ತ ಸುಚೇತನ ಸ್ವರೂಪ ಅಭಿಪ್ರಾಯ ಪಡುತ್ತಾರೆ. ಇನ್ನೊಂದು ಅಭಿಪ್ರಾಯದಂತೆ ಕನಿಷ್ಠ ವೇತನ ಅಧಿನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸದ ಅನೇಕ ತೋಟದ ಮಾಲಿಕರು ಬಿಕ್ಕಟ್ಟಿನ ನೋವನ್ನು ಅನುಭವಿಸದೇ, ಸಮಸ್ಯೆಯ ತೀವ್ರತೆಯನ್ನು ಪರಿಗಣಿಸುತ್ತಿಲ್ಲ. 1980ರ ದಶಕದಲ್ಲಿ ಕಾಫಿ ಬೆಳೆಗಾರರ ಹೋರಾಟ ಪ್ರಾರಂಭವಾದರೂ ಇದು ಕೊಡಗಿನಲ್ಲಿ ಪ್ರಾರಂಭವಾದುದು 1990ರ ಕೊನೆಯಲ್ಲಿ, ಕಾಫಿ ಬೆಳೆಗಾರರ ಹೋರಾಟ ಸಮಿತಿ ಸ್ಥಾಪಿಸಿದ ನಂತರ ಮಾತ್ರ. 1991ರ ಆರಂಭದಲ್ಲಿ ಈ ಸಮಿತಿ ನೀಡಿದ ಕರೆಯ ಮೇರೆಗೆ ಕಾಫಿ ಸಾಗಣೆಯನ್ನು 15 ದಿನಗಳ ಕಾಲ ಸಂಪೂರ್ಣ ತಡೆ ಹಿಡಿಯಲಾಗಿತ್ತು. ಕೆಲವೊಂದು ತಾತ್ವಿಕ ಕಾರಣಗಳಿಗಾಗಿ ಪ್ಲಾಂಟರುಗಳ ಸಂಘದ ವಿರುದ್ಧ ಬೆಳೆಗಾರರ ಒಕ್ಕೂಟ ರಚಿಸಲಾಯಿತು. ಈ ಒಕ್ಕೂಟದ ನಿಷ್ಕ್ರಿಯತೆಯೇ ಕೊಡಗು ಬೆಳೆಗಾರರ ಹೋರಾಟ ಸಮಿತಿಯ ಉದಯಕ್ಕೆ ಕಾರಣವೆಂದು ಹೇಳಲಾಗಿದೆ. ಇವರ ದೊಡ್ಡ ಬೇಡಿಕೆ ಎಂದರೆ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಪ್ರತೀವರ್ಷ ನಿರ್ಧರಿಸಿ ಅದನ್ನು ಒಂದೇ ಕಂತಿನಲ್ಲಿ ಪಾವತಿ ಮಾಡುವುದು. ಇವರ ಪ್ರತಿಭಟನೆಯ ಕುರುಹಾಗಿ ಕೆಲವು ಬದಲಾವಣೆಯ ಸೂಚನೆಗಳು ಕಾಣ ಬರುತ್ತಿವೆ. ಕಾಫಿ ಮಂಡಳಿಯೂ ತನ್ನ ನಿಲುವನ್ನು ತಕ್ಕಮಟ್ಟಿಗೆ ಬದಲಾಯಿಸುತ್ತಿದೆ ಹಾಗೂ ರಾಜ್ಯ ಸರಕಾರವೂ ತೆರಿಗೆ ಭಾರವನ್ನು ಇಳಿಸಿದೆ. ಆದರೆ ಇವು ಕಾಫಿ ಬೆಳೆಗಾರರ ಸಮಸ್ಯೆಗಳಿಗೆ ಕಾಯಂ ಪರಿಹಾರಗಳಿಲ್ಲವೆಂಬ ಅಭಿಪ್ರಾಯವಿದೆ.

1986-87 ರಲ್ಲಿದ್ದ ಕೊಡಗಿನ ಕಾಫಿ ಬೆಳೆಗನುಗುಣವಾದ ಕಾಫಿ ತೋಟದ ವಿಸ್ತೀರ್ಣವನ್ನು ರಾಜ್ಯ ಹಾಗೂ ರಾಷ್ಟ್ರದ ಕಾಫಿ ತೋಟದ ವಿಸ್ತೀರ್ಣದೊಂದಿಗೆ ಈ ಕೆಳಗಿನ ತಖ್ತೆಯಲ್ಲಿ ಕೊಟ್ಟಿದೆ.

| ಪ್ರದೇಶದ ಹೆಸರು | ಅರೇಬಿಕದ ವಿಸ್ತೀರ್ಣ | ರೊಬಸ್ಟಾದ ವಿಸ್ತೀರ್ಣ | ಒಟ್ಟು ವಿಸ್ತೀರ್ಣ (ಹೆಕ್ಟೇರುಗಳಲ್ಲಿ) |
|---|---|---|---|
| ಇಂಡಿಯಾ | 1,23,315 | 1,18,886 | 2,42,201 |
| ಕರ್ನಾಟಕ | 79,899 | 46,464 | 1,26,363 |
| ಕೊಡಗು | 25,643 | 34,432 | 60,075 |

1985-86 ರಿಂದ 1989-90ರ ವರೆಗೆ ಜಿಲ್ಲೆಯಲ್ಲಿ ಬೆಳೆಯುವ ಕಾಫಿ ಬೆಳೆಗನುಗುಣವಾಗಿ ದೊರಕಿರುವ ಉತ್ಪಾದನೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

(ಉತ್ಪಾದನೆ : ಮೆಟ್ರಿಕ್ ಟನ್‌ಗಳಲ್ಲಿ)

| ವರ್ಷ | ಅರೇಬಿಕ | ರೊಬಸ್ಟಾ | ಒಟ್ಟು |
|---|---|---|---|
| 1985—86 | 22,180 | 17,320 | 39,410 |
| 1986—87 | 25,400 | 44,000 | 69,400 |
| 1987—88 | 14,350 | 20,650 | 35,000 |
| 1988—89 | 34,000 | 40,000 | 74,000 |
| 1989—90 | 20,000 | 28,500 | 48,500 |

ಆಧಾರ : ಕಾಫಿ ಬೋರ್ಡ್, ಮಡಿಕೇರಿ.

ಕಾಫಿ ಮಂಡಳಿಯು ಕಾಫಿ ಬೆಳೆಗಾರರಿಂದ ಕಾಫಿ ಬೀಜವನ್ನು ಕಡಿಮೆ ಬೆಲೆಗೆ ಕೊಂಡು ಗ್ರಾಹಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದನ್ನು ಗಮನಿಸಿರುವ ಜಿಲ್ಲಾ ಕಾಫಿ ಬೆಳೆಗಾರರು, ನ್ಯಾಯಬೆಲೆಯನ್ನು ದೊರಕಿಸಿಕೊಳ್ಳುವ ಉದ್ದೇಶದಿಂದ ಕೊಡಗು ಕಾಫಿ ಬೆಳೆಗಾರರ ಹೋರಾಟ ಸಮಿತಿಯನ್ನು ರಚಿಸಿಕೊಂಡು ಸರ್ಕಾರದ ಗಮನವನ್ನು ಸೆಳೆದ ವಿಚಾರ ಮೇಲೆ ಹೇಳಿದೆ. ಅವರ ಬೇಡಿಕೆಗಳಲ್ಲಿ ಮುಖ್ಯವಾದವುಗಳು ಕಾಫಿ ಬೀಜವನ್ನು ಕೊಳ್ಳುವ ದರವನ್ನು ಕೇಂದ್ರ ಸರ್ಕಾರವು ಪರಿಷ್ಕರಿಸುವುದು, ರಾಜ್ಯ ಸರ್ಕಾರವು ಖರೀದಿ ತೆರಿಗೆಯನ್ನು ಇಳಿಸುವುದು (ಈ ವರ್ಷ ಇದನ್ನು ಪ್ರತಿಶತ 13ರಿಂದ 7.8ಕ್ಕೆ ಇಳಿಸಿದೆ) ಕ್ಯೂರಿಂಗ್ ವೆಚ್ಚವನ್ನು ಮೊದಲನೇಯ ಹಂತದಲ್ಲೇ ಪಡೆಯುವುದಕ್ಕೆ ಬದಲು ಎರಡನೇಯ ಹಂತದಲ್ಲಿ ಪಡೆಯಬೇಕೆಂಬ ಬೇಡಿಕೆಯನ್ನು ಕಾಫಿ ಮಂಡಳಿ ಒಪ್ಪಿದೆ. ಕೇಂದ್ರ ಸರ್ಕಾರದ ಪರಿಷ್ಕೃತ ದರದ ಪ್ರಕಾರ ಕಳೆದ ವರ್ಷಕ್ಕಿಂತ ಈ ವರ್ಷ (1992–93) ಬೆಲೆಯು ಕಿಲೋಗ್ರಾಂ ಅರೇಬಿಕಾಗೆ ಪ್ರತಿಶತ 11.93ರಷ್ಟು ಮತ್ತು ರೋಬಸ್ಟಾಗೆ ಪ್ರತಿಶತ 10.91ರಷ್ಟು ಹೆಚ್ಚಿದೆ. ರೂಪಾಯಿ ಅಪಮೌಲ್ಯಗೊಂಡಿರುವುದರಿಂದ ಕಾಫಿಯ ರಫ್ತು ಹೆಚ್ಚುವುದರ ಜೊತೆಗೆ ಉತ್ತಮ ಬೆಲೆ ದೊರಕುವ ಸಾಧ್ಯತೆ ಇದೆ.

**ಗಾಳಿಬೀಡು ಟೀ ಯೋಜನೆ**

ಗಾಳಿಬೀಡು ಮಡಿಕೇರಿಗೆ ಐದು ಕಿಲೋಮೀಟರ್ ದೂರವಿರುವ ಒಂದು ಚಿಕ್ಕಗ್ರಾಮ. ನಿರುಪಯುಕ್ತವಾದ ಇಲ್ಲಿನ ಹುಲ್ಲಿನ ಗುಡ್ಡಗಳ ಮೇಲೆ ಅರಣ್ಯ ಇಲಾಖೆಯು 1977ರಲ್ಲಿ ಪ್ರಾಯೋಗಿಕವಾಗಿ 35 ಎಕರೆ ಪ್ರದೇಶದಲ್ಲಿ ಚಹಾಗಿಡಗಳನ್ನು ಬೆಳೆಸಿತ್ತು. ನಾಲ್ಕು ವರ್ಷಗಳವರೆಗೆ ಅರಣ್ಯ ಇಲಾಖೆಯು ನಡೆಸಿದ ಪ್ರಯತ್ನದ ಫಲವಾಗಿ ಟೀ ಗಿಡಗಳು ಸೊಂಪಾಗಿ ಬೆಳೆದವು. ಆದರೆ ಸಂಸ್ಕರಣ ವ್ಯವಸ್ಥೆಯಿಲ್ಲದಿರುವುದರಿಂದ ಗಿಡಗಳು ನಿರುಪಯುಕ್ತವಾಗಿವೆ. ಇ.ವಿ. ಸತ್ಯನಾರಾಯಣರವರು "ಗಾಳಿಬೀಡಿನಲ್ಲಿ ಚಹತೋಟ" ಶೀರ್ಷಿಕೆಯಡಿಯಲ್ಲಿ ತಿಳಿಸಿರುವಂತೆ 1985ರಲ್ಲಿ ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮವು ಸ್ಥಳ ಪರಿಶೀಲನೆಯ ನಂತರ ಅಲ್ಲಿ ಟೀ ಬೆಳೆಯುವ ಬೃಹತ್ ಯೋಜನೆಯನ್ನು ರೂಪಿಸಿತು. ಅರಣ್ಯ ಇಲಾಖೆಯು ತನ್ನ ವಶದಲ್ಲಿದ್ದ 2,100 ಹೆಕ್ಟೇರ್ ಸಿ ಮತ್ತು ಡಿ ದರ್ಜೆಯ ಜಮೀನನ್ನು ನಿಗಮಕ್ಕೆ ಒಪ್ಪಿಸಿತು. ನಿಗಮವು 21 ಕೋಟಿ ರೂಪಾಯಿಗಳ ವೆಚ್ಚದಲ್ಲಿ 1,800 ಹೆ. ಪ್ರದೇಶದಲ್ಲಿ ಟೀ ಬೆಳೆಯಲು ನಿರ್ಧರಿಸಿತು. ಈ ಯೋಜನೆಗೆ ಟೀ ಮಂಡಳಿಯು ಹೆ. ಒಂದಕ್ಕೆ 15 ಸಾವಿರ ರೂಪಾಯಿ ಸಹಾಯಧನ ಮತ್ತು ನಬಾರ್ಡ್‌ನಿಂದ ಒಟ್ಟು 8.55 ಕೋಟಿ ರೂ. ದೊರೆಯಲಿದೆ. ಮೊದಲ ಹಂತದಲ್ಲಿ 800 ಹೆ. ಗಳಲ್ಲಿ ಮಾತ್ರ ಟೀ ಬೆಳೆಸಿ ಐದು ವರ್ಷಗಳಲ್ಲಿ ಪೂರ್ಣಗೊಳಿಸಬೇಕೆಂಬ ಷರತ್ತನ್ನು ನಬಾರ್ಡ್ ಹಾಕಿದೆ. ಟೀ ಸೊಪ್ಪನ್ನು ಸಂಸ್ಕರಿಸಿ, ಪುಡಿಯನ್ನು ತಯಾರಿಸುವವರೆಗಿನ ನಿರ್ಮಾಣ ಕಾರ್ಯವು ಈ ಯೋಜನೆಗೆ ಸೇರಿದೆ. ಈ ಯೋಜನೆಗೆ ಸುಮಾರು ಎರಡು ಕೋಟಿ ರೂ. ವೆಚ್ಚವಾಗುವುದಿದ್ದು ಅದರಅರ್ಧಭಾಗವನ್ನು ಟೀ ಮಂಡಳಿಯು ತುಂಬಿಕೊಡಲಿದೆ. ಈ ಯೋಜನೆಗೆ "ಕ್ಯಾಂಟೀ" (ಕರ್ನಾಟಕ ಟೀ) ಎಂದು ನಾಮಕರಣ ಮಾಡಲಾಗಿದೆ. ಈ ಯೋಜನೆಯನ್ನು ಪ್ರಾರಂಭಿಸಿದಂದಿನಿಂದ ಇದುವರೆಗೆ ಸುಮಾರು 30 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 60 ಹೆಕ್ಟೇರ್ ಪ್ರದೇಶದಲ್ಲಿ ಟೀ ತೋಟವನ್ನು ಬೆಳೆಸಿದೆ. ಕಾರ್ಮಿಕರಿಗೆ ಬೇಕಾಗುವ ವಸತಿ ಗೃಹಗಳ ನಿರ್ಮಾಣ, ರಸ್ತೆ ನಿರ್ಮಾಣ ಹಾಗೂ ಸುಮಾರು 20 ಲಕ್ಷ ಟೀ ಸಸಿಗಳ ಸಸ್ಯಕ್ಷೇತ್ರ (ನರ್ಸರಿ)ವನ್ನು ಅಭಿವೃದ್ಧಿ ಪಡಿಸಲಾಗಿದೆ. ನಬಾರ್ಡ್ 800 ಹೆ.ಗಳಲ್ಲಿ ಟೀ ತೋಟ ಬೆಳೆಯುವಂತೆ ಸೂಚಿಸಿದುದರಿಂದ ಸರ್ಕಾರವು ಜುಲೈ 89ರಲ್ಲಿ ಪರಿಷ್ಕೃತ ಯೋಜನೆಯನ್ನು ರೂಪಿಸುವಂತೆ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮಕ್ಕೆ ಆದೇಶಿಸಿತು. ಪರಿಷ್ಕೃತ ಯೋಜನಾ ವೆಚ್ಚವು 1985ರ ವೆಚ್ಚ (ರೂ. 961 ಲಕ್ಷ) ಕ್ಕಿಂತ ರೂ. 644 ಲಕ್ಷ ಹೆಚ್ಚಾಗಿರುವುದಕ್ಕೆ ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ ಆಕ್ಷೇಪಣೆಗೆ ಗುರಿಯಾಗಿದ್ದು ಸರ್ಕಾರದಿಂದ ಅನುಮತಿ ಪಡೆದುಕೊಳ್ಳಬೇಕಾಗಿದೆ.

ರಾಜ್ಯದ ಸಚಿವ ಸಂಪುಟ ಈ ಟೀ ಯೋಜನೆಗೆ ಒಪ್ಪಿಗೆ ನೀಡುವಾಗ ಇದನ್ನು ಜಂಟೀ ವಲಯದಲ್ಲಿ ಖಾಸಗಿಯವರ ಪಾಲುಗಾರಿಕೆಯೊಂದಿಗೆ ನಡೆಸಬೇಕೆಂದು ತೀರ್ಮಾನಿಸಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರವು ರೂಪಿಸಿದ ಸೂತ್ರಗಳ ಪ್ರಕಾರ ನಿಗಮದ ಪಾಲು ಪ್ರತಿಶತ 51 ಮತ್ತು ಖಾಸಗಿ ಸಂಸ್ಥೆಗಳ ಪಾಲು ಪ್ರತಿಶತ 49. ಆಡಳಿತ ಮಂಡಳಿಯಲ್ಲಿ ಅಧಿಕ ಸಂಖ್ಯೆಯ ನಿರ್ದೇಶಕರು ನಿಗಮದವರಿರಬೇಕು. ಜಂಟೀ ವಲಯದ ಅಧ್ಯಕ್ಷರು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿರಬೇಕೆಂದು ಸ್ಪಷ್ಟಪಡಿಸಿದೆ. ಸರ್ಕಾರದ ಈ ನಿಯಮಗಳಿಗೆ ಸಮ್ಮತಿಸಿರುವ ರಾವ್ ಬಹದ್ದೂರ್ ಠಾಕೂರ್ ಕಂಪನಿ (ಆರ್.ಬಿ.ಟಿ.) ಯನ್ನು ಈ ಕ್ಷೇತ್ರದಲ್ಲಿ ಪರಿಣತರೆಂದು ಭಾವಿಸಿ ಸರ್ಕಾರ ಆಯ್ಕೆಮಾಡಿದೆ. ಆದರೆ ಟೀ ಮಂಡಳಿ ಇದಕ್ಕೆ ಪ್ರತಿಕೂಲವಾಗಿರುವುದರಿಂದ ಇನ್ನೂ ಸಹಯೋಗದ ಬಗ್ಗೆ ನಿರ್ಧಾರವಾಗಬೇಕಾಗಿದೆ.

ಅರಣ್ಯ ಭೂಮಿಯಲ್ಲಿ ಕೈಗೊಳ್ಳುವ ಈ ಯೋಜನೆಗೆ ಕೇಂದ್ರ ಪರಿಸರ ಇಲಾಖೆ ಹಾಗೂ ತಜ್ಞರ ಅನುಮತಿ ಅಗತ್ಯವಿದೆ. ಇದೇ ಸಂದರ್ಭದಲ್ಲಿ ಜಿಲ್ಲೆಯ ಪರಿಸರವಾದಿಗಳು ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಖಾಸಗಿಯವರಿಗೆ ಪಾಲು ನೀಡುವುದರಿಂದ ಅವರಿಗೆ ಹಣಗಳಿಸಲು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುತ್ತದೆ ಎಂಬ ಕಾರಣವನ್ನು ಮುಂದಿಟ್ಟು ಅನೇಕ ಸಂಘ ಸಂಸ್ಥೆಗಳು ಈ ಯೋಜನೆಯೇ ಬೇಡವೆಂದು ಒತ್ತಾಯಿಸಿವೆ. ಆದರೆ ಈ ಯೋಜನೆಯು ಸ್ಥಳೀಯರಿಗೆ ಉದ್ಯೋಗವನ್ನೊದಗಿಸುವುದಾದರೆ ಮತ್ತು ಖಾಸಗಿಯವರ ಪಾಲುದಾರಿಕೆಯಿಲ್ಲದೆ ಸರ್ಕಾರವೇ ಈ ಯೋಜನೆಯ ಪೂರ್ಣ ಜವಾಬ್ದಾರಿ ವಹಿಸಿಕೊಳ್ಳುವುದಾದರೆ ಸ್ಥಳೀಯರ ಸ್ವಾಗತವಿದೆ. ಪ್ರತೀ ಒಂದು ಎಕರೆ ಟೀ ತೋಟ ನೋಡಿಕೊಳ್ಳಲು ಒಬ್ಬ ಪೂರ್ಣಕಾಲೀನ ಕಾರ್ಮಿಕನ ಅವಶ್ಯಕತೆಯಿದ್ದು ಕೊಡಗಿನ ಹೊರಗಿನಿಂದ ಬರಬಹುದಾದ ಕೆಲವು ಸಾವಿರ ಕಾರ್ಮಿಕರು ಹಾಗೂ ಅವರ ಕುಟುಂಬದವರು ಅಡಿಗೆ ಉರುವಲಿಗಾಗಿಯೇ ಅರಣ್ಯದ ಮೇಲೆ ಮಾಡಬಹುದಾದ ದಾಳಿಯನ್ನು ಗಮನಿಸಿ ಭರದಿಂದ ನಾಶವಾಗುತ್ತಿರುವ ಇಲ್ಲಿನ ಅರಣ್ಯ ಸಂಪತ್ತಿನ ನಾಶವನ್ನು ಗಣಿಸಿ, ಅದನ್ನು ತಡೆಯಲೇಬೇಕು ಎಂದು ಒಂದು ವಾದವಿದೆ. ಅರಣ್ಯ ನಾಶದ ಜೊತೆಗೆ ಕೊಡಗಿನಿಂದ ಹೊರಗಿನ ಪ್ರದೇಶಗಳ ಜನರ ವಲಸೆಯು ಹೆಚ್ಚುವುದೆಂಬ ಭೀತಿ ಸ್ಥಳೀಕರಿಗೆ ಇದ್ದಂತೆ ಇದೆ.

ಕೊಡಗಿನಲ್ಲಿ 1915ರಲ್ಲಿ ಗ್ಲೆನ್‌ಲಾರ್ನ್ ಎಸ್ಟೇಟ್ಸ್ ಎಂಬ ಇಂಗ್ಲಿಷ್ ಕಂಪನಿಯು ಟೀ ಉದ್ಯಮ ಕಾರ್ಯದಲ್ಲಿ ತೊಡಗಿತ್ತು. 1943 ರಲ್ಲಿ ದಿ ಕೂರ್ಗ್ ಟೀ ಕಂಪನಿ ಪ್ರಾರಂಭವಾಯಿತು. ಒಂದು ಹೇಳಿಕೆಯಂತೆ ಇಂದು ಕರ್ನಾಟಕದಲ್ಲಿ ಚಿಕ್ಕಮಗಳೂರು ಮತ್ತು ಕೊಡಗು ಸೇರಿ 1,870 ಹೆಕ್ಟೇರ್ ಖಾಸಗೀ ಚಹ ತೋಟಗಳಿವೆ. ಜಿಲ್ಲೆಯಲ್ಲಿ 1990-91ರಲ್ಲಿ 470 ಹೆಕ್ಟೇರ್ ಪ್ರದೇಶದಲ್ಲೂ 1989-90 ರಲ್ಲಿ 470 ಹೆಕ್ಟೇರ್‌ನಲ್ಲೂ ಟೀ ಬೆಳೆಯಲಾಗುತ್ತಿತ್ತು.

**ಕಿತ್ತಳೆ ಬೇಸಾಯ**

ಕೊಡಗು ಜಿಲ್ಲೆಯ ಕಿತ್ತಳೆ ಬಹಳ ಹಿಂದಿನಿಂದಲೂ ಹೆಸರುವಾಸಿಯಾಗಿದೆ. ಇದಕ್ಕೆ ಬಹುಮಟ್ಟಿನ ಕಾರಣ ಜಿಲ್ಲೆಯ ಮಣ್ಣಿನ ಗುಣ. ದಕ್ಷಿಣ ಕೊಡಗಿನ ತಿತಿಮತಿ, ಬಾಳೆಲೆ, ಕಾನೂರು, ಕುಟ್ಟ ಮೊದಲಾದ ಸ್ಥಳಗಳ ಪರಿಸರದ ಮಣ್ಣಿನ ಸಾರವು ಕಿತ್ತಳೆಗೆ ಸೊಗಸಾದ ರುಚಿಯನ್ನೊದಗಿಸುವುದರಿಂದ ಈ ಭಾಗದ ಕಿತ್ತಳೆ ಹಣ್ಣಿಗೆ ವಿಶೇಷ ಬೇಡಿಕೆ ಇದೆ. ಕಿತ್ತಳೆ ಹಣ್ಣನ್ನು ವರ್ಷಂಪ್ರತಿ 30 ರಿಂದ 120 ಅಂಗುಲ ಮಳೆ ಬೀಳುವ ಪ್ರದೇಶದಲ್ಲಿ ಬೆಳೆಯಬಹುದು. ಕೊಡಗಿನಲ್ಲಿ ಸರಾಸರಿ 2,300 ಮಿ. ಮೀ.ಗೂ ಅಧಿಕ ಮಳೆ ಬೀಳುವುದರಿಂದ ಕಾಫಿ ಮತ್ತು ಕಿತ್ತಳೆಯನ್ನು ಸಮೃದ್ಧಿಯಾಗಿ ಬೆಳೆಯಬಹುದು. ಕಾಫಿಯಂತೆ ಕಿತ್ತಳೆಯೂ ಹೊರದೇಶದಿಂದ ಬಂದ ಬೆಳೆಯಾಗಿದೆ. ಇದು ಇಂಡೋಚೀನಾದ ಮೂಲಕ ಬಂದಿದೆ ಎಂಬುದು ಅನೇಕರ ಅಭಿಪ್ರಾಯವಾಗಿದೆ. ಜಿಲ್ಲೆಯಲ್ಲಿ 1988-89ರಲ್ಲಿ 5,112 ಹೆಕ್ಟೇರ್ ಪ್ರದೇಶದಲ್ಲಿ ಕಿತ್ತಳೆಯನ್ನು ಬೆಳೆಯಲಾಗಿತ್ತು. ಕಾಫಿ, ಏಲಕ್ಕಿ ಮತ್ತು ಕರಿಮೆಣಸಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯವಿದ್ದು ಪ್ರೋತ್ಸಾಹದಾಯಕ ಬೆಲೆ ಸಿಕ್ಕುತ್ತಿರುವುದರಿಂದ ಅವು ಪ್ರಗತಿಪಥದಲ್ಲಿದ್ದರೆ ಕಿತ್ತಳೆಯು ಈ ಸೌಲಭ್ಯಗಳಿಂದ ವಂಚಿತವಾಗಿದ್ದು ಅದು ಅವನತಿಯ ಹಾದಿಯಲ್ಲಿ ಸಾಗತೊಡಗಿದೆ. ಕಿತ್ತಳೆ ಬೆಳೆಯನ್ನು ಕಾಫಿ, ಏಲಕ್ಕಿಗಳಂತೆ ಪ್ಲಾಂಟೇಶನ್ ಬೆಳೆಯೆಂದು ಪರಿಗಣಿಸಿ ಕಂದಾಯ ರಿಯಾಯತಿ ನೀಡಿಲ್ಲ. ಇತ್ತೀಚಿನ ವರ್ಷಗಳಲ್ಲಿ ಅದಕ್ಕೆ ಬರುತ್ತಿರುವ ರೋಗವು ಸಹ ಅದರ ವಿಸ್ತರಣೆಯ ಇಳಿಮುಖಕ್ಕೆ ಕಾರಣವಾಗಿದೆ.

ಕಿತ್ತಳೆಗೆ ಸೂಕ್ತ ಮಾರುಕಟ್ಟೆಯ ಸೌಲಭ್ಯವನ್ನೊದಗಿಸುವ ಉದ್ದೇಶದಿಂದ 1942ರಲ್ಲಿ ಬ್ರಿಟಿಷ್ ವ್ಯಕ್ತಿಯೊಬ್ಬ ಕೊಡಗು ಕಿತ್ತಳೆ ಬೆಳೆಗಾರರ ಸಂಘವನ್ನು ಸ್ಥಾಪಿಸಿ, ತಿತಿಮತಿ ಪ್ರದೇಶದಲ್ಲಿ ನೂರಾರು ಎಕರೆ ಉದುರೆಲೆ ಕಾಡನ್ನು ಕಿತ್ತಳೆ ಸಂಶೋಧನೆಗೆ ಉಪಯೋಗಿಸಿಕೊಳ್ಳಲು ಸರ್ಕಾರದಿಂದ ಪರವಾನಿಗೆ ಪಡೆದು ಕೊಂಡನು. 1962ರ ಸುಮಾರಿನಲ್ಲಿ ಈ ಸಹಕಾರ ಸಂಘವು ದಕ್ಷಿಣ ಕೊಡಗಿನ ಗೋಣಿಕೊಪ್ಪಲು ಮತ್ತು ಉತ್ತರ ಕೊಡಗಿನ ಕುಶಾಲನಗರದ ಬಳಿ ಹಣ್ಣು ಪರಿಷ್ಕರಣ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶದಿಂದ 80 ಲಕ್ಷ ರೂ. ವೆಚ್ಚದಲ್ಲಿ ಯೂರೋಪಿನಿಂದ ಆಧುನಿಕ ಯಂತ್ರಗಳನ್ನು ಆಮದು ಮಾಡಿಕೊಂಡು ಹಣ್ಣು ಪರಿಷ್ಕರಣ ಕೇಂದ್ರಗಳನ್ನು ಪ್ರಾರಂಭಿಸಿತಾದರೂ ಅವು ಈಗ ನಿಷ್ಕ್ರಿಯವಾಗಿವೆ. ಕಿತ್ತಳೆ ಬೆಳೆಗಾರರ ಸಹಕಾರ ಸಂಘವೂ ನಿಷ್ಕ್ರಿಯಗೊಂಡಿರುವುದರ ಜೊತೆಗೆ ಸುಮಾರು $1\frac{1}{2}$ ಕೋಟಿ ರೂಪಾಯಿ ಬೆಲೆಬಾಳುವ ಸಂಘಕ್ಕೆ ಸೇರಿದ ಬೆಂಗಳೂರಿನ ದಾಸ್ತಾನು ಮಳಿಗೆಯು ನಿರುಪಯೋಗಿಯಾಗಿದೆ. ಕಿತ್ತಳೆ ಬೆಳೆಗಾರರ ಸಹಕಾರ ಸಂಘವು ಸಂಗ್ರಹಿಸುವ ಷೇರು ಬಂಡವಾಳದಷ್ಟು ಮೊಬಲಗನ್ನು ರಾಜ್ಯ ಸರ್ಕಾರವು ತುಂಬಿ ಕೊಡುವ ಭರವಸೆಯನ್ನು ಕೊಟ್ಟಿರುವುದರಿಂದ ಇತ್ತೀಚೆಗೆ ಸಂಘವು ತನ್ನ ಭಾಗದ ರೂ.25 ಲಕ್ಷಗಳ ಪೈಕಿ ರೂ. 10 ಲಕ್ಷವನ್ನು ಸಂಗ್ರಹಿಸಿ ಗೋಣಿಕೊಪ್ಪಲು ಘಟಕವನ್ನು ಚಾಲನೆಗೊಳಪಡಿಸುವ ಉದ್ದೇಶವನ್ನು ಹೊಂದಿದೆ.

ರಾಜ್ಯ ಸರ್ಕಾರವು ಕಿತ್ತಳೆಯನ್ನು ಮತ್ತೆ ಅದರ ಹಿಂದಿನ ಘನತೆಗೇರಿಸುವ ಮತ್ತು ಅದನ್ನು ಜಿಲ್ಲೆಯ ಆರ್ಥಿಕ ಬೆಳೆ

ಯನ್ನಾಗಿ ಮುಂದುವರಿಸುವಂತೆ ಮಾಡುವ ಉದ್ದೇಶದಿಂದ ಚಟ್ಟಳ್ಳಿಯ ಸಮೀಪ ತೋಟಗಾರಿಕೆಯ ಬೆಳೆಗಳ ಸಂಶೋಧನಾ ಕೇಂದ್ರ ಸ್ಥಾಪಿಸಲಾಯಿತು. ರಾಜ್ಯ ಸರ್ಕಾರ ನಡೆಸುತ್ತಿದ್ದ ಈ ಸಂಸ್ಥೆಯನ್ನು ಈಗ ಕೇಂದ್ರ ಸರ್ಕಾರ ನಡೆಸುತ್ತಿದೆ. ನೌಕರರು ರಾಜ್ಯದ ಹೊರಗಿನವರು. ಹೀಗಾಗಿ ಇದು ಕಿತ್ತಳೆ ಬಗ್ಗೆ ವಿಶೇಷ ಅಧ್ಯಯನ ನಡೆಸುತ್ತಿಲ್ಲವೆಂಬುದೂ ಮತ್ತು ಅದರಿಂದ ಬೆಳೆಗಾರರಿಗೆ ಯಾವ ಅನುಕೂಲವಿಲ್ಲವೆಂಬುದೂ ಇಲ್ಲಿನ ಕಿತ್ತಳೆ ಬೆಳೆಗಾರರ ಅನಿಸಿಕೆಯಾಗಿದೆ.

### ನೀರಾವರಿ ಸೌಲಭ್ಯ

ಜಿಲ್ಲೆಯ ನೀರಾವರಿಗೆ ಸಂಬಂಧಿಸಿದಂತೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಲಕ್ಷ್ಮಣತೀರ್ಥ ಅಣೆಕಟ್ಟು ಮತ್ತು ಕಾಲುವೆಯ ಯೋಜನೆಯನ್ನು ರೂಪಿಸಲಾಗಿತ್ತು. ಇದರ ಜೊತೆಗೆ ಹಾರಂಗಿ ಯೋಜನೆಯನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಿಸಲಾಯಿತು. ಕೊಡಗು ಸರ್ಕಾರವಿದ್ದ ಕಾಲದಲ್ಲಿ ಲಕ್ಷ್ಮಣತೀರ್ಥದ ನೀರನ್ನು ಬತ್ತದ ಬೆಳೆಗಾಗಿ ಬಳಸಲು ಯೋಜಿಸಲಾಗಿತ್ತು. ಈ ಯೋಜನೆಯನ್ನು 1893 ರಲ್ಲಿ ಹಾಕಿಕೊಂಡಿದ್ದರೂ ಹಣಕಾಸಿನ ತೊಂದರೆಯಿಂದಾಗಿ ಕಾರ್ಯರೂಪಕ್ಕೆ ತಂದಿರಲಿಲ್ಲ. 1942ರ ಇದರ ಅಂದಾಜು ವೆಚ್ಚವನ್ನು 1945 ರಲ್ಲಿ ಪುನರ್ವಿಮರ್ಶಿಸಲಾಯಿತು. ಈ ಯೋಜನೆಯಲ್ಲಿ ಲಕ್ಷ್ಮಣತೀರ್ಥ ಮತ್ತು ರಾಮತೀರ್ಥಗಳಿಗೆ ಅಣೆಕಟ್ಟು ಹಾಗೂ ಕಾಲುವೆಗಳನ್ನು ನಿರ್ಮಿಸುವುದಾಗಿತ್ತು. ಎರಡು ಮತ್ತು ಮೂರನೇಯ ಪಂಚವಾರ್ಷಿಕ ಯೋಜನೆಗಳಲ್ಲಿ ಒಟ್ಟು ಸುಮಾರು 3,167 ಎಕರೆ ಭೂಮಿಗೆ ನೀರನ್ನೊದಗಿಸುವ ಅಂದಾಜು ಮಾಡಲಾಗಿತ್ತು. ಈ ಯೋಜನೆಗೆ ಸಂಬಂಧಿಸಿದಂತೆ, ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ 8.51 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದು, ಮೂರನೇಯ ಪಂಚವಾರ್ಷಿಕ ಯೋಜನೆಯಲ್ಲಿ 11.74 ಲಕ್ಷ ರೂ.ಗಳನ್ನು ಒದಗಿಸಲಾಗಿತ್ತು. ಕೊಡಗು ಜಿಲ್ಲೆಯು ಗುಡ್ಡಗಾಡುಗಳಿಂದ ಕೂಡಿರುವುದರಿಂದ ಇಲ್ಲಿ ಬಾವಿ ನೀರಾವರಿಯು ಸಾಧ್ಯವಿಲ್ಲ. ಇಲ್ಲಿರುವ ಕೆರೆಗಳು ಸಣ್ಣ ಕೊಳ ದಂತಿದ್ದು ಬತ್ತದ ಬೆಳೆಗೆ ನೀರನ್ನೊದಗಿಸಲು ಅಸಮರ್ಥವಾಗಿವೆ. ಆದರೂ ಸರ್ಕಾರವು ಒದಗಿಸಿರುವ ನೀರಾವರಿ ಸಹಾಯದಿಂದ 1961-62 ರಲ್ಲಿ ಜಿಲ್ಲೆಯ ನೀರಾವರಿ ಪ್ರದೇಶವು ಸುಮಾರು 9,500 ಎಕರೆ ಇತ್ತು. ಸರ್ಕಾರಿ, ಖಾಸಗೀ, ನಾಲೆಗಳು, ಕೆರೆಗಳು, ಬಾವಿಗಳು ಮೊದಲಾದವುಗಳೆಲ್ಲಾ ಸೇರಿ ಒಟ್ಟು 15,000 ಎಕರೆ ನೀರಾವರಿ ಪ್ರದೇಶವಿತ್ತು. 1965 ರ ಸುಮಾರಿಗೆ ಸಣ್ಣ ನೀರಾವರಿಯನ್ನು ಉತ್ತಮಪಡಿಸಿದುದರ ಪರಿಣಾಮದಿಂದಾಗಿ ಒಟ್ಟು ನೀರಾವರಿಯ ಪ್ರದೇಶವು 21,000 ಎಕರೆಗಳಷ್ಟಾಯಿತು.

ಜಿಲ್ಲೆಯಲ್ಲಿ ಮೊದಲ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿನ ವ್ಯವಸಾಯಾಭಿವೃದ್ಧಿಯ ಕಾರ್ಯಕ್ರಮಗಳ ಸಿಂಹಾವಲೋಕನ ಮಾಡಿದಾಗ ಆಹಾರ ಉತ್ಪಾದನಾ ಪ್ರದೇಶದಲ್ಲಿ ಹೆಚ್ಚಳ ಮತ್ತು ಇಳುವರಿಯು ಅಧಿಕವಾಗಿರುವುದನ್ನು ಕಾಣಬಹುದು. ನೀರಾವರಿ ಸೌಲಭ್ಯದಿಂದಾಗಿ ಸುಮಾರು 12,000 ಎಕರೆಗಳಷ್ಟು ಅಧಿಕ ಪ್ರದೇಶವು ನೀರಾವರಿ ವ್ಯವಸಾಯ ವ್ಯಾಪ್ತಿಗೆ ಸೇರಿ ಸುಮಾರು ವಾರ್ಷಿಕವಾಗಿ1,400ಟನ್‌ಗಳಷ್ಟು ಅಧಿಕ ಆಹಾರಧಾನ್ಯ ಉತ್ಪಾದನೆಯು ಈ ಯೋಜನೆಗಳ ಫಲವಾಗಿ ಆಯಿತು. ತೇವಾಂಶ ಭೂಮಿಯ ಅಭಿವೃದ್ಧಿಗೋಸ್ಕರ ಅನೇಕ ತೇವಾಂಶ ಹಾಗೂ ಭೂಸಾರ ಸಂರಕ್ಷಣಾ ವಿಧಾನಗಳನ್ನಳವಡಿಸುವ ಪ್ರಯತ್ನ ನಡೆದಿದೆ. 1962-63 ರಲ್ಲಿ ಬತ್ತ ಬೆಳೆಯುವ ಪ್ರದೇಶವು 1,12,541 ಎಕರೆಗಳಷ್ಟಿದ್ದು ಪ್ರತೀ ಎಕರೆಯ ಉತ್ಪಾದನಾ ಸಾಮರ್ಥ್ಯವು 2,500 ಪೌಂಡ್‌ಗಳಷ್ಟಿತ್ತು. ಜಪಾನ್ ಮತ್ತು ಚೀನಾ ಮಾದರಿಯಲ್ಲಿ ಬತ್ತದ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನ ನಡೆಯಿತು. ಸುಧಾರಿಸಿದ ಬೇಸಾಯ ವಿಧಾನವನ್ನು ಅಳವಡಿಸಲಾಯಿತು. ತ್ವರಿತ ಹಾಗೂ ದೀರ್ಘ ಯೋಜನೆಗಳನ್ನು ಜಾರಿಗೆ ತರಲು ವಿಶೇಷವಾಗಿ ನೀರಾವರಿ, ಪಶು ಸಂಗೋಪನೆ, ಉತ್ತಮ ತಳಿಯ ಬೀಜೋಪಯೋಗ, ಗ್ರಾಮಾಂತರ ಹಣಕಾಸು, ಬೆಳೆಮೋಜಣಿ(ಸಮೀಕ್ಷೆ), ಗೊಬ್ಬರ ಸೌಲಭ್ಯ, ಕ್ರೋಢೀಕೃತ ಹಿಡುವಳಿ, ಸಹಕಾರ ಸಂಘಗಳ ಸ್ಥಾಪನೆ, ಗೃಹ ಕೈಗಾರಿಕಾಭಿವೃದ್ಧಿ ಮೊದಲಾದವುಗಳನ್ನು ಹಮ್ಮಿಕೊಳ್ಳಲಾಗಿತ್ತು.

1988-89ರಲ್ಲಿ ಒಟ್ಟು 1,345 ಕೆರೆಗಳಿದ್ದು, ಅವುಗಳ ಪೈಕಿ 1,322 ಕೆರೆಗಳು 40 ಹೆಕ್ಟೇರ್‌ಗೂ ಕಡಿಮೆ ಭೂಮಿಗೆ ನೀರು ಒದಗಿಸುತ್ತಿದ್ದರೆ 23 ಕೆರೆಗಳು 40 ಹೆಕ್ಟೇರ್‌ಗೂ ಅಧಿಕ ಭೂಮಿಗೆ ನೀರು ಒದಗಿಸುತ್ತಿದ್ದವು. 123 ಬಾವಿಗಳು, ಒಟ್ಟು 60 ಕಿ.ಮೀ. ಉದ್ದವಿರುವ 3 ನಾಲೆಗಳು ಮತ್ತು ಎರಡು ಅಣೆಕಟ್ಟುಗಳು (ಹಾರಂಗಿ ಮತ್ತು ಚಿಕ್ಲಿಹೊಳೆ) ಜಿಲ್ಲೆಯ ನೀರಾವರಿಯ ಆಧಾರಗಳು. ಈ ಎರಡು ಅಣೆಕಟ್ಟುಗಳು ಸೋಮವಾರಪೇಟೆ ತಾಲೂಕಿನಲ್ಲಿದ್ದು ಪ್ರತೀಯೊಂದು ಅಣೆಕಟ್ಟು 21 ಗ್ರಾಮಗಳಿಗೆ ನೀರನ್ನೊದಗಿಸುವ ಗುರಿಯನ್ನು ಹೊಂದಿದ್ದು ಅವು ಅನುಕ್ರಮವಾಗಿ 21 ಮತ್ತು 8 ಹಳ್ಳಿಗಳಿಗೆ ಈಗಾಗಲೇ ನೀರಾವರಿ ಸೌಲಭ್ಯವನ್ನೊದಗಿಸಿವೆ.

ಇವುಗಳ ನಿರ್ಮಾಣ ವೆಚ್ಚವನ್ನು ಅನುಕ್ರಮವಾಗಿ ರೂ. 12,200 ಲಕ್ಷ ಮತ್ತು ರೂ. 1,200 ಲಕ್ಷ ಎಂದು ನಿಗದಿಪಡಿಸಲಾಗಿದ್ದು 1988-89ರ ವರೆಗೆ ರೂ. 10,051 ಲಕ್ಷ ಮತ್ತು ರೂ. 534 ಲಕ್ಷವನ್ನು ವೆಚ್ಚ ಮಾಡಲಾಗಿತ್ತು. 1989ರ ಮಾರ್ಚ್ ಅಂತ್ಯದ ವೇಳೆಗೆ ಹಾರಂಗಿ ಅಣೆಕಟ್ಟು 2,001.96 ಹೆಕ್ಟೇರಿಗೂ, ಚಿಕ್ಲಿಹೊಳೆ ಅಣೆಕಟ್ಟು 436 ಹೆಕ್ಟೇರಿಗೂ ನೀರನ್ನೊದಗಿಸುವ ಸಾಮರ್ಥ್ಯವನ್ನು ಹೊಂದಿದ್ದು, ಹಾರಂಗಿ ಅಣೆಕಟ್ಟು ತನ್ನ ಸಂಪೂರ್ಣ ಸಾಮರ್ಥ್ಯವನ್ನೂ, ಚಿಕ್ಲಿಹೊಳೆಯು 431.22 ಹೆಕ್ಟೇರು ಭೂಮಿಗೂ ನೀರಾವರಿ ಸೌಲಭ್ಯವನ್ನು ಒದಗಿಸಿದ್ದವು. 1988-89ರಲ್ಲಿ ಜಿಲ್ಲೆಯ ಒಟ್ಟು 4,096 ಹೆಕ್ಟೇರ್ ನಿವ್ವಳ ಭೂಮಿಗೆ ನೀರನ್ನೊದಗಿಸಲಾಗಿತ್ತು. ಅವುಗಳ ಪೈಕಿ ನಾಲೆಗಳು 2,667 ಹೆಕ್ಟೇರ್ ಭೂಮಿಗೂ, ಕೆರೆಗಳು 206 ಹೆಕ್ಟೇರ್ ಭೂಮಿಗೂ, ಬಾವಿಗಳು 25 ಹೆಕ್ಟೇರ್ ಭೂಮಿಗೂ ಮತ್ತು ಇತರ ಮೂಲಗಳು 1,198 ಹೆ. ಭೂಮಿಗೂ ನೀರನ್ನೊದಗಿಸುತ್ತಿದ್ದವು. ಜಿಲ್ಲೆಯ ಆಹಾರ ಧಾನ್ಯಗಳನ್ನು ಬೆಳೆಯುವ 4,611 ಹೆ., ಎಣ್ಣೆ ಬೀಜಗಳನ್ನು 519 ಹೆ., ಇತರೆ ಬೆಳೆಗಳನ್ನು ಬೆಳೆಯುವ 598 ಹೆ. ಭೂಮಿಯೂ ಸೇರಿ ಒಟ್ಟು 5,728 ಹೆ. ಭೂಮಿಯು ಧಾನ್ಯವಾರು ನೀರಾವರಿ ಸೌಲಭ್ಯವನ್ನು ಪಡೆದಿದ್ದವು.

ಭೂ ಹಿಡುವಳಿ ಅನುಭೋಗಕ್ಕನುಗುಣವಾಗಿ 1985-86 ರಲ್ಲಿ ನೀರಾವರಿ ಸೌಲಭ್ಯವನ್ನು ಪಡೆದಿದ್ದವರ ಸಂಖ್ಯೆ ಮತ್ತು ನಿವ್ವಳ ನೀರಾವರಿಯ ಪ್ರದೇಶವನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ (ಹೆಕ್ಟೇರ್‌ಗಳಲ್ಲಿ).

| ಹಿಡುವಳಿಯ ಗಾತ್ರ | ಪೂರ್ಣ ನೀರಾವರಿ | | ಅರೆ ನೀರಾವರಿ | | ಒಟ್ಟು ನೀರಾವರಿ | |
|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ(ಹೆ.) | ಸಂಖ್ಯೆ | ವಿಸ್ತೀರ್ಣ(ಹೆ.) | ಸಂಖ್ಯೆ | ವಿಸ್ತೀರ್ಣ(ಹೆ.) |
| 0.5ಕ್ಕೂ ಕಡಿಮೆ | 45 | 10 | 3 | — | 48 | 10 |
| 0.5— 1.0 | 173 | 144 | 17 | 9 | 190 | 123 |
| 1.0— 2.0 | 471 | 642 | 119 | 94 | 590 | 736 |
| 2.0— 3.0 | 186 | 343 | 132 | 160 | 318 | 503 |
| 3.0— 4.0 | 87 | 195 | 107 | 190 | 194 | 385 |
| 4.0— 5.0 | 35 | 124 | 64 | 136 | 99 | 260 |
| 5.0—10.0 | 38 | 188 | 50 | 115 | 88 | 303 |
| 10.0—20.0 | 6 | 45 | 22 | 84 | 28 | 129 |
| 20.0—30.0 | 7 | 82 | 35 | 225 | 42 | 307 |
| 30.0—40.0 | — | — | 12 | 55 | 12 | 55 |
| 40.0—50.0 | — | — | — | — | — | — |
| 50.0ಕ್ಕೂ ಹೆಚ್ಚು | — | — | — | — | — | — |
| ಒಟ್ಟು | 1,048 | 1,743 | 561 | 1,068 | 1,609 | 2,811 |

ಆಧಾರ : ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ, ಬೆಂಗಳೂರು.

1990-91ನೇ ಸಾಲಿನಲ್ಲಿ ಒಟ್ಟು 5,885 ಹೆ. ಪ್ರದೇಶವು ನೀರಾವರಿಗೊಳಪಟ್ಟಿದ್ದು, ಈ ಪೈಕಿ 4,230 ಹೆ. (ಶೇ. 71.87) ಕಾಲುವೆಗಳಿಂದಲೂ, 185 ಹೆ. (ಶೇ. 3.14) ಕೆರೆಗಳಿಂದಲೂ, 2.3 ಹೆ. (ಶೇ. 0.40) ಬಾವಿಗಳಿಂದಲೂ, 12 ಹೆ. (ಶೇ. 0.20) ಏತ ನೀರಾವರಿಯಿಂದಲೂ ಮತ್ತು 135 ಹೆ. (ಶೇ. 24.39) ಇತರ ಮೂಲಗಳಿಂದಲೂ ನೀರಾವರಿ ಸೌಲಭ್ಯ ಪಡೆದಿತ್ತು. 1989-90ನೇ ಸಾಲಿನಲ್ಲಿ ಒಟ್ಟು 5,636 ಹೆ. ಪ್ರದೇಶವು ನೀರಾವರಿಯಾಗಿದ್ದರಿಂದ 1990-91ನೇ ಸಾಲಿನಲ್ಲಿ ಶೇ. 3.5 ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಹೆಚ್ಚಳಗೊಂಡಂತಾಗಿದೆ.

ಒಟ್ಟು ನೀರಾವರಿ ಪ್ರದೇಶದ ಪೈಕಿ 3,683 ಹೆ.ನಲ್ಲಿ ಬತ್ತ, 154 ಹೆ.ನಲ್ಲಿ ರಾಗಿ 906 ಹೆ.ನಲ್ಲಿ ಅಲಸಂದೆ ಮತ್ತು ಉಳಿದ ಪ್ರದೇಶದಲ್ಲಿ ಇತರ ಬೆಳೆಗಳನ್ನು ಬೆಳೆಯಲಾಗಿತ್ತು.

## ರೇಷ್ಮೆ ಕೃಷಿ

ಕೊಡಗು ಜಿಲ್ಲೆಯ ಭೂಮಿ ಹಾಗೂ ಹವಾಮಾನವು ರೇಷ್ಮೆ ಉತ್ಪಾದನೆಗೆ ಉತ್ಕೃಷ್ಟವಾಗಿದೆ. ಇಲ್ಲಿನ ಬೈವೋಲ್ಟಿನ್ ರೇಷ್ಮೆಯ ಉತ್ಪಾದನೆಯು ಕೋಲಾರ ಮತ್ತು ಮೈಸೂರು ಜಿಲ್ಲೆಗಳ ಉತ್ಪಾದನೆಗಿಂತ ದ್ವಿಗುಣ ಪ್ರಮಾಣವನ್ನು ಹೊಂದಿರುವುದರಿಂದ ಈ ಜಿಲ್ಲೆಯನ್ನು ಬೈವೋಲ್ಟಿನ್ ಬೀಜೋತ್ಪಾದನೆಯ ಜಿಲ್ಲೆಯೆಂದು ರೇಷ್ಮೆ ಇಲಾಖೆಯು ಘೋಷಿಸಿದೆ. ಈ ಜಿಲ್ಲೆಯಲ್ಲಿ ರೇಷ್ಮೆಗೂಡಿನ ಮಾರುಕಟ್ಟೆ ಇಲ್ಲದಿರುವುದರಿಂದ ಬೈವೋಲ್ಟಿನ್ ಗೂಡು ಹಾಸನದ ಬೀಜ ಸಂಸ್ಕರಣ ಕೇಂದ್ರದಲ್ಲಿ ಮಾರಾಟವಾಗುತ್ತದೆ. ಜಿಲ್ಲೆಯಲ್ಲಿ ಟಸ್ಸಾರ್ ರೇಷ್ಮೆ ಉತ್ಪಾದನೆಗೆ ಬೇಕಾದ ಮರಗಿಡಗಳು ಅಧಿಕವಾಗಿರುವುದರಿಂದಲೂ ಮತ್ತು ಪಶ್ಚಿಮ ಘಟ್ಟ ಪ್ರದೇಶದ ವ್ಯಾಪ್ತಿಗೊಳಪಟ್ಟಿರುವುದರಿಂದಲೂ ಜಿಲ್ಲೆಯನ್ನು ಟಸ್ಸಾರ್ ರೇಷ್ಮೆ ಉತ್ಪಾದನೆಗೊಳಪಡಿಸುವುದು ಲಾಭದಾಯಕವೆಂದು ಭಾವಿಸಲಾಗಿದೆ.

ಸೋಮವಾರಪೇಟೆ ತಾಲೂಕಿನ ಕೂಡಿಗೆಯಲ್ಲಿನ ಸಿಲ್ಕ್ ಫಾರ್ಮ್‌ನಲ್ಲಿ ತರಬೇತಿ ಶಾಲೆ, ತರಬೇತಿದಾರರು, ಹಾಸ್ಟಲ್ ಸೌಲಭ್ಯ ಮೊದಲಾದವುಗಳಿದ್ದು ರೈತರಿಗೆ ತರಬೇತಿಯನ್ನೊದಗಿಸಲಾಗುತ್ತಿದೆ. ವಿಶ್ವಬ್ಯಾಂಕಿನ ಯೋಜನೆಯನ್ವಯ ಜಿಲ್ಲೆಯಲ್ಲಿ ಪ್ರತೀ ತಾಲೂಕಿಗೆ ಒಂದೊಂದರಂತೆ ತಾಂತ್ರಿಕ ಸೇವಾ ಕೇಂದ್ರಗಳು ಮತ್ತು ಮೂರು ನೂಲು ತೆಗೆಯುವ (ಚಾಕಿ) ಕೇಂದ್ರಗಳ ಸ್ಥಾಪನೆಗೆ ಅನುಮತಿ ದೊರಕಿದೆ. ವೀರರಾಜಪೇಟೆ ತಾಲೂಕಿನ ಗೋಣಿಕೊಪ್ಪಲಿನಲ್ಲಾಗಲಿ ಅಥವ ಸೋಮವಾರಪೇಟೆ ತಾಲೂಕಿನ ಕುಶಾಲನಗರದಲ್ಲಾಗಲಿ ಒಂದು ರೇಷ್ಮೆಗೂಡಿನ ಮಾರುಕಟ್ಟೆಯನ್ನು ಸ್ಥಾಪಿಸುವ ಯೋಜನೆ ಇದೆ.

1990-91ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟು 653 ಹೆ. ಪ್ರದೇಶದಲ್ಲಿ ಹಿಪ್ಪನೇರಳೆಯನ್ನು ಬೆಳೆಯಲಾಗಿತ್ತು. ಸೋಮವಾರಪೇಟೆ ತಾಲೂಕಿನ ಹವಾಮಾನವು ಹಿಪ್ಪನೇರಳೆ ಬೆಳೆಗೆ ಉತ್ಕೃಷ್ಟವಾಗಿರುವುದರಿಂದ ಅಲ್ಲಿ ಹಿಪ್ಪನೇರಳೆಯು ಅಧಿಕ ಪ್ರಮಾಣದಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯ ಇತರ ತಾಲೂಕುಗಳಲ್ಲೂ ಹಿಪ್ಪನೇರಳೆಯನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 5 ಚಾಕಿ ಸಾಕಣೆ ಕೇಂದ್ರಗಳಿದ್ದು 1990-91ರಲ್ಲಿ 84ಟನ್‌ಗಳಷ್ಟು ರೇಷ್ಮೆಗೂಡು ಉತ್ಪಾದನೆಯಾಗಿದೆ.

ಜಿಲ್ಲೆಯಲ್ಲಿ 1990 ರ ಮಾರ್ಚ್ ಅಂತ್ಯದಲ್ಲಿದ್ದ ತಾಲೂಕುವಾರು ರೇಷ್ಮೆ ಕೃಷಿ ಮಾಹಿತಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ವಿವರಣೆ | ಸೋಮವಾರಪೇಟೆ ತಾಲೂಕು | ಮಡಿಕೇರಿ ತಾಲೂಕು | ವೀರರಾಜಪೇಟೆ ತಾಲೂಕು | ಒಟ್ಟು ವಿಸ್ತೀರ್ಣ |
|---|---|---|---|---|
| ಹಿಪ್ಪನೇರಳೆ ಇರುವ ಪ್ರದೇಶ (ಎಕರೆಗಳಲ್ಲಿ) | 1,093.00 | 60.20 | 36.00 | 1,189.20 |
| ರೇಷ್ಮೆ ವ್ಯವಸಾಯದ ಹಳ್ಳಿಗಳ ಸಂಖ್ಯೆ | 200 | 30 | 15 | 245 |
| ರೇಷ್ಮೆ ಕೃಷಿ ಹೊಂದಿರುವವರ ಒಟ್ಟು ಸಂಖ್ಯೆ | 1,332 | 40 | 36 | 1,408 |
| ಪರಿಶಿಷ್ಟ ಜಾತಿ (ಪ. ಪಂಗಡ) | 50(45) | 1(2) | ಇಲ್ಲ (22) | 56(69) |
| ರೇಷ್ಮೆಗೂಡಿನ ಉತ್ಪಾದನೆ (ಮೆ. ಟನ್) | 75.00 | 8.60 | 0.86 | 78.46 |
| ರೇಷ್ಮೆ ಮೊಟ್ಟೆ (ಸಂಖ್ಯೆ) | 1,85,511 | 4,804 | 1,466 | 1,91,781 |

ಆಧಾರ : ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿ, ಮಡಿಕೇರಿ.

ಜಿಲ್ಲೆಯಲ್ಲಿ ಹಿಪ್ಪನೇರಳೆಯಿರುವ ಪ್ರದೇಶವನ್ನು 1990-91ಕ್ಕೆ 1,700 ಎಕರೆಗೂ, 1991–92ಕ್ಕೆ 2,400 ಎಕರೆಗೂ, 1992–93ಕ್ಕೆ 3,300 ಎಕರೆಗೂ, 1993–94ಕ್ಕೆ 4,200 ಎಕರೆಗೂ ಮತ್ತು 1994–95ಕ್ಕೆ 5,100 ಎಕರೆಗೂ ವಿಸ್ತರಿಸುವ ಗುರಿ ಹೊಂದಲಾಗಿದೆ.

### ಜೇನು ಸಾಕಣೆ

ಅಭಿವೃದ್ಧಿ ಕಾರ್ಯಕ್ರಮ ಯೋಜನೆಯಡಿಯಲ್ಲಿ ರಾಜ್ಯ ಸರಕಾರವು ಜೇನು ಸಾಕಣೆದಾರರಿಗೆ ಜೇನುಗೂಡು ಮತ್ತು ಇತರ ಸಲಕರಣೆಗಳಿಗೆ ಸಹಾಯಧನ ಹಾಗೂ ಜೇನು ಸಾಕಣೆದಾರರಿಗೆ ಸಂಭಾವನೆ ನೀಡಿ ತರಬೇತಿ ಸೌಲಭ್ಯವನ್ನೊದಗಿಸಿದೆ. ಜೇನು ಸಾಕಣೆಯನ್ನು ಮಧ್ಯಮ ಅಥವಾ ಬೃಹತ್ ಪ್ರಮಾಣದಲ್ಲಿ ನಡೆಸುವ ಇಚ್ಛೆಯುಳ್ಳವರಿಗೆ ಸರ್ಟಿಫಿಕೇಟ್ ತರಬೇತಿ ಸೌಲಭ್ಯವನ್ನೊದಗಿಸಿದೆ. ಕೊಡಗು ಜಿಲ್ಲೆಯಲ್ಲಿ ಎರಡು ಬೃಹತ್ ಜೇನು ಸಹಕಾರ ಸಂಘಗಳಿವೆ. 1) ದಿ ಕೂರ್ಗ್ ಪ್ರೋಗ್ರೆಸ್ಸಿವ್ ಬೀ ಕೀಪರ್ಸ್ ಕೋ-ಆಪರೇಟಿವ್ ಸೊಸೈಟಿ (ಭಾಗಮಂಡಲ)ಯು ತನ್ನ ಕಾರ್ಯ ವ್ಯಾಪ್ತಿಯನ್ನು ಮಡಿಕೇರಿ ಮತ್ತು ಸೋಮವಾರಪೇಟೆ ತಾಲೂಕುಗಳು ಸೇರಿದಂತೆ ಕಾವೇರಿ ನದಿಯ ಉತ್ತರ ಭಾಗಕ್ಕೂ 2) ದಿ ಕೂರ್ಗ್ ಹನಿ ಅಂಡ್ ವ್ಯಾಕ್ಸ್ ಪ್ರೊಡ್ಯೂಸರ್ಸ್ ಕೊ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಲಿ. (ವೀರರಾಜಪೇಟೆ)ಯು ತನ್ನ ಕಾರ್ಯವ್ಯಾಪ್ತಿಯನ್ನು ಮೂರು ತಾಲೂಕುಗಳಲ್ಲಿ ಹೊಂದಿದ್ದು ಕಾವೇರಿ ನದಿಯ ದಕ್ಷಿಣ ಭಾಗಕ್ಕೂ ಸೀಮಿತಗೊಂಡಿದೆ. ಈ ಸಹಕಾರ ಸಂಘಗಳು ಖಾದಿ ಮತ್ತು ಗ್ರಾಮೋದ್ಯೋಗ ಕಮಿಷನ್ ಸಹಾಯದಿಂದ ಜೇನು ಅಭಿವೃದ್ಧಿ ಯೋಜನೆಗಳಿಗೆ ನೆರವನ್ನೊದಗಿಸುತ್ತವೆ. ಈ ಸಹಾಯವು ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮೂಲಕ ಕೊಡಲ್ಪಡುತ್ತದೆ. ಈ ಸಹಕಾರ ಸಂಘಗಳು ಜೇನುತುಪ್ಪವನ್ನು ಜೇನು ಸಾಕಣೆದಾರರಾದ ಸದಸ್ಯರು ಹಾಗೂ ಸದಸ್ಯೇತರರಿಂದಲೂ ಪಡೆಯುತ್ತವೆ. ಉಳಿದುದನ್ನು ಖಾಸಗಿ ವ್ಯಾಪಾರಿಗಳಿಗೆ ಮಾರಾಟ ಮಾಡಲಾಗುತ್ತದೆ. ಸಹಕಾರ ಸಂಘಗಳಿಗೆ ಬಂದ ಜೇನುತುಪ್ಪವನ್ನು ಸಂಸ್ಕರಿಸಿ ಗಾಜಿನ ಸೀಸೆಗಳಲ್ಲಿ ತುಂಬಿ 'ಅಗ್‌ಮಾರ್ಕ್'ನ್ನು ಅಂಟಿಸಿ ಮಡಿಕೇರಿಯಲ್ಲಿರುವ ಜೇನು ಪರೀಕ್ಷಣಾ ಅಗ್‌ಮಾರ್ಕ್ ಸಂಶೋಧನಾ ಕೇಂದ್ರದಲ್ಲಿ ಪರೀಕ್ಷೆಗೊಳಪಡಿಸಿ ನಂತರ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ.

ಜೇನು ಕೈಗಾರಿಕೆಯಲ್ಲಿನ ಪ್ರಧಾನ ಉಪ-ಉತ್ಪನ್ನವಾದ ಜೇನು ಮೇಣ, ಸುಮಾರು 2,000 ಕೆ.ಜಿ.ಯಷ್ಟಿದೆ. ಈ ಜೇನು ಮೇಣವನ್ನು ಜಿಲ್ಲೆಯ ಎರಡು ಸಹಕಾರ ಸಂಘಗಳೂ ಸಂಗ್ರಹಿಸಿ ಜೇನುಗೂಡು ನಿರ್ಮಾಣ ಹಾಳೆಗಳ ತಯಾರಿಕೆಗೆ ಬಳಸುತ್ತಾರೆ. ಈ ಕಾರಣದಿಂದ ಜೇನುಹುಳುಗಳು ಸ್ವತಃ ಕಡಿಮೆ ಜೇನುತುಪ್ಪ ಬಳಸುತ್ತವೆ; ಹಾಗೂ ಹೆಚ್ಚು ಜೇನುತುಪ್ಪವನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ಅಲ್ಲದೆ ಈ ಕೃತಕ ಗೂಡುಗಳನ್ನು 3-4 ವರ್ಷಗಳವರೆಗೆ ಉಪಯೋಗಿಸಬಹುದು. ಮತ್ತು ಜೇನುತುಪ್ಪ ಸಂಗ್ರಹಣೆಗಾರರಿಗೆ ಪ್ರತಿಶತ 25 ರಿಂದ 30ರಷ್ಟು ಅಧಿಕ ಜೇನುತುಪ್ಪ ಸಿಕ್ಕುತ್ತದೆ. ಇದರ ಇತರ ಉಪ-ಉತ್ಪಾದನೆಯನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ರಾಯಲ್ ಜೆಲ್ಲಿ, ಪೊಲನ್ ಬೀ, ವೆನಾನ್ ಮೊದಲಾದವುಗಳನ್ನು ತಯಾರಿಸಲು ಉಪಯೋಗಿಸುವಂತೆ ಇಲ್ಲಿ ಉಪಯೋಗಿಸುತ್ತಿಲ್ಲ. ರಾಣಿಜೇನು ಹುಳುಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಿ ಜೇನು ಸಾಕಣೆದಾರರಿಗೆ ಒದಗಿಸದಿರುವುದು, ಬೇಬಿ ಬೀ ಕಾಲೋನಿಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಿ ಜೇನು ಸಾಕಣೆದಾರರಿಗೆ ಒದಗಿಸದೆ ಇರುವುದು, ಜೇನು ಸಾಕಣೆದಾರರು ಇದರಿಂದ ಹೆಚ್ಚು ಲಾಭ ಪಡೆಯುವ ಅವಕಾಶದಿಂದ ವಂಚಿತರಾಗುವಂತೆ ಮಾಡಿದೆ. ಆಧುನಿಕ ಜೇನು ಸಾಕಣೆಯಿಂದ ಬರುವ ಜೇನು ಮೇಣದ ಉತ್ಪಾದನೆಯು ವಾರ್ಷಿಕ ಸರಾಸರಿ 3,000 ಕೆ.ಜಿ., ರಾಕ್‌ಬೀ ಕಾಲೋನಿಯಿಂದ 10,000 ಕೆ.ಜಿ. ಆದರೆ ಇಲ್ಲಿಯ ಜೇನು ಕೈಗಾರಿಕೆಯಿಂದ 2,000 ಕೆ.ಜಿ.ಯಷ್ಟು ಜೇನುಮೇಣವನ್ನು ಮಾತ್ರ ಉಪಯೋಗಿಸಲಾಗುತ್ತಿದೆ. ಉಳಿದ ಮೇಣವನ್ನು ಖಾಸಗಿಯವರು ಕೊಂಡು ಬೇರೆ ಬೇರೆ ಉದ್ಯಮಗಳಲ್ಲಿ ಉಪಯೋಗಿಸುತ್ತಾರೆ.

ರಾಜ್ಯದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಜೇನು ಅಭಿವೃದ್ಧಿಗೋಸ್ಕರ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಮುಖ್ಯವಾದವುಗಳು 1) ರಾಜ್ಯಹಂತದ ವಾರ್ಷಿಕ ಯೋಜನೆ, 2) ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ, 3) ಬುಡಕಟ್ಟು ಯೋಜನೆ, 4) ವಿಶೇಷ ಘಟಕ ಯೋಜನೆ, 5) ಕೈಗಾರಿಕಾಭಿವೃದ್ಧಿ ಯೋಜನೆ ಮತ್ತು ಗ್ರಾಮೀಣ ತರುಣರಿಗೆ ಸ್ವಯಂಉದ್ಯೋಗ ತರಬೇತಿ ಯೋಜನೆ ('ಟ್ರೈಸೆಂ').

ಕೊಡಗು ಜಿಲ್ಲೆಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ 1980-81 ರಿಂದ 1989-90ರ ವರೆಗೆ ಜೇನು ಉತ್ಪಾದನಾ ಮೌಲ್ಯ (ರೂಪಾಯಿಗಳಲ್ಲಿ) ಈ ಕೆಳಗಿನಂತಿದೆ.

| ವರ್ಷ | ಬುಡಕಟ್ಟು ಉಪ. ಯೋ. | ಪಶ್ಚಿಮಘಟ್ಟದ ಅಭಿವೃದ್ಧಿ ಯೋ. | ರಾಜ್ಯಹಂತದ ವಾರ್ಷಿಕ ಯೋ. | ವಿಶೇಷ ಘಟಕ ಯೋ. | ರೂರಲ್ ಆರ್ಟಿಜನ್ ಪ್ರೊಗ್ರಾಂ |
|---|---|---|---|---|---|
| 80–81 | 2,55,267 | 24,992 | 10,534 | — | — |
| 81–82 | 2,36,887 | 23,080 | 12,265 | — | — |
| 82–83 | 3,83,138 | 23,264 | 18,500 | — | — |
| 83–84 | 4,09,177 | 41,616 | 1,39,083 | 2,60,969 | — |
| 84–85 | 1,72,358 | 33,632 | 1,96,541 | 1,46,870 | — |
| 85–86 | 2,48,654 | 66,202 | 2,48,697 | 1,04,162 | 36,022 |
| 86–87 | 2,02,434 | 1,79,360 | 1,97,893 | — | 42,897 |
| 87–88 | 96,635 | 99,986 | 2,85,885 | — | 48,200 |
| 88–89 | 66,434 | — | 74,339 | — | — |
| 89–90 | 36,634 | — | 1,22,350 | 7,500 | — |

ಆಧಾರ : ಜೇನು ಅಭಿವೃದ್ಧಿ ಅಧಿಕಾರಿಯವರ ಕಚೇರಿ, ಕರ್ನಾಟಕ ಪಶ್ಚಿಮ ವಲಯ, ಮಡಿಕೇರಿ.

1960ರ ಮತ್ತು 1970ರ ದಶಕದಲ್ಲಿನ ಮತ್ತು 1986-87 ರಿಂದ 1989-90ರವರೆಗೆ ಜಿಲ್ಲೆಯ ಜೇನು ತುಪ್ಪದ ಉತ್ಪಾದನೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ವರ್ಷ | ಜೇನು ಉತ್ಪಾದನೆ (ಲಕ್ಷ ಕೆ.ಜಿ.ಗಳಲ್ಲಿ) |
|---|---|
| 1960 | 2.00 |
| 1960—70 | 2.50 |
| 1970—80 | 3.00 |
| 1986—87 | 3.20 |
| 1987—88 | 3.50 |
| 1988—89 | 4.20 |
| 1989—90 | 3.40 |

ಆಧಾರ : ಜೇನು ಅಭಿವೃದ್ಧಿ ಅಧಿಕಾರಿಗಳ ಕಚೇರಿ, ಮಡಿಕೇರಿ.

ಕೊಡಗಿನ ಜೇನು ಸಾಕಣೆ ಉದ್ಯಮವು 1991ರ ಪೂರ್ವಾರ್ಧದವರೆಗೂ ಯಾವ ಅಡಚಣೆಯೂ ಇಲ್ಲದೆ ಲಾಭದಾಯಕವಾಗಿತ್ತು. ಆದರೆ 1991ರ ಉತ್ತರಾರ್ಧದಲ್ಲಿ ಮತ್ತು 1992ರ ಪೂರ್ವಾರ್ಧದಲ್ಲಿ ಜಿಲ್ಲೆಯ ಜೇನು ಹುಳುಗಳು "ಯೂರೋಪಿಯನ್ ಫೌಲ್ ಬ್ರೂಡ್" ಎಂಬ ಅಂಟು ರೋಗಕ್ಕೆ ತುತ್ತಾಗಿ ಅವನತಿ ಹೊಂದುತ್ತಿರುವುದರಿಂದ ಜೇನು ಸಾಕಣೆದಾರರು ಸಾಲದ ಕೂಪದಲ್ಲಿ ಬೀಳುವಂತಾಗಿದೆ. ಸರ್ಕಾರವು ತ್ವರಿತಗತಿಯಲ್ಲಿ ರೋಗನಿವಾರಣೋಪಾಯನ್ನೊದಗಿಸುವುದರ ಜೊತೆಗೆ ಉದ್ದಿಮೆದಾರರಿಗೆ ಆರ್ಥಿಕ ನೆರವನ್ನು ಒದಗಿಸದಿದ್ದರೆ ಆರ್ಥಿಕವಾಗಿ ಲಾಭದಾಯಕವಾಗಿದ್ದ ಕೊಡಗಿನ ಜೇನುತುಪ್ಪ ಮಾರುಕಟ್ಟೆಯಿಂದ ದೂರವಾಗುವ ಸಂಭವವಿದೆಯೆಂದು ಅಭಿಪ್ರಾಯಪಡಲಾಗುತ್ತದೆ.

## ಅರಣ್ಯ ಸಂಪತ್ತು

ಕೊಡಗು ಜಿಲ್ಲೆಯ ಒಟ್ಟು ಭೂ ವಿಸ್ತೀರ್ಣ 4,10,775 ಹೆಕ್ಟೇರ್ ಪೈಕಿ ಅರಣ್ಯಪ್ರದೇಶವು 1,34,657 ಹೆಕ್ಟೇರ್ ನಷ್ಟಿದ್ದು 1/3ಭಾಗದಷ್ಟು ಪ್ರದೇಶವನ್ನಾಕ್ರಮಿಸಿಕೊಂಡಿದೆ. ಇಲ್ಲಿನ ಅಡವಿಗಳು ತೇಗ, ಬೀಟೆ, ಹೊನ್ನೆ, ಶ್ರೀಗಂಧ, ಬಿದಿರು

ಮೊದಲಾದ ಮರಗಳಿಂದ ತುಂಬಿದ್ದು, ರಾಜ್ಯಕ್ಕೆ ಅಧಿಕ ಆದಾಯ ಬರುವಂತೆ ಮಾಡಿವೆ. ಜಿಲ್ಲೆಯಲ್ಲಿ ಬೆಳೆಯುವ ಬಿದಿರು ವಿದೇಶಿಯರಿಗೆ ಆಕರ್ಷಣೆಯನ್ನೊದಗಿಸಿತ್ತು. 1813 ರಲ್ಲಿ ಕ್ಯಾಪ್ಟನ್ ಬಾಸಿಲ್‌ಹಾಲ್ ಮೈಸೂರಿನಿಂದ ಸಿದ್ದಾಪುರದ ಮಾರ್ಗವಾಗಿ ವೀರರಾಜಪೇಟೆಗೆ ಹೋಗುವಾಗ ಬಿದಿರು ಮೆಳೆಗಳನ್ನು ನೋಡಿ ಮಾಡಿದ ವರ್ಣನೆಯು ಹೃದಯಂಗಮವಾಗಿದೆ. ಇಲ್ಲಿರುವ ಅರಣ್ಯಗಳು ಘಟ್ಟಗಳ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿದ್ದು ನಿತ್ಯ ಹರಿದ್ವರ್ಣಗಳಿಂದ ಕೂಡಿವೆ. ಅರಣ್ಯ ಅಭಿವೃದ್ಧಿಗೆ ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಲ್ಲ. ಆದರೆ ಉಳಿದ ಪಂಚವಾರ್ಷಿಕ ಯೋಜನೆಗಳಲ್ಲಿ ಅರಣ್ಯಾಭಿವೃದ್ಧಿಗೆ ಪ್ರಾಮುಖ್ಯತೆ ಕೊಟ್ಟು ಅಭಿವೃದ್ಧಿಪಡಿಸಲಾಗಿದೆ. ಇಲ್ಲಿನ ಅರಣ್ಯಗಳಲ್ಲಿ ದೊರಕುವ ಅರಣ್ಯ ಸಂಪತ್ತು ಮುಖ್ಯವಾಗಿ ಶ್ರೀಗಂಧ, ಸೀಗೇಕಾಯಿ, ಹುಣಿಸೆ, ಜೇನುಮೇಣ ಇವುಗಳು ಗಣ್ಯವಾದವು. ಇತ್ತೀಚಿನ ವರ್ಷಗಳಲ್ಲಿ ಜಿಲ್ಲಾ ಪರಿಷತ್ತು ಅರಣ್ಯ ಇಲಾಖೆಯ ಮೂಲಕ ಅರಣ್ಯ ಸಂಪತ್ತಿನ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. 1990-91 ರಲ್ಲಿ ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ನೆಡುತೋಪು, ಸಸಿ, ಬಿದಿರು ನರ್ಸರಿ ಪೋಷಣೆ, ಹಾಗೂ ಬೆಳೆಸುವಿಕೆಗಾಗಿ ರೂ. 4.37 ಲಕ್ಷಗಳನ್ನು ವೆಚ್ಚ ಮಾಡಿದೆ. 66 ಹೆ. ಪ್ರದೇಶದಲ್ಲಿ ನೆಡುತೋಪುಗಳನ್ನು, 15 ಹೆ. ನಲ್ಲಿ ಬಿದಿರು ಬೆಳೆಯನ್ನು ಆರಂಭಿಸಿರುವುದಲ್ಲದೆ 5.82 ಲಕ್ಷ ಸಸಿ ಪೋಷಣೆ ಮತ್ತು 200 ಬಿದಿರು ನರ್ಸರಿ ಪಾತಿ ಪೋಷಣೆ ಮಾಡಲಾಗಿದೆ. ಶಾಲಾ ಸಸ್ಯ ಕ್ಷೇತ್ರಗಳಿಗಾಗಿ 50,000 ರೂ.ಗಳನ್ನು ವೆಚ್ಚ ಮಾಡಲಾಗಿದೆ. ರಾಷ್ಟ್ರೀಯ ಬಂಜರು ಭೂಮಿ ಅಭಿವೃದ್ಧಿ ಮಂಡಳಿಯಿಂದ ವಿಕೇಂದ್ರೀಕೃತ ಸಸ್ಯ ಕ್ಷೇತ್ರಗಳಿಗಾಗಿ ರೂ. 4.80 ಲಕ್ಷಗಳನ್ನು ಒದಗಿಸಲಾಗಿದೆ. ವಿಶೇಷ ಘಟಕ ಯೋಜನೆಯಡಿಯಲ್ಲಿ ಮಡಿಕೇರಿ ಮತ್ತು ವೀರರಾಜಪೇಟೆ ತಾಲೂಕುಗಳಲ್ಲಿ ರೂ. 60,000 ವೆಚ್ಚದಲ್ಲಿ ಸಾಮಾಜಿಕ ಭದ್ರತಾ ನೆಡುತೋಪುಗಳ ಪೋಷಣೆ ಹಾಗೂ ಬೆಳೆಸುವ ಕಾರ್ಯ ಸಾಗಿದೆ.

1990-91ರಲ್ಲಿ ಜಿಲ್ಲೆಯಲ್ಲಿದ್ದ ಒಟ್ಟು 1.35 ಲಕ್ಷ ಹೆ. ಅರಣ್ಯ ಪ್ರದೇಶದ ಪೈಕಿ 47,514 ಹೆ. ಮಡಿಕೇರಿ ತಾಲೂಕಿನಲ್ಲೂ, 20,849 ಹೆ. ಸೋಮವಾರಪೇಟೆ ತಾಲೂಕಿನಲ್ಲೂ ಮತ್ತು 66,234 ಹೆ. ವೀರರಾಜಪೇಟೆ ತಾಲೂಕಿನಲ್ಲೂ ಹಂಚಿಕೆಯಾಗಿತ್ತು. ಈ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ 38 ಲಕ್ಷ ಸಸಿಗಳನ್ನು ನೆಡಲಾಗಿದೆ. ಇದೇ ಕಾಲಾವಧಿಯಲ್ಲಿ ರೂ. 269 ಲಕ್ಷ ಶ್ರೀಗಂಧದಿಂದ ರೂ. 50 ಲಕ್ಷ ಮರಮಟ್ಟುಗಳಿಂದ, ರೂ. 2 ಲಕ್ಷ ಬಿದಿರಿನಿಂದ ಮತ್ತು ರೂ. 7 ಲಕ್ಷ ಇತರ ಮೂಲಗಳಿಂದ ಬಂದಿದೆ ಎಂದು ಅರಣ್ಯ ಇಲಾಖೆಯ ವರದಿಯಿಂದ ತಿಳಿದುಬಂದಿದೆ.

(ಅರಣ್ಯ ಉತ್ಪಾದನೆಯ ಪ್ರಮಾಣ ಮತ್ತು ಅವುಗಳ ಮೌಲ್ಯವನ್ನು ಪುಟ 471 ರಲ್ಲಿ ನೋಡಿ).

**ಕೈಗಾರಿಕೆಗಳ ಬೆಳವಣಿಗೆ**

ಕೊಡಗು ಜಿಲ್ಲೆಯು ಕೈಗಾರಿಕೆಯಲ್ಲಿ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿದೆ. ಇದು ಕೈಗಾರಿಕೆಯಲ್ಲಿ ಹಿಂದುಳಿದಿರುವುದಕ್ಕೆ ಕೇವಲ ರಸ್ತೆಸಾರಿಗೆ ಮೇಲೆ ಅವಲಂಬಿಸಿರುವ ಮಿತ ಸಾರಿಗೆ ವ್ಯವಸ್ಥೆ ಹಾಗೂ ಔದ್ಯೋಗಿಕ ಉತ್ಸಾಹದ ಕೊರತೆ. 1990ರ ಮಾರ್ಚ್ ಅಂತ್ಯದ ವೇಳೆಯಲ್ಲಿ ಎರಡು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಕಾಫಿ ಸಂಸ್ಕರಣಾ ಉದ್ಯಮದಲ್ಲಿ ತೊಡಗಿದ್ದವು. ಇವುಗಳಲ್ಲಿ ತೊಡಗಿಸಿದ್ದ ಬಂಡವಾಳ 287.20 ಲಕ್ಷ ರೂಪಾಯಿಗಳು. ಇವು 425 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿ 1989-90ರಲ್ಲಿ 2 ಕೋಟಿ ರೂಪಾಯಿಗಳ ಸರಕು ಸಾಮಗ್ರಿಗಳನ್ನು ಉತ್ಪಾದಿಸಿದ್ದವು. ಇದೇ ಕಾಲಾವಧಿಯಲ್ಲಿ 1,171 ನೋಂದಣಿ ಹೊಂದಿದ್ದ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದವು. ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ 672.81 ಲಕ್ಷ ರೂಪಾಯಿಗಳು. ಇವು 5,078 ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿ 1989-90ರಲ್ಲಿ ಸುಮಾರು 970.26 ಲಕ್ಷ ರೂಪಾಯಿ ಮೌಲ್ಯದ ಸರಕನ್ನು ಉತ್ಪಾದಿಸಿದ್ದವು. ಜಿಲ್ಲೆಯಲ್ಲಿ ಒಟ್ಟು 1,092 ಗೃಹ ಕೈಗಾರಿಕೆಗಳಿದ್ದವು. ಜಿಲ್ಲೆಯಲ್ಲಿ ಹಣ್ಣು ಸಂಸ್ಕರಣ, ಜೇನು ಸಾಕಣೆ ಮತ್ತು ಅರಣ್ಯ ಸಂಪತ್ತು ಇವುಗಳಿಗೆ ಸಂಬಂಧಿಸಿದ ಉದ್ಯಮದ ಬೆಳವಣಿಗೆಗೆ ವಿಪುಲ ಅವಕಾಶವಿದೆ. ಇವಲ್ಲದೆ ಬೇಡಿಕೆ ಆಧಾರಿತ ಸರಕುಗಳ ಉತ್ಪಾದನೆ, ತಾಂತ್ರಿಕ ಕೆಲಸ, ಕುಂಬಾರಿಕೆ, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ವಸ್ತುಗಳ ಜೋಡಣೆ, ಉಡುಪು ತಯಾರಿಕೆ, ಚರ್ಮದ ಕೆಲಸ ಮೊದಲಾದುವುಗಳನ್ನು ಕೈಗೊಂಡರೆ ಸಾಕಷ್ಟು ಬೇಡಿಕೆ ಇರಬಲ್ಲುದು. ಫೋಟೋ ಪರಿಷ್ಕರಣ, ಗ್ರಾನೈಟ್ ಕಲ್ಲುಗಳನ್ನು ತುಂಡರಿಸುವುದು ಮತ್ತು ಹೊಳಪು ಕೊಡುವುದು, ಅವಲಕ್ಕಿ ತಯಾರಿಸುವುದು, ಪೇಪರ್ ಚೀಲಗಳನ್ನು ತಯಾರಿಸುವುದು, ಬೆಂಕಿಪೊಟ್ಟಣ ತಯಾರಿಕೆ, ಪ್ಲಾಸ್ಟಿಕ್ ಸರಕುಗಳ ತಯಾರಿಕೆ ಮೊದಲಾದ ಉದ್ದಿಮೆಯು ಜಿಲ್ಲಾ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಸಹಕಾರಿಯಾಗಿವೆ.

1990-91ರ ಕೊಡಗು ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಯ ವರದಿಯಂತೆ ಪ್ರಸ್ತುತ ಸಾಲಿನಲ್ಲಿ ಒಟ್ಟು 30 ಕಾರ್ಖಾನೆಗಳಿದ್ದು, ಆ ಪೈಕಿ ಎಂಟು ಇಂಜಿನಿಯ

1984-85 ರಿಂದ 1988-89ರ ವರೆಗೆ ಜಿಲ್ಲೆಯ ಅರಣ್ಯ ಉತ್ಪಾದನೆಯ ಪ್ರಮಾಣ ಮತ್ತು ಅವುಗಳ ಮೌಲ್ಯವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

(ಮೌಲ್ಯ ಲಕ್ಷ ರೂ. ಗಳಲ್ಲಿ)

| ವರ್ಷಗಳು | ಶ್ರೀಗಂಧ | | ಮರಮುಟ್ಟು | | ಉರುವಲು | | ಇದ್ದಿಲು | | ಬಿದಿರು | | ಅರಣ್ಯ ಕಿರು ಉತ್ಪನ್ನ ಮೌಲ್ಯ |
|---|---|---|---|---|---|---|---|---|---|---|---|
| | ಪ್ರಮಾಣ ಟನ್‌ಗಳು | ಮೌಲ್ಯ | ಪ್ರಮಾಣ ಘನ ಮೀ. ಗಳಲ್ಲಿ | ಮೌಲ್ಯ | ಪ್ರಮಾಣ ಘನ ಮೀ. ಗಳಲ್ಲಿ | ಮೌಲ್ಯ | ಪ್ರಮಾಣ ಚೀಲ ಗಳಲ್ಲಿ | ಮೌಲ್ಯ | ಪ್ರಮಾಣ ಸಂಖ್ಯೆ ಗಳಲ್ಲಿ | ಮೌಲ್ಯ | |
| 1984–85 | 137 | 11.00 | 17,751 | 454.00 | 25,080 | 28.00 | 315 | 0. 7 | 56,645 | 0.57 | 1.66 |
| 1985–86 | 225 | 11.00 | 49,568 | 316 00 | 48,122 | 32.00 | 2,200 | 0.41 | 64,314 | 1.08 | 10.81 |
| 1986–87 | 102 | 31.00 | 24,147 | 648.00 | 31,852 | 41.00 | 3,955 | 0 79 | 61,151 | 0.59 | 2.35 |
| 1987–88 | 76 | 18.00 | 8,759 | 648 00 | 11,968 | 19.00 | 4,175 | 0.83 | 53,321 | 0.89 | 2.35 |
| 1988–89 | 178 | 51 00 | 7,138 | 281.00 | 10,059 | 09.00 | 2,800 | 0.56 | 28,545 | 1.11 | 2.35 |

ಆಧಾರ : ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಮಡಿಕೇರಿ.

ರಿಂಗ್ ಕಾರ್ಖಾನೆಗಳು ಮತ್ತು 22 ಇತರ ಕಾರ್ಖಾನೆಗಳಿದ್ದವು. ಇವು ಒಟ್ಟು 1,814 ಮಂದಿಗೆ ಉದ್ಯೋಗವಕಾಶ ಕಲ್ಪಿಸಿದ್ದವು. ಇದೇ ಕಾಲಾವಧಿಯಲ್ಲಿ 1,323 ನೋಂದಣಿ ಹೊಂದಿದ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿದ್ದು, ಇವುಗಳಲ್ಲಿ 5,468 ಉದ್ಯೋಗಿಗಳು ಕೆಲಸ ಮಾಡುತ್ತಿದ್ದರು.

1983-84 ರಿಂದ 1989-90ರ ವರೆಗೆ ವರ್ಷವಾರು ನೋಂದಣಿಗೊಂಡ ಸಣ್ಣ ಮತ್ತು ಅತೀಸಣ್ಣ ಕೈಗಾರಿಕೆಗಳ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ.

| ವರ್ಷ | ಘಟಕಗಳ ಸಂಖ್ಯೆ | ಬಂಡವಾಳ ಹೂಡಿಕೆ ಲಕ್ಷ ರೂ.ಗಳಲ್ಲಿ | ಉದ್ಯೋಗಿಗಳ ಸಂಖ್ಯೆ |
|---|---|---|---|
| 1983–84 | 82 | 22.57 | 289 |
| 1984–85 | 130 | 27.08 | 521 |
| 1985–86 | 117 | 44.63 | 235 |
| 1986–87 | 115 | 48.48 | 516 |
| 1987–88 | 103 | 42.23 | 252 |
| 1988–89 | 102 | 48.95 | 361 |
| 1989–90 | 110 | 35.61 | 375 |
| ಒಟ್ಟು | 759 | 269.55 | 2,549 |

ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಮಡಿಕೇರಿ.

**ಆರ್ಥಿಕ ಸಾಧನ ಸೌಲಭ್ಯಗಳು**

ಆರ್ಥಿಕ ಪ್ರಗತಿಯು ಪ್ರಧಾನವಾಗಿ ಜಿಲ್ಲೆಯಲ್ಲಿನ ವ್ಯವಸಾಯ ಮತ್ತು ಕೈಗಾರಿಕಾ ಬೆಳವಣಿಗೆ, ಅರಣ್ಯ ಸಂಪತ್ತು, ಮಾನವ ಶಕ್ತಿ ಮೊದಲಾದವುಗಳನ್ನಲ್ಲದೆ, ಇತರ ಆರ್ಥಿಕ ಸೌಲಭ್ಯಗಳಾದ ವಾಣಿಜ್ಯ, ಹಣಕಾಸು ಸಂಸ್ಥೆ, ವಿದ್ಯುಚ್ಛಕ್ತಿ, ಸಾರಿಗೆ ಸಂಪರ್ಕ, ಮೊದಲಾದವುಗಳನ್ನು ಅವಲಂಬಿಸಿರುತ್ತವೆ. ಮೇಲಿನ ಸಾಧನ ಸೌಲಭ್ಯಗಳೆಲ್ಲದರ ವಿವರಗಳು ಈ ಸಂಪುಟದ ಇತರ ಹಲವಾರು ಅಧ್ಯಾಯಗಳಲ್ಲಿ ಇರುವುದರಿಂದ ಹಾಗೂ ಕೆಲವು ಸಾಧನಗಳ ಬಗ್ಗೆ ಇದೇ ಅಧ್ಯಾಯಗಳಲ್ಲಿ ಸಾಕಷ್ಟು ವಿವರಗಳನ್ನು ಕೊಟ್ಟಿರುವುದರಿಂದ ಉಳಿದವುಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಇಲ್ಲಿ ಕೊಟ್ಟಿದೆ.

ವ್ಯಾಪಾರದ ಬಗ್ಗೆ ಅವಲೋಕಿಸಿದಾಗ ಜಿಲ್ಲೆಯ ಪ್ರಮುಖ ಪಟ್ಟಣಗಳಾದ ವೀರರಾಜಪೇಟೆ, ಮಡಿಕೇರಿ, ಸೋಮವಾರಪೇಟೆ, ಕುಶಾಲನಗರ, ಸುಂಟಿಕೊಪ್ಪ, ಗೋಣಿಕೊಪ್ಪಲು ಮತ್ತು ಶನಿವಾರಸಂತೆಗಳಲ್ಲಿ ಪ್ರಮುಖವಾಗಿಯೂ ಭಾಗಮಂಡಲ, ಕೊಡಿಗೆ, ಇತ್ಯಾದಿ ಸ್ಥಳಗಳಲ್ಲಿ ಸಾಧಾರಣವಾಗಿಯೂ ವ್ಯಾಪಾರ ನಡೆಯುವುದು ಕಂಡು ಬರುತ್ತದೆ. ಅಧಿಕ ಪ್ರಮಾಣದ ವ್ಯಾಪಾರಿಗಳು ಪಟ್ಟಣಗಳಲ್ಲಿ ನೆಲೆಸಿರುವರು. ಜಿಲ್ಲೆಯ ಆಮದು ಮತ್ತು ರಫ್ತು ವ್ಯಾಪಾರವು ಬಹುಮಟ್ಟಿಗೆ ಉತ್ತರ ಮಲಬಾರಿನ ವರ್ತಕರಿಂದ ನಡೆಯುತ್ತದೆ. ಕಿರಾಣಿ ವ್ಯಾಪಾರವು ಪ್ರಧಾನವಾಗಿ ಹೊರರಾಜ್ಯದಿಂದ ಬಂದವರಿಂದಲೂ ಅಲ್ಪಪ್ರಮಾಣದಲ್ಲಿ ಜಿಲ್ಲೆಯ ವರ್ತಕರಿಂದಲೂ ನಡೆಯುತ್ತದೆ. ಜಿಲ್ಲೆಯಲ್ಲಿ ರೈಲುಸಾರಿಗೆ ಸೌಲಭ್ಯವಿಲ್ಲದಿರುವುದರಿಂದ ವ್ಯಾಪಾರವೆಲ್ಲವೂ ರಸ್ತೆ ಸಾರಿಗೆಯ ಮೂಲಕ ಮಳೆಗಾಲದ ಹೊರತು ಇತರ ಋತುಗಳಲ್ಲಿ ನಡೆಯುತ್ತದೆ. ಜಿಲ್ಲೆಯಲ್ಲಿ ಬಾಳೆ ಫಸಲು ಹೆಚ್ಚಾಗಿ ಬೆಳೆಯುವುದರಿಂದ, ಬಾಳೆ ತೋಟಗಳಿರುವ ಪ್ರದೇಶದ ಪಕ್ಕದ ಪಟ್ಟಣಗಳು ವ್ಯಾಪಾರ ಕೇಂದ್ರಗಳಾಗಿವೆ. ಇವುಗಳಲ್ಲಿ ಮುಖ್ಯವಾದವುಗಳು ಗೋಣಿಕೊಪ್ಪಲು, ಸುಂಟಿಕೊಪ್ಪ, ಕುಶಾಲನಗರ ಮತ್ತು ವೀರರಾಜಪೇಟೆ. ಇತ್ತೀಚೆಗೆ ಶನಿವಾರಸಂತೆ ಮತ್ತು ಕೊಡ್ಲಿಪೇಟೆಗಳು ಹಸಿರು ಮೆಣಸಿನ

ಕಾಯಿಯನ್ನು ಅದರ ಸುಗ್ಗಿಯ ದಿನಗಳಲ್ಲಿ ವಾರದಲ್ಲಿ ಎರಡು ಮೂರು ದಿನಗಳಲ್ಲಿ ಮಾರಾಟ ಮಾಡುತ್ತಿದ್ದು, ಇಲ್ಲಿಗೆ ಹೊರ ಜಿಲ್ಲೆಗಳ ವ್ಯಾಪಾರಿಗಳು ಬರುತ್ತಿದ್ದಾರೆ. ಜಿಲ್ಲೆಯು ಕೇರಳ, ದಕ್ಷಿಣ ಕನ್ನಡ ಮತ್ತು ಮೈಸೂರಿನೊಡನೆ ಹೆಚ್ಚಿನ ವ್ಯಾಪಾರ ಸಂಪರ್ಕವನ್ನಿಟ್ಟುಕೊಂಡಿದೆ.

ಹಣಕಾಸಿನ ಸೌಲಭ್ಯದ ವಿಚಾರ ಮಾಡುವಾಗ, ಹಣಕಾಸಿನ ಸಂಸ್ಥೆಗಳು ಹುಟ್ಟಿಕೊಳ್ಳುವ ಪೂರ್ವದಲ್ಲಿ ಸಾಲದ ವ್ಯವಹಾರವು ಖಾಸಗೀ ಲೇವಾದೇವಿಗಾರರಿಂದ ನಡೆಯುತ್ತಿದ್ದುದು ಕಂಡು ಬರುತ್ತದೆ. ಈಗಲೂ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಈ ವ್ಯವಹಾರವು ರೂಢಿಯಲ್ಲಿದೆ. ಆಧುನಿಕ ಬ್ಯಾಂಕಿಂಗ್ ವ್ಯವಹಾರ 1922ರಿಂದ ಕೂರ್ಗ್ ಸ್ಟೇಟ್ ಕೋ ಆಪರೇಟಿವ್ ಬ್ಯಾಂಕ್‌ನ ಸ್ಥಾಪನೆಯೊಂದಿಗೆ ಪ್ರಾರಂಭವಾಯಿತು. 1934 ರಿಂದೀಚೆಗೆ ವಾಣಿಜ್ಯ ಬ್ಯಾಂಕ್‌ಗಳು ಹುಟ್ಟಿಕೊಂಡವು. ಕೊಡಗಿನಲ್ಲಿ 1905ರಲ್ಲೇ ಸಹಕಾರಿ ಆಂದೋಲನ ಪ್ರಾರಂಭವಾಯಿತು. ಪತ್ತಿನ ಸಹಕಾರಿ ಸಂಘಗಳು, ಭೂ ಅಭಿವೃದ್ಧಿ ಬ್ಯಾಂಕ್ ಮೊದಲಾದವುಗಳು ಗ್ರಾಮಾಂತರ ಪ್ರದೇಶದ ಜನಗಳ ಸಾಲ ಸೌಲಭ್ಯದ ಕೇಂದ್ರಗಳಾಗಿವೆ.

1989-90 ರಲ್ಲಿ ಜಿಲ್ಲೆಯಲ್ಲಿದ್ದ ತಾಲೂಕುವಾರು ಬ್ಯಾಂಕು ಸೌಲಭ್ಯವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರ. ಸಂ. | ಬ್ಯಾಂಕ್‌ಗಳ ಹೆಸರು | ಮಡಿಕೇರಿ | ವೀರರಾಜಪೇಟೆ | ಸೋಮವಾರಪೇಟೆ | ಒಟ್ಟು |
|---|---|---|---|---|---|
| 1. | ಸ್ಟೇಟ್ ಬ್ಯಾಂಕ್ ಶಾಖೆಗಳು | 4 | 2 | 3 | 9 |
| 2. | ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು | 20 | 31 | 21 | 72 |
| 3. | ಪ್ರಾಂತೀಯ ಗ್ರಾಮೀಣ ಬ್ಯಾಂಕ್ | 8 | 6 | 4 | 18 |
| 4. | ಖಾಸಗೀ ವಲಯ | 5 | — | 4 | 9 |
| 5. | ಸಹಕಾರಿ ಬ್ಯಾಂಕ್‌ಗಳು | | | | |
| | ಅ) ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ | 4 | 2 | 5 | 11 |
| | ಆ) ಭೂ ಅಭಿವೃದ್ಧಿ ಬ್ಯಾಂಕ್ | 2 | 1 | 1 | 4 |
| | ಇ) ಪಟ್ಟಣ ಸಹಕಾರಿ ಬ್ಯಾಂಕ್ | 3 | 2 | 1 | 6 |
| | ಒಟ್ಟು | 46 | 44 | 39 | 129 |

ಆಧಾರ : ಲೀಡ್ ಬ್ಯಾಂಕ್ ರಿಪೋರ್ಟ್ 1989-90.

## ವಿದ್ಯುತ್

ಕೈಗಾರಿಕೆ ಮತ್ತು ಇತರ ಆರ್ಥಿಕ ಕ್ಷೇತ್ರಗಳ ಬೆಳವಣಿಗೆಯು ಪ್ರಧಾನವಾಗಿ ವಿದ್ಯುಚ್ಛಕ್ತಿಯ ಪೂರೈಕೆಯನ್ನವಲಂಬಿಸಿರುತ್ತದೆ. ಬರಪೊಳೆ ಜಲವಿದ್ಯುತ್ ಉತ್ಪಾದನಾ ಕಾರ್ಯವನ್ನು ಕೈಗೊಳ್ಳುವ ಉದ್ದೇಶದಿಂದ 1945ರಲ್ಲಿ ಮದರಾಸಿನ ವಿದ್ಯುಚ್ಛಕ್ತಿ ಇಲಾಖೆಯು ಸಮೀಕ್ಷಣಾ ಕಾರ್ಯವನ್ನು ನಡೆಸಿ, ಸುಮಾರು 30,000 ದಿಂದ 40,000 ಕಿ.ವ್ಯಾ. ವಿದ್ಯುತ್‌ನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಅಲ್ಲಿನ ಜಲಪಾತವು ಹೊಂದಿದೆ ಎಂಬ ತೀರ್ಮಾನಕ್ಕೆ ಬಂದಿದ್ದಿತು. 1953ರಲ್ಲಿ ಎಂ. ಎಸ್. ಥಾಕರ್, ಎಂ. ನರಸಿಂಹಯ್ಯ ಮತ್ತು ಪ್ರೊ|| ಗೋವಿಂದರಾವ್ ಇವರು ಆಗಿನ ಕೊಡಗಿನ ಸರಕಾರಕ್ಕೆ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸಲಹೆ ಕೊಟ್ಟರು. ಈ ಯೋಜನೆಯನ್ನು ಮೈಸೂರಿನ ಎಂಜಿನಿಯರ್ ಆದ ಎಂ. ಆರ್. ಕೃಷ್ಣಮೂರ್ತಿರಾವ್ ಅವರು ಮತ್ತೆ ಪರಿಶೀಲನೆ ನಡೆಸಿ ವಿವರವಾದ ನೀಲಿನಕ್ಷೆಯನ್ನು ತಯಾರಿಸಿದರು. ಮೂರನೇಯ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕ ಸರ್ಕಾರವು ಬರಪೊಳೆ ಯೋಜನೆಗೆ 20 ಲಕ್ಷ ರೂ.ಗಳನ್ನು ಖರ್ಚು ಮಾಡುವ ಗುರಿಯನ್ನು

ಹೊಂದಿದ್ದು, ಹಣದ ಕೊರತೆಯಿಂದಾಗಿ ಮತ್ತು ರಾಜ್ಯದ ಇತರ ಜಲವಿದ್ಯುತ್ ಯೋಜನೆಗಳಿಗೆ ಆದ್ಯತೆ ಕೊಡುವ ಉದ್ದೇಶದಿಂದ ಈ ಯೋಜನೆಯನ್ನು ತಾತ್ಕಾಲಿಕವಾಗಿ ಕೈ ಬಿಟ್ಟಿತು. ಇತ್ತೀಚೆಗೆ ಕೊಡಗಿನ ಜನತೆಯ ಪ್ರತಿರೋಧ ದಿಂದಾಗಿ ಈ ಯೋಜನೆಯ ಕಾರ್ಯ ಸ್ಥಗಿತಗೊಂಡಿದೆ.

ಕೊಡಗಿನ ತಲಕಾವೇರಿಯಲ್ಲಿ ಗಾಳಿಶಕ್ತಿಯ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮವು ರಾಜ್ಯದ ಸಂಸ್ಥೆಗಳಾದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕರ್ನಾಟಕ ರಾಜ್ಯ ಹಣಕಾಸು ನಿಗಮ ಮೊದಲಾದವುಗಳ ಸಹಕಾರ ಮತ್ತು ಕೇಂದ್ರ ಸರಕಾರದಿಂದ 65 ಲಕ್ಷ ರೂ.ಗಳ ನೆರವಿನೊಂದಿಗೆ ಒಟ್ಟು 1 ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು 1988ರಲ್ಲಿ ಜಾರಿಗೆ ತಂದವು. ಡೆನ್ಮಾರ್ಕಿ ನಿಂದ ಆಮದು ಮಾಡಿಕೊಂಡ ಐದು ಗಾಳಿಯಂತ್ರಗಳನ್ನು ತಲಕಾವೇರಿಯಲ್ಲಿ ಸ್ಥಾಪಿಸಲಾಗಿದೆ. ಈ ಗಾಳಿಯಂತ್ರಗಳ ಸ್ಥಾಪನೆಯಾಗಿ ಎರಡು ವರ್ಷಗಳಾಗಿದ್ದರೂ ಅವುಗಳ ವಿದ್ಯುತ್ ಉತ್ಪಾದನಾ ಕಾರ್ಯವಿನ್ನೂ ಆರಂಭವಾಗಿಲ್ಲ.

1989-90ರಲ್ಲಿ ಜಿಲ್ಲೆಯಲ್ಲಿದ್ದ ಒಟ್ಟು 3,280 ಕಿ.ಮೀ. ವಿದ್ಯುತ್ ಲೈನ್ ಪೈಕಿ 33 ಕೆ.ವಿ.ಎ. ಲೈನು 134 ಕಿ.ಮೀ., 11 ಕೆ.ವಿ.ಎ. ಲೈನು 1,798 ಕಿ.ಮೀ. ಮತ್ತು 440 ವೋಲ್ಟೇಜ್ ಲೈನ್ 2,716 ಕಿ.ಮೀ. ಇತ್ತು. 1990-91ರ ವರೆಗೆ ಜಿಲ್ಲೆಯ ಒಟ್ಟು 289 ಗ್ರಾಮಗಳಿಗೆ ಮತ್ತು 150 ಉಪಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ಒದಗಿ ಸಲಾಗಿತ್ತು. ಇದೇ ಕಾಲಾವಧಿಯಲ್ಲಿ ಒಟ್ಟು 45,911 ವಿದ್ಯುತ್ ಸಂಪರ್ಕಗಳಿದ್ದು ವಿವಿಧ ಬಳಕೆಗಳಿಗೆ ಹಂಚಿಕೆ ಯಾಗಿತ್ತು.

### ಸಾರಿಗೆ ಸಂಪರ್ಕ

ಜಿಲ್ಲೆಯಲ್ಲಿ ರೈಲು ಸಾರಿಗೆ ಸಂಪರ್ಕವಾಗಲಿ ಅಥವಾ ವಾಯು ಸಾರಿಗೆ ಸಂಪರ್ಕವಾಗಲಿ ಇಲ್ಲ. ರಾಷ್ಟ್ರೀಯ ಹೆದ್ದಾರಿಗಳೂ ಜಿಲ್ಲೆಯಲ್ಲಿ ಇಲ್ಲ. ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ರಸ್ತೆಗಳು ಜಿಲ್ಲೆಯ ಎಲ್ಲಾ ತಾಲೂಕು ಹಾಗೂ ಪಟ್ಟಣಗಳಿಗೆ ಸಂಪರ್ಕವನ್ನು ಕಲ್ಪಿಸಿವೆ. ಜಿಲ್ಲೆಯಲ್ಲಿ ರುವ ಮುಖ್ಯ ಜಿಲ್ಲಾ ರಸ್ತೆಗಳು ಮಡಿಕೇರಿ-ಭಾಗಮಂಡಲ ರಸ್ತೆ, ಮಡಿಕೇರಿ-ವೀರರಾಜಪೇಟೆ ರಸ್ತೆ, ಮಡಿಕೇರಿ-ಕೊಡ್ಲಿ ಪೇಟೆ ರಸ್ತೆ, ವೀರರಾಜಪೇಟೆ-ಮೈಸೂರು ರಸ್ತೆ ಮತ್ತು ಗೋಣಿಕೊಪ್ಪಲು-ಮೈಸೂರು ರಸ್ತೆ. ಜಿಲ್ಲೆಯ ರಸ್ತೆಯ ಒಟ್ಟು ಉದ್ದಳತೆ 1990-91ರಲ್ಲಿ 2,782 ಕಿ.ಮೀ. ಇದ್ದು, ಇದರಲ್ಲಿ 806 ಕಿ.ಮೀ. ಮಡಿಕೇರಿ ತಾಲೂಕಿನಲ್ಲೂ 978 ಕಿ.ಮೀ. ಸೋಮವಾರಪೇಟೆ ತಾಲೂಕಿನಲ್ಲೂ ಮತ್ತು 998 ಕಿ.ಮೀ. ವೀರರಾಜಪೇಟೆ ತಾಲೂಕಿನಲ್ಲೂ ಹಂಚಿಕೆ ಯಾಗಿದೆ. 1988-89ರಲ್ಲಿ ಜಿಲ್ಲೆಯಲ್ಲಿದ್ದ ವಿವಿಧ ಗುಂಪಿಗೆ ಸೇರಿದ ವಾಹನಗಳ ಸಂಖ್ಯೆ 14,901. ಈ ಪೈಕಿ ಸರ್ಕಾರಿ ವಾಹನಗಳು 196 ಮತ್ತು ಖಾಸಗೀ ವಾಹನಗಳು 14,705.

ಅಂಚೆ ಕಚೇರಿಗಳು ತಂತಿ ಕಚೇರಿಗಳು, ದೂರವಾಣಿ ಕಚೇರಿಗಳು ಮತ್ತು ದೂರವಾಣಿ ವಿನಿಮಯ ಕೇಂದ್ರಗಳು ಒಟ್ಟಿಗೆ ಸೇರಿ ಸಂಪರ್ಕ ಸಾಧನಗಳೆನಿಸಿವೆ. ಕೊಡಗು ಜಿಲ್ಲೆ ಯಲ್ಲಿ 1988-89ರಲ್ಲಿ ಒಟ್ಟು 213 ಅಂಚೆಮನೆಗಳು, 68 ತಂತಿ ಕಚೇರಿಗಳು, 5,436 ದೂರವಾಣಿ ಸಂಪರ್ಕಗಳು ಮತ್ತು 61 ದೂರವಾಣಿ ವಿನಿಮಯ ಕೇಂದ್ರಗಳು ಇದ್ದವು. ಇವುಗಳ ಪೈಕಿ ಮಡಿಕೇರಿ ತಾಲೂಕಿನಲ್ಲಿ 47 ಅಂಚೆಕಚೇರಿ ಗಳು, 31 ತಂತಿ ಕಚೇರಿಗಳು, 1,851 ದೂರವಾಣಿ ಸಂಪರ್ಕಗಳು ಮತ್ತು 21 ದೂರವಾಣಿ ವಿನಿಮಯ ಕೇಂದ್ರ ಗಳಿದ್ದವು. ಸೋಮವಾರಪೇಟೆ ತಾಲೂಕಿನಲ್ಲಿ 81 ಅಂಚೆ ಕಚೇರಿಗಳು ಮತ್ತು 25 ತಂತಿ ಕಚೇರಿಗಳು 1,341 ದೂರವಾಣಿ ಸಂಪರ್ಕಗಳು ಮತ್ತು 17 ದೂರವಾಣಿ ವಿನಿಮಯ ಕೇಂದ್ರಗಳಿದ್ದವು. ವೀರರಾಜಪೇಟೆ ತಾಲೂಕಿನಲ್ಲಿ 85 ಅಂಚೆ ಕಚೇರಿಗಳು, 12 ತಂತಿ ಕಚೇರಿಗಳು, 2,244 ದೂರವಾಣಿ ಸಂಪರ್ಕಗಳು ಮತ್ತು 23 ದೂರವಾಣಿ ವಿನಿಮಯ ಕೇಂದ್ರಗಳಿದ್ದವು. 1989-90 ಮತ್ತು 1990-91ರಲ್ಲಿ ಅನುಕ್ರಮವಾಗಿ ಜಿಲ್ಲೆಯಲ್ಲಿದ್ದ ಅಂಚೆ ಕಚೇರಿಗಳ ಸಂಖ್ಯೆ 213 ಮತ್ತು 215 ; ತಂತಿ ಕಚೇರಿಗಳ ಸಂಖ್ಯೆ 73 ಮತ್ತು 85 ; ಬಳಕೆಯಲ್ಲಿದ್ದ ದೂರವಾಣಿಗಳ ಸಂಖ್ಯೆ 5,831 ಮತ್ತು 6,270.

ವಿದ್ಯಾವಂತರೂ ಅನುಕೂಲವಂತರೂ ಸಾಕಷ್ಟು ಇರುವ ಈ ಜಿಲ್ಲೆಯಲ್ಲಿ ಆಕಾಶವಾಣಿ ಮತ್ತು ದೂರದರ್ಶನಗಳ ಸವಲತ್ತಿನ ಲಾಭ ಪಡೆಯುವ ಸ್ವೀಕರಣಾ ಸಲಕರಣೆಗಳನ್ನು ಹೊಂದಿ ದವರು ಸಾಕಷ್ಟಿದ್ದರೂ ಈಗ ಇವುಗಳಿಗೆ ಲೈಸನ್ಸ್ ವ್ಯವಸ್ಥೆ ಇಲ್ಲದ್ದರಿಂದ ಆ ಬಗ್ಗೆ ಅಂಕೆ ಸಂಖ್ಯೆ ಸಿಗದಾಗಿದೆ.

### ಬೆಲೆಗಳು

ಒಂದು ಶತಮಾನಕ್ಕೂ ಹಿಂದೆ ಕೊಡಗಿನ ವ್ಯವಸಾಯ ಗಾರರು ಅಧಿಕ ಪ್ರಮಾಣದಲ್ಲಿ ವ್ಯವಸಾಯೋತ್ಪಾದನೆಯನ್ನು

ಮಾಡುತ್ತಿದ್ದರು. ಆದರೆ ಅವರ ಉತ್ಪಾದನೆಗೆ ತಕ್ಕ ಪ್ರತಿಫಲ ಸಿಕ್ಕುತ್ತಿರಲಿಲ್ಲ. ಇದಕ್ಕೆ ಅನೇಕ ಕಾರಣಗಳಿದ್ದರೂ ಸಾಗಾಣಿಕೆ ಸೌಲಭ್ಯ ಮತ್ತು ಉತ್ತಮ ಮಾರುಕಟ್ಟೆಯ ಸೌಲಭ್ಯ ಇಲ್ಲದಿದ್ದುದೇ ಪ್ರಮುಖ ಕಾರಣಗಳಾಗಿವೆ. ಹಿಂದೆ ಅಪಾರವಾಗಿ ಬೆಳೆದ ಬತ್ತವನ್ನು ಕೊಳ್ಳುವವರೂ ಇಲ್ಲದೆ ದಾಸ್ತಾನಿಗೂ ಅನುಕೂಲವಿಲ್ಲದೆ ತೆನೆಗಳನ್ನು ಬಡಿದು (ಅದನ್ನು ಕುಟ್ಟಿದ ಕೂಲಿಯ ಭಾರವನ್ನು ಭರಿಸಲಾಗದೆ) ಹೆಚ್ಚುವರಿ ಬತ್ತವನ್ನು ಹಾಗೆಯೇ ಎಸೆದು ಬಿಡುವ ಪರಿಪಾಠವಿತ್ತೆಂದು ಜಿಲ್ಲೆಯ ಲೇಖಕರೊಬ್ಬರು ಹೇಳಿದ್ದಾರೆ. 1864ರಲ್ಲಿ ಒಂದು ರೂಪಾಯಿಗೆ 10 ರಿಂದ 16 ಸೇರು ಅಕ್ಕಿ, 20 ರಿಂದ 35 ಸೇರು ರಾಗಿ, 10 ರಿಂದ 22 ಸೇರು ಉಪ್ಪು, 4 ರಿಂದ 6 ಸೇರು ಗೋಧಿ ಮಾರಾಟವಾಗುತ್ತಿತ್ತು. 1873ರಲ್ಲಿ ಉತ್ತಮ ಅಕ್ಕಿ ರೂಪಾಯಿಗೆ 10 ಸೇರು, ರಾಗಿ 35.06 ಸೇರು ಮಾರಾಟವಾಗುತ್ತಿತ್ತು. 1876ರಲ್ಲಿ ಉತ್ತಮ ಅಕ್ಕಿ ರೂಪಾಯಿಗೆ 8.31 ಸೇರು, ರಾಗಿ 16.42 ಸೇರು ಮಾರಾಟವಾಗುತ್ತಿತು. ಒಂದು ದಶಕದ ನಂತರ ಅಂದರೆ 1886 ರಲ್ಲಿ ಮಡಿಕೇರಿ ಮಾರುಕಟ್ಟೆಯಲ್ಲಿ ಅಕ್ಕಿಯು ರೂಪಾಯಿಗೆ 13.4ಸೇರು ಮಾರಾಟಗೊಂಡಿದ್ದರೆ ಅದರ ಮುಂದಿನ ವರ್ಷ ರೂಪಾಯಿಗೆ 17.8 ಸೇರು ಮಾರಾಟಗೊಂಡಿತ್ತು. ಜಿಲ್ಲೆಯಲ್ಲಿ 1892ರಲ್ಲಿ ಬೆಲೆಯು ಅಧಿಕ ಪ್ರಮಾಣದಲ್ಲಿ ಹೆಚ್ಚಳಗೊಂಡಿತು. ಈ ಕಾಲಾವಧಿಯಲ್ಲಿ ಅಕ್ಕಿಯು ರೂಪಾಯಿಗೆ 9.8 ಸೇರಿನಂತೆ ಬೆಲೆಯಿತ್ತು. 1892 ರಿಂದ 1907ರ ವರೆಗೆ ಅಕ್ಕಿಯ ಸರಾಸರಿ ಬೆಲೆ ರೂಪಾಯಿಗೆ 10 ರಿಂದ 12 ಸೇರು. ರಾಗಿಯ ಬೆಲೆ 1896ರಲ್ಲಿ ರೂಪಾಯಿಗೆ 24.8 ಸೇರು ಮತ್ತು 1907ರಲ್ಲಿ 17.12 ಸೇರು ಇತ್ತು. 1873 ರಿಂದ 1876ರ ವರೆಗಿನ ಕಾಲಾವಧಿಯಲ್ಲಿ ಇದ್ದ ವಿವಿಧ ಧಾನ್ಯ ಮತ್ತು ಸರಕುಗಳ ಬೆಲೆಯನ್ನು ಮಾರುಕಟ್ಟೆಗನುಗುಣವಾಗಿ ಮುಂದಿನ ಪುಟದ ಪಟ್ಟಿಯಲ್ಲಿ ಕೊಡಲಾಗಿದೆ.

ಜನಸಂಖ್ಯೆಯ ಹೆಚ್ಚಳ, ಬತ್ತ ಬೆಳೆಯುವ ಭೂವಿಸ್ತೀರ್ಣದ ವ್ಯತ್ಯಾಸ, ಹಣವು ಅಮೂಲ್ಯ ಲೋಹದೊಡನೆ ಹೊಂದಿರುವ ಆಂತರಿಕ ಮೌಲ್ಯ, ಮೊದಲಾದವುಗಳು ಬೆಲೆಯಲ್ಲಾಗುವ ವ್ಯತ್ಯಾಸಕ್ಕೆ ಕಾರಣವಾಗಿವೆ. ಮೊದಲನೆ ವಿಶ್ವಯುದ್ಧ (1914) ಪ್ರಾರಂಭವಾಗುವುದಕ್ಕೂ ಪೂರ್ವದಲ್ಲಿ ಉತ್ತಮ ದರ್ಜೆ ಅಕ್ಕಿಯು ಒಂದು ರೂಪಾಯಿಗೆ 8 ಸೇರು ಮಾರಾಟವಾಗುತ್ತಿತ್ತು. ಇದು 1864ರಲ್ಲಿ ರೂಪಾಯಿಗೆ 10 ರಿಂದ 16 ಸೇರು ಇದ್ದು 1914ರಲ್ಲಿ ಎಂಟು ಸೇರಾಯಿತು. ಈ ವಿಶ್ವಸಮರಕ್ಕೆ ಒಂದು ವರ್ಷ ಮೊದಲೇ ಉಪಭೋಗಿಗಳಲ್ಲಿ ಪ್ರತೀಕೂಲ ಪ್ರವೃತ್ತಿ ಪ್ರಾರಂಭವಾದುದನ್ನು ಕಾಣಬಹುದು. ನಿತ್ಯ ಬಳಕೆಯ ವಸ್ತುಗಳನ್ನು ಹೆಚ್ಚು ಬೆಲೆಗೆ ಕೊಳ್ಳಲು ಆಗ ಆರಂಭಿಸಿದರು. ಇತ್ತೀಚಿನ ದಿನಗಳಲ್ಲಿ ಕಾಣಬರುತ್ತಿರುವ ಬೆಲೆಯ ಹೆಚ್ಚಳವು ಮೊದಲ ವಿಶ್ವಸಮರಾನಂತರದ ದಶಕಗಳಲ್ಲಿ ಕಂಡು ಬಂದಿತು.

ಕೊಡಗಿನ ರಾಜರುಗಳ ಕಾಲಾವಧಿಯಲ್ಲಿ ರೂಪಾಯಿಗೆ 50 ಸೇರಿಗೂ ಹೆಚ್ಚು ಬತ್ತ ಮಾರಾಟವಾಗುತ್ತಿತ್ತು. ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ 80 ಸೇರಿನ ಒಂದು ಬಟ್ಟಿ ಬತ್ತದ ಬೆಲೆ ರೂಪಾಯಿ 2 ರಿಂದ 3 ಇತ್ತು. 1958ರಲ್ಲಿ ಇದರ ಬೆಲೆ 16 ರೂಪಾಯಿಗಳು ಮತ್ತು 1959ರಲ್ಲಿ 14 ರೂಪಾಯಿಗಳಿಗೂ ಹೆಚ್ಚು ಇತ್ತು. ಕಾಫಿ ಬೀಜದ ಬೆಲೆ ಬಟ್ಟಿಯೊಂದಕ್ಕೆ (80 ಸೇರು) 7 ರೂಪಾಯಿಯಿಂದ 10 ರೂಪಾಯಿಗಳ ವರೆಗೂ ಇತ್ತು. 1920ರಲ್ಲಿ ಮಡಿಕೇರಿಯ ಕೊಂಗಪ್ಪಯ್ಯನ ಹೋಟೆಲಿನಲ್ಲಿ ಎಲ್ಲಾ ವಿಧವಾದ ಸಿಹಿ ತಿಂಡಿ ಬೆಲೆ 12 ಪೈ (ಈಗಿನ 6 ಪೈಸೆ), ಊಟ ಒಂದಕ್ಕೆ 16 ಪೈ (ಈಗಿನ 10 ಪೈಸೆ) ಇತ್ತು. ಹಿಂದಿನ ಒಂದು ಕಾಸು ಎರಡು ಪ್ಯಾಕೆಟ್ (ಜೇಬು) ಭರ್ತಿ ಕಡಲೆಕಾಯಿ, ಬಟಾಣಿ ಮೊದಲಾದವುಗಳನ್ನು ಕೊಳ್ಳುವ ಸಾಮರ್ಥ್ಯ ಹೊಂದಿತ್ತು. 1930ರ ಆರ್ಥಿಕ ಮುಗ್ಗಟ್ಟಿನ ಕಾಲಾವಧಿಯಲ್ಲಿ ವ್ಯವಸಾಯಗಾರರು ಬೆಳೆದ ಅಲ್ಪಪ್ರಮಾಣದ ಬೆಳೆಗೂ ಸರಿಯಾದ ಬೆಲೆ ಸಿಗದೆ ಅನೇಕ ಕಾಫಿ ತೋಟಗಳು ಮುಚ್ಚಲ್ಪಟ್ಟವು. ಐ.ಎಂ. ಮುತ್ತಣ್ಣನವರ "ದಿ ಕೂರ್ಗ್ ಮೆಮೊಯರ್ಸ್" ಎಂಬ ಪುಸ್ತಕದಲ್ಲಿ ಇತ್ತೀಚಿನ ದಶಕಗಳಲ್ಲಿ ಕೊಡಗಿನ ಒಂದು ಬಂಡಿ (ಗಾಡಿ) ಬತ್ತದ ಬೆಲೆ ಈ ಮುಂದೆ ತೋರಿಸಿರುವಂತೆ ಇತ್ತು. ಅದು 1920ರಲ್ಲಿ 28 ರೂಪಾಯಿಗಳು, 1930ರಲ್ಲಿ 50 ರೂಪಾಯಿಗಳು, 1940ರಲ್ಲಿ 180 ರೂಪಾಯಿಗಳು, 1950ರಲ್ಲಿ 380 ರೂಪಾಯಿಗಳು ಮತ್ತು 1960ರಲ್ಲಿ 520 ರೂಪಾಯಿಗಳು. ಒಂದು ಮಣ ಕಾಫಿಯ ಬೆಲೆಯು 1920ರಲ್ಲಿ 50 ರೂ. 1930ರಲ್ಲಿ 80 ರೂ. 1940ರಲ್ಲಿ 300 ರೂ. 1950ರಲ್ಲಿ 500 ರೂ. ಮತ್ತು 1960ರಲ್ಲಿ 850 ರೂ.ಗಳು.

ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿದ್ದ ಕಡಿಮೆ ಬೆಲೆಯ ಪ್ರವೃತ್ತಿಯು ಸರ್ಕಾರದ ಹಣಕಾಸಿನ ಧೋರಣೆಯು ಬದಲಾವಣೆಯಿಂದಾಗಿ 1935ರಿಂದೀಚೆಗೆ ಬೆಲೆಗಳು ಏರುಮುಖ ಪ್ರವೃತ್ತಿಗೆ ದಾರಿಮಾಡಿಕೊಟ್ಟಿತು. ಎರಡನೇಯ ವಿಶ್ವಸಮರದ ಕಾಲದಲ್ಲಿ ಕಾಗದದ ನೋಟುಗಳ ಚಲಾವಣೆಯಲ್ಲಿ ಹೆಚ್ಚಳವಾಗಿ ಸರಕುಗಳ ಉತ್ಪಾದನೆಯು ವಿಶೇಷ ಹೆಚ್ಚಳವಾಗದೇ ಇದ್ದುದರಿಂದ ವಸ್ತುಗಳ ಬೇಡಿಕೆ ಹೆಚ್ಚಿ ಬೆಲೆಗಳು ಏರುಮುಖವಾದುವು. 1940ರಲ್ಲಿ ಒಂದು ರೂಪಾಯಿಗೆ ನಾಲ್ಕು ಸೇರು ಅಕ್ಕಿ ಮತ್ತು ಆರು ಸೇರು ರಾಗಿ ಇತ್ತು. ಯುದ್ಧದ

1873–1876ರ ಕಾಲಾವಧಿಯಲ್ಲಿದ್ದ ವಿವಿಧ

| ಮಾರುಕಟ್ಟೆಯ ಹೆಸರು | ಅಕ್ಕಿ (ಉತ್ತಮ) | | | | ಅಕ್ಕಿ (ಮಧ್ಯಮ) | | | | |
|---|---|---|---|---|---|---|---|---|---|
| | 1873 | 1874 | 1875 | 1876 | 1873 | 1874 | 1875 | 1876 | 1873 |
| ಮಡಿಕೇರಿ | 10 | 10.37 | 10.4 | 8.31 | 11.12 | 11.7 | 11.9 | 10.4 | 35.06 |
| ವೀರರಾಜಪೇಟೆ | 10 | 12 | 12 | 9 | 14 | 14 | 14 | 10.5 | 38 |
| ಫ್ರೇಜರ್‌ಪೇಟೆ (ಕುಶಾಲನಗರ) | 10 | 10 | 10 | 9 | 16 | 16.37 | 16 | 11.5 | 48 |
| ಸೋಮವಾರಪೇಟೆ | — | — | — | — | 18.06 | 20 | 19 | 15 | 40 |
| ಶನಿವಾರಸಂತೆ | — | — | — | — | 20.12 | 22 | 20.6 | 14.1 | 48.52 |
| ಕೊಡ್ಲಿ ಪೇಟೆ | — | — | — | — | 20 | 24 | 24 | 13.4 | 45.86 |
| ಪೊನ್ನಂಪೇಟೆ | — | — | — | — | 14 | 15 | 26 | 14 | 40 |
| ಕೋಲ್ಸ್‌ಪೇಟೆ (ಅಮ್ಮತ್ತಿ) | 12.06 | 12 | 12 | 10 | 14.05 | 13 | 13 | 11 | 30.82 |
| ರಾಮಸ್ವಾಮಿ ಕಣಿವೆ | — | — | — | — | 16 | 18 | 16 | 11 | 45 |

ಆಧಾರ : ಮೈಸೂರ್ ಮತ್ತು ಕೂರ್ಗ್

ದಾನ್ಯ ಮತ್ತು ಸರಕುಗಳ ಬೆಲೆಯ ಪಟ್ಟಿ

| ರಾಗಿ | | | ಗೋಧಿ | | | ಬಾರ್ಲಿ | | | ಹುರುಳಿ | | |
|---|---|---|---|---|---|---|---|---|---|---|---|
| 1874 | 1875 | 1876 | 1874 | 1875 | 1876 | 1874 | 1875 | 1876 | 1874 | 1875 | 1876 |
| 30.75 | 21.18 | 16.42 | 7.75 | 8.9 | 8.07 | 9.14 | 10.9 | 9.07 | 17.23 | 19.37 | 15.28 |
| 30 | 24 | 17.5 | 9 | 10 | 9 | 7 | 9 | 8 | 16 | 20.00 | 16.00 |
| 42.75 | 26.64 | 20.74 | 8 | 10 | 8 | 10 | 8 | 9.37 | 19.68 | 23.32 | 18.74 |
| 45 | 28 | 20 | — | — | 9 | 8 | 8 | 10 | 18 | 20.00 | 16.00 |
| 45 | 30 | 20.2 | — | — | — | 10 | 9.20 | 8.05 | 20 | 20.7 | 16.1 |
| 45 | 30 | 22.4 | — | — | — | 10 | 10.25 | 9.4 | 20 | 22.00 | 18.4 |
| 20 | 28 | 16 | 7 | 6 | 7.5 | 7.40 | 7 | 8 | 14 | 17 | 16 |
| 28 | 24 | 17 | 8 | 8 | 8 | 9 | 8 | 9 | 14 | 18 | 15 |
| 43 | 32 | 23 | — | — | — | 9 | 8 | 8.5 | 20 | 24 | 18 |

ಗ್ಯಾಸೆಟಿಯರ್ (ಲೂಯಿಸ್‌ರೈಸ್)

ಕಾಲಾವಧಿಯಲ್ಲಿ ಯುದ್ಧೋಪಕರಣಗಳಿಗೆ ದೊರೆತ ಪ್ರಾಮುಖ್ಯತೆ ಮತ್ತು ಆಹಾರ ಸಾಮಗ್ರಿಗಳ ಅಸಮರ್ಪಕ ಹಂಚಿಕೆಯಿಂದಾಗಿ ಅಕ್ರಮ ದಾಸ್ತಾನುಗಾರರು ಮತ್ತು ಲಾಭ ಕೋರರ ದುರ್ವ್ಯವಹಾರ ಹೆಚ್ಚಿತು. ವ್ಯವಸಾಯೋತ್ಪಾದನೆ ಮೂಲೆ ಗುಂಪಾಗಿ ಬಳಕೆದಾರರು ತೊಂದರೆಗೀಡಾದರು. ಆಗ ಕೊಡಗಿನ ಆಡಳಿತ ವರ್ಗದವರು ಮುಂದೆಬಂದು ಸಾರ್ವಜನಿಕ ದಿನವಹಿ ಬಳಕೆಯ ಸರಕುಗಳ ವ್ಯವಹಾರವನ್ನು ನಿಯಂತ್ರಿಸುವುದರ ಜೊತೆಗೆ ವ್ಯಾಪಾರದಲ್ಲಾಗುತ್ತಿದ್ದ ಅವ್ಯವಹಾರವನ್ನು ತಡೆಗಟ್ಟಿದುದರ ಪರಿಣಾಮವಾಗಿ ಅತ್ಯವಶ್ಯಕ ಸರಕುಗಳು ನಿಯಂತ್ರಣಕ್ಕೊಳಪಟ್ಟುದುದೇ ಅಲ್ಲದೆ ಪಟ್ಟಣಗಳಲ್ಲಿ ಪಡಿತರ ಪದ್ಧತಿ ಜಾರಿಗೆ ಬಂದಿತು. ಹಳ್ಳಿಗಳಿಂದ ಪಟ್ಟಣಗಳಗೆ ಸಾಗಣೆಯಾಗುತ್ತಿದ್ದ ಆಹಾರ ಧಾನ್ಯಗಳನ್ನು ನಿಯಂತ್ರಣಕ್ಕೊಳಪಡಿಸಲಾಯಿತು. ಜಿಲ್ಲೆಯಲ್ಲಿ ಬತ್ತದ ಬೆಳೆಯು ವ್ಯಾಪಕವಾಗಿದ್ದುದರಿಂದ ಇದರ ನಿಯಂತ್ರಣ ತೀವ್ರತರವಾಗಿರಲಿಲ್ಲ. ಪಡಿತರ ಸರಕನ್ನು ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಸಮವಾಗಿ ಹಂಚಿಕೆಗೊಳಪಡಿಸಲಾಯಿತು. 1945ರಲ್ಲಿ ಯುದ್ಧ ನಿಂತರೂ ಅತ್ಯವಶ್ಯಕ ಸರಕುಗಳ ಬೆಲೆ ಇಳಿಯಲಿಲ್ಲ. ಆಹಾರ ಧಾನ್ಯಗಳ ಪಡಿತರ ಪದ್ಧತಿಯನ್ನು ತೆಗೆದುಹಾಕಿದರೂ ಬೆಲೆಯ ಇಳಿಮುಖ ಪ್ರವೃತ್ತಿಯುಂಟಾಗಲಿಲ್ಲ. ಇದನ್ನು ತಡೆಗಟ್ಟಲು ಅನೇಕ ಪ್ರಸಿದ್ಧ ಪರಿಹಾರ ಮಾರ್ಗಗಳನ್ನು ಕಾರ್ಯರೂಪಕ್ಕೆ ತಂದುದೇ ಅಲ್ಲದೇ ಜನಸಾಮಾನ್ಯರ ಕೈಯಲ್ಲಿ ಓಡಾಡುವ ನಗದು ಹಣವನ್ನು ಮಿತಗೊಳಿಸಲು ಕ್ರಮಕೈಗೊಳ್ಳಲಾಯಿತು. ವ್ಯವಸಾಯೋತ್ಪಾದನೆಗೆ ಬ್ಯಾಂಕುಗಳು ಸಾಲ ಕೊಡದಂತೆ ಆದೇಶ ಹೊರಡಿಸಿದರು. ಬಡಜನಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸಹಕಾರ ಸಂಘಗಳ ಮತ್ತು ನ್ಯಾಯಬೆಲೆ ಅಂಗಡಿಗಳ ಮೂಲಕ ಸರ್ಕಾರದ ನೆರವಿನ ಬೆಲೆಯೊಂದಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಯಿತು. ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರನ್ನು ಅಧಿಕ ಬೆಲೆಯ ಒತ್ತಡದಿಂದ ರಕ್ಷಿಸುವ ವ್ಯವಸ್ಥೆ ಮಾಡಲಾಯಿತು. ಕಾಫಿ ತೋಟದ ಮಾಲಿಕರು ಸಾಕಷ್ಟು ಅವಶ್ಯಕ ಸರಕುಗಳು ನ್ಯಾಯ ಬೆಲೆಯಲ್ಲಿ ತಮ್ಮ ಕೆಲಸಗಾರರಿಗೆ ದೊರಕಿಸಿಕೊಡುವ ವ್ಯವಸ್ಥೆ ಮಾಡಿಕೊಂಡಿದ್ದರು.

1870 ರಿಂದ 1952ರ ವರೆಗೆ ಕೊಡಗು ಜಿಲ್ಲೆಯಲ್ಲಿನ ಕೆಲವು ಸರಕುಗಳ ಅಂದಾಜು ಬೆಲೆಯನ್ನು ಈ ಕೆಳಗೆ ಕೊಟ್ಟಿರುವ ತಖ್ತೆ ತೋರಿಸುತ್ತದೆ. [ಇಂದಿನ ರೂ. ಮತ್ತು ಪೈಸೆಗಳಂತೆ]

| | 1870 | 1890 | 1905 | 1920 | 1935 | 1945 | 1952 |
|---|---|---|---|---|---|---|---|
| ಬತ್ತ (ಭರ್ತಿಗಾಡಿ) | 20.00 | 28.00 | 40.00 | 80.00 | 28.00 | 100.00 | 200.00 |
| ಏಲಕ್ಕಿ (ಮಣ) | 10.00 | 15.00 | 23.00 | 70.00 | 40.00 | 140.00 | 325.00 |
| ಕಾಫಿ (ಕ್ಯಾಂಡಿ) | 98.00 | 450.00 | 120.00 | 95.00 | 100.00 | 350.00 | 650 00 |
| ಬೆಲ್ಲ (ಮಣ) | 2.50 | 3.50 | 4.00 | 4.00 | 4.50 | 5.00 | 5.00 |
| ಉಪ್ಪು (ಸೇರು) | 0.02 | 0 03 | 0.06 | 0.04 | 0.06 | 0.09 | 0.11 |
| ಆಲೂಗಡ್ಡೆ (ವೀಸೆ) | 0.13 | 0.13 | 0.19 | 0.25 | 0.31 | 1.00 | 1.00 |
| ಈರುಳ್ಳಿ (ಸೇರು) | 0.02 | 0.02 | 0.03 | 0.06 | 0.04 | 0.08 | 0.38 |
| ಬೇಳೆ (ಸೇರು) | 0.09 | 0.12 | 0.15 | 0.25 | 0.22 | 0.50 | 0.93 |
| ಬೆಣ್ಣೆ (ಸೇರು) | 0.12 | 0.19 | 0.25 | 0.37 | 0.50 | 1.00 | 2.25 |
| ಕೊಬ್ಬರಿಎಣ್ಣೆ (ಸೇರು) | 0.15 | 0.25 | 0.37 | 0.62 | 0.75 | 1.50 | 3.00 |
| ಮಲ್ಲುಬಟ್ಟೆ (ಗಜ) | 0.15 | 0.19 | 0.25 | 0.50 | 0.56 | 0.93 | 1.62 |

ಆಧಾರ : ಎ. ಟ್ವೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯಾ.

ಮಡಿಕೇರಿಯಲ್ಲಿ 1911 ರಿಂದ 1924ರ ವರೆಗೆ ಇದ್ದ ಚಿಲ್ಲರೆ ಬೆಲೆಯನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

(ಒಂದು ರೂಪಾಯಿಗೆ ಸೇರುಗಳಲ್ಲಿ)

| ವರ್ಷ | ಗೋಧಿ | ಬಾರ್ಲಿ | ಸಾಮಾನ್ಯ ಅಕ್ಕಿ | ರಾಗಿ | ಧಾನ್ಯಗಳು | ಉಪ್ಪು |
|---|---|---|---|---|---|---|
| 1911 | 6.90 | 6.00 | 9.20 | 13.16 | 14.10 | 18.70 |
| 1912 | 6.00 | 6.00 | 8.80 | 15.11 | 14.20 | 17.00 |
| 1913 | 6.00 | 6.00 | 8.80 | 15.00 | 9.00 | 16.00 |
| 1914 | 6.00 | 6.00 | 8.80 | 15.00 | 12.00 | 16.00 |
| 1915 | 6.00 | 6.00 | 8.14 | 15.80 | 12.60 | 17.10 |
| 1916 | 6.10 | 5.13 | 8.40 | 17.60 | 14.60 | 17.40 |
| 1917 | 5.12 | 5.10 | 7.70 | 14.90 | 14.12 | 12.50 |
| 1918 | 4.10 | 4.00 | 6.80 | 13.00 | 8.70 | 9.40 |
| 1919 | 2.10 | 2.70 | 4.80 | 6.80 | 6.70 | 12.60 |
| 1920 | 2.50 | 2.00 | 5.90 | 8.40 | 5.80 | 13.12 |
| 1921 | 3.20 | — | 6.50 | 10.20 | 6.50 | 13.50 |
| 1922 | 3.20 | — | 5.13 | 7.15 | 6.13 | 11.80 |
| 1923 | 3.90 | — | 6.20 | 10.11 | 3.10 | 9.10 |
| 1924 | 3.12 | — | 6.00 | 8.80 | 7.50 | 10.60 |

ಕೊಡಗು ಜಿಲ್ಲೆಯಲ್ಲಿ 1957 ರಿಂದ 1961ರವರೆಗೆ ಇದ್ದ ಕೆಲವು ಆಯ್ದ ಆಹಾರ ಧಾನ್ಯಗಳ ಸರಾಸರಿ ಸಗಟು ಬೆಲೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

(ಒಂದು ಮಣದ ಬೆಲೆ ರೂ.ಗಳಲ್ಲಿ)

| ಆಹಾರ ಧಾನ್ಯಗಳು | 1957 | 1958 | 1959 | 1960 | 1961 |
|---|---|---|---|---|---|
| ಅಕ್ಕಿ | 19.49 | 19.95 | 20.59 | 52.00 | 61.00 |
| ಗೋಧಿ | 20.10 | 19.84 | 20.96 | 55.00 | 56.00 |
| ಜೋಳ | 14.30 | 12.04 | 14.12 | 42.00 | 38.00 |
| ಅಕ್ಕಿಯ ಸಗಟು ಬೆಲೆ ಕ್ವಿಂಟಾಲಿಗೆ ರೂ.ಗಳಲ್ಲಿ | | | | | |
| | | | 1987 | 1988 | 1989 |
| ಮಧ್ಯಮ ಅಕ್ಕಿ | | | 324.00 | 410.00 | 395.00 |
| ದಪ್ಪ ಅಕ್ಕಿ | | | 300.00 | 373.00 | 378.00 |

ಆಧಾರ : ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಮಡಿಕೇರಿ.

1982 ರಿಂದ 1990ರ ವರೆಗಿನ ಕೊಡಗು ಜಿಲ್ಲೆಯ ಕೆಲವು ಸರಕುಗಳ ಚಿಲ್ಲರೆ ಬೆಲೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

[ಪ್ರತಿ ಕೆ.ಜಿ.ಯ ಬೆಲೆ ರೂ.ಗಳಲ್ಲಿ]

| ಕ್ರ. ಸಂ. | ಸರಕುಗಳ ಹೆಸರು | ವರ್ಷ 1982 | 1983 | 1984 | 1985 | 1986 | 1987 | 1988 | 1989 | 1990 |
|---|---|---|---|---|---|---|---|---|---|---|
| 1. | ಅಕ್ಕಿ (ದಪ್ಪ) | 2.57 | 2.60 | 2.75 | 2.72 | 3.01 | 3.27 | 3.81 | 4.24 | 4.36 |
| 2. | ಅಕ್ಕಿ (ಮಧ್ಯಮ) | 2.78 | 2.90 | 2.95 | 2.72 | 3.26 | 3.45 | 4.11 | 4.47 | 5.50 |
| 3. | ತೊಗರಿಬೇಳೆ | 6.45 | 7.08 | 7.20 | 7.53 | 7.83 | 13.15 | 14.16 | 12 09 | 14.50 |
| 4. | ಉದ್ದಿನಬೇಳೆ | 5.90 | 6.60 | 8.61 | 8.81 | 8.69 | 9.75 | 10.76 | 11.71 | 12.81 |
| 5. | ಹೆಸರುಬೇಳೆ | 5.85 | 6.70 | 7.38 | 7.82 | 8.18 | 8.78 | 12.11 | 12 34 | 12.83 |
| 6. | ಹುರುಳಿಕಾಳು | 5.55 | 5.76 | 7.10 | 7.48 | 8.00 | 8.31 | 9.50 | 11.92 | — |
| 7. | ಆಲೂಗಡ್ಡೆ | 2.28 | 2 60 | 2.40 | 2.18 | 3.73 | 3.12 | 3.46 | 3.07 | 3.63 |
| 8. | ಈರುಳ್ಳಿ | 1.54 | 1.66 | 1 60 | 1.70 | 2.20 | 4.10 | 3.35 | 3.15 | 3.18 |
| 9. | ಕಡ್ಲೆ ಕಾಯಿ ಎಣ್ಣೆ | 14.77 | 15.30 | 17.75 | 16.30 | 18.16 | 27.50 | 25.50 | 24.02 | 32.67 |
| 10. | ಹರಳೆಣ್ಣೆ | 12.00 | 12.00 | 16.10 | 16.05 | 16.28 | 17.45 | 19.33 | 22.48 | — |
| 11. | ಒಣಮೆಣಸಿನ ಕಾಯಿ | 13.75 | 13.50 | 17.17 | 18 88 | 13.49 | 17.86 | 19.54 | 26.76 | 16.54 |
| 12. | ಬೆಲ್ಲ | 2.15 | 3.05 | 5.45 | 3.65 | 3.69 | 4.25 | 4 11 | 4.75 | 7.54 |
| 13. | ಕೊಬ್ಬರಿ ಎಣ್ಣೆ | 19.02 | 22.00 | 26.00 | 26.60 | 28.00 | 37 80 | 41.50 | 38 83 | 38.21 |
| 14. | ಹುಣಸೆ ಹಣ್ಣು | 7.90 | 6.75 | 10.20 | 13.25 | 8.48 | 9.25 | 9.08 | 8.05 | — |
| 15. | ತೆಂಗಿನಕಾಯಿ (ಒಂದಕ್ಕೆ) | 1.83 | 2.23 | 3.30 | 2.45 | 2.62 | 3.60 | 3 96 | 3.28 | — |
| 16. | ಸಕ್ಕರೆ | 5.86 | 5 06 | 5.45 | 5.85 | 6.83 | 7.16 | 7.53 | 7.90 | 8 85 |
| 17. | ಉಪ್ಪು | 0.40 | 0.45 | 0.65 | 0.65 | 0.69 | 0.73 | 0.78 | 0.79 | — |

ಆಧಾರ : ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಮಡಿಕೇರಿ.

1990-91ನೇ ಸಾಲಿನಲ್ಲಿ ಆಹಾರ ಪದಾರ್ಥಗಳ ಸಗಟು ಬೆಲೆಗಳು ಇದರ ಹಿಂದಿನ ಸಾಲಿಗಿಂತ ಸ್ವಲ್ಪ ಏರಿಕೆಯಾಗಿರುವುದು ಕಂಡುಬಂದಿದೆ. ಅಕ್ಕಿ ಕ್ವಿಂಟಾಲಿಗೆ, ಉತ್ತಮ ರೂ. 470 ರಿಂದ ರೂ. 650ರವರೆಗೂ, ಮಧ್ಯಮ ರೂ. 390 ರಿಂದ 550 ರೂ. ಗಳವರೆಗೂ, ಸಾಧಾರಣ ರೂ. 375 ರಿಂದ ರೂ. 450 ರವರೆಗೂ, ಕುಸುಬಲು ಅಕ್ಕಿ ರೂ. 390 ರಿಂದ ರೂ. 520ರವರೆಗೂ ಮತ್ತು ರಾಗಿ ರೂ. 270 ರಿಂದ ರೂ. 320ರವರೆಗೂ ಮಾರಾಟವಾಗಿರುತ್ತದೆ. ಚಿಲ್ಲರೆ ಬೆಲೆಯ ವಾರ್ಷಿಕ ಸರಾಸರಿಯು ಕೆ.ಜಿ. ಒಂದಕ್ಕೆ ಅಕ್ಕಿ ಉತ್ತಮ ರೂ. 5.58, ಮಧ್ಯಮ ರೂ. 4.36, ಸಾಧಾರಣ ರೂ. 4.10, ಕುಸುಬಲು ಅಕ್ಕಿ ರೂ. 4.41, ರಾಗಿ ರೂ. 3.00, ಗೋದಿ ರೂ. 5.12, ಜೋಳ ರೂ. 2.60, ತೊಗರಿಬೇಳೆ ರೂ. 14.80, ಕಡಲೆಬೇಳೆ ರೂ. 10.25, ಉದ್ದು ರೂ. 12.50, ಸಕ್ಕರೆ ರೂ. 8.53, ಬೆಲ್ಲ ರೂ. 5.30, ಮೆಣಸಿನಕಾಯಿ (ಒಣಗಿದ್ದು) ರೂ. 15.83, ಆಲೂಗಡ್ಡೆ ರೂ. 3.00, ಈರುಳ್ಳಿ ರೂ. 3.20, ಕಡಲೆಕಾಯಿಎಣ್ಣೆ ಲೀಟರಿಗೆ ರೂ. 34.75, ಎಳ್ಳೆಣ್ಣೆ ರೂ. 37.33 ಮತ್ತು ಕೊಬರಿಎಣ್ಣೆ ರೂ. 38.75ಕ್ಕೆ ಮಾರಾಟಗೊಂಡಿತ್ತು.

1990-91ರಲ್ಲಿ ಜಿಲ್ಲೆಯ ಒಟ್ಟು 250 ನ್ಯಾಯಬೆಲೆ ಅಂಗಡಿಗಳ ಪೈಕಿ 240 ಗ್ರಾಮೀಣ ಪ್ರದೇಶದಲ್ಲೂ ಮತ್ತು 10 ನಗರ ಪ್ರದೇಶದಲ್ಲೂ ಕಾರ್ಯನಿರ್ವಹಿಸುತ್ತಿದ್ದವು. ನಗರ ಪ್ರದೇಶವಾದ ಮಡಿಕೇರಿಯಲ್ಲಿ ಒಟ್ಟು 5,548 ಪಡಿತರ ಚೀಟಿದಾರರಿದ್ದರು. ಜಿಲ್ಲೆಯಲ್ಲಿ(ಮಡಿಕೇರಿಯನ್ನು ಬಿಟ್ಟು) ಒಟ್ಟು 1.03 ಲಕ್ಷ ಪಡಿತರ ಚೀಟಿದಾರರಿದ್ದು, ಈ ಪೈಕಿ 55, 484 ಹಸಿರು ಹಾಗೂ 41,974 ಕೇಸರಿ ಪಡಿತರ ಚೀಟಿದಾರರಿದ್ದರು. ಗ್ರಾಮೀಣ ಪ್ರದೇಶದಲ್ಲಿ ಹಸಿರು ಪಡಿತರ ಚೀಟಿದಾರರಿಗೆ ರಿಯಾಯಿತಿ ದರದಲ್ಲಿ ಬಟ್ಟೆಯನ್ನು ವಿತರಿಸಲಾಗಿದೆ (1990-91).

## ಕೂಲಿ ದರ

19ನೇಯ ಶತಮಾನದ ಆರಂಭದಲ್ಲಿ ಕೊಡಗಿನ ವ್ಯವಸಾಯದ ಕೆಲಸ ಕಾರ್ಯಗಳು ಬಹು ಮಟ್ಟಿಗೆ ಹಿಂದಿನಿಂದ ಬಂದ ಜಮ್ಮದ ಆಳು ಅಥವಾ ಗುಲಾಮರುಗಳಿಂದ ಮಾಡಲ್ಪಡುತ್ತಿತ್ತು. ಲೆಫ್ಟಿನೆಂಟ್ ಕೋನೋರ್‌ರ ವೀಕ್ಷಣೆಯೂ (1817) ಇದಕ್ಕೆ ಪುಷ್ಟಿ ಕೊಡುತ್ತದೆ. ಪ್ರಮುಖ ವ್ಯವಸಾಯ ಕೆಲಸಗಳು ಜಮ್ಮದಾಳು ಅಥವಾ ಕೂಲಿ ಕೆಲಸಗಾರರಿಂದ ಮಾಡಲ್ಪಡುತ್ತಿದ್ದವು. ಶ್ರೀಮಂತ ರೈತರು ಸಾಮಾನ್ಯವಾಗಿ ಪಶುಪಾಲನೆಯನ್ನು ಜಮ್ಮದಾಳುಗಳಿಗೆ ವಹಿಸಿ ಮೇಲ್ವಿಚಾರಣಾ ಕೆಲಸದಲ್ಲಿ ತೊಡಗಿರುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ರೈತರ ಮೇಲ್ವಿಚಾರಣೆಯಾಗಲೀ ಅಥವಾ ಸಹಕಾರವಾಗಲಿ ಆಳುಗಳಿಗೆ ಇರುತ್ತಿರಲಿಲ್ಲ. ಕೊಡಗಿನಲ್ಲಿ ಕೂಲಿಗೆ ಹಿಡಿದ ಆಳುಗಳು ದಿನಗೂಲಿಯ ಆಧಾರದ ಮೇಲೆ ದಿನದ ಮಧ್ಯದಲ್ಲಿ ಸ್ವಲ್ಪ ವಿಶ್ರಾಂತಿಯನ್ನುಳಿದು, ಬೆಳಿಗ್ಗೆ 7 ಗಂಟೆಯಿಂದ ಸೂರ್ಯಾಸ್ತದವರೆಗೂ ಅಲ್ಪ ಪರಿಮಾಣದ ಅಕ್ಕಿಗಾಗಿ ಕೆಲಸ ಮಾಡಬೇಕಾಗಿತ್ತು. ಒಂದು ವರ್ಷದ ಗುತ್ತಿಗೆ ಕಾರ್ಮಿಕನಾಗಿದ್ದರೆ ವರ್ಷಕ್ಕೆ ಒಂದು ಕಂಬಳಿ, ಎರಡು ಅಂಗವಸ್ತ್ರ, ಒಂದು ತುಂಡು ದಟ್ಟಿ, ಎರಡು ವರಹಗಳು ಹಾಗೂ ಪ್ರತೀದಿನದ ಊಟ ಮೊದಲಾದವುಗಳು ದೊರೆಯುತ್ತಿದ್ದವು. ಬಹುಪಾಲು ಭೂಮಾಲಿಕರಲ್ಲಿ ಜಮ್ಮದಾಳುಗಳೂ ಇದ್ದುದರಿಂದ ಈ ಕೂಲಿ ದರವು ಅಷ್ಟೊಂದು ಆಕರ್ಷಕವಾಗಿ ಇರಲಿಲ್ಲ. ಪೂರ್ತಿ ಹಣದ ರೂಪದಲ್ಲಿ ಕೂಲಿ ಕೊಡಬೇಕಾಗಿದ್ದರೆ ಆರು ವರಹ (18ರೂ) ಅಥವಾ ಇದಕ್ಕೂ ಸ್ವಲ್ಪ ಹೆಚ್ಚು ಕೂಲಿ ದೊರೆಯುತ್ತಿತ್ತು. ಈ ಮೊತ್ತವು ಅತ್ಯಂತ ಕಡಿಮೆ. ಇದರ ನೂರನೇಯ ಎರಡು ಭಾಗದಷ್ಟು ಹಣವು ಕೂಲಿಯವನಿಗೆ ವೆಚ್ಚವಾಗುತ್ತಿತ್ತು.

ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾರ್ಮಿಕರ ಮಾರುಕಟ್ಟೆಯನ್ನು 1865ರಲ್ಲಿ ಕರ್ನಲ್ ಸ್ಟಾಂಕಿ ಹೀಗೆ ವರ್ಣಿಸಿದ್ದಾನೆ : ಮುಂಗಾರು ಪ್ರಾರಂಭವಾಗುತ್ತಿದ್ದಂತೆಯೇ ಕೂಲಿಯವರು ಸಿಕ್ಕುವುದು ಕಷ್ಟವಾಗುತ್ತದೆ. ಮೈಸೂರಿನ ಕೃಷಿ ಕಾರ್ಮಿಕರು ವ್ಯವಸಾಯದ ಕೆಲಸಕ್ಕೆ ಲಭ್ಯರಾಗುವುದಿಲ್ಲ ; ಕಾರಣ ಕೂಲಿಗಳು ಕಾಫಿ ತೋಟದ ಕೆಲಸದಲ್ಲಿ ನಿರತರಾಗಿರುತ್ತಾರೆ. ಕೂಲಿಗಳು ಪ್ರತೀನಿತ್ಯದ ನಾಲ್ಕು ಆಣೆಯ ಕೂಲಿಯ ಜೊತೆಗೆ ಸ್ವಲ್ಪ ಹಣವನ್ನು ಕಟ್ಟಿಗೆ ಮಾರಾಟದಿಂದ ಸಂಪಾದಿಸುತ್ತಿದ್ದರು. ಮಾಪಿಳ್ಳೆ ಕೂಲಿಗಳು ತಿಂಗಳಿಗೆ 10 ರೂ.ಗಳನ್ನು ಪಡೆದು ಬೆಟ್ಟದ ತಪ್ಪಲುಗಳಲ್ಲಿ ಮಾತ್ರ ಕೆಲಸ ಮಾಡುತ್ತಿದ್ದರು. ಮದರಾಸಿನ ಜನಗಳು ಪೆರಿಯಂಬಾಡಿ,ಆನೆ ಚೌಕೂರು ರಸ್ತೆಗಾಗಿ ದುಡಿಯುತ್ತಿದ್ದರು. ಉಪ್ಪು-ಮೀನು ಮೊದಲಾದವುಗಳ ರೂಪದಲ್ಲಿ ಕೂಲಿ ಸಂಪಾದಿಸುತ್ತಿದ್ದರು. ಆಗಿನ ಕನಿಷ್ಠ ಕೂಲಿ ಬಗ್ಗೆ ಅವರು ಹೀಗೆ ಹೇಳುತ್ತಾರೆ. : ಪುರುಷ ಕೂಲಿಗಳು, ಪೂರ್ವ ಮತ್ತು ದಕ್ಷಿಣ ಕೊಡಗಿನಲ್ಲಿ ತಿಂಗಳಿಗೆ 6 ರೂ.ಗಳನ್ನು ಪಶ್ಚಿಮ ಮತ್ತು ದಕ್ಷಿಣ ಕೊಡಗಿನಲ್ಲಿ ತಿಂಗಳಿಗೆ 7 ರೂ.ಗಳನ್ನು ಪಡೆಯುತ್ತಿದ್ದರು. ಎರಡನೇಯ ದರ್ಜೆಯವರು ಪೂರ್ವ ಮತ್ತು ಉತ್ತರ ಕೊಡಗಿನಲ್ಲಿ ತಿಂಗಳಿಗೆ 4.50 ರೂ.ಗಳನ್ನು ಪಶ್ಚಿಮ

1980–81 ರಿಂದ 1989–90ರ ವರೆಗಿನ ನಿಯಂತ್ರಿತ ಹುಟ್ಟುವಳಿಗಳ ಧಾರಣೆಯನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ. (ರೂ.ಗಳಲ್ಲಿ)

| ಹುಟ್ಟುವಳಿಗಳ ಹೆಸರು | | 80–81 | 81–82 | 82–83 | 83–84 | 84–85 | 85–86 | 86–87 | 87–88 | 88–89 | 89–90 |
|---|---|---|---|---|---|---|---|---|---|---|---|
| ಅಕ್ಕಿ | (ಕನಿಷ್ಠ) | 250 | 230 | 260 | 260 | 300 | 280 | 265 | 250 | 480 | 320 |
| (ಕ್ವಿಂಟಾಲ್) | (ಗರಿಷ್ಠ) | 280 | 270 | 280 | 280 | 340 | 300 | 350 | 325 | 520 | 500 |
| ತೆಂಗು | (ಕ.) | 120 | 135 | 170 | 170 | 250 | 200 | 175 | 250 | 250 | 250 |
| (100ಕ್ಕೆ) | (ಗ.) | 180 | 175 | 200 | 200 | 300 | 250 | 290 | 400 | 340 | 350 |
| ಗೋಡಂಬಿ | (ಕ.) | — | — | 500 | — | — | 1,550 | 1,200 | 1,500 | 1,500 | 1,500 |
| | (ಗ.) | — | — | 600 | — | — | 1,650 | 1,400 | 1,650 | 1,600 | 1,600 |
| ಕರಿಮೆಣಸು | (ಕ.) | 13.50 | — | 9 | 18 | 10 | 30 | — | 40 | 40 | 40 |
| (ಕೆ.ಜಿ.) | (ಗ.) | 14.50 | — | 11 | 20 | 12 | 35 | — | 55 | 50 | 48 |
| ಏಲಕ್ಕಿ | (ಕ.) | 75 | 92 | — | — | — | — | — | — | — | — |
| (ಕೆ.ಜಿ.) | (ಗ.) | 109 | 170 | — | — | — | — | — | — | — | — |
| ಕಿತ್ತಳೆ | (ಕ.) | 20 | 15 | — | — | 60 | 30 | 35 | 30 | 20 | — |
| (100ಕ್ಕೆ) | (ಗ.) | 40 | 25 | — | — | 70 | 50 | 40 | 50 | 30 | — |
| ಬಾಳೆಹಣ್ಣು | (ಕ.) | 25 | 30 | 30 | 30 | 25 | 25 | — | 30 | 20 | 30 |
| (100ಕ್ಕೆ) | (ಗ.) | 35 | 40 | 40 | 40 | 30 | 35 | — | 40 | 50 | 40 |
| ಬತ್ತ | (ಕ.) | 115 | 125 | 125 | 140 | 140 | 150 | 200 | 140 | 190 | 200 |
| (ಕ್ವಿಂಟಾಲ್) | (ಗ.) | 130 | 135 | 135 | 180 | 180 | 200 | 220 | 160 | 210 | 250 |

| | | | | | | | | | | | |
|---|---|---|---|---|---|---|---|---|---|---|---|
| ಸೀಗೇಕಾಯಿ | (ಕ.) | — | 60 | 60 | — | — | 640 | 700 | 400 | — | — |
| | (ಗ.) | — | 100 | 100 | — | — | 680 | 800 | 600 | — | — |
| ಅಡಿಕೆ | (ಕ.) | — | 80 | 80 | 300 | 400 | 400 | 1,500 | — | 1,700 | 2,000 |
| | (ಗ.) | — | 100 | 100 | 400 | 600 | 600 | 2,200 | — | 2,200 | 2,500 |
| ಅಂಟವಾಳ | (ಕ.) | — | — | — | — | — | — | — | 500 | — | — |
| | (ಗ.) | — | — | — | — | — | — | — | 650 | — | — |

ಆಧಾರ : ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಮಡಿಕೇರಿ.

ಮತ್ತು ದಕ್ಷಿಣ ಕೊಡಗಿನಲ್ಲಿ ತಿಂಗಳಿಗೆ 5 ರೂ.ಗಳನ್ನು ಪಡೆಯುತ್ತಿದ್ದರೆ, ಮಹಿಳೆಯರು ಮತ್ತು ಮಕ್ಕಳು ಪೂರ್ವ ಮತ್ತು ಉತ್ತರ ಕೊಡಗಿನಲ್ಲಿ ತಿಂಗಳಿಗೆ 3.75 ರೂ.ಗಳನ್ನು ಪಶ್ಚಿಮ ಮತ್ತು ದಕ್ಷಿಣ ಕೊಡಗಿನಲ್ಲಿ 4 ರೂ.ಗಳನ್ನು ಪಡೆಯುತ್ತಿದ್ದರು. 30 ಧಫೇದಾರರು (ಕಾನ್ಸ್‌ಟೆಬಲ್ಸ್) ಪೂರ್ವ ಮತ್ತು ಉತ್ತರ ಕೊಡಗಿನಲ್ಲಿ ತಿಂಗಳಿಗೆ 15 ರೂ.ಗಳನ್ನು ಪಶ್ಚಿಮ ಮತ್ತು ದಕ್ಷಿಣ ಕೊಡಗಿನಲ್ಲಿ ತಿಂಗಳಿಗೆ 18 ರೂ.ಗಳನ್ನು ಪಡೆಯುತ್ತಿದ್ದರು. ಈ ಎಲ್ಲಾ ದರಗಳನ್ನು ಹೆಚ್ಚಿಸಬೇಕೆಂಬ *ಸಾರ್ವತ್ರಿಕ ಹಕ್ಕೊತ್ತಾಯವಿತ್ತು.* ಕೌಶಲ್ಯವಿಲ್ಲದ ಕಾರ್ಮಿಕರು ದಿನ ಒಂದಕ್ಕೆ 4 (25 ಪೈಸೆ) ಆಣೆಯಿಂದ ಆರು ಆಣೆ (37 ಪೈಸೆ) ಕೂಲಿ ಪಡೆಯುತ್ತಿದ್ದರೆ ಕುಶಲ ಕಾರ್ಮಿಕರು ದಿನಕ್ಕೆ 12 ಆಣೆಯಿಂದ (75 ಪೈಸೆಯಿಂದ) 1 ರೂ. ಪಡೆಯುತ್ತಿದ್ದರು. ಗಾಡಿ ಬಾಡಿಗೆಯು ದಿನಕ್ಕೆ 1.50 ರೂ. ನಿಂದ 2 ರೂ. ಇತ್ತು.

ಮೈಸೂರಿನ ವ್ಯವಸಾಯಗಾರರು ತಮ್ಮ ಸುಗ್ಗಿಯ ನಂತರ ಕೊಡಗಿನ ಕಾಫಿ ಎಸ್ಟೇಟ್‌ಗಳಲ್ಲಿ ಕೆಲಸಕ್ಕೆ ಸೇರಿ ಮತ್ತೆ ಮಳೆಗಾಲದ ಹೊತ್ತಿಗೆ ಸ್ವಂತ ಸ್ಥಳಗಳಿಗೆ ಹಿಂತಿರುಗಿ ತಮ್ಮ ಕೃಷಿ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು.

1868 ರಿಂದ 1880ರ ವರೆಗೆ ಗುಮಾಸ್ತರ ಸಂಬಳ ತಿಂಗಳಿಗೆ 4 ರೂ. ಯಿಂದ 7 ರೂ. ಇತ್ತು. ಇದನ್ನು 1890ರಲ್ಲಿ 10 ರೂ.ಗೆ ಹೆಚ್ಚಿಸಲಾಯಿತು. ಕೆಳದರ್ಜೆಯ ಉಪಾಧ್ಯಾಯರ ಸಂಬಳ ತಿಂಗಳಿಗೆ ರೂ. 3 ರಿಂದ 5 ರೂ.ಗಳಿತ್ತು. ಕಾರ್ಮಿಕರು ಧಾನ್ಯ ರೂಪದಲ್ಲಿ ತಮ್ಮ ಕೂಲಿಯನ್ನು ಪಡೆಯುತ್ತಿದ್ದರು. ಪುರುಷರ ಪ್ರತಿನಿತ್ಯದ ಕೂಲಿ 10 ಪೈಸೆಯಿಂದ 36 ಪೈಸೆಯವರೆಗೆ ಇತ್ತೆಂದು ಐ. ಎಂ. ಮುತ್ತಣ್ಣ ತಿಳಿಸುತ್ತಾರೆ.

1843ರಲ್ಲಿ ಬ್ರಿಟಿಷರು ಗುಲಾಮಗಿರಿಯನ್ನು ರದ್ದು ಮಾಡಿದರು. ಆದರೆ ಒಮ್ಮೆಗೇ ಈ ಗುಲಾಮರು (ಜಮ್ಮದಾಳುಗಳು) ಮಾಲೀಕನನ್ನು ಬಿಟ್ಟು ಹೋಗಲಿಲ್ಲ. ಕೊಡವ ಭೂಮಾಲೀಕರು ಅವರನ್ನು ಉಳಿಸಿಕೊಳ್ಳುವ ಸವಲತ್ತನ್ನು ಕೆಲವು ಕಾಲದ ಮಟ್ಟಿಗೆ ಬಳಸಿಕೊಂಡರು. ಆದರೆ ಕಾಫಿ ತೋಟದಲ್ಲಿ ಕೆಲಸ ಸಿಗುವ ಆಕರ್ಷಣೆ ಇದ್ದುದರಿಂದ ಅನೇಕ ಜಮ್ಮದಾಳುಗಳು ಬಿಟ್ಟು ಹೋದರು. ಆಗ ಜಮ್ಮದಾಳುಗಳನ್ನು ಮಾಲಿಕರು ಚೆನ್ನಾಗಿ ನೋಡಿಕೊಳ್ಳುವುದು ಹಾಗೂ ಅವರ ಅಶನಾಂಶ ಹೆಚ್ಚಿಸುವುದು ಆಯಿತು. 1878ರಲ್ಲಿ ಪುರುಷರವೇತವು ತಿಂಗಳಿಗೆ ರೂ. 6 ರಿಂದ ರೂ. 7, ಸ್ತ್ರೀಯರ ಮತ್ತು ಮಕ್ಕಳ ವೇತನವು ರೂ. 3.75 ರಿಂದ 4ರೂ. ಇತ್ತು. ಪ್ರತೀನಿತ್ಯದ ಕೂಲಿ (ವೇತನ) ನಾಲ್ಕಾಣೆ (25 ಪೈಸೆ)ಯಿಂದ ಆರಾಣೆ (37 ಪೈ.) ಅಕುಶಲ ಕಾರ್ಮಿಕರಿಗೂ, 12 ಆಣೆಯಿಂದ (75 ಪೈಸೆ) ಒಂದು ರೂಪಾಯಿ ಕುಶಲ ಕಾರ್ಮಿಕರಿಗೂ ಕೊಡಲ್ಪಡುತ್ತಿತ್ತು. ದಿನನಿತ್ಯದ ಕೆಲಸಕ್ಕೆ ಕೊಡುತ್ತಿದ್ದ ವೇತನ ದರವು ಅನೇಕ ಬದಲಾವಣೆಯನ್ನು ಕಂಡಿದೆ. ಕಾಫಿ ಎಸ್ಟೇಟ್‌ಗಳು ವಿಸ್ತರಣೆಗೊಂಡಂತೆಲ್ಲಾ ಕಾರ್ಮಿಕರನ್ನು ಮೈಸೂರು, ದಕ್ಷಿಣ ಕನ್ನಡ, ಕೇರಳಗಳಿಂದ ಕರೆತರ *ಲಾಗುತ್ತಿತ್ತು.*

ಕೊಡಗಿನ ಕೂಲಿಯ ವಿಧಾನವು ಅನೇಕ ಬದಲಾವಣೆಯನ್ನು ಕಂಡಿದೆ. ಮೊದಮೊದಲು ವ್ಯವಸಾಯ ಕಾರ್ಮಿಕರು ಧಾನ್ಯರೂಪದಲ್ಲಿ ತಮ್ಮ ಕೂಲಿಯನ್ನು ಪಡೆಯುತ್ತಿದ್ದರು. ಕಾಲಕ್ರಮೇಣ ಇದು ಹಣದ ರೂಪಕ್ಕೆ ಬದಲಾವಣೆ ಹೊಂದಿತು. ಮೊದಲ ವಿಶ್ವಸಮರ ಕಾಲದಲ್ಲಿ ವೇತನವು ಹೆಚ್ಚಳಗೊಂಡಿತು. 1929ರ ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ವೇತನ ಪ್ರಮಾಣದಲ್ಲಿ ಇಳಿತ ಉಂಟಾಯಿತು. 1930ರ ನಂತರ ಉತ್ಪಾದನೆ ಮತ್ತು ಆರ್ಥಿಕಾಂಶಗಳಿಗೆ ಸಂಬಂಧಿಸಿದಂತೆ ವೇತನ ಹೆಚ್ಚಳಗೊಂಡಿತು. 1932-33ರಲ್ಲಿ ಪರಿಣತ ಕಾರ್ಮಿಕರು ಪ್ರತೀದಿನಕ್ಕೆ ರೂ. 1.40ನ್ನೂ, ಪರಿಣತರಲ್ಲದವರು ದಿನವಹಿ 10 ಆಣೆಯನ್ನೂ (62 ಪೈಸೆ) ಪಡೆಯುತ್ತಿದ್ದರು. 1940ರ ದಶಕದಲ್ಲಿ ವೇತನದ ಏರುಮುಖ ಸ್ಥಿತಿಯಿತ್ತು. ಈ ಕಾಲಾವಧಿಯಲ್ಲಿ ಪರಿಣತ ಕಾರ್ಮಿಕರ ಸರಾಸರಿ ವೇತನವು ರೂ. 2 ರಿಂದ 2.50, ಪರಿಣತರಲ್ಲದವರ ನೇತನವು ರೂ. 2 ರಿಂದ 2.50, ಪರಿಣತರಲ್ಲದವರ ವೇತನವು ರೂ. 1 ರಿಂದ 1.50 ಇತ್ತು.

ಸ್ವಾತಂತ್ರ್ಯದ ನಂತರ ಜಾರಿಗೆ ತಂದ ಸಾಮಾಜಿಕ ಭದ್ರತಾ ಕಾಯ್ದೆಯ ಪರಿಣಾಮವಾಗಿ ಕಾಫಿ ಕೈಗಾರಿಕೆಗಳಲ್ಲಿ ಮತ್ತು ಖಾಸಗೀ ಸಂಸ್ಥೆಗಳಲ್ಲಿ ವೇತನವು ಏರಿತು. 1948ರ ಕನಿಷ್ಠ ವೇತನ ಕಾನೂನು ಉತ್ತಮ ವೇತನ ಪಡೆಯಲು ವಾಗ್ದಾನವನ್ನೊದಗಿಸಿದೆ. ಅನೇಕ ಸೇವಾ ವರ್ಗಗಳಲ್ಲಿ ಕೂಲಿ ಅಥವಾ ವೇತನ ಪ್ರಮಾಣದಲ್ಲಿ ಹೆಚ್ಚಳವಾದರೂ ಜೀವನ ವೆಚ್ಚ ಹೆಚ್ಚಿರುವುದರಿಂದ ದುಡಿಮೆಗಾರರು ಆದಾಯ ಮತ್ತು ವೆಚ್ಚವನ್ನು ಸರಿದೂಗಿಸಲು ಕಷ್ಟಪಡಬೇಕಾಗಿತ್ತು. 1964ರಲ್ಲಿ ಪರಿಣತ ಕಾರ್ಮಿಕರಿಗೆ ದಿನಕ್ಕೆ 5 ರೂ.ಗಳನ್ನು ಪರಿಣತರಲ್ಲದ ಕಾರ್ಮಿಕರು ದಿನಕ್ಕೆ 2 ರೂ.ಗಳನ್ನು ಪಡೆಯುತ್ತಿದ್ದರು. ಕಾಫಿ ತೋಟಗಳಲ್ಲಿ ದಿನಕ್ಕೆ ರೂ. 2.50 ಯಿಂದ 3.50 ಕೂಲಿ ಇತ್ತು.

**ಉದ್ದಿಮೆಗಳ ಕನಿಷ್ಠ ವೇತನ**

ಕರ್ನಾಟಕ ರಾಜ್ಯ ಸರಕಾರವು ಇತ್ತೀಚಿನ ವರ್ಷಗಳಲ್ಲಿ 36 ನಮೂದಿತ ಉದ್ಯಮಗಳ ಉದ್ಯೋಗಿಗಳಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಿದೆ. ಈ ನಮೂದಿತ ಉದ್ಯಮಗಳ ವ್ಯಾಪ್ತಿಗೆ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ವಸತಿ ಹೋಟೆಲುಗಳು ಮತ್ತು ಉಪಹಾರ ಮಂದಿರಗಳು, ಇಂಜಿನಿಯರಿಂಗ್ ಉದ್ದಿಮೆ, ಹೊಲಿಗೆ ಉದ್ದಿಮೆ, ರಸ್ತೆ ಮತ್ತು ಕಟ್ಟಡಗಳ ನಿರ್ಮಾಣ ಹಾಗೂ ರಿಪೇರಿ ಮಾಡುವುದು, ಮುದ್ರಣಾಲಯ, ಸಿನಿಮಾ ಉದ್ದಿಮೆ, ಊದುಬತ್ತಿ ಹಾಗೂ ತಂಬಾಕು ಉದ್ದಿಮೆ, ಸಾರ್ವಜನಿಕ ಮೋಟಾರು ಸಾರಿಗೆ, ಆಸ್ಪತ್ರೆ ಮತ್ತು ಶುಶ್ರೂಷಾ ಗೃಹಗಳು, ಕ್ಲಬ್‌ಗಳು, ಬೇಕರಿಗಳು, ಸಿಹಿತಿನಿಸಿನ ಉತ್ಪಾದನೆ, ಕಲ್ಲು ಒಡೆಯುವುದು, ಮತ್ತು ಜಲ್ಲಿ ಮಾಡುವುದು, ಪ್ಲೈವುಡ್ ಉದ್ದಿಮೆ, ಮರಗೆಲಸ ಮತ್ತು ಸಾಮಿಲ್ಲುಗಳು, ಕಾಫಿ ಕ್ಯೂರಿಂಗ್ ಉದ್ದಿಮೆ, ಅಕ್ಕಿ, ಹಿಟ್ಟು ಮತ್ತು ಬೇಳೆ ಮಾಡುವ ಗಿರಣಿಗಳು, ಎಣ್ಣೆ ಗಿರಣಿಗಳು, ಹೆಂಡ ಇಳಿಸುವುದು, ಹಂಚು ಕಾರ್ಖಾನೆ, ವ್ಯವಸಾಯ ಕಾರ್ಮಿಕ ಉದ್ಯೋಗ, ಸಿಂಕೋನ, ರಬ್ಬರ್, ಟೀ ಮತ್ತು ಕಾಫಿ ತೋಟಗಾರಿಕೆ, ಏಲಕ್ಕಿ, ತೋಟಗಳು, ರೇಷ್ಮೆ ಕೈಗಾರಿಕೆ, ಗೋಡಂಬಿ ಉದ್ದಿಮೆ, ಹತ್ತಿ ಬಿಡಿಸುವುದು ಮತ್ತು ಒತ್ತುವುದು (ಜಿನ್ನಿಂಗ್), ಪಿಂಗಾಣಿ, ಕಲ್ಲಿನ ಮತ್ತು ಮಡಿಕೆ ಉದ್ದಿಮೆ, ಚರ್ಮ ಹದಮಾಡುವುದು ಮತ್ತು ಚರ್ಮೋದ್ಯಮ, ಖಂಡಸಾರಿ ಸಕ್ಕರೆ ಕಾರ್ಖಾನೆ, ಬಟ್ಟೆ ಕೈಗಾರಿಕೆ, ವಾಹನಗಳ ತಯಾರಿಕೆ ಮತ್ತು ರಿಪೇರಿ ಕೆಲಸ ಫೌಂಡ್ರಿ, ಸ್ಥಳೀಯ ಸಂಸ್ಥೆಗಳು ಇವೆಲ್ಲ ಸೇರುತ್ತವೆ.

**ಅಂಗಡಿಗಳು**

ರಾಜ್ಯಾದ್ಯಂತ ಇರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಉದ್ದಿಮೆಯ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಸಂದಾಯ ಮಾಡಬೇಕಾದ ಮಾಹೆಯಾನ ಮಜೂರಿಗಳ ಕನಿಷ್ಠ ದರಗಳನ್ನು ರಾಜ್ಯ ಸರ್ಕಾರವು 1987ರ ಆಗಸ್ಟ್ 20ರಿಂದ ಜಾರಿಗೆ ಬರುವಂತೆ ನಿಗದಿ ಪಡಿಸಿದೆ. ಇದು ನಾಲ್ಕು ವಲಯಗಳಿಗೆ ಪ್ರತ್ಯೇಕ ದರದಲ್ಲಿ ಅನ್ವಯವಾಗುತ್ತದೆ. ಮೊದಲನೇಯ ವಲಯವು ಎಲ್ಲಾ ನಗರ ಪಾಲಿಕೆಗಳ ಪ್ರದೇಶಕ್ಕೂ, ಎರಡನೇಯ ವಲಯವು ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ಮತ್ತು ಕೆ.ಜಿ.ಎಫ್. ದಾವಣಗೆರೆ, ಭದ್ರಾವತಿ, ಗದಗ ಹೊಸಪೇಟೆಗಳಿಗೂ, ಮೂರನೇ ವಲಯವು ಎಲ್ಲಾ ತಾಲೂಕು ಕೇಂದ್ರಗಳಿಗೂ (ಎರಡನೇ ವಲಯದಲ್ಲಿ ಗುರುತಿಸಿರುವ ಪಟ್ಟಣಗಳನ್ನು ಬಿಟ್ಟು), ನಾಲ್ಕನೇಯ ವಲಯವು ಮೇಲಿನ 1, 2 ಮತ್ತು 3ನೇಯ ವಲಯದಲ್ಲಿ ಬಾರದಿರುವ ಪ್ರದೇಶಗಳಿಗೂ ಅನ್ವಯವಾಗುತ್ತದೆ. ಕೆಲಸದ ವರ್ಗವು ಏಳು ಗುಂಪುಗಳಲ್ಲಿದ್ದು ಪ್ರತೀ ಗುಂಪಿನಲ್ಲೂ ಬರುವ ಕೆಲಸಗಳ ವರ್ಗಗಳು ಮತ್ತು ಅನುಕ್ರಮವಾಗಿ ವಲಯ 1, 2, 3 ಮತ್ತು 4ಕ್ಕೆ ಪ್ರತ್ಯೇಕವಾಗಿ ಗೊತ್ತುಪಡಿಸಿರುವ ಮಾಹೆಯಾನ ಕನಿಷ್ಠ ವೇತನ ದರವು ಈ ರೀತಿ ಇದೆ.

ಮೊದಲನೇಯ ಗುಂಪಿನಲ್ಲಿ–ಮ್ಯಾನೇಜರ್ ಫಾರ್ಮಸಿಸ್ಟ್ ಕೆಮಿಸ್ಟ್ ಕೆಲಸದ ವರ್ಗಗಳಿದ್ದು ಇವರಿಗೆ ವಲಯಾನುಗುಣವಾಗಿ ಮಾಹೆಯಾನ ಕನಿಷ್ಠ ವೇತನವನ್ನು 644.75, 614.75, 599.25 ಮತ್ತು 584.20 ರೂ.ಗಳಲ್ಲಿ ನಿಗದಿಪಡಿಸಲಾಗಿದೆ. ಎರಡನೇಯ ಗುಂಪಿನಲ್ಲಿ ಅಕೌಂಟೆಂಟ್, ಸೂಪರ್‌ವೈಜರ್, ಶೀಘ್ರಲಿಪಿಗಾರರಿದ್ದು ಇವರಿಗೆ 560.75, 542.25, 525.75 ಮತ್ತು 503.70 ರೂ.ಗಳನ್ನು ನಿಗದಿಪಡಿಸಲಾಗಿದೆ. ಮೂರನೇಯ ಗುಂಪಿನಲ್ಲಿ ಗುಮಾಸ್ತೆ ಕ್ಯಾಷಿಯರ್, ಬೆರಳಚ್ಚುಗಾರ, ಸೇಲ್ಸ್‌ಮನ್, ಸೇಲ್ಸ್‌ಗರ್ಲ್ ಕಾಂಪೌಂಡರ್, ಛಾಯಾಗ್ರಾಹಕ, ಛಾಯಾ ಕಲಾವಿದ, ವಾಚ್ ಮೆಕ್ಯಾನಿಕ್, ರೇಡಿಯೋ ಮೆಕ್ಯಾನಿಕ್, ಟಿ. ವಿ. ಮೆಕ್ಯಾನಿಕ್, ಆಪ್ಟಿಕಲ್ ಮೆಕ್ಯಾನಿಕ್, ಲಿಫ್ಟ್ ಜೋಡಿಸುವ ಕುಶಲ ಕೆಲಸಗಾರ, ತಾಂತ್ರಿಕ, ಬಡಗಿ, ಮರಮುಟ್ಟು ಪಾಲಿಶ್ ಮಾಡುವವನು, ರಿಫ್ರಾಕ್ಷನರಿಯನ್ (ಆಪ್ಟಿಕಲ್ ಶಾಪ್), ಹೇರ್ ಡ್ರೆಸರ್, ಹವಾನಿಯಂತ್ರಣ ಯಂತ್ರಚಾಲಕ, ಕೊಡೆ, ಸೂಟ್‌ಕೇಸ್ ಮಾಡುವವರು, ಸ್ವಾಗತಗಾರರು ಮುಂತಾದ ವರ್ಗಗಳಿದ್ದು ಇವರಿಗೆ ಮಾಹೆಯಾನ ಕನಿಷ್ಟ ವೇತನ ದರವನ್ನು 492.45, 482.50 ಮತ್ತು 458.25 ರೂ.ಗಳಲ್ಲಿ ನಿಗದಿಪಡಿಸಲಾಗಿದೆ. ನಾಲ್ಕನೇಯ ಗುಂಪಿನಲ್ಲಿ ಬಿಲ್ ಕಲೆಕ್ಟರ್, ಬಿಲ್ ಕ್ಲಾರ್ಕ್, ಗೋಡೌನ್ ಕೀಪರ್, ಬುಕ್ಕಿಂಗ್ ಕ್ಲಾರ್ಕ್, ಸಹಾಯಕ ಛಾಯಾ ಕಲಾವಿದ, ಅಸಿಸ್ಟೆಂಟ್ ಸೇಲ್ಸ್‌ಮೆನ್, ಸೇಲ್ಸ್‌ಗರ್ಲ್; ಅಂಗಡಿಯ ಸಹಾಯಕ, ಪ್ಯಾಕರ್ ಕೆಲಸ ವರ್ಗಗಳಿದ್ದು ಇವರಿಗೆ ಮಾಹೆಯಾನ ಕನಿಷ್ಠ ವೇತನ ದರವನ್ನು 465.45, 452.55, 444.70 ಮತ್ತು 435.25 ರೂ.ಗಳನ್ನು ನಿಗದಿಪಡಿಸಿದೆ. ಐದನೇಯ ಗುಂಪಿನಲ್ಲಿ ಸಹಾಯಕ ಜವಾನ, ಕಾವಲುಗಾರ, ಸಂದೇಶ ವಾಹಕ, ತೂಕ ಮಾಡುವವ, ಬೈಸಿಕಲ್ಲು ಜೋಡಿಸುವವ, ಉಗ್ರಾಣ ಕೆಲಸಗಾರ, ಪೆಟ್ರೋಲ್ ಬಂಕ್ ಚಾಲನೆ ಮಾಡುವವ, ಬಣ್ಣ ಬಳಿಯುವವ, ಹಣ್ಣಿನರಸ ತಯಾರಿಸುವವ, ಹಿಟ್ಟು ರುಬ್ಬುವವ, ಇವರೆಲ್ಲ ಸಾಮಾನ್ಯ ಕೆಲಸಗಾರರಾಗಿದ್ದು (ಆಡಳಿತ ಮತ್ತು ಗುಮಾಸ್ತ ಸೇವೆಗಳನ್ನು ಬಿಟ್ಟು), ಇವರಿಗೆ 451.75, 438.25, 408.75 ಮತ್ತು 389.75 ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಆರನೇಯ ಗುಂಪಿ

ನಲ್ಲಿ, ಗೋಣಿಚೀಲ ಹೊಲೆಯುವವನಿಗೆ ಸಾಮಾನ್ಯ ಚೀಲ ವೊಂದಕ್ಕೆ ರೂ. 0.70, ಹಾಗೂ ಸಿಮೆಂಟ್ ಮತ್ತು ಗೊಬ್ಬರದ ಚೀಲ ಹೊಲಿಯಲು ರೂ. 0.80 ನಿಗದಿ ಮಾಡ ಲ್ಪಟ್ಟಿದೆ. ಏಳನೇಯ ಗುಂಪಿನಲ್ಲಿ ವಾಹನ ಚಾಲಕರಿಗೆ ಮಾಹೆಯಾನ ಕನಿಷ್ಠ ವೇತನ ದರವನ್ನು ಮೇಲಿನದೇ ಅನು ಕ್ರಮದಲ್ಲಿ 505.25, 494.75, 464.75 ಮತ್ತು 437.75 ರೂ.ಗಳನ್ನು ಗೊತ್ತುಪಡಿಸಲಾಗಿದ್ದಿತು. ಇವರು ಗಳಲ್ಲದೆ ಅಟೆಂಡರ್‍ಸ್, ವಾಹನ ಸ್ವಚ್ಛ ಮಾಡುವವರು, ಮುಖ್ಯ ಹವಾಲಿ ಹಾಗೂ ವಾಹನಗಳಿಗೆ ಹೇರುವ ಕೆಲಸದವರ ವರ್ಗಗಳಿದ್ದು ಇವರಿಗೆ ಕನಿಷ್ಠ ಮಾಹೆಯಾನ ವೇತನ ದರವು 429.75, 414.75, 398.75 ಮತ್ತು 378.75 ರೂ.ಗಳನ್ನು ನಿಗದಿ ಮಾಡಲಾಗಿದೆ.

ಅಧಿಸೂಚನೆಯಲ್ಲಿ ನಿಗದಿಪಡಿಸಿದ ದರಗಳು ರಾಜ್ಯ ಸರಾಸರಿ ಗ್ರಾಹಕ ಸೂಚ್ಯಂಕ 1960–100 ರಂತೆ 700 ಅಂಶಗಳಿಗೆ ಲಭಿಸುವ ತುಟ್ಟಿಭತ್ಯ ದರಗಳನ್ನು ಒಳಗೊಂಡಿವೆ. ರಾಜ್ಯ ಸರಾಸರಿ ಬೆಲೆ ಸೂಚ್ಯಂಕದ 700 ಅಂಶಗಳಿಗೆ ಮೀರಿದ ಪ್ರತೀ ಅಂಶಕ್ಕೆ ಈ ಕೆಳಗೆ ತೋರಿಸಿರುವ ರೀತಿಯಲ್ಲಿ ತುಟ್ಟಿಭತ್ಯ ಕೊಡಬೇಕಾಗುತ್ತದೆ. ಜೀವನ ನಿರ್ವಹಣಾ ಭತ್ಯದ ಲೆಕ್ಕಾಚಾರವನ್ನು ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತೀ ವರ್ಷ, ಲೆಕ್ಕಾಚಾರ ಮಾಡಬೇಕಾಗುತ್ತದೆ. ಅಲ್ಲದೆ ಗ್ರಾಹಕ ಬೆಲೆ ಸೂಚ್ಯಂಕವನ್ನು ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಎಣಿಸಬೇಕಾಗುತ್ತದೆ. ದಿನ ಒಂದಕ್ಕೆ 10 ರೂ. ಗಳು ಅಥವಾ ಕಡಿಮೆ ಮಜೂರಿ ಪಡೆಯುವ ಅಥವಾ ತಿಂಗಳಿಗೆ 300 ರೂ. ಮತ್ತು ಅದಕ್ಕೂ ಕಡಿಮೆ ಸಂಬಳ ಪಡೆಯುವ ನೌಕರ ವರ್ಗಕ್ಕೆ ಜೀವನ ನಿರ್ವಹಣಾಭತ್ಯವು ದಿನ ಒಂದಕ್ಕೆ ಪ್ರತೀ ಅಂಶಕ್ಕೆ 2 ಪೈಸೆಯಂತೆ; ಒಂದು ದಿನಕ್ಕೆ ರೂ. 10 ಕ್ಕೂ ಮೇಲ್ಪಟ್ಟು, ರೂ. 15 ಕ್ಕೂ ಕಡಿಮೆ ಮಜೂರಿ ಪಡೆಯುವ ಅಥವಾ ತಿಂಗಳಿಗೆ 301 ರಿಂದ 450 ರೂ.ಗಳವರೆಗೆ ವೇತನ ಪಡೆಯುವ ವರ್ಗಕ್ಕೆ ದಿನ ಒಂದಕ್ಕೆ ಪ್ರತೀ ಅಂಶಕ್ಕೆ 2.5 ಪೈಸೆಯಂತೆ ; ದಿನಕ್ಕೆ ರೂ. 15ಕ್ಕೂ ಹೆಚ್ಚು ಮಜೂರಿ ಪಡೆಯುವ ಅಥವಾ ತಿಂಗಳಿಗೆ 450ಕ್ಕೂ ಹೆಚ್ಚು ವೇತನ ಪಡೆಯುವ ನೌಕರ ವರ್ಗಕ್ಕೆ ದಿನ ಒಂದಕ್ಕೆ ಪ್ರತೀ ಅಂಶಕ್ಕೆ 3 ಪೈಸೆಯಂತೆ ತುಟ್ಟಿಭತ್ಯ ನೀಡುವಂತೆ ನಿಗದಿ ಮಾಡಲಾಗಿದೆ.

ಕೆಲಸದ ವರ್ಗಕ್ಕನುಗುಣವಾಗಿ ಕನಿಷ್ಠ ವೇತನವನ್ನು ನಿಗದಿಪಡಿಸುವಾಗ ಈ ಕೆಳಗೆ ಕೊಟ್ಟ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ : 1) ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಜೂರಿಯ ಕನಿಷ್ಠ ದೈನಂದಿನ ದರಗಳನ್ನು ನಿಗದಿ ಪಡಿಸುವಾಗ ಅವರ ಮಾಸಿಕ ದರವನ್ನು 26 ರಿಂದ ಭಾಗಿಸಿ ಬರುವ ದಿನಗೂಲಿಯ ದರವನ್ನು ನಾಲ್ಕು ರಜಾ ದಿನ ಗಳಿಗೂ ಕೊಡಬೇಕು; 2) ಕೆಲಸದ ಸ್ವರೂಪ ಒಂದೇ ಇದ್ದರೆ ಮಹಿಳಾ ಕಾರ್ಮಿಕರಿಗೂ ಪುರುಷ ಕಾರ್ಮಿಕರಿಗೆ ನೀಡುವ ಮಜೂರಿಯ ದರವೇ ಸಂದಾಯವಾಗಬೇಕು ; 3) ಮಜೂರಿ ದರವು ಹೆಚ್ಚಾಗಿದ್ದರೆ ಹೆಚ್ಚಾಗಿರುವ ದರವನ್ನೇ ಮುಂದು ವರಿಸಬೇಕು ; 4) ಅನುಸೂಚಿಯಲ್ಲಿ ಸೂಚಿಸದೇ ಇರುವ ವರ್ಗದವರಿಗೆ ಅದೇ ಸ್ವರೂಪದ ಉದ್ಯೋಗದ ಕಾರ್ಮಿಕರಿಗೆ ಕೊಡುವ ವೇತನವನ್ನು ಕೊಡಬೇಕು ; 5) ತುಂಡು ಕೆಲಸಕ್ಕೆ ಕೂಲಿ (ಪೀಸ್ ವರ್ಕ್) ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು ಘಂಟೆಗಳ ವೇತನವು ಅದೇ ತರಹದ ಕೆಲಸ ಮಾಡುವ ಇತರ ನೌಕರರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಮೇಲಿನ ದರಗಳನ್ನು ಲೆಕ್ಕ ಹಾಕುವಾಗ ಒಂದು ದಿನದ ಕೆಲಸವೆಂದರೆ ಎಂಟು ಘಂಟೆಯು ಕೆಲಸವೆಂದು ತಿಳಿಯಬೇಕು. ಒಂದು ವೇಳೆ ಕಾರ್ಮಿಕರನ್ನು ಎಂಟು ಘಂಟೆಗಿಂತ ಕಡಿಮೆ ಅವಧಿ ಕೆಲಸಕ್ಕೆ ನೇಮಿಸಿಕೊಂಡರೆ ಆ ಪ್ರಕಾರವಾಗಿ ದರವನ್ನು ಲೆಕ್ಕ ಹಾಕ ಬೇಕು ; 6) ಹಬ್ಬದ ಮತ್ತು ವಾರದ ರಜಾ ದಿನಗಳಲ್ಲಿ ಕೆಲಸಮಾಡಿದರೆ ಕನಿಷ್ಠ ವೇತನ ಕಾನೂನು ಹಾಗೂ ನಿಯಮ ಗಳಿಗೊಳಪಟ್ಟು ಸಾಮಾನ್ಯ ದರದ ಎರಡುಪಟ್ಟು ವೇತನವನ್ನು ಕೊಡಬೇಕು ; 7) ಸಾಮಾನ್ಯ ಕೆಲಸದ ಅವಧಿಗೆ ಮೀರಿದ ಕೆಲಸಕ್ಕಾಗಿ ಸಾಮಾನ್ಯ ದರದ ಎರಡರಷ್ಟು ವೇತನವನ್ನು ಕೊಡಬೇಕು; 8) ಕಿಶೋರಾವಸ್ಥೆಯವರಿಗೆ (16ವರ್ಷಕ್ಕೂ ಮೇಲ್ಪಟ್ಟು ಹಾಗೂ 18 ವರ್ಷಕ್ಕೂ ಕಡಿಮೆ ಇರುವವರು) ಇತರ ಅದೇ ವರ್ಗದ ಕಾರ್ಮಿಕರ ವೇತನದ ಶೇ. 80 ರಷ್ಟು ವೇತನ ಕೊಡಬೇಕು ; 9) ಅಪ್ರೆಂಟೀಸ್‌ಗಳಿಗೆ ಅವರು ಸೇರಿದ ವರ್ಗದ ಕಾರ್ಮಿಕರ ಶೇ. 75 ವೇತನ ಕೊಡಬೇಕು; ಹಾಗೂ 10) ಮಕ್ಕಳಿಗೆ (14 ವರ್ಷಕ್ಕೂ ಮೇಲ್ಪಟ್ಟು 15 ವರ್ಷಕ್ಕೂ ಕಡಿಮೆ ಇರುವವರು) ಅದೇ ವರ್ಗದ ಕಾರ್ಮಿಕರ ಶೇ. 60 ವೇತನ ಕೊಡಬೇಕು.

#### ಹೋಟೆಲ್‌ಗಳು

ವಸತಿ ಹೋಟೆಲ್‌ಗಳು ಮತ್ತು ಉಪಹಾರ ಮಂದಿರಗಳ ಕೆಲಸಗಾರರಿಗೆ ರಾಜ್ಯ ಸರಕಾರವು 1984 ಜೂನ್ 5 ರಿಂದ

ಜಾರಿಗೆ ಬರುವಂತೆ ಮಾಹೆಯಾನ ಕನಿಷ್ಠ ವೇತನವನ್ನು ಮರು ನಿಗದಿ ಮಾಡಿದೆ. ಇದನ್ನು ಮೂರು ವಲಯಗಳಲ್ಲೂ ಕೆಲಸ ಮಾಡುವ ಕಾರ್ಮಿಕರಿಗೆ ಕೆಲಸದ ವರ್ಗಕ್ಕೆ ಅನ್ವಯವಾಗುವಂತೆ ನಿಗದಿ ಪಡಿಸಲಾಗಿದೆ. ಮೊದಲನೇಯ ವಲಯವು ಎಲ್ಲಾ ನಗರ ಪಾಲಿಕೆ ಇರುವ ಪ್ರದೇಶಕ್ಕೂ, ಎರಡನೇಯದು ಎಲ್ಲಾ ಮುನಿಸಿಪಾಲಿಟಿ ಇರುವ ಪ್ರದೇಶ ಮತ್ತು ಜಿಲ್ಲಾ ಕೇಂದ್ರಗಳಿಗೂ, ಹಾಗೂ ಮೂರನೇಯ ವಲಯವು ಮೊದಲನೇಯ ಮತ್ತು ಎರಡನೇಯ ವಲಯಗಳಲ್ಲಿ ಬಾರದಿರುವ ಭಾಗಕ್ಕೂ ಅನ್ವಯವಾಗುತ್ತದೆ. ಪ್ರತೀ ಕೆಲಸದ ವರ್ಗಕ್ಕನುಗುಣವಾಗಿ ಅನ್ವಯವಾಗಿ ಮೊದಲನೇಯ, ಎರಡನೇಯ ಮತ್ತು ಮೂರನೇಯ ವಲಯಗಳ ಮಾಸಿಕ ಮೂಲ ವೇತನವನ್ನು ಇಲ್ಲಿ ಕೊಡಲಾಗಿದೆ : (1) ಅಡಿಗೆಯವರು ಮತ್ತು ಸಿಹಿ ತಿಂಡಿ-ತಿನಿಸು ಮಾಡುವವರಿಗೆ 425, 400 ಮತ್ತು 380 ರೂ.ಗಳು, (2) ಮೇಲ್ವಿಚಾರಕರು ಹಾಗೂ ಅಡಿಗೆ ಮನೆ ಮೇಲ್ವಿಚಾರಕರಿಗೆ 400, 380 ಮತ್ತು 370 ರೂ.ಗಳು, (3) ಬಾರ್‌ಗಳ ಕಾರ್ಮಿಕರಿಗೆ 380, 370 ಮತ್ತು 362 ರೂ.ಗಳು, (4) ಸಹಾಯಕ ಅಡಿಗೆಯವರು (ದೋಸೆ, ಚಪಾತಿ, ಇಡ್ಲಿ ಮೊದಲಾದವನ್ನು ಮಾಡುವವರಿಗೆ), 370, 362, ಮತ್ತು 346 ರೂ.ಗಳು, (5) ರೂಮ್ ಬಾಯ್‌ಗೆ 370, 362 ಮತ್ತು 346 ರೂ.ಗಳು, (6) ಕಾಫಿ, ಟೀ ಮಾಡುವವರು, ಸಪ್ಲೈ ಮಾಡುವವರಿಗೆ 346, 285 ಮತ್ತು 265 ರೂ.ಗಳು, (7) ತರಕಾರಿ, ಮಾಂಸ ಮೊದಲಾದವುಗಳನ್ನು ಕತ್ತರಿಸುವವರು ಹಾಗೂ ಪಾರ್ಸೆಲ್ ಮಾಡುವವರಿಗೆ 285, 265 ಮತ್ತು 247 ರೂ.ಗಳು, (8) ನೀರನ್ನು ಕೊಡುವವರು ತೋಟವನ್ನು ನೋಡಿಕೊಳ್ಳುವವರು, ಧೋಬಿ ಮೊದಲಾದವರಿಗೆ 285, 265 ಮತ್ತು 247 ರೂ.ಗಳು, (9) ಸ್ವಾಗತಕಾರರಿಗೆ 425, 400 ಮತ್ತು 380 ರೂ.ಗಳು, (10) ದೂರವಾಣಿ ನಿರ್ವಾಹಕರಿಗೆ 425, 400 ಮತ್ತು 380 ರೂ.ಗಳು, (11) ವಿದ್ಯುತ್ ಕರ್ಮಿಗಳಿಗೆ 400, 380, ಮತ್ತು 370 ರೂ.ಗಳು, (12) ಲಿಫ್ಟ್ ಚಾಲಕರಿಗೆ 285, 265 ಮತ್ತು 247 ರೂ.ಗಳು, (13) ಲೆಕ್ಕಾಧಿಕಾರಿಗೆ 425, 400 ಮತ್ತು 380 ರೂ.ಗಳು, (14) ಗುಮಾಸ್ತೆ; ಬೆರಳಚ್ಚುಗಾರ, ಕ್ಯಾಷಿಯರ್, ಉಗ್ರಾಣ ಮೇಲ್ವಿಚಾರಕ ಇವರಿಗೆ 370, 362 ಮತ್ತು 346 ರೂ.ಗಳು, (15) ಕ್ಲೀನರ್, ಕಾವಲುಗಾರ, ಕಸ ಗುಡಿಸುವವರು, ಸಹಾಯಕರು ಮೊದಲಾದವರಿಗೆ 285, 265 ಮತ್ತು 247 ರೂ.ಗಳು, ಹಾಗೂ (16) ಸೇವಕರು ಮತ್ತು ಇತರ ಪರಿಣತರಲ್ಲದ ಕೆಲಸಗಾರರಿಗೆ 285, 265 ಮತ್ತು 247 ರೂ.ಗಳು. ಈ ಮೇಲೆ ಹೇಳಿರುವ ಮೂಲ ವೇತನದ **ಜೊತೆಗೆ** 1-4-1985 ರಿಂದ ಅನ್ವಯವಾಗುವಂತೆ ತುಟ್ಟಿಭತ್ಯವನ್ನು ನಿಗದಿಪಡಿಸಿದೆ. ಇದು ಗ್ರಾಹಕ ಬೆಲೆ ಸೂಚ್ಯಂಕ (1960-100 ಇದ್ದು) 470 ಅಂಶಗಳಿಗೂ ಅಧಿಕಗೊಂಡವುದಳಿಗೆ ಇತರ ಉದ್ದಿಮೆಗಳಲ್ಲಿರುವಂತೆ ತುಟ್ಟಿಭತ್ಯವನ್ನು ನಿಗದಿಪಡಿಸಲಾಗಿದೆ.

ಇಂಜನಿಯರಿಂಗ್ ಉದ್ಯಮ

ಇಂಜನಿಯರಿಂಗ್ ಉದ್ದಿಮೆಗೆ ಸೇರಿದ ನೌಕರರಿಗೆ ರಾಜ್ಯ ಸರ್ಕಾರವು 1987 ಫೆಬ್ರವರಿ 18 ರಿಂದ ಕನಿಷ್ಠ ವೇತನವನ್ನು ನಿಗದಿಪಡಿಸಿದೆ. ಆವರವರ ವರ್ಗಕ್ಕನುಗುಣವಾಗಿ ಅನುಕ್ರಮವಾಗಿ ಮೊದಲನೇಯ, ಎರಡನೇಯ ಮತ್ತು ಮೂರನೇಯ ವಲಯದಲ್ಲಿ ದಿನದ ಕನಿಷ್ಠ ವೇತನವು ಈ ರೀತಿ ಇದೆ : ಉನ್ನತ ಪರಿಣತರಿಗೆ 30, 28 ಮತ್ತು 26 ರೂ.ಗಳು; ಪರಿಣತರಿಗೆ 21, 18.60 ಮತ್ತು 16.50 ರೂ.ಗಳು; ಅರೆಕುಶಲರಿಗೆ 16.50, 15 ಮತ್ತು 13.50 ರೂ.ಗಳು ಹಾಗೂ ಕುಶಲರಲ್ಲದವರಿಗೆ 15, 14 ಮತ್ತು 12.50 ರೂ.ಗಳು. ಹೊಲಿಗೆ ಉದ್ದಿಮೆಯ ನೌಕರರ ಕನಿಷ್ಠ ವೇತನವು 1986 ಫೆಬ್ರವರಿ 12 ರಿಂದ ಜಾರಿಗೆ ಬಂದಿದ್ದು ಕೊಟ್ಟ ಕೆಲಸದ ವರ್ಗಕ್ಕನುಗುಣವಾಗಿ ಅನುಕ್ರಮವಾಗಿ ಮೊದಲನೇಯ, ಎರಡನೇಯ, ಮೂರನೇಯ ಮತ್ತು ನಾಲ್ಕನೇಯ ವಲಯದಲ್ಲಿ ಕೆಲಸ ಮಾಡುವವರ ದಿನದ ಕನಿಷ್ಠ ವೇತನವು ಈ ರೀತಿ ಇದೆ : ಉನ್ನತ ಪರಿಣತರು 18, 17, 16 ಮತ್ತು 14.50 ರೂ.ಗಳು; ಪರಿಣತರು 17, 16, 15.50 ಮತ್ತು 14 ರೂ.ಗಳು; ಅರೆಪರಿಣತರು 15, 14.50, 14 ಮತ್ತು 12ರೂ.; ಪರಿಣತರಲ್ಲದವರು 14, 12, 11 ಮತ್ತು 10.50 ರೂ.ಗಳು; ಕಚೇರಿ ನೌಕರರು 14.50, 14, 12 ಮತ್ತು 11 ರೂ.ಗಳು.

ರಸ್ತೆ ಮತ್ತು ಕಟ್ಟಡಗಳ ನಿರ್ಮಾಣ ಹಾಗೂ ರಿಪೇರಿ ಮಾಡುವ ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ 1984 ಜೂನ್ 5 ರಿಂದ ನಿಗದಿ ಮಾಡಿರುವ ದಿನದ ಕನಿಷ್ಠ ವೇತನವನ್ನು ಕೆಲಸದ ವರ್ಗಕ್ಕನುಗುಣವಾಗಿ ಅನುಕ್ರಮವಾಗಿ ಮೊದಲನೇಯ, ಎರಡನೇಯ ಮತ್ತು ಮೂರನೇಯ ವಲಯದಲ್ಲಿ ಈ ರೀತಿ ನಿಗದಿಪಡಿಸಲಾಗಿದೆ. ಪರಿಣತರು 16 15 ಮತ್ತು 14 ರೂ.ಗಳು; ಅರೆಪರಿಣತರು 13, 12

ಮತ್ತು 11 ರೂ.ಗಳು; ಪರಿಣತರಲ್ಲದವರು (ಭಾರಿಶ್ರಮ) 10.50, 9.75 ಮತ್ತು 7.75 ರೂ.ಗಳು; ಪರಿಣತರಲ್ಲದವರು (ಲಘುಶ್ರಮ) 8.55, 7.80 ಮತ್ತು 7.80 ರೂ.ಗಳು; ಎತ್ತಿನಗಾಡಿ ಚಾಲಕ 17, 16, ಮತ್ತು 15 ರೂ.ಗಳು; ಪದವೀಧರ ಉದ್ಯೋಗಿಗೆ 16, 16 ಮತ್ತು 16 ರೂ.ಗಳು; ಒಂಟೆತ್ತಿನ ಗಾಡಿ ಹಾಗೂ ಚಾಲಕ 16, 15 ಮತ್ತು 14 ರೂ.ಗಳು, ವಿದ್ಯಾವಂತ ಕೂಲಿಗಾರರಿಗೆ 12, 10 ಮತ್ತು 10 ರೂ.ಗಳು; ಇಂಜಿನಿಯರಿಂಗ್ ಡಿಪ್ಲೋಮದಾರರಿಗೆ 18, 18 ಮತ್ತು 18ರೂ.ಗಳು; ಇಂಜಿನಿಯರಿಂಗ್ ಪದವಿಧರರಿಗೆ 25, 25 ಮತ್ತು 25 ರೂ.ಗಳು; ಕಾವಲುಗಾರರಿಗೆ 9, 8 ಮತ್ತು 8ರೂ.ಗಳು; ಕಸಗುಡಿಸುವವರಿಗೆ 9 8 ಮತ್ತು 8 ರೂ.ಗಳು; ತಿದಿ ಒತ್ತುವವ,ಮುಖ್ಯ ಕಾರ್ಮಿಕ, ನಕಾಶೆ ತಯಾರಕ ಇವರಿಗೆ 11, 10 ಮತ್ತು 9.50 ರೂ.ಗಳು

ಮುದ್ರಣಾಲಯಗಳಿಗೆ ಸಂಬಂಧಿಸಿದ ನೌಕರರಿಗೆ ರಾಜ್ಯ ಸರಕಾರವು ಕನಿಷ್ಠ ದಿನಗೂಲಿ ಹಾಗೂ ಮಾಹೆಯಾನ ವೇತನವನ್ನು 1984 ಮೇ 25 ರಿಂದ ಆಚರಣೆಗೆ ತಂದಿದೆ. ಕೆಲಸದ ವರ್ಗಕ್ಕನುಗುಣವಾಗಿ ಅನುಕ್ರಮವಾಗಿ ಮೊದಲನೇಯ, ಎರಡನೇಯ ಮತ್ತು ಮೂರನೇಯ ವಲಯದಲ್ಲಿ ಈ ರೀತಿ ನಿಗದಿಪಡಿಸಿದೆ. ಪರಿಣತ ಕೆಲಸಗಾರರಿಗೆ ದಿನಕ್ಕೆ 16, 15, 14.25 ರೂ. ಮತ್ತು ತಿಂಗಳಾದರೆ 416, 390 ಮತ್ತು 370.50 ರೂ.ಗಳನ್ನೂ ಅರೆಪರಿಣತ ಕೆಲಸಗಾರರಿಗೆ ದಿನಕ್ಕೆ 14.50, 13.50 ಮತ್ತು 12 ರೂ.ಗಳು, ಮತ್ತು ತಿಂಗಳಿಗಾದರೆ 377, 351 ಮತ್ತು 312 ರೂ.ಗಳನ್ನೂ, ಪರಿಣತರಲ್ಲದವರಿಗೆ ದಿನಕ್ಕೆ 11, 10.20 ಮತ್ತು 9.50 ರೂ.ಗಳನ್ನೂ, ತಿಂಗಳಿಗೆ 285, 265 ಮತ್ತು 247 ರೂ.ಗಳನ್ನೂ, ಕಛೇರಿ ನೌಕರರಿಗೆ (ಗುಮಾಸ್ತ, ಬೆರಳಚ್ಚುಗಾರ) ತಿಂಗಳಿಗೆ 360, 335 ಮತ್ತು 300 ರೂ.ಗಳನ್ನೂ ನಗದೀ ಗುಮಾಸ್ತನಿಗೆ ತಿಂಗಳಿಗೆ 420, 400 ಮತ್ತು 380 ರೂ.ಗಳನ್ನೂ, ಉಗ್ರಾಣ ಮೇಲ್ವಿಚಾರಕರಿಗೆ 370, 346 ಮತ್ತು 335 ರೂ.ಗಳನ್ನು ನಿಗದಿ ಮಾಡಿದೆ.

ಸಿನಿಮಾ ಉದ್ದಿಮೆಯ ಕಾರ್ಮಿಕರ ಮಾಹೆಯಾನ ಕನಿಷ್ಠ ವೇತನವನ್ನು ಸರ್ಕಾರವು 1984ರ ಮೇ 24 ರಿಂದ ಜಾರಿಗೆ ತಂದಿದೆ. ಜನಸಂಖ್ಯೆಗನುಗುಣವಾಗಿ ಐದು ವಲಯಗಳಲ್ಲಿ ಈ ಉದ್ದಿಮೆಯನ್ನು ವಿಂಗಡಿಸಲಾಗಿದ್ದು ಪ್ರತೀ ವಲಯದಲ್ಲೂ (1) ಪ್ರದರ್ಶನ ವಿಭಾಗ (2) ನಿರ್ಮಾಣ ಹಾಗೂ ಹಂಚಿಕೆ ವಿಭಾಗ ಹಾಗೂ (3) ರಾಜ್ಯಕ್ಕೆ ಅನ್ವಯವಾಗುವ ಸ್ಟುಡಿಯೋ ವಿಭಾಗಗಳಿದ್ದು ಅವುಗಳಲ್ಲಿ ಇರುವ ಕಾರ್ಮಿಕರ ಮಾಹೆಯಾನ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆ. ಮೊದಲನೇಯ ವಲಯವು ಪಟ್ಟಣ ಮತ್ತು ನಗರಪಾಲಿಕೆ ವ್ಯಾಪ್ತಿಯನ್ನೂ, ಎರಡನೇಯ ವಲಯವು 1,20,000ಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದವುಗಳಾಗಿದ್ದು ಮೊದಲನೇಯ ವಲಯದಿಂದ ಹೊರತುಪಡಿಸಿ ಪ್ರದೇಶದ ವ್ಯಾಪ್ತಿಯನ್ನೂ, ಮೂರನೇಯ ವಲಯವು 1,20,000ಕ್ಕೂ ಕಡಿಮೆ ಮತ್ತು 40,000ಕ್ಕೂ ಹೆಚ್ಚು ಜನಸಂಖ್ಯೆಯನ್ನೂ ಹೊಂದಿರುವ ಪ್ರದೇಶದ ವ್ಯಾಪ್ತಿಯನ್ನೂ, ನಾಲ್ಕನೇಯ ವಲಯವು 40,000ಕ್ಕೂ ಕಡಿಮೆ ಮತ್ತು 15,000ಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪ್ರದೇಶದ ವ್ಯಾಪ್ತಿಯನ್ನೂ ಮತ್ತು ಐದನೇಯ ವಲಯವು 15,000ಕ್ಕೂ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶದ ವ್ಯಾಪ್ತಿಯನ್ನು ಹೊಂದಿವೆ. ಸಿನಿಮಾ ಉದ್ದಿಮೆಯಲ್ಲಿನ ಪ್ರದರ್ಶನ ವಿಭಾಗವು ಪ್ರತೀ ವಲಯದಲ್ಲಿ ನಾಲ್ಕು ಉದ್ಯೋಗ ವರ್ಗಗಳನ್ನು ಹೊಂದಿದೆ. ಮೊದಲನೇಯ ವಲಯದ ಮೊದಲನೇಯ ವರ್ಗದಲ್ಲಿ ಸಹಾಯಕ ಮ್ಯಾನೇಜರ್, ಮೇಲ್ವಿಚಾರಕ, ಅಕೌಂಟೆಂಟ್, ಮುಖ್ಯ ಆಪರೇಟರ್ ಮೊದಲಾದವರಿದ್ದು ಅವರಿಗೆ ಮಾಹೆಯಾನ ಕನಿಷ್ಠ ವೇತನವು 467.50 ರೂ. ನಿಗದಿ ಮಾಡಲಾಗಿದೆ. ಎರಡನೇಯ ವರ್ಗದಲ್ಲಿ ಕಚೇರಿಯ ಸಹಾಯಕ, ಗುಮಾಸ್ತ ಬೆರಳಚ್ಚುಗಾರರು, ಸಹಾಯಕ ಮೇಲ್ವಿಚಾರಕರು ಮೊದಲಾದವರಿದ್ದು ಅವರಿಗೆ 407.40 ರೂ.ಗಳನ್ನು ನಿಗದಿ ಮಾಡಲಾಗಿದೆ. ಮೂರನೇಯ ವರ್ಗದಲ್ಲಿ ಕಸ ಗುಡಿಸುವವರು, ತೋಟದ ಕೆಲಸಗಾರರು ಸೈಕಲ್ ಸ್ಟ್ಯಾಂಡ್ ಮೇಲ್ವಿಚಾರಕರು ಮೊದಲಾದವರಿದ್ದು ಅವರಿಗೆ ಮಾಹೆಯಾನ 381.85 ರೂ.ಗಳನ್ನು ನಿಗದಿ ಪಡಿಸಲಾಗಿದೆ. ಮುಂದಿನ ವಲಯಗಳಲ್ಲೂ (ಎರಡರಿಂದ ಐದು) ಮೊದಲನೇಯ ವರ್ಗದಿಂದ ನಾಲ್ಕನೇಯ ವರ್ಗದವರೆಗೆ ಅನುಕ್ರಮವಾಗಿ ಮೊದಲನೇಯ ವಲಯದಲ್ಲಿರುವಂತೆ ಉದ್ಯೋಗ ವರ್ಗಗಳಿರುವುವು. ಎರಡನೇಯ ವಲಯದ ಮೊದಲನೇಯ ವರ್ಗಕ್ಕೆ ಮಾಹೆಯಾನ 440.45 ರೂ.ಗಳನ್ನು ಎರಡನೇಯ ವರ್ಗಕ್ಕೆ 397.55 ರೂ.ಗಳನ್ನು, ಮೂರನೇಯ ವರ್ಗಕ್ಕೆ 381.85 ರೂ.ಗಳನ್ನು ಮತ್ತು ನಾಲ್ಕನೇಯ ವರ್ಗಕ್ಕೆ 368.95 ರೂ.ಗಳನ್ನು ನಿಗದಿಪಡಿಸಿದೆ. ಮೂರನೇಯ ವಲಯದ ಮೊದಲನೇಯ ವರ್ಗಕ್ಕೆ 417.55 ರೂ.ಗಳನ್ನು, ಎರಡನೇಯ ವರ್ಗಕ್ಕೆ 381.85 ರೂ.ಗಳನ್ನು, ಮೂರನೇಯ ವರ್ಗಕ್ಕೆ 368.95 ರೂ.ಗಳನ್ನು ಮತ್ತು ನಾಲ್ಕನೇಯ ವರ್ಗಕ್ಕೆ 319.80 ರೂ.ಗಳನ್ನು ನಿಗದಿಪಡಿಸಲಾಗಿದೆ. ನಾಲ್ಕನೇಯ ವಲಯದ ಮೊದಲ ವರ್ಗಕ್ಕೆ 407.40 ರೂ.ಗಳನ್ನು,

ಎರಡನೇಯ ವರ್ಗಕ್ಕೆ 368.95 ರೂ.ಗಳನ್ನು ಮೂರನೇಯ ವರ್ಗಕ್ಕೆ 319.80 ರೂ.ಗಳನ್ನು ಮತ್ತು ನಾಲ್ಕನೇಯ ವರ್ಗಕ್ಕೆ 291.70 ರೂ.ಗಳನ್ನು ನಿಗದಿಪಡಿಸಿದೆ. ಐದನೇಯ ವಲಯದ ಮೊದಲನೇಯ ವರ್ಗಕ್ಕೆ 397.55 ರೂ.ಗಳನ್ನು, ಎರಡನೇಯ ವರ್ಗಕ್ಕೆ 319.80 ರೂ.ಗಳನ್ನು, ಮೂರನೇಯ ವರ್ಗಕ್ಕೆ 291.70 ರೂ.ಗಳನ್ನು ಮತ್ತು ನಾಲ್ಕನೇಯ ವರ್ಗಕ್ಕೆ 268.90 ರೂ.ಗಳನ್ನು ನಿಗದಿಪಡಿಸಿದೆ.

ಬೀಡಿ, ತಂಬಾಕು

ಬೀಡಿ ಸುತ್ತುವುದೂ ಸೇರಿದಂತೆ ಇರುವ ತಂಬಾಕು ಉದ್ಯಮಕ್ಕೆ ರಾಜ್ಯ ಸರಕಾರವು 1986 ಜುಲೈ 25 ರಿಂದ ಅನುಷ್ಠಾನಕ್ಕೆ ಬರುವಂತೆ ಕನಿಷ್ಠ ವೇತನವನ್ನು ನಿಗದಿ ಮಾಡಿದೆ. ಬೀಡಿ ಸುತ್ತುವವರಿಗೆ ಒಂದು ಸಾವಿರ ಬೀಡಿಗೆ 11.50 ರೂ.ಗಳು, ಬೀಡಿ ರ್‍ಯಾಪರ್ಸ್‌ಗೆ ಒಂದು ಲಕ್ಷ ಬೀಡಿಗೆ 25 ರೂ.ಗಳು ಅಥವಾ ಒಂದು ತಿಂಗಳಿಗೆ 292.50 ರೂ.ಗನ್ನು, ಹೊಗೆಸೊಪ್ಪನ್ನು ಮಿಶ್ರಣ ಮಾಡುವವರಿಗೆ ಮತ್ತು ಹಂಚಿಕೆ ಮಾಡುವವರು ಮೊದಲಾದವರಿಗೆ ಎಲ್ಲ ಪ್ರದೇಶಗಳಲ್ಲಿ ತಿಂಗಳಿಗೆ 292.50 ರೂ.ಗಳು, ಟ್ರಕ್ಕು, ವ್ಯಾನು, ಕಾರು ಚಾಲಕರಿಗೆ ತಿಂಗಳಿಗೆ 451.50 ರೂ.ಗಳು ಮೊದಲ ದರ್ಜೆ ಗುಮಾಸ್ತರಿಗೆ ತಿಂಗಳಿಗೆ 499.50 ರೂ.ಗಳು ಎರಡನೇಯ ದರ್ಜೆ ಗುಮಾಸ್ತರಿಗೆ ತಿಂಗಳಿಗೆ 451.50 ರೂ.ಗಳು ಮತ್ತು ಲಾರಿಗೆ ಹೇರುವವರಿಗೆ ಮತ್ತು ಲಾರಿಯಿಂದ ಇಳಿಸುವವರಿಗೆ ದಿನಕ್ಕೆ 12 ರೂ.ಗಳನ್ನು ಗೊತ್ತುಪಡಿಸಿದೆ. ಹೊಗೆಸೊಪ್ಪು ಕಂಪನಿಯಲ್ಲಿ ಹೊಗೆಸೊಪ್ಪು ಕೆಲಸಗಾರರಿಗೆ ದಿನಕ್ಕೆ 12 ರೂ.ಗಳನ್ನು, ಚೀಲ ತುಂಬುವವರಿಗೆ, ಚೀಲಕ್ಕೆ 50 ಕಿ.ಗ್ರಾಂ. ತುಂಬುವುದಕ್ಕೆ 1 ರೂ. ಅಥವಾ ತಿಂಗಳಿಗೆ 292.50 ರೂ.ಗಳನ್ನು, ವಾಹನ ಚಾಲಕರಿಗೆ ತಿಂಗಳಿಗೆ 451.50 ರೂ.ಗಳನ್ನು ಮೊದಲನೇಯ ದರ್ಜೆ ಗುಮಾಸ್ತರಿಗೆ ತಿಂಗಳಿಗೆ 451.50 ರೂ.ಗಳನ್ನು ಮತ್ತು ಎರಡನೇಯ ದರ್ಜೆ ಗುಮಾಸ್ತರಿಗೆ ತಿಂಗಳಿಗೆ 451.50 ರೂ.ಗಳನ್ನು ಗೊತ್ತುಪಡಿಸಿದೆ. ನಶ್ಯದ ಉದ್ದಿಮೆಯಲ್ಲಿ 1½ ಕಿ.ಗ್ರಾಂ. ನಶ್ಯವನ್ನು ತುಂಬುವುದೂ ಸೇರಿದಂತೆ ಐದು ವರ್ಗಗಳಿದ್ದು ಅವರಿಗೆ ದಿನಕ್ಕೆ 7.50 ರೂ.ಗಳಿಂದ 65 ರೂ.ಗಳವರೆಗೆ ಕನಿಷ್ಠ ವೇತನವನ್ನು ನಿಗದಿ ಮಾಡಿದೆ; ಜರ್ದಾ ಉದ್ದಿಮೆಯಲ್ಲಿ ಸಾಮಾನ್ಯ ಕೆಲಸಗಾರರಿಗೆ ದಿನಕ್ಕೆ 11.50 ರೂ.ಗಳನ್ನು, ಉಳಿದ ಪ್ಯಾಕರ್ಸ್, ಚಾಲಕರು, ಮೊದಲನೇ ಮತ್ತು ಎರಡನೇ ದರ್ಜೆ ಗುಮಾಸ್ತರುಗಳಿಗೆ ಅನುಕ್ರಮವಾಗಿ ತಿಂಗಳಿಗೆ ರೂ. 292.50, 499.50 ಮತ್ತು 451.50 ರೂ.ಗಳನ್ನು ಕನಿಷ್ಠ ವೇತನವೆಂದು ನಿಗದಿಮಾಡಿದೆ. 1960 ನೇಯ ಇಸವಿಯನ್ನು ಮೂಲವಾಗಿಟ್ಟುಕೊಂಡು (1960–100) ರಾಜ್ಯದ ಸರಾಸರಿ ಬಳಕೆದಾರರ ಬೆಲೆಯ ಸೂಚ್ಯಂಕ ಅಂಶವು ಅಧಿಕಗೊಂಡಾಗ ಪ್ರತೀ 85 ಅಂಶಕ್ಕೆ ಒಂದು ದಿನಕ್ಕೆ 2 ಪೈಸೆಯಂತೆ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

ಸಾರಿಗೆ

ಸಾರ್ವಜನಿಕ ಮೋಟಾರು ಸಾರಿಗೆ ಉದ್ದಿಮೆಗೆ ಸರ್ಕಾರವು 1984ರ ಮೇ 24ನೇ ದಿನಾಂಕದಿಂದ ಅನುಷ್ಠಾನಕ್ಕೆ ಬರುವಂತೆ ಕನಿಷ್ಠ ವೇತನವನ್ನು ನಿಗದಿಪಡಿಸಿದೆ. ಚಾಲಕ ವರ್ಗದಲ್ಲಿರುವ ವಾಹನ ಚಾಲಕರು ಮತ್ತು ನಿರ್ವಾಹಕರು (ಕಂಡಕ್ಟರ್ಸ್) ತಿಂಗಳಿಗೆ 390 ರೂ.ಗಳನ್ನು, ಲಾರಿ ಕ್ಲೀನರ್‌ಗಳಿಗೆ 300 ರೂ.ಗಳನ್ನು, ತಪಾಸಣಾ ಇನ್ಸ್‌ಪೆಕ್ಟರ್‌ಗಳು, ಟ್ರಾಫಿಕ್ ಮೇಲ್ವಿಚಾರಕರಿಗೆ 420 ರೂ.ಗಳನ್ನು ನಿಗದಿಪಡಿಸಿದೆ. ಕಚೇರಿ ಕೆಲಸ ವರ್ಗದಲ್ಲಿನ ಅಕೌಂಟೆಂಟ್ ಮತ್ತು ಕ್ಯಾಷಿಯರ್‌ಗಳಿಗೆ 420 ರೂ.ಗಳನ್ನು, ಗುಮಾಸ್ತರು ಬುಕ್ಕಿಂಗ್ ಏಜಂಟರು, ಸಹಾಯಕ ಕ್ಯಾಷಿಯರುಗಳಿಗೆ 390 ರೂ.ಗಳನ್ನು ಮತ್ತು ಟೈಂ ಕೀಪರ್‌ಗೆ 360 ರೂ.ಗಳನ್ನು ಮಾಸಿಕ ಕನಿಷ್ಠ ವೇತನವೆಂದು ನಿಗದಿಪಡಿಸಿದೆ. ವರ್ಕ್‌ಷಾಪ್‌ನಲ್ಲಿ 24 ಕೆಲಸದ ವರ್ಗಗಳಿವೆ : ಇವರಲ್ಲಿ ಕ್ಲೀನರ್ಸ್‌ಗೆ ತಿಂಗಳಿಗೆ 300 ರೂ.ಗಳನ್ನು, ವಿವಿಧ ಕೀಲೆಣ್ಣೆ ಹಾಕುವವರು, ಕಾವಲುಗಾರರು, ಜವಾನರುಗಳಿಗೆ 270 ರೂ.ಗಳನ್ನು ಫಿಟ್ಟರ್ಸ್ ಮತ್ತು ಆಟೋಫಿಟ್ಟರ್ಸ್‌ಗಳಿಗೆ 375 ರೂ.ಗಳನ್ನು ಹ್ಯಾಮರ್‌ಮೆನ್ ಮತ್ತು ಸಹಾಯಕ ಕರ್ಮಚಾರಿಗಳಿಗೆ 330 ರೂ.ಗಳನ್ನು, ಸಹಾಯಕ ಮೆಕ್ಯಾನಿಕ್, ಪೆಯಿಂಟರ್, ಇಲೆಕ್ಟ್ರೀಷಿಯನ್, ಬ್ಯಾಟರಿಮ್ಯಾನ್, ಮೊದಲಾದವರಿಗೆ 420 ರೂ.ಗಳನ್ನು, ಕಮ್ಮಾರರು, ಬೆಸುಗೆಗಾರರು ಮತ್ತು 'ಎ' ವರ್ಜೆಯ ಕರ್ಮಚಾರಿಗಳಿಗೆ ತಿಂಗಳಿಗೆ 430 ರೂ.ಗಳು ಕನಿಷ್ಠ ವೇತನವಿರಬೇಕೆಂದು ಗೊತ್ತುಪಡಿಸಿದೆ. ಈ ಮೂಲ ವೇತನದ ಜೊತೆಗೆ ಸೂಚ್ಯಂಕ ಬೆಲೆ ಆಧಾರದ ಮೇಲೆ ತುಟ್ಟಿ ಭತ್ಯವನ್ನು ಕೊಡಬೇಕಾಗುತ್ತದೆ.

ಆರೋಗ್ಯ ಸೇವೆ

ಆಸ್ಪತ್ರೆ ಮತ್ತು ಶುಶ್ರೂಷಾ ಗೃಹಗಳಲ್ಲಿ ಕೆಲಸ ಮಾಡುವವರಿಗೆ ಸರ್ಕಾರವು 1987 ಅಕ್ಟೋಬರ್ 26 ರಿಂದ ಜಾರಿಗೆ ಬರುವಂತೆ ಕನಿಷ್ಠ ಮಾಸಿಕ ವೇತನವನ್ನು ಗೊತ್ತುಪಡಿಸಿದೆ. ಈ ವಿಭಾಗದಲ್ಲಿ ಎರಡು ವಲಯಗಳಿದ್ದು ಕನಿಷ್ಠ ವೇತನ ಪ್ರತ್ಯೇಕವಾಗಿ ನಿಗದಿ ಮಾಡಲ್ಪಟ್ಟಿದೆ. ಮೊದಲನೇಯ ವಲಯವು ಸಿಟಿ ಮತ್ತು ಜಿಲ್ಲಾ ಕೇಂದ್ರಗಳ ವ್ಯಾಪ್ತಿಯನ್ನು

ಒಳಗೊಂಡಿವೆ. ಎರಡನೇಯ ವಲಯುವು ಮೊದಲನೇಯ ವಲಯುಕ್ಕೊಳಪಡದ ಎಲ್ಲಾ ಪ್ರದೇಶದ ವ್ಯಾಪ್ತಿಯನ್ನೊಳಗೊಂಡಿದೆ. ಕೆಲಸದ ವರ್ಗಕ್ಕೆ ಸಂಬಂಧಿಸಿದಂತೆ 10 ಗುಂಪುಗಳಿವೆ. ಪ್ರತೀ ಗುಂಪಿನ ಮಾಸಿಕ ಕನಿಷ್ಠ ವೇತನವನ್ನು ಅನುಕ್ರಮವಾಗಿ ಮೊದಲನೇಯ ಮತ್ತು ಎರಡನೇ ವಲಯಕ್ಕೆ ಅನ್ವಯವಾಗುವಂತೆ ಈ ಕೆಳಗೆ ವಿವರಿಸಲಾಗಿದೆ : ಮೊದಲನೇಯ ಗುಂಪಿನಲ್ಲಿ ಮೂರು ಕೆಲಸದ ವರ್ಗಗಳಿದ್ದು ಅವರೆಲ್ಲರುಗಳಿಗೆ 1,262 ಮತ್ತು 1,136 ರೂ.ಗಳನ್ನು, ಎರಡನೇಯ ಗುಂಪಿನಲ್ಲಿ 9 ಕೆಲಸ ವರ್ಗಗಳಿದ್ದು ಅವರೆಲ್ಲರಿಗೂ ತಿಂಗಳಿಗೆ 1,073 ಮತ್ತು 947 ರೂ.ಗಳನ್ನು; ಮೂರನೇಯ ಗುಂಪಿನಲ್ಲಿ 4 ಕೆಲಸದ ವರ್ಗಗಳಿದ್ದು ಅವರೆಲ್ಲರಿಗೂ ತಿಂಗಳಿಗೆ 1,010 ರೂ.ಗಳನ್ನು ಮತ್ತು 884 ರೂ.ಗಳನ್ನು, ನಾಲ್ಕನೇಯ ಗುಂಪಿನಲ್ಲಿ 12 ಕೆಲಸದ ಸಮೂಹಗಳಿದ್ದು ಅವರೆಲ್ಲರಿಗೂ ತಿಂಗಳಿಗೆ 884 ಮತ್ತು 758 ರೂ.ಗಳನ್ನು ; ಐದನೇಯು ಗುಂಪಿನಲ್ಲಿ ನಾಲ್ಕು ಕೆಲಸದ ವರ್ಗಗಳಿದ್ದು ಅವರೆಲ್ಲರಿಗೂ ತಿಂಗಳಿಗೆ 821 ಮತ್ತು 758 ರೂ.ಗಳನ್ನು ; ಆರನೇಯ ಗುಂಪಿನಲ್ಲಿ ಐದು ಕೆಲಸದ ಸಮೂಹಗಳಿದ್ದು ತಿಂಗಳಿಗೆ 758 ಮತ್ತು 695 ರೂ.ಗಳನ್ನು ; ಏಳನೇಯು ಗುಂಪಿನಲ್ಲಿ ಎಂಟು ಕೆಲಸದ ವರ್ಗಗಳಿದ್ದು ಅವರೆಲ್ಲರಿಗೂ ತಿಂಗಳಿಗೆ 695 ಮತ್ತು 663 ರೂ.ಗಳನ್ನು ; ಎಂಟನೇಯು ಗುಂಪಿನಲ್ಲಿ 12 ಕೆಲಸದ ಸಮೂಹಗಳಿದ್ದು ಅವರೆಲ್ಲರಿಗೂ ತಿಂಗಳಿಗೆ 632 ಮತ್ತು 569 ರೂ.ಗಳನ್ನು ; ಒಂಬತ್ತನೇಯ ಗುಂಪಿನಲ್ಲಿ ಆರು ಕೆಲಸದ ವರ್ಗಗಳಿದ್ದು ಅವರೆಲ್ಲರಿಗೂ ತಿಂಗಳಿಗೆ 569 ಮತ್ತು 537 ರೂ.ಗಳನ್ನು ; ಹಾಗೂ ಹತ್ತನೇ ಗುಂಪಿನಲ್ಲಿ ಎಂಟು ಕೆಲಸದ ವರ್ಗಗಳಿದ್ದು ಅವರೆಲ್ಲರಿಗೂ 540 ಮತ್ತು 500 ರೂ.ಗಳನ್ನು ಕನಿಷ್ಠ ಮೂಲ ವೇತನವನ್ನಾಗಿ ನೀಡಬೇಕೆಂದು ನಿರ್ಧರಿಸಲಾಗಿದೆ. ಇವುಗಳ ಜೊತೆಗೆ ರಾಜ್ಯ ಸರಾಸರಿ ಬಳಕೆದಾರರ ಬೆಲೆಯ ಸೂಚ್ಯಂಕವು 700 ಅಂಶಗಳನ್ನು ಮೀರಿದಾಗ ಪ್ರತೀ ಐದು ಅಂಶಕ್ಕೆ ತುಟ್ಟಿಭತ್ಯವನ್ನು ಸೇರಿಸಿ ಕೊಡಬೇಕಾಗುತ್ತದೆ.

ಕ್ಲಬ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ 1987 ಅಕ್ಟೋಬರ್ 26 ರಿಂದ ಜಾರಿಗೆ ಬರುವಂತೆ ರಾಜ್ಯ ಸರಕಾರವು ಕನಿಷ್ಠ ಮಾಸಿಕ ವೇತನವನ್ನು ನಿಗದಿಪಡಿಸಿದೆ. ಇದರ ಮೊದಲನೇಯ ಗುಂಪಿನಲ್ಲಿ ಬರುವ ಮ್ಯಾನೇಜರ್‌ಗಳಿಗೆ ತಿಂಗಳಿಗೆ 777 ರೂ.; ಎರಡನೇಯ ಗುಂಪಿನಲ್ಲಿ ಬರುವ ಸಹಾಯಕ ಮ್ಯಾನೇಜರರು ಸೇರಿ ಆರು ಕೆಲಸದ ವರ್ಗದವರಿಗೆ 602 ರೂ.; ಮೂರನೇಯ ಗುಂಪಿನಲ್ಲಿ ಬರುವ ಗುಮಾಸ್ತ ಬೆರಳಚ್ಚುಗಾರರು ಸೇರಿ ಆರು ಕೆಲಸದ ವರ್ಗದವರಿಗೆ 510 ರೂ. ಮತ್ತು ನಾಲ್ಕನೇಯು ಗುಂಪಿನಲ್ಲಿ ಬರುವ ಕಾವಲುಗಾರರು ಸೇರಿ ಆರು ಕೆಲಸದ ವರ್ಗಕ್ಕೆ 494 ರೂ. ಕನಿಷ್ಠ ವೇತನವಾಗಿ ಕೊಡಬೇಕೆಂದು ನಿಗದಿಪಡಿಸಿದೆ. ಇದರ ಜೊತೆಗೆ ಬಳಕೆದಾರರ ಸೂಚ್ಯಂಕ ಬೆಲೆಯು 620 ಅಂಶಗಳನ್ನು ದಾಟಿದರೆ ಪ್ರತಿಯೊಂದಕ್ಕೂ ಐದು ಅಂಶಗಳಂತೆ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

## ಬೇಕರಿ

ಬೇಕರಿಗಳಲ್ಲಿ ಕೆಲಸ ಮಾಡುವ ಕೆಲಸದ ವರ್ಗಗಳಿಗೆ ರಾಜ್ಯ ಸರಕಾರವು 1987 ಅಕ್ಟೋಬರ್ 26 ರಿಂದ ಜಾರಿಗೆ ಬರುವಂತೆ ಕನಿಷ್ಠ ಮೂಲ ವೇತನವನ್ನು ನಿಗದಿ ಪಡಿಸಿದೆ. ಇದರಲ್ಲಿ ಮೂರು ವಲಯುಗಳಿವೆ. ಮೊದಲನೇಯ ವಲಯದಲ್ಲಿ ಸಿಟಿ ಕಾರ್ಪೊರೇಷನ್ ಪ್ರದೇಶವೂ ಎರಡನೇ ವಲಯದಲ್ಲಿ ಜಿಲ್ಲಾ ಕೇಂದ್ರ ಪ್ರದೇಶಗಳೂ ಮತ್ತು ಮೂರನೇಯ ವಲಯದಲ್ಲಿ ಮೇಲಿನ ಎರಡು ವಲಯಗಳಲ್ಲೂ ಬಾರದಿರುವ ಸ್ಥಳಗಳೂ ಸೇರುತ್ತವೆ. ಕೆಲಸದ ವರ್ಗಕ್ಕನುಗುಣದಾಗಿ ಅನುಕ್ರಮವಾಗಿ ಮೊದಲ, ಎರಡನೇಯ ಮತ್ತು ಮೂರನೇಯ ವಲಯಕ್ಕೆ ನಿಗದಿ ಪಡಿಸಿರುವ ಮಾಸಿಕ ಕನಿಷ್ಠ ಮೂಲ ವೇತನವನ್ನು ಇಲ್ಲಿ ಕೊಡಲಾಗಿದೆ. ಹಿಟ್ಟು ಕಲಸುವವರಿಗೆ 550, 500 ಮತ್ತು 450 ರೂ.ಗಳು, ಹಿಟ್ಟು ಕಲಸುವ ಸಹಾಯಕರಿಗೆ ಹಾಗೂ ಬೇಯಿಸುವವರಿಗೆ 453, 428 ಮತ್ತು 403 ರೂ.ಗಳು, ಸಹಾಯಕರಿಗೆ 363, 343 ಮತ್ತು 325 ರೂ.ಗಳು, ಮ್ಯಾನೇಜರ್‌ಗೆ 600, 550 ಮತ್ತು 500 ರೂ.ಗಳು, ಗುಮಾಸ್ತರಿಗೆ 478, 428 ಮತ್ತು 403 ರೂ.ಗಳು, ಜವಾನರು, ಕಾವಲುಗಾರರು ಮೊದಲಾದವರಿಗೆ 363, 343 ಮತ್ತು 325 ರೂ.ಗಳು, ಕನಿಷ್ಠ ಮೂಲ ವೇತನವಿರಬೇಕು. ಈ ಮೂಲವೇತನದ ಜೊತೆಗೆ ಬಳಕೆದಾರರ ಸೂಚ್ಯಂಕ ಬೆಲೆಯು 650 ಅಂಶಗಳನ್ನು ಮೀರಿದಾಗ ಐದು ಅಂಶಗಳಂತೆ ಲೆಕ್ಕ ಹಾಕಿ ತುಟ್ಟಿ ಭತ್ಯವನ್ನು ಕೊಡಬೇಕಾಗುತ್ತದೆ.

ಸಿಹಿ ತಿನಿಸು ಉತ್ಪಾದಿಸುವ ಕೆಲಸಗಾರರಿಗೆ ರಾಜ್ಯ ಸರಕಾರವು 1987 ಅಕ್ಟೋಬರ್ 26 ರಿಂದ ಜಾರಿಯಾಗುವಂತೆ ಕನಿಷ್ಠ ವೇತನವನ್ನು ನಿಗದಿಪಡಿಸಿದೆ. ಇದರಲ್ಲಿ ಮೂರು ವಲಯುಗಳಿದ್ದು ಮೇಲಿನ ಉದ್ದಿಮೆಯಲ್ಲಿ ಹೇಳಿರುವ ಸ್ಥಳ ವ್ಯಾಪ್ತಿಯನ್ನೇ ಹೊಂದಿದೆ. ಕೆಲಸದ ವರ್ಗಕ್ಕನುಗುಣವಾಗಿ ಅನುಕ್ರಮವಾಗಿ ಮೊದಲ, ಎರಡನೇಯ ಮತ್ತು ಮೂರನೇಯ ವಲಯುಗಳಿಗೆ ನಿಗದಿಪಡಿಸಿರುವ ಮಾಸಿಕ ಕನಿಷ್ಠ ಮೂಲ ವೇತನವನ್ನು ಈ ಕೆಳಗೆ ವಿವರಿಸಲಾಗಿದೆ.

ಸಿಹಿತಿನಿಸು ಮಾಡುವವರಿಗೆ ತಿಂಗಳ ಕನಿಷ್ಟ ವೇತನ 550 500 ಮತ್ತು 450 ರೂ.ಗಳು; ಸಹಾಯಕ ಸಿಹಿತಿನಿಸು ಮಾಡುವವರಿಗೆ ತಿಂಗಳ ಕನಿಷ್ಠ ವೇತನ 453, 428 ಮತ್ತು 403 ರೂ.ಗಳು; ಮ್ಯಾನೇಜರ್‌ಗಳಿಗೆ 600, 550 ಮತ್ತು 500 ರೂ.ಗಳು; ಗುಮಾಸ್ತರಿಗೆ 478, 428 ಮತ್ತು 403 ರೂ.ಗಳು; ಜವಾನ ಮತ್ತು ಕಾವಲುಗಾರರಿಗೆ 363, 343 ಮತ್ತು 325 ರೂ.ಗಳನ್ನು ನಿಗದಿಪಡಿಸಿದೆ. ಇವುಗಳ ಜೊತೆಗೆ ಬಳಕೆದಾರರ ಸೂಚ್ಯಂಕ ಬೆಲೆಗಳ ಹೆಚ್ಚಳಕ್ಕನುಗುಣವಾಗಿ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

ಕಲ್ಲುಗಣಿ

ಕಲ್ಲು ಒಡೆಯುವ ಮತ್ತು ಜೆಲ್ಲಿ ಮಾಡುವ ಉದ್ಯಮಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರವು 1984 ಮೇ 24 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ನಿಗದಿ ಮಾಡಿದೆ. ಈ ಉದ್ದಿಮೆಯಲ್ಲಿ 10 ಕೆಲಸದ ವರ್ಗಗಳಿವೆ. ಇವುಗಳಿಗೆ ದಿನಕ್ಕೆ ರೂ. 9.50 ರಿಂದ 15 ರೂ. ವರೆಗೂ ಕನಿಷ್ಟ ಕೂಲಿ ಇರುವಂತೆ ನಿಗದಿಪಡಿಸಿದೆ. ಇವುಗಳ ಜೊತೆಗೆ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ. ಗಣಿಗಳಲ್ಲಿ ಕಲ್ಲು ಒಡೆಯುವ ಮತ್ತು ಜೆಲ್ಲಿ ಮಾಡುವ ಉದ್ದಿಮೆಯಲ್ಲಿ 12 ಪ್ರಮುಖ ಕಾರ್ಮಿಕ ವರ್ಗಗಳಲ್ಲಿ 23 ಪೂರಕ ವರ್ಗಗಳಿದ್ದು ಪ್ರತೀಯೊಂದಕ್ಕೂ ಕನಿಷ್ಠ ದಿನಗೂಲಿ ಮತ್ತು ತಿಂಗಳ ಸಂಬಳವನ್ನು ಗೊತ್ತುಪಡಿಸಲಾಗಿದೆ. ದಿನಗೂಲಿಯು ರೂ. 9.50 ರಿಂದ ರೂ. 14.25ರ ವರೆಗೂ, ತಿಂಗಳ ಸಂಬಳವು ರೂ. 247 ರಿಂದ 370ರ ವರೆಗೂ ಇರುವಂತೆ ನಿಗದಿಪಡಿಸಿದೆ. ಇವುಗಳ ಜೊತೆಗೆ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

ಪ್ಲೈವುಡ್ (ಪದರು ಹಲಗೆ) ಉದ್ದಿಮೆಗೆ ಸಂಬಂಧಿಸಿದ ಕಾರ್ಮಿಕ ವರ್ಗದವರಿಗೆ ಕನಿಷ್ಠ ವೇತನವು 1984 ಮೇ 24 ರಿಂದ ಜಾರಿಗೆ ಬರುವಂತೆ ನಿಗದಿಪಡಿಸಲಾಗಿದೆ. ಈ ಉದ್ದಿಮೆಯಲ್ಲಿ ಬರುವ ಪರಿಣತರಲ್ಲದ ಕಾರ್ಮಿಕರ ಗುಂಪಿನಲ್ಲಿ ನಾಲ್ಕು ಕಾರ್ಮಿಕ ವರ್ಗಗಳಿದ್ದು ಇವರಿಗೆ ದಿನಕ್ಕೆ 10.50 ರೂ.ಗಳನ್ನು ಅಥವಾ ತಿಂಗಳಿಗೆ 237 ರೂ.ಗಳನ್ನು ನಿಗದಿ ಪಡಿಸಿದೆ. ಅರೆಪರಿಣತ ಕಾರ್ಮಿಕರ ಗುಂಪಿನಲ್ಲಿ 17 ಕಾರ್ಮಿಕ ವರ್ಗಗಳಿದ್ದು ಇವರುಗಳಿಗೆ ದಿನಕ್ಕೆ 12.50 ರೂ.ಗಳು ಮತ್ತು ತಿಂಗಳಿಗೆ 325 ರೂ.ಗಳನ್ನು ಗೊತ್ತುಪಡಿಸಿದೆ. ಪರಿಣತರ ಗುಂಪಿನಲ್ಲಿ ನಾಲ್ಕು ಕಾರ್ಮಿಕ ವರ್ಗಗಳಿದ್ದು ಇವರುಗಳಿಗೆ ದಿನಕ್ಕೆ 14.50 ರೂ.ಗಳನ್ನು ಹಾಗೂ ತಿಂಗಳಿಗೆ 377 ರೂ.ಗಳನ್ನು ಗೊತ್ತುಪಡಿಸಿದೆ. ಉನ್ನತ ಪರಿಣತರ ಗುಂಪಿನಲ್ಲಿ 9 ಕಾರ್ಮಿಕ ಪಂಗಡಗಳಿದ್ದು ಇವರುಗಳಿಗೆ ದಿನಕ್ಕೆ 15 ರೂ.ಗಳನ್ನು ಮತ್ತು ತಿಂಗಳಿಗೆ 390 ರೂ.ಗಳನ್ನು ನಿಗದಿ ಪಡಿಸಿದೆ. ಕಚೇರಿಯ ಉದ್ಯೋಗಿಗಳ ಗುಂಪಿನಲ್ಲಿ ಬರುವ ಅಕೌಂಟೆಂಟ್‌ರಿಗೆ ದಿನಕ್ಕೆ 15 ರೂ.ಗಳನ್ನು ಹಾಗೂ ತಿಂಗಳಿಗೆ 390 ರೂ.ಗಳನ್ನು; ಗುಮಾಸ್ತರು, ಬೆರಳಚ್ಚುಗಾರರಿಗೆ ದಿನಕ್ಕೆ 12.50 ರೂ.ಗಳನ್ನು ಮತ್ತು ತಿಂಗಳಿಗೆ 325 ರೂ.ಗಳನ್ನು ನಿಗದಿ ಪಡಿಸಿದೆ. ಇತರರ ಗುಂಪಿನಲ್ಲಿ ಮೂರು ಕಾರ್ಮಿಕ ವರ್ಗಗಳಿದ್ದು ಅವರುಗಳಿಗೆ ದಿನಕ್ಕೆ 10.50 ರೂ.ಗಳನ್ನು ಮತ್ತು ತಿಂಗಳಿಗೆ 273 ರೂ.ಗಳನ್ನು ನಿಗದಿಪಡಿಸಿದೆ. ಇವರುಗಳ ಜೊತೆಗೆ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

ಮರಗೆಲಸದ ಗಿರಣಿ

ಮರಗೆಲಸ ಮತ್ತು ಸಾಮಿಲ್ ಉದ್ದಿಮೆಗಳ ಕಾರ್ಮಿಕ ವರ್ಗದವರಿಗೆ 1984 ನವೆಂಬರ್ 9ನೇ ದಿನಾಂಕದಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ಗೊತ್ತುಪಡಿಸಲಾಗಿದೆ. ಈ ಉದ್ದಿಮೆಯಲ್ಲಿ ಮೂರು ವಲಯಗಳಿದ್ದು ಮೊದಲ ವಲಯಕ್ಕೆ ಸಿಟಿ ಮತ್ತು ಕಾರ್ಪೊರೇಷನ್‌ಗಳಿರುವ ಪ್ರದೇಶವೂ, ಎರಡನೇಯ ವಲಯಕ್ಕೆ ಸಿಟಿ ಮುನಿಸಿಪಾಲಿಟಿ ಇರುವ ಪ್ರದೇಶವೂ ಮತ್ತು ಮೂರನೇಯ ವಲಯಕ್ಕೆ ಈ ಎರಡೂ ವಲಯಗಳಲ್ಲಿ ಬರದಿರುವ ಸ್ಥಳಗಳೂ ಸೇರುತ್ತವೆ. ಮರಗೆಲಸ ಉದ್ದಿಮೆಯಲ್ಲಿನ ಕಲಿಕೆದಾರರು ಹಾಗೂ ಶ್ರಮಜೀವಿಗಳಿಗೆ ವಲಯಕ್ಕನುಕ್ರಮವಾಗಿ ದಿನಕ್ಕೆ 11, 10.20 ಮತ್ತು 9.50 ರೂ.ಗಳನ್ನು ಇಲ್ಲವೇ ತಿಂಗಳಿಗೆ 335, 285 ಮತ್ತು 265 ರೂ.ಗಳನ್ನು ಗೊತ್ತುಪಡಿಸಿದೆ. ಪರಿಣತರಿಗೆ ದಿನಕ್ಕೆ 14.50, 14 ಮತ್ತು 13.50 ರೂ.ಗಳನ್ನೂ, ಹಾಗೂ ತಿಂಗಳಿಗೆ 377, 364 ಮತ್ತು 351 ರೂ.ಗಳನ್ನು ನಿಗದಿ ಪಡಿಸಿದೆ. ಅತ್ಯುನ್ನತ ಪರಿಣತರಿಗೆ ದಿನಕ್ಕೆ 15, 14.50 ಮತ್ತು 14 ರೂ.ಗಳನ್ನು ಅಥವಾ ತಿಂಗಳಿಗೆ 390 377 ಮತ್ತು 364 ರೂ.ಗಳನ್ನು ನಿಗದಿಮಾಡಿದೆ. ಸಾಮಿಲ್ಲಿನ ವ್ಯಾಪ್ತಿಯಲ್ಲಿ ಬರುವ ಗುಮಾಸ್ತರುಗಳಿಗೆ ದಿನಕ್ಕೆ 12.90, 11 ಮತ್ತು 10 ರೂ.ಗಳನ್ನು ಇಲ್ಲವೆ ತಿಂಗಳಿಗೆ 335, 285 ಮತ್ತು 265 ರೂ.ಗಳನ್ನು ಗೊತ್ತುಪಡಿಸಿದೆ. ಜವಾನರು ಮತ್ತು ಹಮಾಲಿಗಳಿಗೆ ದಿನಕ್ಕೆ 11, 10.20 ಮತ್ತು 9.50 ರೂ.ಗಳನ್ನು ಹಾಗೂ ತಿಂಗಳಿಗೆ 285, 265 ಮತ್ತು 247 ರೂ.ಗಳನ್ನು ನಿಗದಿಪಡಿಸಿದೆ. ಈ ಉದ್ದಿಮೆಯ ಪರಿಣತರಲ್ಲದ ಕಾರ್ಮಿಕ ವರ್ಗದವರಿಗೆ ದಿನಕ್ಕೆ 10.20 ತಿಂಗಳಿಗೆ 265 ರೂ.ಗಳನ್ನು, ಅರೆಪರಿಣತರಿಗೆ ದಿನಕ್ಕೆ 11 ಮತ್ತು ತಿಂಗಳಿಗೆ 285 ರೂ.ಗಳನ್ನು, ಪರಿಣತರಿಗೆ ದಿನಕ್ಕೆ 14.50 ಇಲ್ಲವೆ ತಿಂಗಳಿಗೆ 377 ರೂ.ಗಳನ್ನು, ಗುಮಾಸ್ತರುಗಳಿಗೆ ದಿನಕ್ಕೆ 12.90 ಅಥವಾ ತಿಂಗಳಿಗೆ 335 ರೂ.ಗಳನ್ನು ನಿಗದಿ ಪಡಿಸಿದೆ. ಕಾವಲುಗಾರರಿಗೆ ದಿನಕ್ಕೆ

10.20 ಅಥವಾ ತಿಂಗಳಿಗೆ 265 ರೂ.ಗಳನ್ನು ನಿಗದಿ ಪಡಿಸಿದೆ. ಇವುಗಳ ಜೊತೆಗೆ ಬಳಕೆದಾರರ ಸೂಚ್ಯಂಕ ಬೆಲೆಯು ಹೆಚ್ಚಳದ ಪ್ರಮಾಣಕ್ಕನುಗುಣವಾಗಿ ತುಟ್ಟಿಭತ್ಯವನ್ನು ಕೊಡ ಬೇಕಾಗುತ್ತದೆ.

**ಕಾಪಿ ಕ್ಯೂರಿಂಗ್**

ಕಾಫಿ ಕ್ಯೂರಿಂಗ್ ವರ್ಕ್ಸ್ ಕಾರ್ಮಿಕ ವರ್ಗದವರಿಗೆ ಕನಿಷ್ಠ ವೇತನವನ್ನು 1986 ಮಾರ್ಚ್ 26 ರಿಂದ ಜಾರಿಗೆ ಬರುವಂತೆ ಅನುಷ್ಠಾನಕ್ಕೆ ತರಲಾಗಿದೆ. ಗಾರ್‌ಬ್ಲರ್ಸ್ ಟಿಕೆಟ್ ಒಂದಕ್ಕೆ ಅಥವಾ 40 ಕೆ.ಜಿ.ಯ ಕೆಲಸಕ್ಕೆ ರೂ. 2.80 ಗಳನ್ನು ಅಂಗಣದ ಕೆಲಸಗಾರರಿಗೆ ದಿನಕ್ಕೆ 10 ರೂ.ಗಳನ್ನು, ಗಾರಬ್ಲಿಂಗ್ ಷೆಡ್ ಕೆಲಸಗಾರರಿಗೆ ದಿನಕ್ಕೆ 9.50 ರೂ. ಗಳನ್ನು, ಕ್ಯಾಂಟೀನ್ ಮೇಲ್ವಿಚಾರಕರಿಗೆ ದಿನಕ್ಕೆ 12.05 ರೂ.ಗಳನ್ನು, ಅಡಿಗೆಯವನಿಗೆ 11.50 ರೂ.ಗಳನ್ನು, ಸಹಾಯಕ ಅಡಿಗೆಯವನಿಗೆ 11 ರೂ.ಗಳನ್ನು, ಕ್ಯಾಂಟೀನ್ ಸ್ವಚ್ಛಗೊಳಿಸುವವನಿಗೆ 9.50 ರೂ.ಗಳನ್ನು ನಿಗದಿ ಪಡಿಸ ಲಾಗಿದೆ. ಮೆಷಿನ್ ಕೊಠಡಿಯಲ್ಲಿನ ಫೋರ್‌ಮನ್‌ಗೆ ತಿಂಗಳಿಗೆ 450 ರೂ.ಗಳನ್ನು, ಸಹಾಯಕ ಫೋರ್‌ಮನ್‌ಗೆ 400 ರೂ.ಗಳನ್ನು ಎಂಜಿನ್ ಚಾಲಕನಿಗೆ 375 ರೂ.ಗಳನ್ನು, ಸಹಾಯಕ ಯಂತ್ರ ಚಾಲಕನಿಗೆ 350 ರೂ.ಗಳನ್ನು, ಫಯರ್‌ಮನ್ ಮತ್ತು ಫಿಟ್ಟರ್‌ಗಳಿಗೆ 375 ರೂ.ಗಳನ್ನು, ಸಹಾಯಕ ಫಿಟ್ಟರ್‌ಗಳಿಗೆ 325 ರೂ.ಗಳನ್ನು, ಮೆಷಿನ್ ಕೊಠಡಿಯ ಇತರ ಕೆಲಸಗಾರರಿಗೆ 299 ರೂ.ಗಳನ್ನು ಕನಿಷ್ಠ ವೇತನವೆಂದು ಗೊತ್ತುಪಡಿಸಿದೆ. ಅಂಗಣದ ಅಧೀಕ್ಷಕರಿಗೆ 520 ರೂ.ಗಳನ್ನು, ಮೇಸ್ತ್ರಿಗೆ 312.50 ರೂ.ಗಳನ್ನು, ಬಡಗಿ ಮತ್ತು ಇತರರಿಗೆ 312.50 ರೂ.ಗಳನ್ನು ನಿಗದಿ ಪಡಿಸಲಾಗಿದೆ. ಗಾರ್‌ಬ್ಲಿಂಗ್ ಮೇಸ್ತ್ರಿಗೆ 312.50 ರೂ. ಗಳನ್ನು, ಮುಕಾದಂ, ಮೂಪರೆಸ್, ಸರ್ವ್ಸರ್‌ಗಳಿಗೆ 299 ರೂ.ಗಳನ್ನು ಗೊತ್ತುಪಡಿಸಿದೆ. ಕಚೇರಿಯ ಕೆಲಸಗಾರ ವರ್ಗ ದಲ್ಲಿನ ಕ್ಯಾಷಿಯರ್/ಸ್ಟೆನೋಗ್ರಾಫರ್‌ಗೆ 450 ರೂ.ಗಳನ್ನು ಗುಮಾಸ್ತ/ಬೆರಳಚ್ಚುಗಾರರಿಗೆ ಮತ್ತು ಇತರ ಸಮಾನ ಕೆಲಸ ಗಾರರಿಗೆ 390 ರೂ.ಗಳನ್ನು, ನಿಗದಿಪಡಿಸಿದೆ. ಇವುಗಳ ಜೊತೆಗೆ ಬಳಕೆದಾರರ ಸೂಚ್ಯಂಕ ಬೆಲೆಗಳ ಹೆಚ್ಚಳಕ್ಕನುಗುಣ ವಾಗಿ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

**ಆಹಾರ ಸಂಸ್ಕರಣ ಗಿರಣಿ**

ಅಕ್ಕಿ, ಹಿಟ್ಟು ಮತ್ತು ಬೇಳೆ ಗಿರಣಿಗಳಲ್ಲಿ ಕೆಲಸಮಾಡುವ ಕಾರ್ಮಿಕ ವರ್ಗದವರಿಗೆ 1984 ಮೇ 26 ರಿಂದ ಅನ್ವಯ ವಾಗುವಂತೆ ಕನಿಷ್ಠ ವೇತನವನ್ನು ನಿಗದಿಮಾಡಲಾಗಿದೆ. ಇವು ಗಳಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗಗಳ ಪೈಕಿ ಉನ್ನತ ಪರಿಣತರಿಗೆ ದಿನಕ್ಕೆ 16 ರೂ.ಗಳನ್ನು, ಪರಿಣತರಿಗೆ 15 ರೂ. ಗಳನ್ನು, ಅರೆಪರಿಣತರಿಗೆ 14 ರೂ.ಗಳನ್ನು, ಪರಿಣತರಲ್ಲದ ವರಿಗೆ ('ಎ' ಗುಂಪಿನ) 10.20 ರೂ.ಗಳನ್ನು, ಪರಿಣತರಲ್ಲದ ('ಬಿ' ಗುಂಪಿನ) ವರಿಗೆ ದಿನಕ್ಕೆ 9.50 ರೂ.ಗಳನ್ನು ಮತ್ತು ಕಚೇರಿಯ ಕೆಲಸಗಾರರಾದ ಗುಮಾಸ್ತ, ಬೆರಳಚ್ಚುಗಾರರಿಗೆ, ತಿಂಗಳಿಗೆ 390 ರೂ.ಗಳನ್ನು, ಲಾರಿಚಾಲಕನಿಗೆ 350 ರೂ. ಗಳನ್ನು ನಿಗದಿಪಡಿಸಲಾಗಿದೆ. ಇವುಗಳ ಜೊತೆಗೆ ತುಟ್ಟಿಭತ್ಯ ವನ್ನು ಬಳಕೆದಾರರ ಸೂಚ್ಯಂಕ ಬೆಲೆಯ ಹೆಚ್ಚಳಕ್ಕನುಗುಣ ವಾಗಿ ಕೊಡಬೇಕಾಗುತ್ತದೆ.

ಎಣ್ಣೆ ಮಿಲ್ಲುಗಳಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗಕ್ಕೆ 1987 ಮೇ 8 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನ ವನ್ನು ನಿಗದಿಪಡಿಸಲಾಗಿದೆ. ಇಲ್ಲಿ ಕೆಲಸ ಮಾಡುವ ಪರಿಣತ 'ಎ' ಗುಂಪಿಗೆ ದಿನಕ್ಕೆ 7.20 ರೂ.ಗಳನ್ನು ಪರಿಣತ 'ಬಿ' ಗುಂಪಿಗೆ 6.50 ರೂ.ಗಳನ್ನು, ಅರೆಪರಿಣತರಿಗೆ 5.75 ರೂ. ಗಳನ್ನು, ಪರಿಣತರಲ್ಲದವರಿಗೆ 5 ರೂ.ಗಳನ್ನು, ಕಚೇರಿಯಲ್ಲಿ ಕೆಲಸ ಮಾಡುವ ಗುಮಾಸ್ತರಿಗೆ ಮತ್ತು ಲಾರಿ ಚಾಲಕರಿಗೆ ತಿಂಗಳಿಗೆ 210 ರೂ.ಗಳನ್ನು ನಿಗದಿಪಡಿಸಿದೆ.

ಹೆಂಡ ಮಾರಾಟದಲ್ಲಿ ಕನಿಷ್ಠ ವೇತನವು ಅನುಕ್ರಮವಾಗಿ ಮೂರು ವಲಯಗಳಿಗೂ ಸೇರಿದಂತೆ ಇರುವುದು. ಮಾರಾಟ ಗಾರರಿಗೆ ದಿನಕ್ಕೆ 12.90, 11 ಮತ್ತು 10-20 ರೂ. ಗಳು; ಬಾಟಲ್‌ಗಳನ್ನು ತುಂಬುವವರಿಗೆ, ಅವುಗಳನ್ನು ಸ್ವಚ್ಛಗೊಳಿಸುವವರಿಗೆ ದಿನಕ್ಕೆ 11, 10-20 ಮತ್ತು 9-40 ರೂ.ಗಳನ್ನು ಗೊತ್ತುಪಡಿಸಿದೆ. ಚೌಕಿದಾರರಿಗೆ ತಿಂಗಳಿಗೆ 285, 266 ಮತ್ತು 243 ರೂ.ಗಳನ್ನು; ಲಾರಿ ಚಾಲಕರಿಗೆ 390, 370 ಮತ್ತು 350 ರೂ.ಗಳನ್ನು; ಸಹಾಯಕರಿಗೆ 285, 270 ಮತ್ತು 250 ರೂ.ಗಳನ್ನು ಜೀಪಿನ ಚಾಲಕರಿಗೆ 346, 335 ಮತ್ತು 285 ರೂ. ಗಳನ್ನು; ಕ್ಲಿನರ್ಸ್ ಮತ್ತು ಇತರ ಕೆಲಸಗಾರರಿಗೆ 285, 265 ಮತ್ತು 243 ರೂ.ಗಳನ್ನು ನಿಗದಿಪಡಿಸಿದೆ. ಇವುಗಳ ಜೊತೆಗೆ ಬಳಕೆದಾರರ ಬೆಲೆಯ ಸೂಚ್ಯಂಕ ಹೆಚ್ಚಳಕ್ಕನುಗುಣ ವಾಗಿ ತುಟ್ಟಿಭತ್ಯವನ್ನು ಕೊಡಬೇಕು.

ಹಂಚಿನ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕ ವರ್ಗಕ್ಕೆ 1987 ಮಾರ್ಚ್ 11 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆ. ಇಲ್ಲಿನ ಪರಿಣತ ಕೆಲಸಗಾರ ವರ್ಗದವರಿಗೆ ದಿನಕ್ಕೆ 22 ರೂ.ಗಳನ್ನು

ಅರೆಪರಿಣತ ವರ್ಗದವರಿಗೆ 20 ರೂ.ಗಳನ್ನು, ಪರಿಣತರಲ್ಲದವರಿಗೆ 16 ರೂ.ಗಳನ್ನು, ಕಚೇರಿ ಕೆಲಸಗಾರರಿಗೆ 20 ರೂ.ಗಳನ್ನು ನಿಗದಿಪಡಿಸಲಾಗಿದೆ. ಇವುಗಳ ಜೊತೆಗೆ ಸೂಚ್ಯಂಕ ಬೆಲೆ ಹೆಚ್ಚಳಕ್ಕೆ ಅನುಗುಣವಾಗಿ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

**ತೋಟಗಳ ಕಾರ್ಮಿಕರು**

ಸಿಂಕೋನ, ರಬ್ಬರ್, ಟೀ ಅಥವಾ ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕ ವರ್ಗದವರಿಗೆ 1984 ಜೂನ್ 26 ರಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ನಿಗದಿಪಡಿಸಿದೆ. ಇದರ ಪ್ರಕಾರ ವಯಸ್ಕರಿಗೆ ದಿನಕ್ಕೆ 9 35 ಕಿಶೋರಾವಸ್ಥೆಯವರಿಗೆ 7.50 ರೂ.ಗಳನ್ನು ಮತ್ತು ಮಕ್ಕಳಿಗೆ 5.60 ರೂ.ಗಳನ್ನು, ಮೇಲ್ವಿಚಾರಕರಿಗೆ, ಮೇಸ್ತ್ರಿಗಳಿಗೆ ತಿಂಗಳಿಗೆ 300 ರೂ.ಗಳನ್ನು, ರಬ್ಬರ್ ತೋಟಗಳಲ್ಲಿ ಕೆಲಸ ಮಾಡುವ ವಯಸ್ಕರಿಗೆ ದಿನಕ್ಕೆ 10 ರೂ.ಗಳನ್ನು, ಕಿಶೋರರಿಗೆ 8 ರೂ.ಗಳನ್ನು, ಮಕ್ಕಳಿಗೆ 6 ರೂ.ಗಳನ್ನು, ರಬ್ಬರ್ ಹಾಲನ್ನಿಳಿಸುವವರಿಗೆ ಹಾಗೂ ಮೇಸ್ತ್ರಿಗಳಿಗೆ ತಿಂಗಳಿಗೆ 330 ರೂ.ಗಳನ್ನು ನಿಗದಿಪಡಿಸಿದೆ.

ಏಲಕ್ಕಿ ತೋಟಗಳಲ್ಲಿ ಕೆಲಸ ಮಾಡುವವರಿಗೆ 1984 ಜೂನ್ 5 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆ. ಇದರ ಪ್ರಕಾರ ವಯಸ್ಕರಿಗೆ ದಿನಕ್ಕೆ 9.35 ರೂ.ಗಳನ್ನು, ಕಿಶೋರರಿಗೆ 7.50 ರೂ.ಗಳನ್ನು, ಮಕ್ಕಳಿಗೆ 5.60 ರೂ.ಗಳನ್ನು ಮತ್ತು ಮೇಲ್ವಿಚಾರಕರಿಗೆ ಹಾಗೂ ಮೇಸ್ತ್ರಿಗಳಿಗೆ ತಿಂಗಳಿಗೆ 310 ರೂ.ಗಳನ್ನು ನಿಗದಿಪಡಿಸಿದೆ.

ರೇಷ್ಮೆ ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ 1984 ಜೂನ್ 6 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ಮೂರು ವಲಯಗಳಿವೆ : ಮೊದಲನೇಯದು ಕಾರ್ಪೊರೇಷನ್ ಕೇಂದ್ರಗಳನ್ನು, ಎರಡನೇಯದು ಜಿಲ್ಲಾ ಕೇಂದ್ರಗಳನ್ನು, ಮೂರನೇಯದು ತಾಲೂಕು ಕೇಂದ್ರಗಳನ್ನು ಮತ್ತು ಇತರ ಸ್ಥಳಗಳನ್ನು, ತಮ್ಮ ವ್ಯಾಪ್ತಿಯಾಗಿ ಹೊಂದಿವೆ. ಉದ್ಯೋಗದ ಗುಂಪಿಗನುಗುಣವಾಗಿ ಅನುಕ್ರಮವಾಗಿ ಮೊದಲನೇಯ, ಎರಡನೇಯ ಮತ್ತು ಮೂರನೇಯ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗಗಳ ಕನಿಷ್ಠ ವೇತನವನ್ನು ಈ ಮುಂದೆ ಕೊಡಲಾಗಿದೆ. ಬಿತ್ತನೆ ಕೋಠಿಯ ಗುಂಪಿನಲ್ಲಿ ಬರುವ ಆರು ಕಾರ್ಮಿಕ ವರ್ಗದವರಿಗೆ ದಿನಕ್ಕೆ 15, 14 ಮತ್ತು 13 ರೂ.ಗಳನ್ನು, ಚಾಕಿ ಸಾಕಣೆ ಮತ್ತು ನೂಲು ಸುತ್ತುವ ಗುಂಪಿನಲ್ಲಿನ ನಾಲ್ಕು ಕಾರ್ಮಿಕ ವರ್ಗದವರಿಗೆ 15, 14 ಮತ್ತು 13 ರೂ.ಗಳನ್ನು, ಮೂರನೇಯ ಗುಂಪಿನಲ್ಲಿರುವ ರೇಷ್ಮೆಗೂಡು, ಮಾರುಕಟ್ಟೆಯಲ್ಲಿನ ನಾಲ್ಕು ಕಾರ್ಮಿಕ ವರ್ಗದವರಿಗೆ ರೂ. 16, 15 ಮತ್ತು 14 ನಿಗದಿಪಡಿಸಲಾಗಿದೆ. ರೇಷ್ಮೆ ಕೃಷಿ ಮತ್ತು ಹಿಪ್ಪನೇರಳೆ ತೋಟ ಮತ್ತು ಸಸ್ಯಪಾಲನಾ ಕ್ಷೇತ್ರಗಳಿಗೆ ದಿನದ ಕನಿಷ್ಠ ವೇತನವನ್ನು ನಿಗದಿಪಡಿಸುವಾಗ ಖುಷ್ಕಿ, ತರಿ ಮತ್ತು ತೋಟ ಭೂಮಿಯನ್ನು ಗಣನೆಗೆ ತೆಗೆದುಕೊಂಡು ಅನುಕ್ರಮವಾಗಿ ದಿನಗೂಲಿಯನ್ನು ನಿಗದಿಮಾಡಲಾಗಿದೆ. ರೇಷ್ಮೆ ಕೃಷಿ ಕ್ಷೇತ್ರ, ಹಿಪ್ಪನೇರಳೆ ತೋಟಗಳಲ್ಲಿ ಕೆಲಸ ಮಾಡುವವರ ಪೈಕಿ ಅಗೆಯುವವರು ಉಳುವರು, ಹೆಂಟೆ ಒಡೆಯುವವರು ಮೊದಲಾದವರಿಗೆ ಅನುಕ್ರಮವಾಗಿ ದಿನಕ್ಕೆ 10, 12 ಮತ್ತು 14 ರೂ.ಗಳನ್ನು, ಗಿಡ ನೆಡುವುದು ಮತ್ತು ಹಿಪ್ಪನೇರಳೆ ಕೊಯ್ಯುವವರಿಗೆ ದಿನಕ್ಕೆ 9.50, 10.50 ಮತ್ತು 11.50 ರೂ.ಗಳನ್ನು ರಾಸಾಯನಿಕಗಳನ್ನು ಮತ್ತು ರಸಗೊಬ್ಬರಗಳನ್ನು ಸೇರಿಸುವವರಿಗೆ ಮತ್ತು ಅವುಗಳನ್ನು ಸಿಂಪಡಿಸುವವರಿಗೆ ಅನುಕ್ರಮವಾಗಿ ದಿನಕ್ಕೆ 13, 14 ಮತ್ತು 15 ರೂ.ಗಳನ್ನು ನಿಗದಿಪಡಿಸಲಾಗಿದೆ. ಸಸ್ಯಪಾಲನಾ ಕ್ಷೇತ್ರ (ನರ್ಸರಿ) ದಲ್ಲಿನ ಕೆಲಸದ ವರ್ಗದವರಿಗೆ 9.50, 13 ಮತ್ತು 11.50 ರೂ.ಗಳನ್ನು, ಇತರೆ ಕೆಲಸದವರಿಗೆ ದಿನಕ್ಕೆ 9.50, 13 ಮತ್ತು 14 ರೂ.ಗಳನ್ನು ನಿಗದಿಪಡಿಸಲಾಗಿದೆ. ಇವುಗಳ ಜೊತೆಗೆ 1986 ಅಕ್ಟೋಬರ್ 20 ರಿಂದ ಜಾರಿಗೆ ಬಂದಿರುವ ತುಟ್ಟಿಭತ್ಯವನ್ನು ಕೊಡಬೇಕಾಗುತ್ತದೆ.

ಪಿಂಗಾಣಿ, ಕಲ್ಲಿನ ಮತ್ತು ಮಣ್ಣಿನ ಉದ್ದಿಮೆಗಳಲ್ಲಿನ ಕೆಲಸದ ವರ್ಗದವರಿಗೆ 1984 ಮೇ 25 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ಗೊತ್ತುಪಡಿಸಲಾಗಿದೆ. ಇದರಲ್ಲಿನ ಪರಿಣತರಿಗೆ ದಿನಕ್ಕೆ 15–50 ರೂ.ಗಳನ್ನು ಇಲ್ಲವೆ ತಿಂಗಳಿಗೆ 403 ರೂ.ಗಳನ್ನು, ಅರೆ ಪರಿಣತರಿಗೆ ದಿನಕ್ಕೆ 13 ರೂ.ಗಳನ್ನು ಅಥವಾ ತಿಂಗಳಿಗೆ 338 ರೂ.ಗಳನ್ನು, ಪರಿಣತರಲ್ಲದವರಿಗೆ ದಿನಕ್ಕೆ 9.50 ರೂ.ಗಳನ್ನು ಇಲ್ಲವೆ ತಿಂಗಳಿಗೆ 247 ರೂ.ಗಳನ್ನು ಗುಮಾಸ್ತರು, ಬೆರಳಚ್ಚುಗಾರರಿಗೆ ತಿಂಗಳಿಗೆ 330 ರೂ.ಗಳನ್ನು, ಕ್ಯಾಷಿಯರ್‌ಗೆ ತಿಂಗಳಿಗೆ 420 ರೂ.ಗಳನ್ನು ನಿಗದಿಪಡಿಸಿದೆ. ಇವುಗಳ ಜೊತೆಗೆ ತುಟಿಭತ್ಯವನ್ನು ಕೊಡಬೇಕಾಗುತ್ತದೆ.

ಆಟೋಮೊಬೈಲ್ ಇಂಜಿನಿಯರಿಂಗ್ ಉದ್ದಿಮೆಗೆ ಸಂಬಂಧಿಸಿದಂತೆ 1979 ಮಾರ್ಚ್ 28 ರಿಂದ ಅನ್ವಯವಾಗುವಂತೆ ಕನಿಷ್ಠ ದಿನಗೂಲಿಯನ್ನು ನಿಗದಿಪಡಿಸಲಾಗಿದೆ. ಇದರಲ್ಲಿ

ಅತ್ಯುನ್ನತ ಪರಿಣತಿ ಹೊಂದಿದವರಿಗೆ ತಿಂಗಳಿಗೆ 280 ರೂ.ಗಳನ್ನು, ಪರಿಣತರಿಗೆ, 235 ರೂ.ಗಳನ್ನು ಅರೆಪರಿಣತರಿಗೆ 170 ರೂ.ಗಳನ್ನು, ಪರಿಣತರಲ್ಲದವರಿಗೆ 135 ರೂ.ಗಳನ್ನು ನಿಗದಿಪಡಿಸಿದೆ. ಇವುಗಳ ಜೊತೆಗೆ ತುಟ್ಟಿಭತ್ಯವನ್ನು ಕೊಡಬೇಕು.

ಕುಲುಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ 1979 ಮಾರ್ಚ್ 28 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆ. ಇವುಗಳಲ್ಲಿನ ಉನ್ನತ ಪರಿಣತರಿಗೆ ತಿಂಗಳಿಗೆ 455 ರೂ.ಗಳನ್ನು ಪರಿಣತರಿಗೆ ದಿನಕ್ಕೆ 10ರೂ.ಗಳನ್ನು, ಅರೆಪರಿಣತರಿಗೆ ದಿನಕ್ಕೆ 7.50 ರೂ.ಗಳನ್ನು ಪರಿಣತರಲ್ಲದವರಿಗೆ 6 ರೂ.ಗಳನ್ನು, ಕಚೇರಿಯ ಕೆಲಸಗಾರರಿಗೆ ತಿಂಗಳಿಗೆ 300 ರೂ.ಗಳನ್ನು, ವಾಹನ ಚಾಲಕರಿಗೆ 230 ರೂ.ಗಳನ್ನು ಜವಾನ/ಕಾವಲುಗಾರರಿಗೆ ತಿಂಗಳಿಗೆ 156 ರೂ.ಗಳನ್ನು ನಿಗದಿಪಡಿಸಲಾಗಿದೆ.

ಇವುಗಳಲ್ಲದೆ ವಿಲಕ್ಕಿ ಉದ್ದಿಮೆಯಲ್ಲಿನ ವಿವಿಧ ಕಾರ್ಮಿಕ ವರ್ಗದವರಿಗೆ ಬೆಲೆದರ ಮತ್ತು ಕಾಲದರಗಳೆರಡನ್ನು ಗೊತ್ತುಪಡಿಸಲಾಗಿದೆ. ಚರ್ಮ ಹದಮಾಡುವ ಮತ್ತು ಚರ್ಮದ ಕೆಲಸದ ಉದ್ದಿಮೆಯವರಿಗೆ ಹಾಗೂ ಹತ್ತಿ, ರೇಷ್ಮೆ, ಗಿರಣಿ ಉದ್ದಿಮೆಯವರಿಗೆ ವ್ಯಾಪಕ ಕನಿಷ್ಠ ವೇತನ ದರವನ್ನು ನಿಗದಿಪಡಿಸಿದೆ.

### ಕೃಷಿ ಕಾರ್ಮಿಕರ ಕನಿಷ್ಠ ವೇತನ

ಕರ್ನಾಟಕ ರಾಜ್ಯ ಸರ್ಕಾರವು 1959ರಲ್ಲಿ ಕೃಷಿ ಕಾರ್ಮಿಕರ ವಿವಿಧ ವರ್ಗಕ್ಕೆ ಕನಿಷ್ಠ ವೇತನವನ್ನು ನಿಗದಿಪಡಿಸಿತು. ಇದು ಅನೇಕ ಸಲ ಪರಿಷ್ಕೃತಗೊಂಡಿದೆ. 1959ರಲ್ಲಿ ರಾಜ್ಯ ಸರ್ಕಾರವು ನಿಗದಿ ಮಾಡಿದ ಮತ್ತು 1968ರಲ್ಲಿ ಪರಿಷ್ಕೃತಗೊಳಿಸಿದ ಕನಿಷ್ಠ ವೇತನವನ್ನು ಅನುಕ್ರಮವಾಗಿ ಒಣಭೂಮಿ, ನೀರಾವರಿ ಭೂಮಿ, ತೋಟದ ಭೂಮಿಗಳಿಗೆ ಅನ್ವಯವಾಗಿರುವ ದರಗಳನ್ನು ಈ ಮುಂದೆ ಕೊಡಲಾಗಿದೆ ಹಾಗೂ 1968ರ ಪರಿಷ್ಕೃತ ದರಗಳನ್ನು ಆವರಣದಲ್ಲಿ ಕೊಡಲಾಗಿದೆ. ವರ್ಗೀಕೃತ ಉದ್ಯೋಗಕ್ಕೆ ಅನುಗುಣವಾಗಿ ಮೊದಲನೇಯ (ಅಥವಾ ಎ)ವರ್ಗದಲ್ಲಿ ಬರುವ-ಉಳುವವನು ಅಗೆಯುವವನು, ಹೆಂಟೆ ಒಡೆಯುವವನು, ಬೀಜ ಬಿತ್ತುವವನು, ಪೈರು ಕತ್ತರಿಸುವವನು, ನೀರು ಹಾಯಿಸುವವನು ಹಾಗೂ ಬೇರು ಕೀಳುವವರಿಗೆ ದಿನಕ್ಕೆ 1.25 (1.85) 1.50 (2.20) ಮತ್ತು 1.75 (2.85) ರೂ.ಗಳನ್ನು ಎರಡನೇಯ (ಅಥವಾ ಬಿ) ವರ್ಗದಲ್ಲಿ ಬರುವ ಗೊಬ್ಬರ ಹಾಕುವ, ಸಸಿ ನೆಡುವ, ಕಳೆ ಕೀಳುವ, ಸುಗ್ಗಿಯ ಕೆಲಸದ ಕಾರ್ಮಿಕರಿಗೆ ದಿನಕ್ಕೆ 1 (1.45), 1.12 (1.65) ಮತ್ತು 1.37 (2) ರೂ.ಗಳನ್ನೂ, ಮೂರನೇಯ (ಅಥವಾ ಸಿ) ವರ್ಗದಲ್ಲಿ ಬರುವ ದನ, ಕುರಿ ಮತ್ತು ಮೇಕೆಗಳನ್ನು ಮೇಯಿಸುವವರಿಗೆ ದಿನಕ್ಕೆ 50 (75), 50 (75) ಮತ್ತು 50 (75) ಪೈಸೆಗಳನ್ನು ಕನಿಷ್ಠ ವೇತನವೆಂದು ನಿಗದಿಪಡಿಸಲಾಗಿದೆ.

ರಾಜ್ಯ ಸರ್ಕಾರವು 1973 ಮತ್ತು 1975ರಲ್ಲಿ ನಿಗದಿಪಡಿಸಿದ ಪ್ರತೀದಿನದ ಕನಿಷ್ಠ ವೇತನ ದರಗಳ (ಎಲ್ಲಾ ಭತ್ಯವೂ ಸೇರಿ) ಮಾಹಿತಿಯನ್ನು ಈ ಕೆಳಗಿನ ನಮೂನೆಯಲ್ಲಿ ಅನುಕ್ರಮವಾಗಿ ಒಣಭೂಮಿ, ನೀರಾವರಿ ಭೂಮಿ ಮತ್ತು ತೋಟಗಳಿಗೆ ಅನ್ವಯವಾಗಿರುವ ದರಗಳು ಹಾಗೂ 1975ರ ಪರಿಷ್ಕೃತ ದರಗಳನ್ನು ಆವರಣದಲ್ಲಿ ಕೊಡಲಾಗಿದೆ. ವರ್ಗೀಕೃತ ಉದ್ಯೋಗಕ್ಕನುಗುಣವಾಗಿ ಮೊದಲನೇಯ (ಅಥವಾ ಎ) ವರ್ಗದಲ್ಲಿ ಬರುವ ಉಳುವ, ಅಗೆಯುವ, ಹೆಂಟೆ ಒಡೆಯುವ, ಬಿತ್ತುವ, ಮಧ್ಯಂತರ ಕೊಯ್ಲು, ನೀರು ಹಾಯಿಸುವ ಮತ್ತು ಬೇರುಕೀಳುವ ಕೆಲಸದವರಿಗೆ ರೂ. 3.15 (4.10) 3.75 (4.90) ಮತ್ತು 4.30 (5.69); ಎರಡನೇಯ (ಅಥವಾ ಬಿ) ವರ್ಗದಲ್ಲಿ ಬರುವ ಗೊಬ್ಬರ ಹಾಕುವುದು, ಸಸಿ ನೆಡುವುದು, ಕಳೆ ಕೀಳುವುದು, ಕಣದ ಕೆಲಸ, ಹತ್ತಿ ಬಿಡಿಸುವುದು ಈ ಕೆಲಸಗಳಿಗೆ ರೂ. 2.80 (3.25), 2.80 (3.65) ಮತ್ತು 3.40 (4.45); ಮೂರನೇಯ (ಅಥವಾ ಸಿ) ವರ್ಗದಲ್ಲಿ ಬರುವ ದನ, ಕುರಿ ಮತ್ತು ಮೇಕೆ ಮೇಯಿಸುವವರಿಗೆ ರೂ. 1.30 (1.70), 1.30 (1.70) ಮತ್ತು 1.30 (1.70); ನಾಲ್ಕನೇಯ (ಅಥವಾ ಡಿ) ವರ್ಗದಲ್ಲಿ ಬರುವ ಅಡಿಕೆ ಮತ್ತು ತೆಂಗಿನಕಾಯಿ ಕೀಳುವುದು, ಅಡಿಕೆ ಮತ್ತು ತೆಂಗಿನಕಾಯಿ ತೊಗಟೆ ತೆಗೆಯುವುದು, ಔಷಧಿ ಸಿಂಪಡಿಸುವುದು ಹಾಗೂ ಬೇಲಿ ಹಾಕುವುದು ಮತ್ತು ಇತರೆ ಕೆಲಸಗಳಿಗೆ ರೂ. 3.15 (4.10), 3.75 (4.90) ಮತ್ತು 4.30 (5.60) ನಿಗದಿ ಪಡಿಸಲಾಗಿತ್ತು.

ರಾಜ್ಯ ಸರಕಾರವು ಹಂಚಿನ ಕಾರ್ಖಾನೆ, ಬತ್ತದ ಗಿರಣಿ, ಹಿಟ್ಟಿನ ಗಿರಣಿ ಮತ್ತು ಎಣ್ಣೆ ಮಿಲ್ಲುಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಪರಿಷ್ಕೃತ ದಿನವಹಿ ಕನಿಷ್ಠ ವೇತನವನ್ನು ಜನವರಿ 15, 1974 ರಿಂದ ಅನ್ವಯವಾಗುವಂತೆ ಜಾರಿಗೆ ತಂದಿರುವ ಮಾಹಿತಿಯನ್ನು ವರ್ಗೀಕೃತ ಉದ್ಯೋಗಕ್ಕನುಗುಣವಾಗಿ ಈ ಕೆಳಗೆ ತೋರಿಸಲಾಗಿದೆ. ಪರಿಣತ ಕೆಲಸಗಾರರಲ್ಲಿ ಪರಿಣತರು ಆ ಗುಂಪಿನಲ್ಲಿ ಬರುವವರಿಗೆ ರೂ. 5.05

(ಹೆಂಚಿನ ಕಾರ್ಖಾನೆಗಳಲ್ಲಿ) ಮತ್ತು ರೂ. 5.40 (ಬತ್ತ, ಹಿಟ್ಟು ಹಾಗೂ ಎಣ್ಣೆ ಮಿಲ್‌ಗಳಲ್ಲಿ) ಹಾಗೂ ಪರಿಣತರು (ಅ) 4.90 ರೂ.ಗಳನ್ನು (ಬತ್ತ, ಹಿಟ್ಟು ಮತ್ತು ಎಣ್ಣೆ ಮಿಲ್‌ಗಳಲ್ಲಿ), ಅರೆಪರಿಣತರಿಗೆ 4.30 ರೂ.ಗಳನ್ನು (ಬತ್ತ, ಹಿಟ್ಟು ಹಾಗೂ ಎಣ್ಣೆ ಮಿಲ್‌ಗಳಲ್ಲಿ), ಪರಿಣತರಲ್ಲದವರಿಗೆ 3.90 ರೂ. (ಹೆಂಚಿನ ಕಾರ್ಖಾನೆಗಳಲ್ಲಿ), ಪರಿಣತರಲ್ಲದವರಿಗೆ (ಅ) ರೂ. 3.75 (ಬತ್ತ, ಹಿಟ್ಟು ಹಾಗೂ ಎಣ್ಣೆ ಮಿಲ್‌ಗಳಲ್ಲಿ), ಪರಿಣತರಲ್ಲದವರಿಗೆ (ಅ) 3.25 ರೂ.ಗಳನ್ನು (ಬತ್ತ, ಹತ್ತಿ ಹಾಗೂ ಎಣ್ಣೆ ಮಿಲ್‌ಗಳಲ್ಲಿ), ಕಛೇರಿಯ ಕೆಲಸಗಾರರಾದ ವ್ಯವಸ್ಥಾಪಕರುಗಳಿಗೆ ತಿಂಗಳಿಗೆ 215 ರೂ.ಗಳನ್ನು (ಬತ್ತ, ಹತ್ತಿ ಹಾಗೂ ಎಣ್ಣೆ ಮಿಲ್‌ಗಳಲ್ಲಿ), ಗುಮಾಸ್ತ, ಬೆರಳಚ್ಚುಗಾರರಿಗೆ ತಿಂಗಳಿಗೆ 167 ರೂ.ಗಳು (ಹೆಂಚಿನ ಕಾರ್ಖಾನೆಯಲ್ಲಿ) ಹಾಗೂ 162 ರೂ.ಗಳು (ಹತ್ತಿ, ಬತ್ತ ಹಾಗೂ ಎಣ್ಣೆ ಮಿಲ್‌ಗಳಲ್ಲಿ), ಕ್ಯಾಷಿಯರ್‌ಗಳಿಗೆ ತಿಂಗಳಿಗೆ 167 ರೂ.ಗಳನ್ನು (ಹೆಂಚಿನ ಕಾರ್ಖಾನೆಯಲ್ಲಿ), ಸ್ಟೋರ್ ಕೀಪರ್‌ಗೆ ತಿಂಗಳಿಗೆ 167 ರೂ.ಗಳನ್ನು (ಹೆಂಚಿನ ಕಾರ್ಖಾನೆಯಲ್ಲಿ), ಮತ್ತು 162 ರೂ.ಗಳನ್ನೂ (ಬತ್ತ, ಹತ್ತಿ ಹಾಗೂ ಎಣ್ಣೆ ಮಿಲ್‌ಗಳಲ್ಲಿ)–ನಿಗದಿಪಡಿಸಲಾಗಿತ್ತು.

ವರ್ಗೀಕೃತ ಉದ್ಯೋಗಕ್ಕನುಗುಣವಾಗಿ 1980ನೇ ಮಾರ್ಚ್ ಮಾಹೆಯಲ್ಲಿದ್ದ ಪ್ರತೀದಿನದ ಪರಿಷ್ಕೃತ ಕನಿಷ್ಠ ವೇತನವನ್ನು ಅನುಕ್ರಮವಾಗಿ ಒಣಭೂಮಿ ನೀರಾವರಿ ಮತ್ತು ತೋಟಗಳಿಗೆ ಅನ್ವಯವಾಗುವ ದರಗಳನ್ನು ಈ ಕೆಳಗೆ ವಿವರಿಸಲಾಗಿದೆ. ಮೊದಲನೇಯ ವರ್ಗದಲ್ಲಿ ಬರುವ ಉಳುವುದು, ಅಗೆಯುವುದು, ಹೆಂಟೆ ಹೊಡೆಯುವುದು, ಬಿತ್ತನೆ ಕೆಲಸ ಮಧ್ಯಂತರ ಕೊಯ್ಲು, ನೀರು ಹಾಯಿಸುವುದು, ಇತ್ಯಾದಿಗಳಿಗೆ ದಿನಕ್ಕೆ 4.10, 4.90 ಮತ್ತು 5.60 ರೂ.ಗಳನ್ನು, ಎರಡನೇಯ ವರ್ಗದಲ್ಲಿ ಬರುವ–ಗೊಬ್ಬರ ಹಾಕುವುದು, ಸಸಿ ನೆಡುವುದು, ಸುಗ್ಗಿಯ ಕೆಲಸ, ಮತ್ತು ಹತ್ತಿ ಬಿಡಿಸುವುದಕ್ಕೆ ರೂ. 3.25, 3.65 ಮತ್ತು 4.45, ಹಾಗೂ ಮೂರನೇಯ ದರ್ಜೆಯಲ್ಲಿ ಬರುವ–ದನ, ಕುರಿ, ಮೇಕೆ ಮೇಯಿಸುವುದಕ್ಕೆ ರೂ. 1.70, 1.70 ಮತ್ತು 1.70 ಗಳನ್ನು ; ತೆಂಗು ಮತ್ತು ಅಡಿಕೆಯ ತೊಗಟೆ ತೆಗೆಯುವುದಕ್ಕೆ ರೂ. 4.10, 4.90 ಮತ್ತು 4.60 ಗಳನ್ನು ಔಷಧಿ ಸಿಂಪಡಣೆ ಹಾಗೂ ಬೇಲಿ ಹಾಕುವುದಕ್ಕೆ 4.10, 4.90 ಮತ್ತು 5.60 ರೂ.ಗಳನ್ನು ಹಾಗೂ ತೋಟಗಾರಿಕೆಗೆ ಸಂಬಂಧಿಸಿದ ಇತರೆ ಕೆಲಸಗಳಿಗೆ ಪ್ರತೀ ದಿನಕ್ಕೆ 4.10, 4.90 ಮತ್ತು 5.60 ರೂ.ಗಳನ್ನು ನಿಗದಿಪಡಿಸಿದೆ.

1980ರ ಮಾರ್ಚ್‌ನಲ್ಲಿ ನಿಗದಿಪಡಿಸಿದ ಕನಿಷ್ಠ ವೇತನವನ್ನು ಈ ಕೆಳಗೆ ತೋರಿಸಿರುವ ಉದ್ಯೋಗ ವರ್ಗಕ್ಕನುಗುಣವಾಗಿ ನಿಗದಿಪಡಿಸಲಾಗಿತ್ತು. ಉದ್ಯೋಗ ವರ್ಗ ಎ ಮತ್ತು ಡಿ ಯವರಿಗೆ ಊಟ ಬಟ್ಟೆ ಸೇರಿ ತಿಂಗಳಿಗೆ 48.75 ರೂ.ಗಳನ್ನೂ ಊಟ ಬಟ್ಟೆ ಕೊಡದವರಿಗೆ ತಿಂಗಳಿಗೆ 97.30 ರೂ.ಗಳನ್ನೂ ನಿಗದಿಪಡಿಸಲಾಗಿತ್ತು. ಉದ್ಯೋಗ ವರ್ಗ ಬಿ ಯವರಿಗೆ ಊಟ ಬಟ್ಟೆ ಸೇರಿ ತಿಂಗಳಿಗೆ 31.60 ರೂ.ಗಳನ್ನು, ಊಟ ಬಟ್ಟೆ ಕೊಡದೆ 48.75 ರೂ.ಗಳನ್ನು ನಿಗದಿಪಡಿಸಲಾಗಿತ್ತು. ಉದ್ಯೋಗ ವರ್ಗ ಸಿ ಯವರಿಗೆ ಊಟ ಬಟ್ಟೆ ಸೇರಿ ತಿಂಗಳಿಗೆ 16.25 ರೂ.ಗಳನ್ನು, ಊಟ ಬಟ್ಟೆ ಕೊಡದಿದ್ದಲ್ಲಿ ತಿಂಗಳಿಗೆ 48.75 ರೂ.ಗಳನ್ನು ನಿಗದಿಪಡಿಸಲಾಗಿತ್ತು.

ಜಿಲ್ಲೆಯ ಪರಿಣತರಲ್ಲದ ವ್ಯವಸಾಯ ಕಾರ್ಮಿಕರ ದಿನ ಗೂಲಿಯ ವಿವರವಾದ ಪಟ್ಟಿಯನ್ನು 496 ರಿಂದ 500 ಪುಟದಲ್ಲಿ ಕೊಟ್ಟಿದೆ.

ವ್ಯವಸಾಯೇತರ ಕಾರ್ಮಿಕರು ಪ್ರತೀದಿನ ಪಡೆಯುತ್ತಿದ್ದ ಕೂಲಿಯನ್ನು ಈ ಪಟ್ಟಿಯ ಕೊಟ್ಟಿದೆ.

(ರೂ.ಗಳಲ್ಲಿ)

| ಉದ್ಯೋಗಿಗಳ ಹೆಸರು | 1985 | 1986 | 1987 | 1988 | 1989 |
|---|---|---|---|---|---|
| ಬಡಗಿ | 27.20 | 30.00 | 40.00 | 43.00 | 46.00 |
| ಕಮ್ಮಾರ | 21.60 | 21.75 | 24.50 | 25.00 | 26.00 |
| ಮೋಚಿ | 15.08 | 15.25 | 16.00 | 16.50 | 17.00 |

ಆಧಾರ : ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಮಡಿಕೇರಿ.

1985 ರಿಂದ 1989ರವರೆಗೆ ಕೊಡಗು ಜಿಲ್ಲೆಯ ಪರಿಣತರಲ್ಲದ ವ್ಯವಸಾಯ ಕಾರ್ಮಿಕರ

| ಉದ್ಯೋಗದ ಹೆಸರು | 1985 | | | | | |
|---|---|---|---|---|---|---|
| | ತರಿ | | ಖುಷ್ಕಿ | | ಬಾಗಾಯ್ತು (ತೋಟ) | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಉಳುವುದು | 12.00 | — | 12.11 | — | — | — |
| ಅಗೆಯುವುದು | 12.00 | — | 12.00 | — | 11.86 | 8.0 |
| ಹೆಂಟೆ ಹೊಡೆಯುವುದು | 12.00 | — | — | — | — | — |
| ಬಿತ್ತನೆ ಕೆಲಸ | 12.00 | 10.00 | 11.80 | — | — | — |
| ಮಧ್ಯಂತರ ಕೊಯ್ಲು | — | — | — | — | 10.00 | 8.50 |
| ನೀರು ಹಾಯಿಸುವುದು | — | — | — | — | — | — |
| ಗೊಬ್ಬರ ಹಾಕುವುದು | 11.67 | 10.00 | 12.11 | 10.28 | 11.00 | 9.00 |
| ಸಸಿ ನೆಡುವುದು | 11.75 | 10.50 | 12.14 | 10.40 | 10.00 | 8.00 |
| ಕಳೆ ತೆಗೆಯುವುದು | 12.00 | 10.00 | 12.33 | 10.50 | 11.00 | 9.00 |
| ಕೊಯ್ಲು ಮಾಡುವುದು | 12.00 | 10.00 | 12.00 | 10.00 | — | — |
| ತೆನೆ ಬಡಿಯುವುದು | 12.15 | 10.50 | 12.50 | 10.50 | — | — |
| ಕಾಳು ತೂರುವುದು | 12.00 | 10.00 | 12.00 | 10.00 | — | — |
| ಕಾಫಿ ಬೀಜ ಬಿಡಿಸುವುದು | — | — | — | — | 15.00 | 12.00 |
| ದನ, ಕುರಿ, ಮೇಕೆ ಮೇಯಿಸುವುದು | 5.50 | — | — | — | — | — |
| ಅಡಿಕೆ ಮತ್ತು ಗೋಡಂಬಿ ಬಿಡಿಸುವುದು | — | — | — | — | 15.00 | 12.00 |
| ಏಲಕ್ಕಿ ಬಿಡಿಸುವುದು | — | — | — | — | 13.20 | 9.50 |
| ಮೆಣಸು ಬಿಡಿಸುವುದು | — | — | — | — | 18.00 | — |

ದಿನಗೂಲಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| 1986 | | | | | |
|---|---|---|---|---|---|
| ತರಿ | | ಖುಷ್ಕಿ | | ಭಾಗಾಯ್ತು | |
| ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| 13.50 | — | 13 | — | — | — |
| 12.50 | — | — | — | 15.00 | 12 00 |
| 13.00 | — | — | — | — | — |
| 12.50 | 10.50 | 12.00 | — | — | — |
| — | — | — | — | 12.00 | 10.00 |
| — | — | — | — | — | — |
| 12.00 | 10.00 | 12.00 | 10.00 | 15.00 | 12.00 |
| 12.00 | 11.00 | 12.50 | 12.00 | 12.00 | 10.00 |
| 12.00 | 10.00 | 13 00 | 11.00 | 11.50 | 10.00 |
| 12.50 | 10.50 | 12.00 | 10.00 | — | — |
| 12.50 | 10.50 | 12.50 | 10.50 | — | — |
| 13.00 | 11.00 | 14.00 | 12.00 | — | — |
| — | — | — | — | 15.50 | 12.50 |
| 5.75 | — | — | — | — | — |
| — | — | — | — | 16.50 | 13.00 |
| — | — | — | — | 16.00 | 12.50 |
| — | — | — | — | 20.00 | — |

1985 ರಿಂದ 1989ರವರೆಗೆ ಕೊಡಗು ಜಿಲ್ಲೆಯ ಪರಿಣತರಲ್ಲದ ವ್ಯವಸಾಯ ಕಾರ್ಮಿಕರ

| ಉದ್ಯೋಗದ ಹೆಸರು | 1987 ತರಿ | | ಖುಷ್ಕಿ | | ಬಾಗಾಯ್ತು (ತೋಟ) | |
|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಉಳುವುದು | 15.00 | — | 15.00 | — | — | — |
| ಅಗೆಯುವುದು | 15.00 | — | 15.00 | — | 16.00 | 12.50 |
| ಹೆಂಟೆ ಹೊಡೆಯುವುದು | 14.00 | — | — | — | — | — |
| ಬಿತ್ತನೆ ಕೆಲಸ | 15.00 | 12.00 | 12.00 | — | — | — |
| ಮಧ್ಯಂತರ ಕೊಯ್ಲು | — | — | — | — | 14.00 | 11.00 |
| ನೀರು ಹಾಯಿಸುವುದು | — | — | — | — | — | — |
| ಗೊಬ್ಬರ ಹಾಕುವುದು | 15.00 | 12.00 | 15.00 | 12.00 | 15.00 | 12.00 |
| ಸಸಿ ನೆಡುವುದು | 15.00 | 12.00 | 15.00 | 12.00 | 12.50 | 11.00 |
| ಕಳೆ ತೆಗೆಯುವುದು | 14.00 | 12.00 | 14.00 | 12.00 | 12.00 | 10.00 |
| ಕೊಯ್ಲು ಮಾಡುವುದು | 14.00 | 12.00 | 15.00 | 12.00 | — | — |
| ತೆನೆ ಬಡಿಯುವುದು | 15.00 | 12.00 | 15.00 | 12.00 | — | — |
| ಕಾಳು ತೂರುವುದು | 15.00 | 12.00 | 14.00 | 12.00 | — | — |
| ಕಾಫಿ ಬೀಜ ಬಿಡಿಸುವುದು | — | — | — | — | 18.00 | 15.00 |
| ದನ, ಕುರಿ, ಮೇಕೆ ಮೇಯಿಸುವುದು | 7.00 | — | — | — | — | — |
| ಅಡಿಕೆ ಮತ್ತು ಗೋಡಂಬಿ ಬಿಡಿಸುವುದು | — | — | — | — | 18.00 | 13.00 |
| ಏಲಕ್ಕಿ ಬಿಡಿಸುವುದು | — | — | — | — | 16.00 | 12.50 |
| ಮೆಣಸು ಬಿಡಿಸುವುದು | — | — | — | — | 25.00 | — |

ದಿನಗೂಲಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| 1988 | | | | | |
|---|---|---|---|---|---|
| ತರಿ | | ಖುಷ್ಕಿ | | ಭಾಗಾಯ್ತು | |
| ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| 15.00 | — | 16.00 | — | — | — |
| 15.00 | — | 16.00 | — | 17.00 | 14.00 |
| 15.00 | — | — | — | — | — |
| 15.00 | 12.50 | 15.00 | 12.00 | — | — |
| — | — | — | — | 15.00 | 13.00 |
| — | — | — | — | — | — |
| 15.50 | 13.00 | 15.00 | 12.00 | 16.50 | 12.50 |
| 15.00 | 12.00 | 18.00 | 15.00 | 13.00 | 12.00 |
| 16.00 | 13.00 | 16.00 | 12.50 | 12.00 | 10.50 |
| 15.00 | 12.50 | 15.00 | 12.50 | — | — |
| 16.00 | 12.00 | 15.50 | 12.00 | — | — |
| 16.00 | 12.00 | 15.50 | 12.00 | — | — |
| — | — | — | — | 18.00 | 15.00 |
| 7.25 | — | — | — | — | — |
| — | — | — | — | 20.00 | 15.00 |
| — | — | — | — | 16.50 | 13.00 |
| — | — | — | — | 28.00 | — |

| ಉದ್ಯೋಗದ ಹೆಸರು | 1989 ತರಿ | | ಖುಷ್ಕಿ | | ಬಾಗಾಯ್ತು (ತೋಟ) | |
|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಉಳುವುದು | 16.00 | — | 18.00 | — | — | — |
| ಅಗೆಯುವುದು | 16.00 | 15.00 | 16.00 | 15.00 | 18.00 | 15.00 |
| ಹೆಂಟೆ ಹೊಡೆಯುವುದು | 16.00 | — | — | — | — | — |
| ಬಿತ್ತನೆ ಕೆಲಸ | 16.00 | 12.50 | 15.00 | 12.00 | — | — |
| ಮಧ್ಯಂತರ ಕೊಯ್ಲು | — | — | — | — | 16.00 | 13.00 |
| ನೀರು ಹಾಯಿಸುವುದು | — | — | — | — | — | — |
| ಗೊಬ್ಬರ ಹಾಕುವುದು | 16.00 | 13.50 | 16.00 | 13.50 | 16.50 | 14.00 |
| ಸಸಿ ನೆಡುವುದು | 17.00 | 15.00 | 17.00 | 14.00 | 14.00 | 13.00 |
| ಕಳೆ ತೆಗೆಯುವುದು | 16.00 | 13.00 | 17.00 | 15.00 | 20.00 | 18.00 |
| ಕೊಯ್ಲು ಮಾಡುವುದು | 15.00 | 12.50 | 18.00 | 15.00 | — | — |
| ತೆನೆ ಬಡಿಯುವುದು | 16.50 | 12.00 | 19.00 | 16.00 | — | — |
| ಕಾಳು ತೂರುವುದು | 16.00 | 12.00 | 16.00 | 15.00 | — | — |
| ಕಾಫಿ ಬೀಜ ಬಿಡಿಸುವುದು | — | — | — | — | 22.00 | 20.00 |
| ದನ, ಕುರಿ, ಮೇಕೆ ಮೇಯಿಸುವುದು | 8.00 | — | — | — | — | — |
| ಅಡಿಕೆ ಮತ್ತು ಗೋಡಂಬಿ ಬಿಡಿಸುವುದು | — | — | — | — | 22.00 | 20.00 |
| ಏಲಕ್ಕಿ ಬಿಡಿಸುವುದು | — | — | — | — | 20.00 | 16.00 |
| ಮೆಣಸು ಬಿಡಿಸುವುದು | — | — | — | — | 30.00 | — |

## ಜೀವನಮಟ್ಟ

ಕೊಡಗು ಅನೇಕ ಶತಮಾನಗಳವರೆಗೂ ಆಹಾರ ಮತ್ತು ಇತರ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸ್ವಯಂಪೂರ್ಣತೆಯನ್ನು ಹೊಂದಿತ್ತು. ಕಣಿವೆಗಳು ಮತ್ತು ಬೆಟ್ಟದ ಇಳಿಜಾರು ಪ್ರದೇಶಗಳು ಫಲವತ್ತಾಗಿದ್ದು ಕೃಷಿ ಅಭಿವೃದ್ಧಿಗೆ ಸಹಾಯಕಾರಿಯಾಗಿದ್ದವು. ಇಲ್ಲಿನ ಮುಖ್ಯ ಆಹಾರ ಬೆಳೆ ಬತ್ತ. ಕಳೆದ ಶತಮಾನದ ಉತ್ತರಾರ್ಧದಲ್ಲಿ ಕಾಫಿ ತೋಟಗಳು ಜಿಲ್ಲೆಯ ಬಹುಭಾಗವನ್ನಾಕ್ರಮಿಸಿಕೊಂಡ ಪರಿಣಾಮವಾಗಿ ಜನಗಳ ಆದಾಯ ಮಟ್ಟ ಅಧಿಕಗೊಂಡಿತು. ಕೊಡಗಿನವರ ಆದಾಯ ಮತ್ತು ಜೀವನ ಮಟ್ಟವು, ಹೊರಗಿನಿಂದ ಬಂದ ಕೂಲಿ ಕೆಲಸಗಾರರ ಆದಾಯ ಹಾಗೂ ಜೀವನಾಮಟ್ಟಕ್ಕಿಂತ ಮೇಲಿನದು. ಇಲ್ಲಿನ ಜೀವನಮಟ್ಟ ಅಧಿಕವಾಗಿದ್ದರೂ ಪಟ್ಟಣಗಳ ಬೆಳವಣಿಗೆಯು ಅಧಿಕವಾಗಿಲ್ಲದೇ ಇರುವುದರಿಂದ ರಾಜ್ಯದ ಇತರ ಜಿಲ್ಲೆಗಳಲ್ಲಿರುವ ಜನಗಳ ಜೀವನಮಟ್ಟಕ್ಕೆ ಹೋಲಿಸಿ ನೋಡಲು ಸಾಧ್ಯವಾಗುವುದಿಲ್ಲ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಜಿಲ್ಲೆಯು ಗಣನೀಯ ಪ್ರಗತಿಯನ್ನು ಸಾಧಿಸಿದೆ. ಕಾಫಿ ಬೆಲೆಯು ಹೆಚ್ಚಿದುದರ ಪರಿಣಾಮವಾಗಿ ಕಾಫಿ ತೋಟಗಾರರ ಆದಾಯ ಮಟ್ಟ ಹೆಚ್ಚಿದೆ. ಕಾರ್ಮಿಕ ಕಾಯ್ದೆಯು ಕಾರ್ಮಿಕರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿರುವುದರ ಜೊತೆಗೆ ಅವರ ಆದಾಯಮಟ್ಟ ಸುಧಾರಿಸಿರುವಂತೆ ಮಾಡಿರುವುದರಿಂದ ಜೀವನಮಟ್ಟ ಉತ್ತಮಗೊಂಡಿದೆ.

ಜೀವನಮಟ್ಟವನ್ನು ನಿರ್ಧರಿಸಬೇಕಾದರೆ ಆ ಪ್ರದೇಶದ ಜನಗಳನ್ನು ಅನೇಕ ಪ್ರಕಾರಗಳಾಗಿ ವಿಂಗಡಿಸಿ ಪ್ರತೀ ಗುಂಪಿನ ಜೀವನಮಟ್ಟವನ್ನು ನಿರ್ಧರಿಸಬೇಕಾಗುತ್ತದೆ. ಬಡವರು, ಮಧ್ಯಮ ವರ್ಗದವರು ಮತ್ತು ಶ್ರೀಮಂತರು ಎಂಬ ಮೂರು ಪ್ರಕಾರಗಳಲ್ಲಿ ನೋಡಿದಾಗ ಬಹುಸಂಖ್ಯಾತ ಕೂಲಿ ಕೆಲಸಗಾರರು ಬಡವರ ಪ್ರಕಾರದಲ್ಲೂ, ಸರ್ಕಾರಿ ನೌಕರರು, ಖಾಸಗೀ ಸಂಸ್ಥೆಗಳ ನೌಕರರು, ವ್ಯಾಪಾರಿಗಳು, ಮಧ್ಯಮ ವರ್ಗದ ಪ್ರಕಾರದಲ್ಲೂ, ದೊಡ್ಡ ಜಮೀನುದಾರರು ಮತ್ತು ಗೊತ್ತಾದ ಆದಾಯವನ್ನು ಹೊಂದಿದವರು ಶ್ರೀಮಂತ ಪ್ರಕಾರದಲ್ಲೂ ಇರುವುದು ಕಂಡು ಬರುತ್ತದೆ.

ಗ್ರಾಮಾಂತರ ಪ್ರದೇಶದಲ್ಲಿ ಭೂ ರಹಿತ ಕೃಷಿ ಕಾರ್ಮಿಕರ ಸಂಖ್ಯೆ ಅಧಿಕವಾಗಿದೆ. ಕೃಷಿಯು ಅರೆ ಉದ್ಯೋಗವನ್ನು ಒದಗಿಸುವ ವೃತ್ತಿಯಾಗಿರುವುದರಿಂದ ಬಹುಸಂಖ್ಯಾತ ಕೃಷಿ ಕಾರ್ಮಿಕರ ಆದಾಯದ ಮಟ್ಟ ಬಹಳ ಕಡಿಮೆ ಇರುತ್ತದೆ. ತೋಟಗಳಲ್ಲಿ ಕೆಲಸ ಮಾಡುವವರಿಗೆ, ಮಳೆಗಾಲದಲ್ಲಿ ಕೆಲಸವಿರುವುದಿಲ್ಲದಿರುವುದರಿಂದ ಇವರುಗಳಿಗೆ ಬರುವ ಆದಾಯವು ವೆಚ್ಚವನ್ನು ಸರಿದೂಗಿಸುವಷ್ಟಿರುವುದಿಲ್ಲ. ಇದೇ ರೀತಿ ಸಣ್ಣ ಹಿಡುವಳಿದಾರರ ಆದಾಯವು ವೆಚ್ಚವನ್ನು ಸರಿದೂಗಿಸಲು ಸಾಧ್ಯವಿಲ್ಲದೆ ಇರುವುದರಿಂದ ಇವರಿಬ್ಬರ ಜೀವನಮಟ್ಟವೂ ಕೆಳ ಹಂತದ್ದಾಗಿದೆ.

ಕೊಡಗಿನಲ್ಲಿ ಅಧಿಕ ಪ್ರಮಾಣದ ಹಿಡುವಳಿಗಾರರು ಐದು ಎಕರೆಗೂ ಹೆಚ್ಚು ಭೂ ಹಿಡುವಳಿಯನ್ನು ಹೊಂದಿದವರಾಗಿದ್ದಾರೆ. ಪ್ರತೀ ಮನೆಯಲ್ಲಿ ಸರಾಸರಿ ಆರರಿಂದ ಎಂಟು ಜನಗಳಿದ್ದಾರೆ. ಅವರ ಆದಾಯವು ವ್ಯವಸಾಯೋತ್ಪಾದನೆ ಮತ್ತು ಪಶುಪಾಲನೆಯಿಂದ ಬರುತ್ತದೆ. ಆದರೆ ಈ ಮೂಲಗಳಿಂದ ಬರುವ ಆದಾಯಕ್ಕಿಂತ ಇತ್ತೀಚಿನ ದರಗಳಲ್ಲಿ ಕೊಳ್ಳಲು ಆಗುವ ವೆಚ್ಚದ ಪ್ರಮಾಣ ಅಧಿಕವಾಗಿರುವುದರಿಂದ ಜೀವನಮಟ್ಟ ಸುಧಾರಣೆಗೊಳ್ಳದೆ ಕೆಳಮಟ್ಟದಲ್ಲಿಯೇ ಉಳಿದಿದೆ. ಪಟ್ಟಣಗಳಲ್ಲಿ ಕೆಲಸ ಮಾಡುವ ಕೂಲಿಗಾರರ ಮಾಸಿಕ ವೇತನವು ಜೀವನಾವಶ್ಯಕ ಸರಕುಗಳನ್ನು ಕೊಳ್ಳುವಷ್ಟು ಇಲ್ಲದೆ ಇರುವುದರಿಂದ ಅವರ ಜೀವನಮಟ್ಟವೂ ಗ್ರಾಮಾಂತರ ಪ್ರದೇಶದ ಸಣ್ಣ ಹಿಡುವಳಿದಾರರ ಹಾಗೂ ಕೃಷಿ ಕಾರ್ಮಿಕರಿಗಿರುವಂತೆ ಕೆಳಮಟ್ಟದಲ್ಲೇ ಉಳಿದಿದೆ. ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ ಕನಿಷ್ಟ ವೇತನದ ಕಾಯ್ದೆಗನುಗುಣವಾಗಿ ತಿಂಗಳ ವೇತನ ಅಥವಾ ದಿನಗೂಲಿ ದೊರೆಯುತ್ತಿರುವುದರಿಂದ ಅವರ ಜೀವನಮಟ್ಟ ಸ್ವಲ್ಪ ಸುಧಾರಿಸಿದೆ. ಮಧ್ಯಮ ತರಗತಿಗೆ ಸೇರಿದ ಸರ್ಕಾರಿ ನೌಕರರ ಹಾಗೂ ಖಾಸಗೀ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಆದಾಯದ ಬಹುಭಾಗ ಮನೆ ಬಾಡಿಗೆಗೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ವೆಚ್ಚವಾಗುವುದರಿಂದ ಇವರ ಜೀವನಮಟ್ಟವು ಸುಧಾರಣೆ ಹೊಂದಿಲ್ಲ. ಖಾಸಗೀ ಉದ್ಯಮದಲ್ಲಿ ತೊಡಗಿರುವ ವೈದ್ಯರು, ವಕೀಲರು, ವಾಣಿಜ್ಯೋದ್ಯಮಿಗಳು ಹಾಗೂ ಇನ್ನಿತರರ ಆದಾಯಮಟ್ಟವು ಅಧಿಕವಾಗಿದ್ದರೂ ಪೈಪೋಟಿಯ ಪರಿಣಾಮವಾಗಿ ಅದು ಪರಿಮಿತಗೊಳ್ಳಬೇಕಾಗುತ್ತದೆ. ಕೊಡಗಿನ ಶ್ರೀಮಂತ ವರ್ಗಕ್ಕೆ ಸೇರಿದವರು ಕಾಫಿ ಏಲಕ್ಕಿ, ಕಿತ್ತಳೆ ಬೆಳೆಗಾರರು. ಇವರು ಆಧುನಿಕ ಜೀವನಕ್ಕೆ ಬೇಕಾಗುವ ಸಲಕರಣೆಗಳನ್ನು ಹೊಂದಿದ್ದು ಆರಾಮದ ಜೀವನವನ್ನು ನಡೆಸುತ್ತಿದ್ದಾರೆ.

1982 ಮೂಲ ವರ್ಷಕ್ಕನುಗುಣವಾಗಿ (100) 1988 ರಿಂದ 1990ರ ವರೆಗೆ ಮಡಿಕೇರಿಯ ಕಾರ್ಮಿಕ ವರ್ಗದ ಬಳಕೆದಾರ (ಗ್ರಾಹಕ) ಬೆಲೆಯ ಸೂಚ್ಯಂಕ ಪ್ರಮಾಣವನ್ನು ಈ ಕೆಳಗಿನ ನಮೂನೆಯಲ್ಲಿ ಕೊಟ್ಟಿದೆ.

| ವರ್ಷ | ತಿಂಗಳು | ಆಹಾರ ಸೂಚ್ಯಂಕ | ಸಾಮಾನ್ಯ ಸೂಚ್ಯಂಕ |
|---|---|---|---|
| 1988 | ಅಕ್ಟೋಬರ್ | 176 | 161 |
| | ನವೆಂಬರ್ | 171 | 159 |
| | ಡಿಸೆಂಬರ್ | 168 | 157 |
| 1989 | — | 173 | 162 |
| 1990 | — | 183 | 173 |

ಆಧಾರ : ಲೇಬರ್ ಬ್ಯೂರೋ, ಸಿಮ್ಲಾ.

## ಉದ್ಯೋಗ

ಕೊಡಗು ಜಿಲ್ಲೆಯು ವ್ಯವಸಾಯ ಪ್ರಧಾನವಾಗಿದ್ದು, ವ್ಯವಸಾಯ ಹಾಗೂ ವ್ಯವಸಾಯೋದ್ಯಮ ಕ್ಷೇತ್ರವು ಪ್ರಮುಖ ಉದ್ಯೋಗದ ಮೂಲವಾಗಿದೆ. ರಾಜರುಗಳ ಕಾಲ ದಲ್ಲಿ ಸೈನ್ಯ, ಅರಮನೆ ಕಾವಲು, ಸೇವಾವೃತ್ತಿ, ಸಂಗೀತ, ಕಲೆ ಮೊದಲಾದ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ದೊರೆಕಿತ್ತು. ಅರಮನೆ, ದೇವಸ್ಥಾನ, ಕೆರೆ ಕಟ್ಟೆಗಳನ್ನು ಕಟ್ಟುವ ಪರಿಣತ ಹಾಗೂ ಪರಿಣತರಲ್ಲದವರಿಗೆ ಕೆಲಸ ಸಿಗುತ್ತಿತ್ತು. ವ್ಯವಸಾಯವನ್ನು ಅಭಿವೃದ್ಧಿ ಪಡಿಸಲು ವ್ಯವಸಾಯಗಾರರನ್ನು ನೆರೆಯ ಜಿಲ್ಲೆಗಳಿಂದ ಆಹ್ವಾನಿಸಿ ಭೂಮಿಯನ್ನು ಕೊಟ್ಟು ಉದ್ಯೋಗವನ್ನೊದಗಿಸಿರುವ ಸಂದರ್ಭಗಳೂ ಇತ್ತು. ಕುಶಲ ಕಾರ್ಮಿಕರು ಸಮಾರಂಭಗಳಲ್ಲಿ ಧರಿಸುವ ಕಸೂತಿ ಯಿಂದ ಕೂಡಿದ ಬಟ್ಟೆಗಳನ್ನು ತಯಾರಿಸುವುದು, ಕೆತ್ತನೆ ಕೆಲಸದ ಕತ್ತಿಗಳನ್ನು ತಯಾರಿಸುವುದು, ಮೊದಲಾದವುಗಳಲ್ಲಿ ತೊಡಗಿರುತ್ತಿದ್ದರು. ಇವರ ಸಂಖ್ಯೆ ತೀರ ಅಲ್ಪ. 1850ರ ನಂತರ ಕಾಫಿ ತೋಟಗಳ ಬೆಳವಣಿಗೆಯು ಶ್ರಮಜೀವಿಗಳಿಗೆ ಅಧಿಕ ಪ್ರಮಾಣದ ಉದ್ಯೋಗಾವಕಾಶವನ್ನು ಒದಗಿಸಿತು. ಜಿಲ್ಲೆಯಲ್ಲಿ ಕೈಗಾರಿಕೆಗಳು ಇತ್ತೀಚೆಗೆ ಸ್ಥಾಪನೆಯಾಗಿದ್ದು ತಜ್ಞ ಕಾರ್ಮಿಕರು ಮತ್ತು ಶ್ರಮಜೀವಿಗಳಿಗೆ ಅಧಿಕ ಪ್ರಮಾಣದ ಉದ್ಯೋಗಾವಕಾಶವನ್ನು ಒದಗಿಸಿವೆ. ಹಿಂದೆ ಕೆಲಸಗಾರರಿಗೆ ಕೂಲಿಯ ಹಣವು ವಸ್ತು ರೂಪದಲ್ಲಿ ದೊರಕು ತ್ತಿತ್ತು. ಈಗ ಎಲ್ಲಾ ಕ್ಷೇತ್ರಗಳಲ್ಲೂ ಹಣವು ವಿನಿಮಯ ಮಾಧ್ಯಮವಾಗಿದ್ದರೂ ವಸ್ತು ವಿನಿಮಯವು ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ರೂಢಿಯಲ್ಲಿರುವುದು ಕಾಣುತ್ತದೆ.

ಕೊಡಗು ಜಿಲ್ಲೆಯುಲ್ಲಿ 1971ರಲ್ಲಿ 1,52.838 ಕೆಲಸಗಾರರಿದ್ದು ಒಟ್ಟು ಜನಸಂಖ್ಯೆಯ 40.40ರಷ್ಟು ಸ್ಥಾನ ವನ್ನಾಕ್ರಮಿಸಿಕೊಂಡಿದ್ದರು. 1981ರಲ್ಲಿ ಇವರ ಸಂಖ್ಯೆ 2,08,700 ಇದ್ದು, ಇದು ಶೇಕಡಾ ಪ್ರಮಾಣ 47.27 ರಷ್ಟು ಇತ್ತು. ಜೀವನಾಧಾರ ಗುಂಪಿಗನುಗುಣವಾಗಿ 1981 ಮತ್ತು 1971ರ ಕೆಲಸಗಾರರ ಪ್ರಭೇದಗಳು ಈ ರೀತಿ ಇವೆ : 1971ರಲ್ಲಿನ ಕೆಲಸಗಾರರ ಸಂಖ್ಯೆಯನ್ನು ಆವರಣದಲ್ಲಿ ಕೊಡಲಾಗಿದೆ. ವ್ಯವಸಾಯಗಾರರು 48,643 (35,996), ವ್ಯವಸಾಯ ಕಾರ್ಮಿಕರು 33,024 (30,053), ಗಣಿ ಕಾರ್ಮಿಕರು 75,754 (44,831), ಗೃಹೋಪಕರಣ ಮತ್ತು ಇತರ ಕೈಗಾರಿಕೆಗಳ ಕೆಲಸಗಾರರು 11,199 (7,400), ರಸ್ತೆ, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿ ದವರು 5,214 (4,863), ವ್ಯಾಪಾರ ಮತ್ತು ವಾಣಿಜ್ಯ ಕೆಲಸಗಾರರು 12,382 (8,689), ಸಾರಿಗೆ ಸಂಪರ್ಕದಲ್ಲಿ ತೊಡಗಿಸಲ್ಪಟ್ಟವರು 5,291 (2,824), ಇತರ ಸೇವೆ ಯಲ್ಲಿದ್ದವರು 17,193 (18,073). ಜಿಲ್ಲೆಯಲ್ಲಿ ಮೂರು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, 1990ರ ಅಂತ್ಯದ ವೇಳೆಯಲ್ಲಿ 803 ಜನ ಕಾರ್ಮಿಕರಿಗೆ ಉದ್ಯೋಗ ವನ್ನೊದಗಿಸಿದ್ದವು. ಇದೇ ಕಾಲಾವಧಿಯಲ್ಲಿ ನೋಂದಣಿ ಹೊಂದಿದ್ದ 1,171 ಸಣ್ಣ ಪ್ರಮಾಣದ ಮತ್ತು ಅತಿ ಸಣ್ಣ ಕೈಗಾರಿಕೆಗಳು 5,080 ಕಾರ್ಮಿಕರಿಗೆ ಉದ್ಯೋಗವನ್ನೊದಗಿ ಸಿದ್ದವು. ನೋಂದಣಿ ಹೊಂದಿರದ ಸಣ್ಣ ಪ್ರಮಾಣದ ಕೈಗಾರಿಕೆಗಳು ಅಧಿಕ ಪ್ರಮಾಣದಲ್ಲಿ ಉದ್ಯೋಗವನ್ನು ಒದಗಿಸಿವೆ. ಇವುಗಳ ಜೊತೆಗೆ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆ, ಜೇನುಸಾಕಣೆ, ಕರಕುಶಲ ಕೈಗಾರಿಕೆ, ಕೈಮಗ್ಗ ಮೊದಲಾದವುಗಳು ಸಹ ಸಾಕಷ್ಟು ಉದ್ಯೋಗವನ್ನೊದಗಿಸಿವೆ.

ಮಡಿಕೇರಿಯಲ್ಲಿ ಕೇಂದ್ರ ಸರಕಾರವು ದಿನಾಂಕ 1-4-1940 ರಂದು ಉದ್ಯೋಗ ವಿನಿಮಯ ಕಚೇರಿ ಯನ್ನು ಸ್ಥಾಪಿಸಿತು. ರಾಜ್ಯಗಳ ಪುನರ್ ವಿಂಗಡನೆಯಾದಾಗ (1956) ಇದರ ಆಡಳಿತವು ರಾಜ್ಯ ಸರಕಾರದ ವ್ಯಾಪ್ತಿಗೊಳ ಪಟ್ಟಿತು.

1961 ರಿಂದ 1976ರ ವರೆಗೆ ಕೊಡಗು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೋಂದಣಿ ಮಾಡಿಸಿದವರ ಸಂಖ್ಯೆ, ಪ್ರಕಟಿಸಿದ ಖಾಲಿ ಹುದ್ದೆಗಳ ಸಂಖ್ಯೆ ಮತ್ತು ಭರ್ತಿಗೊಂಡವರ ಸಂಖ್ಯೆಯನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

| ವರ್ಷ | ನೋಂದಣಿಗೊಂಡವರ ಸಂಖ್ಯೆ | ಪ್ರಕಟಿತ ಖಾಲಿ ಹುದ್ದೆಗಳ ಸಂಖ್ಯೆ | ಭರ್ತಿಗೊಂಡ ಹುದ್ದೆಗಳ ಸಂಖ್ಯೆ |
|---|---|---|---|
| 1961 | 1,395 | 831 | 760 |
| 1962 | 1,692 | 983 | 867 |
| 1963 | 1,968 | 460 | 448 |
| 1964 | 2,295 | 865 | 612 |
| 1965 | 2,497 | 498 | 397 |
| 1966 | 2,180 | 494 | 356 |
| 1967 | 2,732 | 511 | 533 |
| 1968 | 3,408 | 446 | 281 |
| 1969 | 3,403 | 601 | 451 |
| 1970 | 3,395 | 451 | 325 |
| 1971 | 4,094 | 584 | 442 |
| 1972 | 4,591 | 273 | 218 |
| 1973 | 4,670 | 330 | 274 |
| 1974 | 4,988 | 159 | 159 |
| 1975 | 5,505 | 239 | 229 |
| 1976 | 5,508 | 408 | 359 |

ಕೊಡಗು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ 1980–81 ರಿಂದ 1989–90ರವರೆಗೆ ವಿದ್ಯಾರ್ಹತೆಗನುಗುಣವಾಗಿ

| ಕ್ರ. ಸಂ. | ವಿದ್ಯಾರ್ಹತೆ ಪ್ರಕಾರ | 1980–81 ಗಂ. | 1980–81 ಹೆಂ. | 1982–83 ಗಂ. | 1982–83 ಹೆಂ. | 1984–85 ಗಂ. | 1984–85 ಹೆಂ. |
|---|---|---|---|---|---|---|---|
| 1. | ಪದವೀಧರರು | | | | | | |
| | ಅ) ಕಲಾ ವಿಭಾಗ | 331 | 338 | 336 | 328 | 403 | 320 |
| | ಆ) ವಿಜ್ಞಾನ ವಿಭಾಗ | 99 | 65 | 103 | 63 | 107 | 83 |
| | ಇ) ವಾಣಿಜ್ಯ | 101 | 20 | 112 | 29 | 157 | 51 |
| 2. | ಡಿಪ್ಲೊಮಾದಾರರು | | | | | | |
| | ಅ) ಸಿವಿಲ್ | 4 | — | 5 | 1 | 8 | — |
| | ಆ) ಮೆಕ್ಯಾನಿಕಲ್ | 6 | — | 10 | — | 24 | — |
| | ಇ) ಇಲೆಕ್ಟ್ರಿಕಲ್ | 3 | — | 5 | — | 15 | — |
| | ಈ) ಆಟೋಮೊಬೈಲ್ | 1 | — | 4 | — | — | — |
| 3. | ಐ.ಟಿ.ಐ. | | | | | | |
| | ಅ) ಫಿಟ್ಟರ್ | 3 | — | 10 | — | 14 | — |
| | ಆ) ಟರ್ನರ್ | 8 | — | 11 | — | 9 | — |
| | ಇ) ಮೆಷಿನಿಸ್ಟ್ | 1 | — | 5 | — | 5 | — |
| | ಈ) ಇಲೆಕ್ಟ್ರೀಷಿಯನ್ | 6 | — | 6 | — | 9 | — |
| 4. | ಬೆರಳಚ್ಚುಗಾರರು | 31 | 28 | 37 | 119 | 64 | 188 |
| | ಸ್ಟೆನೋಗ್ರಾಫರ್ | 5 | 3 | 1 | 4 | 1 | 15 |
| 5. | ಅ) ಸಿ.ಪಿ.ಎಡ್. | 2 | 4 | 6 | 5 | 11 | — |
| | ಆ) ಟಿ.ಸಿ.ಎಚ್. | 25 | 190 | 68 | 208 | 70 | 274 |
| 6. | ನರ್ಸರಿ | — | 4 | — | 6 | — | 30 |
| 7. | ಚಾಲಕರು (ಭಾರಿ) | 10 | — | 77 | — | 117 | — |
| | ಚಾಲಕರು (ಲಘು) | 78 | — | 144 | — | 131 | — |
| 8. | ಪಿ.ಯು.ಸಿ. | 310 | 301 | 371 | 368 | 655 | 485 |
| 9. | ಎಸ್.ಎಸ್.ಎಲ್.ಸಿ. | 1,358 | 683 | 1,399 | 724 | 1,812 | 971 |
| 10. | ಮಾಧ್ಯಮಿಕ ಶಾಲೆ | 918 | 102 | 963 | 204 | 1,521 | 266 |
| 11. | ಓದು ಬರಹ ಬಲ್ಲವರು | 241 | 41 | 228 | 61 | 459 | 165 |
| 12. | ಅವಿದ್ಯಾವಂತರು | 560 | 246 | 621 | 320 | 39 | 106 |
| | ಒಟ್ಟು | 4,101 | 2,025 | 4,522 | 2,439 | 5,631 | 2,954 |

ಆಧಾರ : ಜಿಲ್ಲಾ ಉದ್ಯೋಗ ವಿನಿಮಯ

ನೋಂದಣಿಗೊಂಡವರ ಸಂಖ್ಯೆಯನ್ನು ಈ ತಖ್ತೆಯಲ್ಲಿ ಕೊಡಲಾಗಿದೆ.

| 1986-87 | | 1987-88 | | 1988-89 | | 1989-90 | |
|---|---|---|---|---|---|---|---|
| ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. |
| 394 | 367 | 465 | 375 | 293 | 162 | 289 | 215 |
| 112 | 80 | 127 | 99 | 98 | 77 | 61 | 84 |
| 187 | 70 | 232 | 98 | 179 | 102 | 176 | 120 |
| 11 | — | 15 | — | 16 | — | 19 | — |
| 19 | — | 21 | — | 21 | — | 25 | — |
| 15 | — | 16 | — | 5 | — | 8 | — |
| — | — | — | — | 6 | — | 8 | — |
| 16 | — | 23 | — | 23 | — | 45 | — |
| 10 | — | 14 | — | 14 | — | 20 | — |
| 12 | — | 29 | — | 33 | — | 37 | — |
| 6 | — | 19 | — | 10 | — | 10 | — |
| 80 | 249 | 103 | 338 | 91 | 338 | 110 | 399 |
| — | 10 | — | 15 | — | 22 | 1 | 25 |
| 19 | 22 | 25 | 23 | 22 | 26 | 33 | 27 |
| 66 | 391 | 69 | 467 | 75 | 407 | 79 | 479 |
| — | 43 | — | 43 | — | 42 | — | 37 |
| 132 | — | 229 | — | 153 | — | 195 | — |
| 203 | — | 169 | — | 221 | — | 242 | — |
| 828 | 580 | 928 | 812 | 907 | 286 | 748 | 725 |
| 2,836 | 1,508 | 3,264 | 1,880 | 2,731 | 1,223 | 2,875 | 1,245 |
| 2,087 | 418 | 2,621 | 543 | 2,057 | 6,582 | 2,115 | 495 |
| 638 | 248 | 814 | 312 | 523 | 356 | 422 | 282 |
| 296 | 328 | 367 | 269 | 243 | 251 | 79 | 71 |
| 1,967 | 4,314 | 9,550 | 5,274 | 7,721 | 9,874 | 7,597 | 4,204 |

ಕಚೇರಿ, ಮಡಿಕೇರಿ.

ಕೊಡಗು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಚಾಲ್ತಿ ದಾಖಲಾತಿಯಲ್ಲಿ 1980-81ರಿಂದ 1989-90ರ ವರೆಗೆ ಪ್ರತೀ ವರ್ಷವು ದಾಖಲಾತಿಗಾಗಿ ಬಂದ ತಖ್ತೆಗಳ ಸಂಖ್ಯೆಯನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ.

| ವರ್ಷ | ಪುರುಷರು | ಮಹಿಳೆಯರು | ಒಟ್ಟು |
|---|---|---|---|
| 1980–81 | 4,101 | 2,025 | 6,126 |
| 1981–82 | 4,608 | 2,374 | 6,982 |
| 1982–83 | 4,522 | 2,499 | 6.971 |
| 1983–84 | 4,867 | 2,647 | 7.514 |
| 1984–85 | 5,431 | 2,954 | 8,385 |
| 1985–86 | 6,692 | 3,573 | 10,265 |
| 1986–87 | 7,967 | 4,314 | 12,281 |
| 1987–88 | 9,550 | 5,274 | 14,824 |
| 1988–89 | 7,721 | 3,950 | 11,671 |
| 1989–90 | 7,591 | 4,204 | 11,801 |

ಆಧಾರ : ಉದ್ಯೋಗ ವಿನಿಮಯ ಕಚೇರಿ, ಮಡಿಕೇರಿ.

ಕೊಡಗು ಜಿಲ್ಲೆಯಲ್ಲಿ 1981-82 ರಿಂದ 1989–90ರ ವರೆಗೆ ಪ್ರತೀವರ್ಷವೂ ನೋಂದಣಿಗೊಂಡ ಖಾಲಿ ಹುದ್ದೆಗಳ ಸಂಖ್ಯೆ, ಪ್ರಕಟಣೆ ಮೂಲಕ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ ಮತ್ತು ವರ್ಷದ ಕೊನೆಯವರೆಗೂ ಖಾಲಿ ಉಳಿದ ಹುದ್ದೆಗಳ ಸಂಖ್ಯೆ, ಇವುಗಳ ಮಾಹಿತಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ವರ್ಷ | ನೋಂದಣಿಗೊಂಡ ಖಾಲಿ ಹುದ್ದೆಗಳ ಸಂಖ್ಯೆ | ಪ್ರಕಟಣೆಯ ಮೂಲಕ ತಿಳಿಪಡಿಸಿದ ಖಾಲಿ ಹುದ್ದೆಗಳು | ವರ್ಷದಲ್ಲಿ ಭರ್ತಿಗೊಂಡ ಹುದ್ದೆಗಳು | ಭರ್ತಿಯಾಗದ ಖಾಲಿ ಹುದ್ದೆಗಳು |
|---|---|---|---|---|
| 1981–82 | 2,284 | 235 | 151 | 108 |
| 1982–83 | 3,024 | 197 | 212 | 205 |
| 1983–84 | 2,322 | 312 | 320 | 85 |
| 1984–85 | 4,164 | 487 | 361 | 356 |
| 1985–86 | 3,117 | 282 | 375 | 154 |
| 1986–87 | 2,852 | 192 | 135 | 162 |
| 1987–88 | 3,439 | 237 | 190 | 165 |
| 1988–89 | 2,376 | 138 | 143 | 94 |
| 1989–90 | 3,025 | 142 | 230 | 68 |

ಆಧಾರ : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಡಿಕೇರಿ.

1980-81 ರಿಂದ 1989-90ರ ವರೆಗೆ ಪ್ರತೀ ವರ್ಷವೂ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಮೂಲಕ ಉದ್ಯೋಗವನ್ನು ಪಡೆದವರ ಸಂಖ್ಯೆ ಮತ್ತು ಉದ್ಯೋಗವನ್ನು ಒದಗಿಸಿರುವ ಸರ್ಕಾರ ಮತ್ತು ಸಂಸ್ಥೆಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ವರ್ಷ | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ಕೇಂದ್ರ ಸರ್ಕಾರ ಸಂಸ್ಥೆಗಳು | ಅರೆ ರಾಜ್ಯ ಸರ್ಕಾರ ಸಂಸ್ಥೆಗಳು | ಸ್ಥಳೀಯ ಸಂಸ್ಥೆಗಳು |
|---|---|---|---|---|---|
| 1980-81 | 5 | 48 | 19 | 8 | 1 |
| 1981-82 | 7 | 55 | 21 | 2 | 2 |
| 1982-83 | 6 | 51 | 18 | 2 | 3 |
| 1983-84 | 30 | 72 | 38 | 4 | 1 |
| 1984-85 | 15 | 55 | 38 | 3 | 4 |
| 1985-86 | 10 | 44 | 22 | 9 | — |
| 1986-87 | 7 | 52 | 19 | 8 | 3 |
| 1987-88 | 12 | 43 | 24 | 6 | 3 |
| 1988-89 | 6 | 21 | 17 | 5 | 2 |
| 1989-90 | 6 | 59 | 16 | 8 | 3 |

ಆಧಾರ : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಡಿಕೇರಿ.

## ಆದಾಯ

ಚಾಲ್ತಿ ಬೆಲೆಗನುಗುಣವಾಗಿ ಜಿಲ್ಲೆಯ ಒಟ್ಟು ಆದಾಯ ಮತ್ತು ತಲಾ ಆದಾಯವು 1960-61ರಿಂದ 1979-80ರ ವರೆಗೆ ಲಕ್ಷ ರೂಪಾಯಿಗಳಲ್ಲಿ ಈ ರೀತಿ ಇತ್ತು. (ತಲಾ ಆದಾಯವನ್ನು ರೂ.ಗಳಲ್ಲಿ ಆವರಣದಲ್ಲಿ ಕೊಡಲಾಗಿದೆ.) ಅವು 1960–61ರಲ್ಲಿ 2,328 (727.50), 1970–71ರಲ್ಲಿ 6,921 (1,850.53), 1975–76ರಲ್ಲಿ 10,571 (2,535.01), 1978-79ರಲ್ಲಿ 11,102 (2,528.93), ಮತ್ತು 1979-80ರಲ್ಲಿ 12,807 (2,877.98) ಇದ್ದಿತ್ತೆಂಬುದನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂಕಿ-ಅಂಶಗಳಿಂದ ಸ್ಪಷ್ಟಪಟ್ಟಿದೆ. 1990–91ರಲ್ಲಿ ಜಿಲ್ಲೆಯ ಒಟ್ಟು ಆದಾಯ ರೂ. 372 ಕೋಟಿಯ ಪೈಕಿ ಕೃಷಿ ಕ್ಷೇತ್ರದಿಂದ ರೂ. 237.5 ಕೋಟಿ, ಅರಣ್ಯ ಉತ್ಪತ್ತಿಯಿಂದ ರೂ. 4.7 ಕೋಟಿ, ನಿರ್ಮಾಣದಿಂದ ರೂ. 15.2 ಕೋಟಿ, ಸಾರಿಗೆಯಿಂದ ರೂ. 10.8 ಕೋಟಿ, ವ್ಯಾಪಾರ ಮತ್ತು ಹೋಟೆಲ್ ಉದ್ಯಮದಿಂದ ರೂ. 42.4 ಕೋಟಿ ಮತ್ತು ಇತರ ಮೂಲಗಳಿಂದ ರೂ. 61.4 ಕೋಟಿ ಸಂದಾಯವಾಗಿರುತ್ತದೆ. 1987-88ರಲ್ಲಿ ಜಿಲ್ಲೆಯ ಒಟ್ಟು ಆದಾಯ ಸುಮಾರು 254 ಕೋಟಿ ರೂ.ಗಳಾಗಿದ್ದು ತಲಾ ಆದಾಯ 4,802 ರೂ.ಗಳಾಗಿರುತ್ತದೆ. ಜಿಲ್ಲೆಯ ಒಟ್ಟು ಆದಾಯದಲ್ಲಿ, 149 ಕೋಟಿ ರೂ. ಕೃಷಿಕ್ಷೇತ್ರದಿಂದಲೂ, 9 ಕೋಟಿ ರೂ. ಅರಣ್ಯ ಉತ್ಪತ್ತಿಯಿಂದಲೂ, 13 ಕೋಟಿ ರೂ. ನಿರ್ಮಾಣದಿಂದಲೂ, 10 ಕೋಟಿ ರೂ. ಸಾರಿಗೆಯಿಂದಲೂ, 13 ಕೋಟಿ ರೂ. ವ್ಯಾಪಾರ ಹಾಗೂ ಹೋಟೆಲ್ ಉದ್ಯಮದಿಂದಲೂ ಹಾಗೂ 49 ಕೋಟಿ ರೂ.ಗಳು ಇತರ ಮೂಲಗಳಿಂದಲೂ ಸಂದಾಯವಾಗಿರುತ್ತದೆ.

ಜಿಲ್ಲಾ ಆದಾಯ, ವಲಯವಾರು, ಚಾಲ್ತಿ ಮತ್ತು ಸ್ಥಿರ (1970-71) ಬೆಲೆಗಳಲ್ಲಿ ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ

| ವಿವರಗಳು | 1980–81 | 1982–83 | 1983–84 | 1984–85 | 1985–86 | 1986–87 |
|---|---|---|---|---|---|---|
| 1. ಒಟ್ಟು ಜಿಲ್ಲಾ ಆದಾಯ (ಲಕ್ಷ ರೂ.ಗಳಲ್ಲಿ) | | | | | | |
| ಎ) ಚಾಲ್ತಿ ಬೆಲೆಗಳಲ್ಲಿ | 12,564.00 | 17,034.00 | 20,142.00 | 28,779.00 | 22,153.00 | 27,803.00 |
| ಬಿ) ಸ್ಥಿರ ಬೆಲೆಗಳಲ್ಲಿ (1970–71) | 7,678.00 | 8,662.00 | 7,721.00 | 10,995.00 | 7,815.00 | 9,915.00 |
| 2. ಜಿಲ್ಲಾ ತಲಾ ಆದಾಯ (ರೂ. ಗಳಲ್ಲಿ) | | | | | | |
| ಎ) ಚಾಲ್ತಿ ಬೆಲೆಗಳಲ್ಲಿ | 2,755.26 | 3,556.16 | 4,094.00 | 5,780.08 | 4,359.00 | 5,363.23 |
| ಬ) ಸ್ಥಿರ ಬೆಲೆಗಳಲ್ಲಿ (1970-71) | 1,683.77 | 1,808.35 | 1,569.63 | 2,208.27 | 1,538.08 | 1,912.62 |

ಆಧಾರ : ತಾಲೂಕುವಾರು ಯೋಜನಾ ಅಂಕಿ ಅಂಶಗಳು (ಕೊಡಗು ಜಿಲ್ಲೆ) 1986–87.

1980-81, 1985-86 ಮತ್ತು 1989 ರಲ್ಲಿದ್ದ ಜಿಲ್ಲೆಯ ಕ್ಷೇತ್ರವಾರು ಆದಾಯವನ್ನು (ಚಾಲ್ತಿ ಹಾಗೂ ಸ್ಥಿರ ಬೆಳೆಗಳಲ್ಲಿ) ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ. | ಕ್ಷೇತ್ರಗಳು | 1980-81 | 1985-86 | 1989-90 |
|---|---|---|---|---|
| 1. | ಕೃಷಿ ಮತ್ತು ಪಶುಸಂಗೋಪನೆ (ತೋಟಗಾರಿಕೆಯೂ ಸೇರಿ) | 9,059 | 16,292(10,022)* | 15,362(7,932) |
| 2. | ಅರಣ್ಯ | 992 | 1,731(458) | 1,443(382) |
| 3. | ಮೀನುಗಾರಿಕೆ | 13 | 12( 9) | 8( 8) |
| 4. | ಗಣಿ ಮತ್ತು ಖನಿಜ ಸಂಪತ್ತು | | 1( ) | 2( 1) |
| 5. | ಉತ್ಪಾದನೆ | | | |
| | ಅ) ನೋಂದಣಿಗೊಂಡ | 46 | 148( 92) | 326(215) |
| | ಆ) ನೋಂದಣಿಗೊಳ್ಳದ | 344 | 579(394) | 1,107(553) |
| 6. | ನಿರ್ಮಾಣ | 502 | 1,122(628) | 1,781(697) |
| 7. | ವಿದ್ಯುತ್, ಅನಿಲ ಮತ್ತು ನೀರು ಸರಬರಾಜು | 44 | 121( 67) | 168( 86) |
| 8. | ಸಾರಿಗೆ | 222 | 763(432) | 1,149(564) |
| 9. | ದಾಸ್ತಾನು ಮಳಿಗೆ | 2 | 6( 3) | 12( 6) |
| 10. | ಸಂಪರ್ಕ ಸಾಧನ | 68 | 146( 96) | 413(102) |
| 11. | ವ್ಯಾಪಾರ ಮತ್ತು ಹೋಟೆಲ್‌ಗಳು | 1,583 | 3,221(1,644) | 3,298(1,577) |
| 12. | ಬ್ಯಾಂಕು ಮತ್ತು ವಿಮೆ | 250 | 615(404) | 704(350) |
| 13. | ಎಸ್ಟೇಟ್ ಏಜೆನ್ಸಿ ಸರ್ವಿಸ್ | 461 | 759(567) | 1,154(664) |
| 14. | ಸಾರ್ವಜನಿಕ ಆಡಳಿತ | 223 | 493(318) | 1,019(478) |
| 15. | ಇತರೆ ಸೇವೆಗಳು | 437 | 927(598) | 1,532(713) |

* ಆವರಣದಲ್ಲಿ ಕೊಟ್ಟಿರುವುದು ಸ್ಥಿರ ಬೆಲೆಯ (1980-81) ಆದಾಯ.

ಆಧಾರ : ಜಿಲ್ಲಾ ಆದಾಯದ ಅಂದಾಜು 1980-81 ರಿಂದ 1989–90, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

## ತಲಾ ಆದಾಯದ ಸ್ಥಾನ

ಕೊಡಗು ಜಿಲ್ಲೆಯಲ್ಲಿ 1960-61ರಲ್ಲಿ ತಲಾ ಆದಾಯವು ರೂ. 728 ಇದ್ದು, ಅದು ರಾಜ್ಯದಲ್ಲಿಯೇ ಪ್ರಥಮ ಸ್ಥಾನವನ್ನು ಹೊಂದಿತ್ತು. 1970–71ರಲ್ಲಿ ಆದರ ತಲಾ ಆದಾಯವು ರೂ. 2,008 ಇದ್ದು, ತನ್ನ ಪ್ರಥಮ ಸ್ಥಾನವನ್ನು ಉಳಿಸಿಕೊಂಡಿತ್ತು. 1980-81ರಲ್ಲಿ ತನ್ನ ತಲಾ ಆದಾಯವನ್ನು ರೂ. 3,126ಕ್ಕೆ ಹೆಚ್ಚಿಸಿಕೊಂಡು ಪ್ರಥಮ ಸ್ಥಾನದಲ್ಲಿಯೇ ಮುಂದುವರಿಯಿತು. 1989-90ರಲ್ಲಿ ಇದರ ತಲಾ ಆದಾಯವು ರೂ. 5,382ಕ್ಕೆ ಹೆಚ್ಚಿತ್ತಾದರೂ ಆದರ ಸ್ಥಾನ ರಾಜ್ಯದಲ್ಲಿ ದ್ವಿತೀಯ ಸ್ಥಾನಕ್ಕೆ ಇಳಿಯಿತು. (1989-90ರಲ್ಲಿ ಬೆಂಗಳೂರು ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ). ರಾಜ್ಯದಲ್ಲಿನ ಸರಾಸರಿ ತಲಾ ಆದಾಯ ಈ ವರ್ಷದಲ್ಲಿ ರೂ. 2,182.89 ಇತ್ತು.

## ಆರ್ಥಿಕ ಯೋಜನೆಗಳು ಮತ್ತು ಸಾಧನೆ

ಯೋಜನೆಗಳು ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಾದ ಕೃಷಿ, ಕೈಗಾರಿಕೆ, ಪಶುಸಂಗೋಪನೆ ಅರಣ್ಯ, ಸಹಕಾರ ಸಂಘ, ಶಿಕ್ಷಣ, ಪಂಚಾಯತಿ ರಾಜ್ಯ, ಸಮಾಜ ಕಲ್ಯಾಣ, ಕಾರ್ಮಿಕ ಕಲ್ಯಾಣ ಇತ್ಯಾದಿಗಳನ್ನು ಪ್ರಗತಿ ಪಥದತ್ತ ಕೊಂಡೊಯ್ದಿವೆ. ಮೊದಲನೇಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಡಗು ರಾಜ್ಯಕ್ಕೆ ರೂ. 73 ಲಕ್ಷ ವೆಚ್ಚ ವನ್ನು ನಿಗದಿಪಡಿಸಲಾಗಿತ್ತು. ಇದು ಪುನರ್ ಪರಿಶೀಲನೆ ಗೊಳಪಟ್ಟ ಮೇಲೆ ರೂ. 116 ಲಕ್ಷಕ್ಕೇರಿತು. ಈ ಯೋಜನಾ ಅವಧಿಯಲ್ಲಾದ ಒಟ್ಟು ವೆಚ್ಚ ರೂ. 92.58 ಲಕ್ಷ. ಈ ಅವಧಿಯಲ್ಲಿ ಸೂಚಿತವಾದ ಯೋಜನೆಗಳ ಪೈಕಿ ಕೃಷಿ, ವಿದ್ಯಾಭ್ಯಾಸ, ರಸ್ತೆ, ಸಾರಿಗೆ ಮತ್ತು ವಿದ್ಯುಚ್ಛಕ್ತಿಗೆ ಆದ್ಯತೆ ದೊರಕಿತ್ತು. ಇದೇ ಕಾಲಾವಧಿಯಲ್ಲಿ 11,530 ಎಕರೆಯಷ್ಟು ಅಧಿಕ ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಮಾಡಿ 1,300 ಟನ್‌ಗಳಷ್ಟು ಅಧಿಕ ಆಹಾರ ಧಾನ್ಯಗಳನ್ನು ಉತ್ಪಾದಿಸಲಾಯಿತು. ಸಾಂದ್ರ ಬೇಸಾಯ ಹಾಗೂ ಪಶು ಸಂಗೋಪನೆಗೆ ಪ್ರಾಮುಖ್ಯತೆ ದೊರಕಿತು. ಜಿಲ್ಲೆಯಲ್ಲಿದ್ದ ಪಶುವೈದ್ಯ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸಿದ್ದೇ ಅಲ್ಲದೇ 16 ಗ್ರಾಮೀಣ ಪಶುವೈದ್ಯ ಶಾಲೆಗಳು, ಮೂರು ಕೃತಕ ಗರ್ಭಧಾರಣೆಯ ಕೇಂದ್ರಗಳು, ಏಳು ಗರ್ಭಧಾರಣಾ ಉಪ ಕೇಂದ್ರಗಳು ಮತ್ತು ಒಂದು ಗೋಶಾಲಾ ಕೇಂದ್ರವನ್ನು (ಗೋಸದನ) ಸ್ಥಾಪಿಸಲಾಯಿತು. ಪಶುವೈದ್ಯ ಶಾಲೆಗೆ ಸೇರಿದ್ದ ಸಣ್ಣ ಕೋಳಿ ಸಾಕಣೆ ಕೇಂದ್ರವನ್ನು ಆಧುನೀಕರಣ ಗೊಳಿಸಿ ವಿಸ್ತರಿಸಿದುದೇ ಅಲ್ಲದೇ, ಸ್ವತಂತ್ರ ಕೋಳಿಸಾಕಣೆ ಕೇಂದ್ರವನ್ನಾಗಿ ಪರಿವರ್ತಿಸಲಾಯಿತು. ಪಶುಗಳಿಗೆ ಬರುವ ದೊಡ್ಡರೋಗ ನಿವಾರಣೆಗೆ ಬೇಕಾಗುವ ಚುಚ್ಚುಮದ್ದಿನ ವ್ಯವಸ್ಥೆಯನ್ನು ವಿಸ್ತಾರಗೊಳಿಸಲಾಯಿತು. ಕೂಡಿಗೆಯ ಹಾಲಿನ ಕೇಂದ್ರದಲ್ಲಿ ಪಶು ಅಭಿವೃದ್ಧಿಗಾಗಿ 14 ಪೆಡಿಗ್ರಿ (ಬೀಜದ) ಹೋರಿಗಳನ್ನು ಇಡಲಾಯಿತು. ಮೀನುಗಾರಿಕೆ ಯನ್ನು ವೈಜ್ಞಾನೀಕರಣಗೊಳಿಸಿದುದೇ ಅಲ್ಲದೆ ಮೀನುಮರಿ ಗಳನ್ನು 70 ಕೆರೆಗಳಲ್ಲಿ ಸಾಕಣೆಗಾಗಿ ಬಿಡಲಾಯಿತು. ಅರಣ್ಯಾ ಭಿವೃದ್ಧಿಗಾಗಿ ವಾರ್ಷಿಕ 600 ಎಕರೆ ಪ್ರದೇಶದಲ್ಲಿ ತೇಗದ ಮರವನ್ನು ಬೆಳೆಯುವ ಕಾರ್ಯ ಕೈಗೊಳ್ಳಲಾಯಿತು. ಇದರ ಜೊತೆಗೆ ಪ್ರತೀವರ್ಷವೂ 150 ಎಕರೆ ಪ್ರದೇಶದಲ್ಲಿ ಬೆಂಕಿಕಡ್ಡಿ ಮರವನ್ನು, 100 ಎಕರೆ ಪ್ರದೇಶದಲ್ಲಿ ಗೋಡಂಬಿ ಯನ್ನು ಬೆಳೆಯುವ ಯೋಜನೆಯನ್ನು ರೂಪಿಸಲಾಯಿತು. ಇದೇ ಕಾಲಾವಧಿಯಲ್ಲಿ ಒಂದು ಸರ್ಕಾರಿ ಮರ ಕೊಯ್ಯುವ ಮಿಲ್ಲನ್ನು ಪ್ರಾರಂಭಿಸಲಾಯಿತು. ಈ ಯೋಜನಾ ಅವಧಿ ಯಲ್ಲಿ ವಿವಿಧ 44 ಸಹಕಾರಿ ಸಂಘಗಳು 14,136 ಅಧಿಕ ಸದಸ್ಯರೊಂದಿಗೆ ಸ್ಥಾಪನೆಗೊಂಡವು. ಮಾರುಕಟ್ಟೆ ಸಹಕಾರಿ ಸಂಘಗಳಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆಗೆ ಅವಕಾಶ ಕಲ್ಪಿಸಿಕೊಡುವುದಕ್ಕಾಗಿ ಹಾಲೀ ಸಂಗ್ರಹಣಾಲಯಗಳನ್ನು ವಿಸ್ತರಿಸುವುದರ ಜೊತೆಗೆ ಮೂರು ಧಾನ್ಯ ಸಂಗ್ರಹಣಾಲಯ ಗಳನ್ನು ನಿರ್ಮಿಸಿ 5,000 ಟನ್ ಆಹಾರ ಧಾನ್ಯ ಸಂಗ್ರ ಹಣಕ್ಕೆ ಅನುಕೂಲ ಕಲ್ಪಿಸಿ ಕೊಡಲಾಯಿತು. ಗ್ರಾಮಾಂತರ ಪ್ರದೇಶದಲ್ಲಿ ಸಾರ್ವಜನಿಕ ಆರೋಗ್ಯ ಸುಧಾ ರಣೆಗಾಗಿ 58 ಬಾವಿಗಳನ್ನು ತೋಡುವುದರ ಜೊತೆಗೆ 242 ಹಳೆಯ ಬಾವಿಗಳ ದುರಸ್ತಿ ಕಾರ್ಯ, ಎರಡು ಸುರಕ್ಷಿತ ನೀರು ಸರಬರಾಜು ಯೋಜನೆಗಳನ್ನು (ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಸ್ಕೀಂ) ಅನುಷ್ಠಾನಕ್ಕೆ ತರಲಾಯಿತು. ಅಲ್ಲದೆ ಈ ಯೋಜನೆಯಡಿಯಲ್ಲಿ ಒಳಚರಂಡಿ ವ್ಯವಸ್ಥೆ, ಮಾರುಕಟ್ಟೆಯ ಮಳಿಗೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಯಿತು. ಆಸ್ಪತ್ರೆಗಳ ನೌಕರರ ನಿವಾಸ ಗಳು, ಹೆರಿಗೆ ವಾರ್ಡುಗಳು, ಆಸ್ಪತ್ರೆಗಳು ಮತ್ತು ವೈದ್ಯ ಶಾಲೆಗಳ ಸಂಖ್ಯೆ ಈ ಕಾಲಾವಧಿಯಲ್ಲಿ ಅಧಿಕಗೊಂಡಿತು.

ಈ ಯೋಜನಾವಧಿಯಲ್ಲಿ ರೂ. 24.67 ಲಕ್ಷ ವೆಚ್ಚ ಮಾಡಿ ನಾಲ್ಕು ಮುಖ್ಯ ರಸ್ತೆನಿರ್ಮಾಣ,ಆರು ಸೇತುವೆಗಳನ್ನು ಪೂರ್ಣಗೊಳಿಸಿದ್ದೇ ಅಲ್ಲದೆ ರಾಜ್ಯ ರಸ್ತೆ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಬರುವ 15 ರಸ್ತೆ ಕಾಮಗಾರಿ, 17 ಸೇತುವೆ ಮತ್ತು ಕಾಲುವೆಗಳ ನಿರ್ಮಾಣ ಕಾರ್ಯದಲ್ಲಿ ತೊಡಗಲಾಗಿತ್ತು. ಸಾರಿಗೆ ಯೋಜನೆಯ ಅಡಿಯಲ್ಲಿ ಸರ್ಕಾರದ ಕೇಂದ್ರ ಕಾರ್ಯಾಗಾರವನ್ನು ರೂ. 2.71 ಲಕ್ಷ ವೆಚ್ಚದಲ್ಲಿ ಆಧುನಿಕ ಯಂತ್ರಗಳ ಜೋಡಣೆಯಿಂದ ಸಜ್ಜು ಗೊಳಿಸಲಾಯಿತು. ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಆಣೆಕಟ್ಟುಗಳು, ಕೆರೆಗಳು, ಕಾಲುವೆಗಳು ಮೊದಲಾದ 171 ಕಾಮಗಾರಿಗಳ ಕಾರ್ಯವನ್ನು ಪೂರ್ಣಗೊಳಿಸಿದುದೇ ಅಲ್ಲದೆ 111 ಕಾಮಗಾರಿಗಳು ಈ ಯೋಜನೆಯ ಕೊನೆಯಲ್ಲಿ ಪ್ರಗತಿ ಪಥದಲ್ಲಿದ್ದವು. ಇದರಿಂದಾಗಿ ಸುಮಾರು 8,000 ಎಕರೆ ಯಷ್ಟು ಭೂಮಿ ನೀರಾವರಿ ಸೌಲಭ್ಯವನ್ನು ಪಡೆಯಿತು. ಈ ಕಾಲಾವಧಿಯಲ್ಲಿ ರೂ. 11.50 ಲಕ್ಷ ವೆಚ್ಚ ಮಾಡಿ ಎರಡು ಥರ್ಮಲ್ ಸ್ಟೇಷನ್‌ಗಳನ್ನು ನಿರ್ಮಿಸಿದುದೇ ಅಲ್ಲದೆ, ವಿದ್ಯುತ್ ಹಂಚಿಕೆಯ ಜಾಲವನ್ನು ಸುಧಾರಿಸಲಾಯಿತು ಮತ್ತು ಒಂದು ಥರ್ಮಲ್ ಸ್ಟೇಷನ್‌ಗೆ ಪ್ರತ್ಯೇಕ ಡೀಸಲ್ ಸೆಟ್‌ನ ಜೋಡಣೆಗೆ ಅವಕಾಶ ಕಲ್ಪಿಸಿ ಕೊಡಲಾಯಿತು.

ಜೇನು ಸಾಕಣೆ, ಕೈಮಗ್ಗ ನೇಯ್ಗೆ, ಕುಂಬಾರಿಕೆ, ರೇಷ್ಮೆ ಮೊದಲಾದ ಗೃಹ ಕೈಗಾರಿಕೆಗಳ ಬೆಳವಣಿಗೆಗೆ ಗಮನ

ಕೊಟ್ಟಿತು. ಆಧುನಿಕ ಯಂತ್ರ ಜೋಡಣೆಯ ಕುಂಬಾರಿಕೆಯ ಕೇಂದ್ರ ಮತ್ತು ಒಂದು ಕೇಂದ್ರ ಜೇನುಸಾಕಣೆ ಮತ್ತು ಅದರ 10 ಉಪಕೇಂದ್ರಗಳು ಸ್ಥಾಪನೆಗೊಂಡವು. ಎರಡು ಕೈಮಗ್ಗ ನೇಯ್ಗೆ ಕೇಂದ್ರಗಳ ಸ್ಥಾಪನೆಯೂ ಸಹ ಈ ಯೋಜನೆಯ ಅವಧಿಯಲ್ಲಿ ಪ್ರಾರಂಭವಾದವು. ಎಲ್ಲಾ ಹಂತದ ವಿದ್ಯಾಭ್ಯಾಸಕ್ಕೋಸ್ಕರ ರೂ. 10.09 ಲಕ್ಷವನ್ನು ವೆಚ್ಚ ಮಾಡಲಾಯಿತು. ಇಂಟರ್‌ಮೀಡಿಯಟ್ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ಮೇಲ್ದರ್ಜೆಗೇರಿಸಿದುದೇ ಅಲ್ಲದೆ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವನ್ನೊದಗಿಸಲಾಯಿತು. ಒಂದು ಮೂಲ ಶಿಕ್ಷಣ ತರಬೇತಿ ಕಾಲೇಜು ವಸತಿ ಸೌಲಭ್ಯದೊಂದಿಗೆ ಸ್ಥಾಪನೆಗೊಂಡಿತು (ಕೂಡಿಗೆ). ಈ ಯೋಜನಾ ಅವಧಿಯಲ್ಲಿ ಕಿರಿಯ ಮತ್ತು ಹಿರಿಯ ಮೂಲ ಶಿಕ್ಷಣ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ವಯಸ್ಕ ರೈತರಿಗೆ ತರಬೇತಿಯನ್ನೊದಗಿಸುವ ಉದ್ದೇಶದಿಂದ ಕೂಡಿಗೆಯಲ್ಲಿ ಒಂದು ಜನತಾ ಕಾಲೇಜನ್ನು ತೆರೆಯಲಾಯಿತು.

ಕೇಂದ್ರ ಸರ್ಕಾರದ ವ್ಯಾಪ್ತಿಗೊಳಪಟ್ಟಿರುವ ಕೆಲವು ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಈ ಯೋಜನಾ ಅವಧಿಯಲ್ಲಿ ರೂ. 53.18 ಲಕ್ಷ ವೆಚ್ಚ ಮಾಡಲಾಯಿತು. 1952ರ ಅಕ್ಟೋಬರ್ 2ನೇ ದಿನಾಂಕದಂದು ರಾಷ್ಟ್ರಾದ್ಯಂತ ಜಾರಿಗೆ ತರಲಾದ ಸಾಮೂಹಿಕ ಅಭಿವೃದ್ಧಿ ಯೋಜನೆಯು ಜಿಲ್ಲೆಯ ಸೋಮವಾರಪೇಟೆ ಕ್ಷೇತ್ರದಲ್ಲಿ ಪ್ರಾರಂಭವಾಯಿತು. ಇದು 1953 ಅಕ್ಟೋಬರ್ ಒಂದನೇ ದಿನಾಂಕದಂದು ಜಿಲ್ಲೆಯ ಮಡಿಕೇರಿ, ಭಾಗಮಂಡಲ, ನಾಪೋಕ್ಲು ಮತ್ತು ಸುಂಟಿಕೊಪ್ಪ ನಾಡುಗಳಿಗೆ ವಿಸ್ತರಿಸಲ್ಪಟ್ಟಿತು. ಇದಲ್ಲದೆ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ವೀರರಾಜಪೇಟೆ, ಅಮ್ಮತ್ತಿ, ಪೊನ್ನಂಪೇಟೆ ಮತ್ತು ಶ್ರೀಮಂಗಲ ನಾಡುಗಳಲ್ಲಿ ಕಾರ್ಯಾಚರಣೆ ಮಾಡಲಾಯಿತು. ಈ ಯೋಜನೆಯ ಅಂತ್ಯದ ವೇಳೆಗೆ ಸಮಗ್ರ ಕೊಡಗು ಜಿಲ್ಲೆಯು ಸಾಮೂಹಿಕ ಅಭಿವೃದ್ಧಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿತ್ತು. ಕೇಂದ್ರ ಯೋಜನಾ ವ್ಯಾಪ್ತಿಗೊಳಪಟ್ಟಿದ್ದ ಸ್ಥಳೀಯ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ. 20.77 ಲಕ್ಷವನ್ನು ಸಾಮೂಹಿಕ ಅಭಿವೃದ್ಧಿ ಕ್ಷೇತ್ರದಿಂದಲೂ ಮತ್ತು ರೂ. 1.45 ಲಕ್ಷವನ್ನು ಸ್ಥಳೀಯ ಅಭಿವೃದ್ಧಿ ಕಾಮಗಾರಿ ಕ್ಷೇತ್ರದಿಂದಲೂ ವೆಚ್ಚ ಮಾಡಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕ್ಷೇಮಾಭಿವೃದ್ಧಿಗಾಗಿ ರೂ. 9.02 ಲಕ್ಷವೆಚ್ಚದಲ್ಲಿ 948 ವಾಸದ ಮನೆಗಳನ್ನು ನಿರ್ಮಿಸಿದ್ದುದಲ್ಲದೇ ಅವರಿಗೆ ಶಿಕ್ಷಣ ಸೌಲಭ್ಯ, ಆರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ, ಗೃಹ ಕೈಗಾರಿಕೆಗಳ ಸೌಲಭ್ಯ ಮೊದಲಾದವುಗಳನ್ನು ಈ ಯೋಜನಾವಧಿಯಲ್ಲಿ ಒದಗಿಸಲಾಯಿತು.

## ಎರಡನೇಯ ಯೋಜನೆ

ಭಾಷಾವಾರು ಪ್ರಾಂತ್ಯಗಳ ವಿಂಗಡಣೆಗೆ ಮೊದಲೇ ಎರಡನೇಯ ಪಂಚವಾರ್ಷಿಕ ಯೋಜನೆಗೆ ಅಂತಿಮರೂಪ ಕೊಟ್ಟಿದ್ದು, 375.78 ಲಕ್ಷ ರೂ.ಗಳ ಯೋಜನಾ ವೆಚ್ಚವನ್ನು ಕೊಡಗು ರಾಜ್ಯಕ್ಕೆ ನಿಗದಿ ಪಡಿಸಲಾಯಿತು. ಇದಾದ ಏಳು ತಿಂಗಳುಗಳಲ್ಲಿ ಉಂಟಾದ ರಾಜ್ಯಗಳ ಮರುವಿಂಗಡಣೆಯಲ್ಲಿ ಕೊಡಗು ರಾಜ್ಯವು ಮೈಸೂರು ರಾಜ್ಯದ ಒಂದು ಜಿಲ್ಲೆಯಾಯಿತು. ಆಡಳಿತಾತ್ಮಕ ತೊಂದರೆಯಿಂದಾಗಿ ಯೋಜನೆಯ ಮೊದಲೆರಡು ವರ್ಷಗಳ ಕಾರ್ಯವು ವ್ಯವಸ್ಥಿತವಾಗಿ ಸಾಗದೇ ನಿಗದಿತ ವೆಚ್ಚ ಮತ್ತು ಗುರಿಗಳಲ್ಲಿ ವ್ಯತ್ಯಾಸಗಳುಂಟಾಗಿ ಯೋಜನೆಯ ಅಂತ್ಯದಲ್ಲಿ ರೂ. 332.73 ಲಕ್ಷವನ್ನು ವೆಚ್ಚ ಮಾಡಲಾಯಿತು. ಈ ಯೋಜನಾವಧಿಯಲ್ಲಿ ನಿಗದಿಪಡಿಸಿದ್ದ 3,000 ಎಕರೆ ಭೂಮಿಯನ್ನು ವ್ಯವಸಾಯಕ್ಕಾಗಿ ಉಪಯೋಗಿಸಿಕೊಳ್ಳುವ ಗುರಿಗೆ ಬದಲಾಗಿ 4,630 ಎಕರೆಯನ್ನು ಉಪಯೋಗಿಸಿಕೊಂಡು 6,437 ಟನ್‌ಗಳಷ್ಟು ಹೆಚ್ಚುವರಿ ಆಹಾರಧಾನ್ಯಗಳನ್ನು ಬೆಳೆಯಲಾಯಿತು. ಬತ್ತದ ಸರಾಸರಿ ಇಳುವರಿಯು ಎಕರೆಗೆ 1,800 ಪೌಂಡ್ ಇದ್ದದು ಈ ಯೋಜನೆಯ ಅಂತ್ಯದ ವೇಳೆತ 2,500 ಪೌಂಡ್‌ಗಳಿಗೆ ಏರಿತು. ಒಂದು ತಾಲೂಕು ಬೀಜೋತ್ಪಾದನಾ ಕ್ಷೇತ್ರವನ್ನು 23 ಎಕರೆ ಭೂಮಿಯೊಂದಿಗೆ ಸ್ಥಾಪಿಸಲಾಯಿತು. ಜಿಲ್ಲೆಯಲ್ಲಿ ಸುಮಾರು 8,926.41 ಟನ್ ವಿವಿಧ ರಸಗೊಬ್ಬರವನ್ನು ವಿತರಿಸಲಾಯಿತು. ಗ್ರಾಮಾಂತರ ಕಾಂಪೋಸ್ಟ್‌ಗಳಲ್ಲಿ 10.96 ಲಕ್ಷ ಟನ್‌ಗಳಷ್ಟು ಗೊಬ್ಬರವನ್ನು ಉತ್ಪಾದಿಸಲಾಯಿತು. ಎರಡು ಏಲಕ್ಕಿ ಸಸ್ಯ ಕ್ಷೇತ್ರಗಳನ್ನು ಸ್ಥಾಪಿಸಿ 1.02 ಲಕ್ಷ ಕಟಿಂಗ್‌ಗಳನ್ನು ವಿತರಿಸಲಾಯಿತು.

ತೋಟಗಾರಿಕೆಗೆ ಸಂಬಂಧಿಸಿದಂತೆ 5,665 ಎಕರೆ ಭೂಮಿಯನ್ನು ಹೊಸದಾಗಿ ಅಭಿವೃದ್ಧಿಪಡಿಸಿದುದೇ ಅಲ್ಲದೆ ಸುಮಾರು 14,714 ಎಕರೆ ಹಳೆಯ ತೋಟಗಾರಿಕೆಯ ಭೂಮಿಯನ್ನು ಪುನರ್ವ್ಯವಸ್ಥೆಗೊಳಿಸಿ ಅಭಿವೃದ್ಧಿಪಡಿಸಲಾಯಿತು. ತೋಟಗಾರಿಕೆಯಲ್ಲಿ ಇದೇ ಅವಧಿಯಲ್ಲಿ ಎರಡು ಜಾತಿಯ ಹಣ್ಣುಗಳನ್ನು ಹೊಸದಾಗಿ ಬೆಳೆಯಲಾಯಿತು. ಅವು ಕೊಡಗು ಜೇನು ಪಪ್ಪಾಯಿ (ಕೂರ್ಗ್‌ಹನಿ ಪಪ್ಪಾಯಾ) ಮತ್ತು ಬೆಣ್ಣೆ ಹಣ್ಣು (ಬಟರ್ ಫ್ರೂಟ್). ಈ ಯೋಜನಾ ಅವಧಿಯಲ್ಲಿ ಸಣ್ಣ ನೀರಾವರಿ ಸೌಲಭ್ಯವು ಸುಮಾರು 2,730 ಎಕರೆವರೆಗೂ ಹೆಚ್ಚಳಗೊಂಡಿತು. ಜಿಲ್ಲೆಯಲ್ಲಿ ಒಂದು ಗ್ರಾಮ ಸೇವಕ ತರಬೇತಿ ಕೇಂದ್ರವು ತಂತ್ರಾಗಾರ (ವರ್ಕ್‌ಶಾಪ್)

ಸಹಿತವಾಗಿ ಸ್ಥಾಪನೆಯಾಗಿ ನಿಗದಿಪಡಿಸಿದ್ದ 48 ಅಭ್ಯರ್ಥಿಗಳಿಗೆ ತರಬೇತಿಯನ್ನೊದಗಿಸುವ ಗುರಿಯನ್ನು ತಲುಪಿದುದೇ ಅಲ್ಲದೆ ಯೋಜನೆಯ ಅಂತ್ಯದಲ್ಲಿ 63 ಅಭ್ಯರ್ಥಿಗಳು ಅಲ್ಲಿ ತರಬೇತಿಯನ್ನು ಪಡೆಯುತ್ತಿದ್ದರು. ಇದಕ್ಕೆ ರೂ. 4.20 ಲಕ್ಷ ವೆಚ್ಚವಾಗಿದೆ. ಪಶುಸಂಗೋಪನಾ ಯೋಜನೆಯಡಿಯಲ್ಲಿ ಒಂದು ಗೋಶಾಲಾ ಕೇಂದ್ರ (ಗೋಸದನ), ಎರಡು ಬುನಾದಿ ಗ್ರಾಮ ಕೇಂದ್ರ (ಕೀ ವಿಲೇಜ್ ಸೆಂಟರ್) ಗಳನ್ನು 40 ಹೋರಿಗಳನ್ನು ಮತ್ತು ಐದು ಕೃತಕ ಗರ್ಭಧಾರಣೆ ಕೇಂದ್ರಗಳನ್ನು ಹಾಗೂ ಎರಡು ಕೋಳಿ ಸಾಕಣೆ ಕೇಂದ್ರಗಳನ್ನು ತೆರೆಯಲಾಯಿತು. ಇದೇ ಕಾಲಾವಧಿಯಲ್ಲಿ ರೂ. 4.75 ಲಕ್ಷ ವೆಚ್ಚದಲ್ಲಿ ಹಾಲು ಸಂಸ್ಕರಣಾ ಘಟಕವನ್ನು ಸ್ಥಾಪಿಸಲಾಗಿದ್ದು, ಇದು ಯೋಜನೆಯ ಅಂತ್ಯದ ವೇಳೆಗೆ ದಿನ ಒಂದಕ್ಕೆ 4,000 ಪೌಂಡ್ ಹಾಲನ್ನು ಸಂಸ್ಕರಿಸುತ್ತಿತ್ತು. ಮೀನುಗಾರಿಕೆಗೆ ಸಂಬಂಧಿಸಿದಂತೆ 80 ಕೆರೆಗಳಲ್ಲಿ 1.81 ಲಕ್ಷ ಮೀನು ಮರಿಗಳನ್ನು ಸಾಕಿದುದೇ ಅಲ್ಲದೇ ಯೋಜನೆಯ ಅವಧಿಯಲ್ಲಿ 18,053 ಪೌಂಡ್ ಮೀನನ್ನು ಮಾರಾಟ ಮಾಡಲಾಯಿತು.

ಅರಣ್ಯಾಭಿವೃದ್ಧಿಗಾಗಿ ರೂ. 7.75 ಲಕ್ಷ ವೆಚ್ಚ ಮಾಡಿ ಸಾಮಾನ್ಯ ಮರಗಳ ಕಾಡುಗಳ ಜೊತೆಗೆ ಸುಮಾರು 1,875 ಎಕರೆ ಪ್ರದೇಶದಲ್ಲಿ ತೇಗ, ಬೆಂಕಿಕಡ್ಡಿ ಮರ ಮೊದಲಾದ ಬೆಲೆಬಾಳುವ ಮರಗಳನ್ನು ಬೆಳೆಯಲಾಯಿತು. ಸುಮಾರು 100 ಚ. ಮೈಲು ಪ್ರದೇಶದಲ್ಲಿ ಅಭಯಾರಣ್ಯವನ್ನು ನಿರ್ಮಿಸಲಾಯಿತು.

ಇದೇ ಕಾಲಾವಧಿಯಲ್ಲಿ ಸಹಕಾರ ಸಂಘಗಳು ಮತ್ತು ಬ್ಯಾಂಕ್‌ಗಳು ಪುನರ್ ವ್ಯವಸ್ಥೆಗೊಂಡು 29 ಹೊಸ ಸಹಕಾರಿ ಸಂಘಗಳು 6,722 ಸದಸ್ಯರ ಬಲದೊಂದಿಗೆ ಕಾರ್ಯಾರಂಭಗೊಂಡವು. ಈ ಯೋಜನೆಯಲ್ಲಿ ನಿಗದಿಪಡಿಸಿದ್ದ ಮೂರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಬದಲಾಗಿ ಎರಡು ಬ್ಯಾಂಕುಗಳು ಸ್ಥಾಪನೆಗೊಂಡವು. 20 ದಾಸ್ತಾನು ಮಳಿಗೆಗಳನ್ನು ನಿರ್ಮಿಸಲಾಯಿತು. ಜಿಲ್ಲೆಯಲ್ಲಿ ಮೂರು ಸಾಮೂಹಿಕ ಅಭಿವೃದ್ಧಿ ಕೇಂದ್ರಗಳು ಈ ಅವಧಿಯಲ್ಲಿ ಎರಡನೇ ಹಂತಕ್ಕೆ ತಲುಪಿದವು. ಒಂದು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಯನ್ನು ಸುಮಾರು 3,167 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನೊದಗಿಸುವ ಗುರಿಯೊಂದಿಗೆ ಪ್ರಾರಂಭಿಸಿ, ಸುಮಾರು ರೂ. 8.79 ಲಕ್ಷವನ್ನು ವೆಚ್ಚ ಮಾಡಲಾಯಿತು. ನಾಲ್ಕು ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ಮತ್ತು ವಿದ್ಯುತ್ ಜಾಲವನ್ನು ನಿರ್ಮಿಸುವುದಕ್ಕಾಗಿ ರೂ. 12.50 ಲಕ್ಷ ವೆಚ್ಚ ಮಾಡಲಾಯಿತು. ಒಂದು ಬೃಹತ್ ಸೇತುವೆಯ ನಿರ್ಮಾಣಕ್ಕೆ ಮತ್ತು 195 ಮೈಲಿ ರಸ್ತೆ ಸುಧಾರಣೆಗೆ ರೂ. 46.65 ಲಕ್ಷ ಖರ್ಚು ಮಾಡಲಾಯಿತು.

ಮೊದಲನೇಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪ್ರಾರಂಭಗೊಂಡ ಜೇನು ಸಾಕಣೆ, ಕುಂಬಾರಿಕೆ ಮೊದಲಾದವುಗಳಿಗೆ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಯಿಂದ ರೂ. 3.92 ಲಕ್ಷವನ್ನು ಈ ಯೋಜನಾ ಅವಧಿಯಲ್ಲಿ ಒದಗಿಸಲಾಯಿತು. ರೇಷ್ಮೆ ಅಭಿವೃದ್ಧಿಗಾಗಿ ರೂ. 2.30 ಲಕ್ಷ ವೆಚ್ಚ ಮಾಡಿ 15 ಎಕರೆಗಳಲ್ಲಿ ಹಿಪ್ಪನೇರಳೆಯನ್ನು ಬೆಳೆಯಲು ಪ್ರಾರಂಭಿಸಿದುದೇ ಅಲ್ಲದೆ 77 ಕೃಷಿಕರಿಗೆ ತರಬೇತಿಯನ್ನೊದಗಿಸಿ ಸಹಾಯಧನದ ನೆರವಿನಿಂದ ಸುಮಾರು 151 ಎಕರೆ ಪ್ರದೇಶದಲ್ಲಿ ಹಿಪ್ಪನೇರಳೆ ತೋಟವನ್ನು ಖಾಸಗಿಯವರು ಬೆಳೆಯಲು ಪ್ರೋತ್ಸಾಹ ನೀಡಲಾಯಿತು. ಸಾರ್ವಜನಿಕ ಶಿಕ್ಷಣ ಸೌಲಭ್ಯಕ್ಕೋಸ್ಕರ ರೂ. 12.22 ಲಕ್ಷ ಖರ್ಚು ಮಾಡಲಾಯಿತು. ಈ ಕಾಲಾವಧಿಯಲ್ಲಿ ಎರಡು ಪ್ರೌಢಶಾಲೆಗಳನ್ನು ವಿವಿಧೋದ್ದೇಶ ಶಾಲೆಗಳಾಗಿಯೂ, 24 ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣ ಶಾಲೆಗಳಾಗಿಯೂ ಪರಿವರ್ತಿಸಿದುದೇ ಅಲ್ಲದೆ ಮೂಲ ತರಬೇತಿ ಕಾಲೇಜಿನ ಸ್ಥಾಪನೆ ಮತ್ತು ಕಾಲೇಜಿನ ಬಲವರ್ಧನೆಯನ್ನು ಮಾಡಲಾಯಿತು.

ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಎರಡು ಕ್ಷಯರೋಗ ಚಿಕಿತ್ಸಾಲಯಗಳನ್ನು ಮತ್ತು ಎರಡು ದಂತ ಚಿಕಿತ್ಸಾಲಯಗಳನ್ನು ತೆರೆಯಲಾಯಿತು. ಸಾರ್ವಜನಿಕ ಆಸ್ಪತ್ರೆಯನ್ನು ನೂತನ ಉಪಕರಣ ಮತ್ತು ಹೆಚ್ಚುವರಿ ಸಿಬ್ಬಂದಿಯೊಂದಿಗೆ ಸುಸಜ್ಜಿತಗೊಳಿಸಲಾಯಿತು. ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯನ್ನು ಸ್ಥಾಪಿಸಲಾಯಿತು. ಈ ಯೋಜನಾ ಅವಧಿಯಲ್ಲಿ ವೈದ್ಯಕೀಯ ಸೌಲಭ್ಯಕ್ಕೆ ರೂ. 3.21 ಲಕ್ಷವನ್ನು ವೆಚ್ಚ ಮಾಡಲಾಯಿತು. ಆರೋಗ್ಯ ಯೋಜನೆಯ ಅಡಿಯಲ್ಲಿ ಒಂದು ಜಿಲ್ಲಾ ಆರೋಗ್ಯ ಪ್ರಯೋಗಾಲಯ, ಮೂರು ಆರೋಗ್ಯ ಘಟಕಗಳ ಸ್ಥಾಪನೆಯ ಗುರಿಯನ್ನು ಹೊಂದಿದ್ದು ಅವುಗಳ ಪೈಕಿ ಒಂದು ಘಟಕವು ಯೋಜನೆಯ ಅಂತ್ಯದ ಅವಧಿಯಲ್ಲಿ ಪೂರ್ಣಗೊಳ್ಳುವ ಸ್ಥಿತಿಯಲ್ಲಿತ್ತು. ಇದೇ ಕಾಲಾವಧಿಯಲ್ಲಿ 50 ಕುಡಿಯುವ ನೀರಿನ ಬಾವಿಗಳು ತೋಡಲಾಯಿತಲ್ಲದೇ ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಿಸಲ್ಪಟ್ಟಿದ್ದ ಆರು ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡವು. ಮೂರು ಜನನ ನಿಯಂತ್ರಣ ಕೇಂದ್ರಗಳು ಕೇಂದ್ರಸ್ಥಾನಗಳ ಆಸ್ಪತ್ರೆಗಳಲ್ಲಿ

ತೆರೆಯಲ್ಪಟ್ಟವು. ಇದಕ್ಕಾಗಿ ಈ ಯೋಜನಾ ಅವಧಿಯಲ್ಲಿ ರೂ. 2.04 ಲಕ್ಷ ವೆಚ್ಚ ಮಾಡಲಾಯಿತು.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ಪಂಗಡದ ಅಭಿವೃದ್ಧಿಗಾಗಿ ರೂ. 20.84 ಲಕ್ಷ ವೆಚ್ಚದಲ್ಲಿ 1,581 ಮನೆಗಳು, 43 ಬಾವಿಗಳು, 6 ವಿದ್ಯಾರ್ಥಿನಿಲಯಗಳು, ಎರಡು ಆಶ್ರಮ ಶಾಲೆಗಳು, 18 ಕಟ್ಟಡಗಳು, ಎಂಟು ಸಾಮೂಹಿಕ ಕೇಂದ್ರಗಳು ಮತ್ತು ಆರು ಮಹಿಳಾ ಅಭಿವೃದ್ಧಿ ಕೇಂದ್ರಗಳು, ಮೊದಲಾದವುಗಳನ್ನು ನಿರ್ಮಿಸಲಾಯಿತು. ಸುಮಾರು 1,000 ಸಂಸಾರಗಳು ಕುಶಲ ಕೈಗಾರಿಕೆಗಳನ್ನು ನಡೆಸಲು ಪ್ರೋತ್ಸಾಹ ಪಡೆದವು. ಈ ಕಾಲಾವಧಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರೂ. 0.23 ಲಕ್ಷ ಮತ್ತು ಗ್ರಾಮಾಂತರ ಅಭಿವೃದ್ಧಿ ಯೋಜನೆಗಾಗಿ ರೂ. 1.16 ಲಕ್ಷ ವೆಚ್ಚ ಮಾಡಲಾಯಿತು.

### ಮೂರನೇಯ ಯೋಜನೆ

ಮೂರನೇಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಆಹಾರ ಧಾನ್ಯ ಮತ್ತು ಇತರ ವ್ಯವಸಾಯೋತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶವನ್ನಿಟ್ಟುಕೊಂಡು ಯೋಜನೆಯ ಕರಡನ್ನು ತಯಾರಿಸಲಾಯಿತು. ಈ ಯೋಜನೆಯ ಆದಿಭಾಗದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಪೈಕಿ ಕೊಡಗು ಜಿಲ್ಲೆಯು ವಿವಿಧ ಕ್ಷೇತ್ರಗಳಲ್ಲಿ ಹೊಂದಿದ್ದ ಜ್ಯೇಷ್ಠತಾ ಸ್ಥಾನವನ್ನು ಇಲ್ಲಿನ ಆವರಣದಲ್ಲಿ ಕೊಡಲಾಗಿದೆ. ಜನಸಾಂದ್ರತೆ (3), 1961ರ ಒಟ್ಟು ಕಾರ್ಮಿಕರ ಪೈಕಿ ಪ್ರತಿಶತ ಕೃಷಿ ಕಾರ್ಮಿಕರು (2), 1961–62ರಲ್ಲಿ ಪ್ರತೀ ಕೃಷಿಕನು ಹೊಂದಿದ್ದ ಭೂಮಿಯ ಪ್ರಮಾಣ (4), 1961-62ರಲ್ಲಿ ಪ್ರತೀ ಕೃಷಿಕನಿಗೆ ಸೇರಿದ್ದ ನಿವ್ವಳ ಬಿತ್ತನೆ ಭೂಮಿಯ ಪ್ರಮಾಣ (7), 1961–62ರಲ್ಲಿ ನಿವ್ವಳ ಕೃಷಿ ಭೂಮಿಯಲ್ಲಿ ಪ್ರತಿಶತ ನೀರಾವರಿಯ ನಿವ್ವಳ ಪ್ರದೇಶ (13), 1961–62ರ ಪ್ರತಿಶತ ಅಧಿಕ ಬಿತ್ತನೆಗೊಳಪಟ್ಟ ಪ್ರದೇಶ (17), 1960–61ರಲ್ಲಿ ಗ್ರಾಮಾಂತರ ಪ್ರದೇಶದ ಪ್ರತೀಯೊಬ್ಬನ ಕೃಷಿ ಉತ್ಪಾದನಾ ಪ್ರಮಾಣ (1), 1962ರಲ್ಲಿ ಪ್ರತೀ ಲಕ್ಷ ಜನಸಂಖ್ಯೆಯಲ್ಲಿ ಕಾರ್ಖಾನೆಗಳ ಕಾರ್ಮಿಕನಾಗಿ ನೋಂದಣಿಗೊಂಡರ ಸಂಖ್ಯೆ (14), 1962–63ರಲ್ಲಿ ಪ್ರತೀ 100 ಚ.ಕಿ.ಮೀ. ನಲ್ಲಿದ್ದ ರಸ್ತೆ ಉದ್ದ (6), 1962–63ರಲ್ಲಿ ಪ್ರತೀ ಲಕ್ಷ ಜನಸಂಖ್ಯೆಯ ಸರಕು ಸಾಗಣೆ ಸಾಮಗ್ರಿ (8), 1961ರ ಒಟ್ಟು ಜನಸಂಖ್ಯೆಯ ಪೈಕಿ ಇದ್ದ ವಿದ್ಯಾವಂತರ ಪ್ರಮಾಣ (1), 1963-64ರಲ್ಲಿ ಪ್ರತೀ ಲಕ್ಷದಲ್ಲಿ ತಾಂತ್ರಿಕ ಶಿಕ್ಷಣ ಹೊಂದಿದವರು (5), 1962ರಲ್ಲಿ ಪ್ರತೀ ಲಕ್ಷ ಜನಸಂಖ್ಯೆಗಿದ್ದ ಆಸ್ಪತ್ರೆ ಸೌಲಭ್ಯ (1).

ಕೃಷಿಗೆ ಸಂಬಂಧಿಸಿದ ನೀರಾವರಿ, ಸುಧಾರಿಸಿದ ತಳಿಯ ಬೀಜ, ಆಧುನಿಕ ಕೃಷಿ ಉಪಕರಣ, ರಸಗೊಬ್ಬರ ಮೊದಲಾದವುಗಳಿಗೋಸ್ಕರ ಮೂರನೇಯ ಯೋಜನೆಯಲ್ಲಿ ರೂ. 2.99 ಲಕ್ಷ ನಿಗದಿಪಡಿಸಲಾಗಿತ್ತು. ಈ ಯೋಜನೆಯಡಿಯಲ್ಲಿ 100 ಆಧುನಿಕ ಹೊಸ ತೈಲ ಚಾಲಿತ ಪಂಪುಸೆಟ್ಟುಗಳನ್ನು ಮತ್ತು ಇತರ ಆಧುನಿಕ ಕೃಷಿ ಉತ್ಪಾದನಾ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವ ಗುರಿಯನ್ನು ಹೊಂದಲಾಗಿತ್ತು. ಜಿಲ್ಲೆಗೆ ಒಂದು ಸಾವಿರ ಟನ್ ಪಟ್ಟಣದ ರಸಗೊಬ್ಬರ, 96 ಸಾವಿರ ಟನ್ ಗ್ರಾಮಾಂತರ ರಸಗೊಬ್ಬರ, 36 ಸಾವಿರ ಎಕರೆಗಳಲ್ಲಿ ಹಸಿರುಗೊಬ್ಬರ ನಿಗದಿಪಡಿಸಲಾಗಿತ್ತಲ್ಲದೆ, ಆಗ ಉತ್ಪಾದಿಸುತ್ತಿದ್ದ ಪ್ರದೇಶದ ಜೊತೆಗೆ 10 ಸಾವಿರ ಎಕರೆ ಪ್ರದೇಶದಲ್ಲಿ ಜಪಾನ್ ಮಾದರಿ ಬತ್ತ ಮತ್ತು 34 ಸಾವಿರ ಎಕರೆ ಭೂಮಿಯಲ್ಲಿ ಅಧಿಕ ಇಳುವರಿ ಕೊಡುವ ಬೆಳೆಯನ್ನು ಬೆಳೆಯುವುದಕ್ಕಾಗಿ 700 ಪ್ರದರ್ಶನ ಪ್ಲಾಟುಗಳು, 800 ಕೃಷಿ ಉಪಕರಣಗಳನ್ನೊದಗಿಸುವುದರ ಜೊತೆಗೆ ಅಧಿಕ ಇಳುವರಿ ಸ್ಪರ್ಧೆಯನ್ನು ನಡೆಸುವ ಗುರಿಯನ್ನು ಹೊಂದಲಾಗಿತ್ತು. ರೋಗ ರಹಿತ ಬೆಳೆಗಳನ್ನು ಬೆಳೆಯುವ ದೃಷ್ಟಿಯಿಂದ ಸಸ್ಯ ಸಂರಕ್ಷಣಾ ಸಂಸ್ಥೆಗಳ ಸಾಮರ್ಥ್ಯವನ್ನು ವೃದ್ಧಿಗೊಳಿಸಲಾಯಿತು. ಜಿಲ್ಲೆಯ ಹೆಚ್ಚುವರಿ ಭೂ ಪ್ರದೇಶವನ್ನು ಕೃಷಿ ಉತ್ಪಾದನೆಯಲ್ಲಿ ತೊಡಗಿಸಲು ಅವಶ್ಯಕವಾಗಿರುವ 1,600 ಕೃಷಿ ಉಪಕರಣಗಳನ್ನು ಕೊಳ್ಳುವುದಕ್ಕಾಗಿ ರೂ. 1.80 ಲಕ್ಷ ಖರ್ಚು ಮಾಡಲು ಉದ್ದೇಶಿಸಲಾಯಿತು. ವಾಣಿಜ್ಯ ಬೆಳೆಗಳಾದ ಕಿತ್ತಳೆ, ಏಲಕ್ಕಿ, ಕರಿಮೆಣಸು, ಅಡಿಕೆ ಮತ್ತು ಹತ್ತಿ ಅಭಿವೃದ್ಧಿಗಾಗಿ ರೂ. 8.23 ಲಕ್ಷ ಖರ್ಚು ಮಾಡುವ ಗುರಿಯಿತ್ತು. ಹಣ್ಣು ಉತ್ಪಾದನಾ ಯೋಜನೆಯನ್ನು ಈ ಅವಧಿಯಲ್ಲೂ ಮುಂದುವರಿಸಲಾಯಿತು. ಕೃಷಿಕರಿಗೆ ಬೇಕಾಗುವ ಉತ್ತಮ ತಳಿಯ ರೋಗರಹಿತ ಸಸ್ಯಗಳನ್ನೊದಗಿಸುವುದಕ್ಕಾಗಿ ಸಸ್ಯ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಲಾಗಿತ್ತು. 1,300 ಎಕರೆಗಳಲ್ಲಿ ಹೊಸ ಹಣ್ಣುಗಳ ತೋಟದ ಸ್ಥಾಪನೆ, 2,000 ಎಕರೆಗಳಲ್ಲಿರುವ ಇಂಥ ತೋಟಗಳ ಅಭಿವೃದ್ಧಿ ಪಡಿಸುವುದು, ಮತ್ತು 2.30 ಲಕ್ಷ ಕಿತ್ತಳೆ ಜಾತಿಯ ಸಸಿಗಳ ಅಭಿವೃದ್ಧಿ, ಮೊದಲಾದವುಗಳಿಗೆ ಈ ಯೋಜನಾ ಅವಧಿಯಲ್ಲಿ ಜಿಲ್ಲೆಗೆ 4.02 ಲಕ್ಷ ರೂ. ನಿಗದಿಪಡಿಸಲಾಗಿತ್ತು. ಏಲಕ್ಕಿ ಬೆಳೆಯ ಅಭಿವೃದ್ಧಿ

ಗೋಸ್ಕರ ಈ ಯೋಜನಾ ಅವಧಿಯಲ್ಲಿ ರೂ. 3 ಲಕ್ಷ ವೆಚ್ಚ ಮಾಡಿ ಹಾಲಿ ಇರುವ ಬೆಳೆಯ ಜೊತೆಗೆ 1,000ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ 750 ಪ್ರದರ್ಶನ ಪ್ಲಾಟುಗಳನ್ನು ಮತ್ತು ಪ್ರತಿಯೊಂದು ಕ್ಷೇತ್ರವೂ ಒಂದು ಲಕ್ಷ ಸಸಿಗಳನ್ನು ವಾರ್ಷಿಕವಾಗಿ ಬೆಳೆಸುವ ಗುರಿಯೊಂದಿಗೆ 2 ಸಸ್ಯ ಕ್ಷೇತ್ರಗಳನ್ನು ಸ್ಥಾಪಿಸಲಾಯಿತು. ಇದರ ಕೃಷಿಕರಿಗೆ ಉತ್ತಮ ಸಾಲ ಸೌಲಭ್ಯವನ್ನೊದಗಿಸುವ ಉದ್ದೇಶವನ್ನು ಹೊಂದಲಾಗಿತ್ತು. ಆಗ ಇದ್ದ ಕರಿಮೆಣಸಿನ ಪ್ರದೇಶದ ಜೊತೆಗೆ 1,500 ಎಕರೆ ಪ್ರದೇಶದಲ್ಲಿ ಹೊಸದಾಗಿ ಮೆಣಸಿನ ಬಳ್ಳಿಯನ್ನು ಬೆಳೆಸುವುದು, ಮತ್ತು ಎರಡು ಸಸ್ಯ ಕ್ಷೇತ್ರಗಳನ್ನು ರೂ. 1.20ಲಕ್ಷ ವೆಚ್ಚದಿಂದ ಸ್ಥಾಪಿಸುವುದು, ಮುಂತಾದ ಗುರಿಗಳನ್ನು ಹೊಂದಲಾಗಿತ್ತು. ಇದೇ ಅವಧಿಯಲ್ಲಿ ಅಡಿಕೆ ಅಭಿವೃದ್ಧಿಗಾಗಿ ಒಂದು ಸಸ್ಯ ಕ್ಷೇತ್ರವನ್ನು ಸ್ಥಾಪಿಸಿ ವಾರ್ಷಿಕ ಎರಡು ಲಕ್ಷ ಸಸಿಗಳನ್ನು ಬೆಳೆಸುವ ಗುರಿ ಇತ್ತು. ಹತ್ತಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಹೊಸದಾಗಿ 1,000 ಎಕರೆ ಪ್ರದೇಶದಲ್ಲಿ ಹತ್ತಿಯನ್ನು ಬೆಳೆದು ಈಗಿನ ಉತ್ಪಾದನೆಯ ಜೊತೆಗೆ 5,000 ಬೇಲ್‌ನಷ್ಟು ಹತ್ತಿಯನ್ನು ಉತ್ಪಾದಿಸುವ ಗುರಿಯನ್ನು ಹೊಂದಲಾಗಿತ್ತು.

ವ್ಯವಸಾಯ ಸಂಶೋಧನೆಗಾಗಿ ಈ ಯೋಜನಾ ಅವಧಿಯಲ್ಲಿ ರೂ. 22.06 ಲಕ್ಷ ವೆಚ್ಚ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಬತ್ತ ಉತ್ಪಾದನಾ ತಜ್ಞರ ಅಧೀನದಲ್ಲಿ ಒಂದು ಕೃಷಿ ಫಾರ್ಮ್ ಮುಂದುವರಿಯಲು ಅನುಮೋದನೆಯ ಜೊತೆಗೆ ಚಟ್ಟಹಳ್ಳಿಯಲ್ಲಿರುವ ಪ್ರಾಂತೀಯ ಹಣ್ಣು ಸಂಶೋಧನಾ ಕೇಂದ್ರವನ್ನು ದಕ್ಷಿಣವಲಯ ಮಲೆನಾಡು ಪ್ರದೇಶದ ಹಣ್ಣು ಸಂಶೋಧನಾ ಕೇಂದ್ರವನ್ನಾಗಿ ಮಾಡಿ ಅದರ ಕಾರ್ಯ ಸಾಮರ್ಥ್ಯವನ್ನು ಹೆಚ್ಚಿಸಲಾಯಿತು. ಕಿತ್ತಳೆ ಸಂಶೋಧನಾ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿತ್ತು. ಚಟ್ಟಹಳ್ಳಿಯಲ್ಲಿ 1960–61ರಲ್ಲಿ ಸ್ಥಾಪನೆಯಾದ ಪ್ರಾಂತೀಯ ಸಂಶೋಧನಾ ಯೋಜನೆಯನ್ನು ರೂ. 4 ಲಕ್ಷ ಯೋಜನಾ ವೆಚ್ಚದಲ್ಲಿ ಮುಂದುವರಿಸಿಕೊಂಡು ಹೋಗುವ ಉದ್ದೇಶವಿತ್ತು. ಈ ಕೇಂದ್ರದ ನೆರವಿನಿಂದ 1960–61ರಲ್ಲಿ ಪ್ರಾರಂಭವಾಗಿದ್ದ ಲವಂಗ ಮತ್ತು ಜಾಯಿಕಾಯಿ ಬೆಳೆಯುವ ಕಾರ್ಯಕ್ರಮವನ್ನು ಈ ಪಂಚವಾರ್ಷಿಕ ಯೋಜನೆಯ 2 ವರ್ಷಗಳ ಅವಧಿಯವರೆಗೆ ಮುಂದುವರಿಸಿಕೊಂಡು ಹೋಗಲು ತೀರ್ಮಾನಿಸಲಾಗಿತ್ತು. ಕೊಡಿಗೆಯಲ್ಲಿದ್ದ ಮೇವು ಉತ್ಪಾದನಾ ಯೋಜನೆಯನ್ನು ರೂ. 86,000 ನೆರವಿನೊಂದಿಗೆ ಮುಂದುವರಿಸಿಕೊಂಡು ಹೋಗಲು ತೀರ್ಮಾನಿಸಲಾಗಿತ್ತು. ಕೊಡಿಗೆಯಲ್ಲಿರುವ ಗ್ರಾಮಸೇವಕ ತರಬೇತಿ ಕೇಂದ್ರವನ್ನು ಕಾರ್ಯಾಗಾರದೊಂದಿಗೆ ರೂ. 13.37 ಲಕ್ಷ ವೆಚ್ಚದಲ್ಲಿ ಮುಂದುವರಿಸುವುದರ ಜೊತೆಗೆ 120 ಅಭ್ಯರ್ಥಿಗಳಿಗೆ ಎರಡು ವರ್ಷಗಳ ಅವಧಿಯ ತೀವ್ರ ತರಬೇತಿಯನ್ನೊದಗಿಸುವ ಮತ್ತು ಇದರ ಕಾರ್ಯಾಗಾರ ವಿಭಾಗದಲ್ಲಿ 20 ವಿದ್ಯಾರ್ಥಿಗಳಿಗೆ ಒಂದು ವರ್ಷದ ತರಬೇತಿಯನ್ನೊದಗಿಸುವ ಉದ್ದೇಶವನ್ನು ಹೊಂದಲಾಗಿತ್ತು. ಇಲ್ಲಿನ ಯುವಕ ತರಬೇತಿ ಸಂಸ್ಥೆಯನ್ನು ರೂ. 20 ಸಾವಿರ ವೆಚ್ಚದಲ್ಲಿ ಮುಂದುವರಿಸಿಕೊಂಡು ಹೋಗಲು ನಿರ್ಧರಿಸಲಾಗಿತ್ತು. ಆಯ್ದ ಕೆಲವು ಗ್ರಾಮಸೇವಕರಿಗೆ ಮತ್ತು ಕೃಷಿಕರ ಮಕ್ಕಳಿಗೆ ಆಧುನಿಕ ಕೃಷಿ ತರಬೇತಿ ಸಂಸ್ಥೆಯ ಮೂಲಕ ತರಬೇತಿಯನ್ನೊದಗಿಸಲು ಈ ಯೋಜನಾ ಅವಧಿಯಲ್ಲಿ ರೂ. 30,000 ಖರ್ಚು ಮಾಡಲು ನಿರ್ಧರಿಸಲಾಗಿತ್ತು.

ಸಣ್ಣ ನೀರಾವರಿಗೆ ಸಂಬಂಧಿಸಿದಂತೆ ಈ ಯೋಜನಾ ಅವಧಿಯಲ್ಲಿ ಹೊಸ ಕೆರೆಗಳ ನಿರ್ಮಾಣ, ಹಳೆ ಕೆರೆಗಳ ದುರಸ್ತಿ, ಹೂಳೆತ್ತುವುದು, ಹೊಸ ಕಾಲುವೆಗಳ ನಿರ್ಮಾಣ ಮೊದಲಾದವುಗಳಿಗಾಗಿ ರೂ. 9 ಲಕ್ಷ ನಿಗದಿಪಡಿಸಿ 1,460 ಎಕರೆಗೆ ನೀರಾವರಿ ಸೌಲಭ್ಯವನ್ನೊದಗಿಸುವ ಗುರಿಯನ್ನು ಹೊಂದಲಾಗಿತ್ತು. ಏತನೀರಾವರಿಗಾಗಿ ರೂ. 6.60 ಲಕ್ಷ ನಿಗದಿಪಡಿಸಲಾಗಿತ್ತು. ಈ ಯೋಜನೆಯ ಕಾಲಾವಧಿಯಲ್ಲಿ 125 ನೀರಾವರಿ ಬಾವಿಗಳು, 50 ಕೊಳವೆ ಬಾವಿಗಳು, 50 ವಿದ್ಯುತ್ ಪಂಪುಗಳು ಮತ್ತು 30 ಡೀಸಲ್ ಪಂಪುಗಳನ್ನು ಒದಗಿಸುವ ಉದ್ದೇಶವನ್ನು ಹೊಂದಲಾಗಿತ್ತು.

ಭೂಸಾರ ಸಂರಕ್ಷಣೆಗಾಗಿ ಈ ಯೋಜನಾ ಅವಧಿಯಲ್ಲಿ ರೂ 1.95 ಲಕ್ಷ ವೆಚ್ಚ ಮಾಡಲು ನಿಗದಿಪಡಿಸಿ ಸುಮಾರು 5,000 ಎಕರೆ ಬೀಳು ಪ್ರದೇಶವನ್ನು ವ್ಯವಸಾಯ ಯೋಗ್ಯವನ್ನಾಗಿ ಮಾಡುವ ಗುರಿಯನ್ನು ಹೊಂದಲಾಗಿತ್ತು. ಅರಣ್ಯ ಇಲಾಖೆಯ ಮೂಲಕ ರೂ. 1.10 ಲಕ್ಷ ವೆಚ್ಚ ಮಾಡಿ 900 ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಿ ಭೂಸವೆತವನ್ನು ತಡೆಯಲು ನಿರ್ಧರಿಸಲಾಗಿತ್ತು. ಪಶುಸಂಪತ್ತನ್ನು ಹೆಚ್ಚಿಸುವುದಕ್ಕಾಗಿ ರೂ. 5.17 ಲಕ್ಷ ವೆಚ್ಚದೊಂದಿಗೆ ಹೊಸದಾಗಿ 4 ಗ್ರಾಮಾಂತರ ಪಶುವೈದ್ಯಶಾಲೆಗಳ ಸ್ಥಾಪನೆ ಹಾಗೂ ಮೂರು ಪಶುವೈದ್ಯಶಾಲೆಗಳನ್ನು ಪೂರ್ಣ ಪ್ರಮಾಣದ ವೈದ್ಯಶಾಲೆಗಳಾಗಿ ಪರಿವರ್ತಿಸಲು ಉದ್ದೇಶಿಸಲಾಗಿತ್ತು. ಈ ಯೋಜನಾ ಅವಧಿಯಲ್ಲಿ 15 ಬೀಜದ ಹೋರಿಗಳನ್ನು ಪುಕ್ಕಟೆಯಾಗಿ ಫಲಾನುಭವಿಗಳಿಗೆ ಒದಗಿಸುವುದು, ವೀರ್ಯ ಸಂಗ್ರಹಣಾ ಕೇಂದ್ರಗಳ ಮೂಲಕ 120 ಪಶುಗಳಿಗೆ ಕಡಿಮೆ ದರದಲ್ಲಿ

ವೀರ್ಯ ಒದಗಿಸುವುದರ ಜೊತೆಗೆ ರೂ. 50 ಸಾವಿರ ವೆಚ್ಚದಲ್ಲಿ ಕ್ಲಿನಿಕಲ್ ಪ್ರಯೋಗ ಶಾಲೆಯನ್ನು ಸ್ಥಾಪಿಸುವ ಗುರಿಯನ್ನು ಹೊಂದಲಾಗಿತ್ತು. ಕೋಳಿ ಸಾಕಣೆಗಾಗಿ 1 ಲಕ್ಷ ವೆಚ್ಚ ಮಾಡಲು ಉದ್ದೇಶಿಸಿದ್ದು, ಈಗಿನ ಕೊಡಿಗೆ ಕೋಳಿ ಸಾಕಣೆ ಘಟಕದ ಸಾಮರ್ಥ್ಯವನ್ನು 500 ರಿಂದ 1000 ರವರೆಗೆ ಕೋಳಿಮರಿ ಸಾಕಣೆಯಲ್ಲಿ ಹೆಚ್ಚಳ ಸಾಧಿಸುವುದು ಮತ್ತೆ ಎರಡು ಘಟಕಗಳ ಸಾಮರ್ಥ್ಯವನ್ನು ಹೆಚ್ಚಿಸುವುದು, ಮತ್ತು 60 ಮಂದಿಗೆ ತರಬೇತಿಯನ್ನು ನೀಡುವ ಉದ್ದೇಶವನ್ನು ಹೊಂದಲಾಗಿತ್ತು. ಇದೇ ಕಾಲಾವಧಿಯಲ್ಲಿ ರೂ. 3 ಲಕ್ಷ ವೆಚ್ಚ ಮಾಡಿ ಕೊಡಿಗೆ ಹಾಲು ಸರಬರಾಜು ಯೋಜನೆಯ ಸಾಮರ್ಥ್ಯವನ್ನು ಎರಡನೇಯ ಯೋಜನೆಯ ಅಂತ್ಯದಲ್ಲಿದ್ದ 4,000 ಪೌಂಡ್‌ನಿಂದ 8,000 ಪೌಂಡ್‌ಗೆ ಹೆಚ್ಚಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಮೀನು ಅಭಿವೃದ್ಧಿಗಾಗಿ ರೂ. 1.20 ಲಕ್ಷ ವೆಚ್ಚ ಮಾಡಿ 10 ಲಕ್ಷ ಮೀನು ಮರಿಗಳನ್ನು ಸಾಕಿ ಹಂಚುವ ಗುರಿಯನ್ನು ಹೊಂದಲಾಗಿತ್ತು. ಅರಣ್ಯಾಭಿವೃದ್ಧಿಯ ವಿವಿಧ ಯೋಜನೆಗಳಿಗಾಗಿ ರೂ. 23 ಲಕ್ಷ ವೆಚ್ಚ ಮಾಡುವ ಗುರಿಯೊಂದಿಗೆ, ಈ ಯೋಜನಾ ಅವಧಿಯಲ್ಲಿ 1,100 ಎಕರೆ ಪ್ರದೇಶದಲ್ಲಿ ಹೆಚ್ಚು ಬೆಲೆಬಾಳುವ ಮರಗಳನ್ನು ಬೆಳೆಸುವುದಕ್ಕೆ ರೂ. 1.30 ಲಕ್ಷ ವೆಚ್ಚ ಮಾಡಲು ನಿಗದಿಪಡಿಸಲಾಗಿತ್ತು. ಒಟ್ಟು ರೂ. 1.50 ಲಕ್ಷ ವೆಚ್ಚದಲ್ಲಿ ವಾರ್ಷಿಕ 200 ಎಕರೆ ಪ್ರದೇಶದಂತೆ 1,000 ಎಕರೆ ಪ್ರದೇಶದಲ್ಲಿ ಹೆಚ್ಚು ಬೆಲೆಬಾಳುವ ತೇಗದ ಮರ ಬೆಳೆಯುವ ಗುರಿಯನ್ನಿಟ್ಟುಕೊಳ್ಳಲಾಗಿತ್ತು. ಇದರ ಜೊತೆಗೆ ವಾರ್ಷಿಕ ಸುಮಾರು 185 ಎಕರೆ ಪ್ರದೇಶದಲ್ಲಿ ಹೊಸದಾಗಿ ಅರಣ್ಯ ಬೆಳೆಸಲು ಉದ್ದೇಶಿಸಿತ್ತಲ್ಲದೆ ಅಭಯಾರಣ್ಯವನ್ನು ಅಭಿವೃದ್ಧಿ ಪಡಿಸಿ ಪ್ರವಾಸೀ ಕೇಂದ್ರವನ್ನಾಗಿ ಮಾಡಲು ರೂ. 1 ಲಕ್ಷ, ಅರಣ್ಯ ಸಂಪತ್ತು ಸಾರಿಗೆಗಾಗಿ, ರಸ್ತೆಗಳ ನಿರ್ಮಾಣಕ್ಕಾಗಿ ರೂ. 9 ಲಕ್ಷ, ನೌಕರರ ನಿವಾಸಗಳ ನಿರ್ಮಾಣಕ್ಕಾಗಿ 2.50 ಲಕ್ಷ, ಫ್ಲೈಯಿಂಗ್ ಸ್ಕ್ವಾಡ್ ಸ್ಥಾಪನೆಗಾಗಿ ರೂ. 1.25 ಲಕ್ಷ, ಗಾರ್ಡ್‌ಗಳ ತರಬೇತಿ ಶಾಲೆಗಾಗಿ ರೂ. 1.25 ಲಕ್ಷ, ಫಾರ್ಮ್ ಪಾರೆಸ್ಟ್ರಿಗಾಗಿ ರೂ. 1.05 ಲಕ್ಷ, ಮರ ಸಂರಕ್ಷಣಾ ನಿವೇಶನಕ್ಕಾಗಿ ರೂ. 2.90 ಲಕ್ಷ ಮತ್ತು ಬೆಂಕಿಕಡ್ಡಿ ಮರಗಳನ್ನು ಬೆಳೆಸುವುದಕ್ಕೆ ರೂ. 1.45 ಲಕ್ಷ ವೆಚ್ಚ ಮಾಡುವ ಗುರಿಯನ್ನು ಹೊಂದಲಾಗಿತ್ತು. ಹುಲ್ಲು ಮತ್ತು ಸೌದೆಯನ್ನೊದಗಿಸಲು ಸುಮಾರು 4,200 ಎಕರೆ ಪ್ರದೇಶದಲ್ಲೂ, ಬೆಂಕಿಕಡ್ಡಿ ಮರಗಳನ್ನು 1,000 ಎಕರೆ ಪ್ರದೇಶದಲ್ಲೂ ಬೆಳೆ ಅಭಿವೃದ್ಧಿ ಪಡಿಸುವುದು ಈ ಯೋಜನೆಯ ಉದ್ದೇಶವಾಗಿತ್ತು.

ಸಹಕಾರ ಸಂಘಗಳ ವಿವಿಧ ಯೋಜನೆಗಳ ಅಭಿವೃದ್ಧಿಗಾಗಿ ಈ ಯೋಜನಾ ಅವಧಿಯಲ್ಲಿ ರೂ. 6.98 ಲಕ್ಷ ವೆಚ್ಚ ಮಾಡುವ ಗುರಿಯನ್ನು ಹೊಂದಲಾಗಿತ್ತು. ಈ ಕಾಲಾವಧಿಯಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಎರಡು ಶಾಖೆಗಳನ್ನು ತೆರೆಯುವುದು ಮತ್ತು ಬ್ಯಾಂಕಿನ ಮೇಲ್ವಿಚಾರಕ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸುವುದು, 50 ಸೇವಾ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವುದು, 20 ದಾಸ್ತಾನು ಮಳಿಗೆಗಳನ್ನು ನಿರ್ಮಿಸುವುದು, 15 ಪ್ರಾಥಮಿಕ ಮಾರಾಟ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗಾಗಿ, ಈ ಯೋಜನಾ ಅವಧಿಯಲ್ಲಿ 4.10 ಲಕ್ಷ ರೂ. ವೆಚ್ಚ ಮಾಡಲು ಉದ್ದೇಶಿಸಲಾಗಿತ್ತು. ಕೈಗಾರಿಕಾ ಎಸ್ಟೇಟಿನ ನಿರ್ಮಾಣ, ವಿವಿಧ ಕುಶಲಕರ್ಮಿಗಳಿಗೆ ತರಬೇತಿ ವ್ಯವಸ್ಥೆ ಮತ್ತು ಅವರಿಗೆ ಧನ ಸಹಾಯವನ್ನೊದಗಿಸುವುದು, ರೂ. 2.10 ಲಕ್ಷ ವೆಚ್ಚದಲ್ಲಿ ಮಡಿಕೇರಿಬೀಡಿನಲ್ಲಿ ಕುಂಭ ಕಲೆ ಕೇಂದ್ರ ಸ್ಥಾಪನೆ, ಕೈಮಗ್ಗಗಳ ಅಭಿವೃದ್ಧಿ, ಕರಕುಶಲ ಸರಕುಗಳು ಪ್ರೋತ್ಸಾಹ ಮೊದಲಾದವುಗಳ ಜೊತೆಗೆ ರೂ. 3.96 ಲಕ್ಷ ವೆಚ್ಚದಲ್ಲಿ ರೇಷ್ಮೆ, ಜೇನು ಸಾಕಣೆ ಮೊದಲಾದವುಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗಿತ್ತು.

ಕಡ್ಡಾಯ ಶಿಕ್ಷಣ ಯೋಜನೆಯಡಿಯಲ್ಲಿ 150 ಉಪಾಧ್ಯಾಯರ ನೇಮಕ ಮಾಡಲು ಮತ್ತು 30 ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ರೂ. 5.30 ಲಕ್ಷ ವೆಚ್ಚವನ್ನು ನಿಗದಿ ಮಾಡಲಾಗಿತ್ತು. ಮೂಲ ಶಿಕ್ಷಣ ಶಾಲೆಗಳು, ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಹಾಗೂ ವಿವಿಧೋದ್ದೇಶ ಶಾಲೆಗಳ ಬಲವರ್ಧನೆಗಾಗಿ ಹೆಚ್ಚುವರಿ ಉಪಾಧ್ಯಾಯರ ಮತ್ತು ಇನ್ಸ್‌ಪೆಕ್ಟರ್‌ಗಳ ನೇಮಕ, ಹೆಣ್ಣು ಮಕ್ಕಳ ಶಾಲೆಗಳ ಅಭಿವೃದ್ಧಿ ಮೊದಲಾದ ಪ್ರಗತಿಪರ ಕಾರ್ಯಕ್ರಮಗಳನ್ನು ಈ ಯೋಜನಾ ಅವಧಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಯೋಜನಾ ಅವಧಿಯಲ್ಲಿ ರೂ. 19 ಲಕ್ಷ ವೆಚ್ಚದಲ್ಲಿ ಒಂದು ಪಾಲಿಟೆಕ್ನಿಕ್ ಸಂಸ್ಥೆಯನ್ನು ತೆರೆಯಲಾಯಿತು.

ಗ್ರಾಮಾಂತರ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಯಲ್ಲಿ ಒಂದು ಪಟ್ಟಣ ನೀರು ಸರಬರಾಜು ಮತ್ತು 13 ಗ್ರಾಮಾಂತರ ನೀರು ಸರಬರಾಜು ಸೌಲಭ್ಯವನ್ನು ಒದಗಿಸಲಾಗಿತ್ತು. ಸುಮಾರು 268

ಸಾರ್ವಜನಿಕ ಕುಡಿಯುವ ನೀರಿನ ಬಾವಿಗಳನ್ನು ವಿವಿಧ ಯೋಜನೆಗಳಡಿಯಲ್ಲಿ ತೋಡಲಾಗಿತ್ತು. ಈ ಯೋಜನಾ ಅವಧಿಯಲ್ಲಿ ಸುಮಾರು 217 ಹಳ್ಳಿಗಳು ಕುಡಿಯುವ ನೀರಿನ ಸೌಲಭ್ಯವನ್ನು ಹೊಂದಿದ್ದು 80 ಹಳ್ಳಿಗಳು ಈ ಸೌಲಭ್ಯವನ್ನು ಹೊಂದುವ ನಿರೀಕ್ಷೆಯಿತ್ತು. ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯಡಿಯಲ್ಲಿ ಜಿಲ್ಲೆಯ 8 ಸ್ಥಳಗಳಿಗೆ ರೂ. 3.33 ಲಕ್ಷ ವೆಚ್ಚದಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಗುರಿಯನ್ನು ಹೊಂದಲಾಗಿತ್ತು. ಪಟ್ಟಣಗಳ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ರೂ. 1ಲಕ್ಷ ವೆಚ್ಚ ಮಾಡುವ ಗುರಿಯನ್ನು ಹೊಂದಲಾಗಿತ್ತು.

ಆರೋಗ್ಯ ಮತ್ತು ಆಸ್ಪತ್ರೆಗೆ ಸಂಬಂಧಿಸಿದಂತೆ ಈ ಯೋಜನಾ ಅವಧಿಯಲ್ಲಿ ದ್ವಿತೀಯ ಯೋಜನೆಯ ಅಂಶಗಳನ್ನು ಕಾರ್ಯರೂಪಕ್ಕೆ ತರುವ ಗುರಿಯನ್ನು ಹೊಂದಲಾಗಿತ್ತು. ಹೊಸದಾಗಿ ಮೂರು ಗ್ರಾಮಾಂತರ ಜನನ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸುವುದು, ಜಿಲ್ಲಾ ಪ್ರಯೋಗ ಶಾಲೆಯನ್ನು ರೂ. 50,000 ವೆಚ್ಚದಲ್ಲಿ ಮುಂದುವರಿಸುವುದು ಮತ್ತು ರೂ. 10,000 ವೆಚ್ಚದಲ್ಲಿ ಜಿಲ್ಲಾ ಜನನ ನಿಯಂತ್ರಣ ಯೋಜನಾ ಸಮಿತಿಯನ್ನು ಮುಂದುವರಿಸುವುದು, ಈಗಿರುವ ಆಸ್ಪತ್ರೆಯ ಸೌಲಭ್ಯವನ್ನು ಹೆಚ್ಚಿಸುವುದು, ಮೊದಲಾದವುಗಳು ಈ ಯೋಜನೆಯ ಪ್ರಮುಖ ಅಂಶಗಳು.

ಸಾರಿಗೆ ಸೌಲಭ್ಯಕ್ಕೆ ಸಂಬಂಧಿಸಿದಂತೆ ಈ ಯೋಜನಾ ಅವಧಿಯಲ್ಲಿ ರೂ. 13.40 ಲಕ್ಷ ವೆಚ್ಚದಲ್ಲಿ ಹಳೆಯ ಮತ್ತು ಹೊಸ ಯೋಜನಾ ಅಂಶಗಳನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿತ್ತು. ರೂ. 3 ಲಕ್ಷ ವೆಚ್ಚದಲ್ಲಿ 30 ಮೈಲಿ ಕಚ್ಚಾರಸ್ತೆಯನ್ನು ಜಲ್ಲಿ ರಸ್ತೆಯನ್ನಾಗಿ ಪರಿವರ್ತಿಸುವುದು, ರೂ. 1.20 ಲಕ್ಷ ವೆಚ್ಚದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು, ರೂ. 9.20 ಲಕ್ಷ ವೆಚ್ಚದಲ್ಲಿ ದೊಡ್ಡ ಸೇತುವೆಗಳನ್ನು ನಿರ್ಮಿಸುವುದು ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭವಾದ ಗೃಹನಿರ್ಮಾಣ ಯೋಜನೆಯನ್ನು ತೃತೀಯ ಯೋಜನೆಯಲ್ಲಿ ಮುಂದುವರಿಸಲಾಯಿತು. ಜಿಲ್ಲೆಯ ಮೂರು ಕ್ಷೇತ್ರಗಳಿಂದ 15 ಗ್ರಾಮಗಳನ್ನು ಈ ಯೋಜನೆಯ ವ್ಯಾಪ್ತಿಗೊಳಪಡಿಸಿ ಪ್ರತೀ ವರ್ಷ ಒಂದು ಕ್ಷೇತ್ರದ ಒಂದು ಗ್ರಾಮವನ್ನು ದತ್ತು ತೆಗೆದುಕೊಳ್ಳುವ ಉದ್ದೇಶವನ್ನು ಹೊಂದಲಾಗಿತ್ತು. ಈ ಯೋಜನೆಯಲ್ಲಿ 294 ಗೃಹ ನಿರ್ಮಾಣದ ಉದ್ದೇಶವಿದ್ದು ಮೊದಲ ಎರಡು ವರ್ಷಗಳಲ್ಲಿ ವಾರ್ಷಿಕ 42 ಗೃಹಗಳನ್ನು, ಮೂರನೇಯ ವರ್ಷದಲ್ಲಿ 60 ಮತ್ತು ಕೊನೆಯ ಎರಡು ವರ್ಷಗಳಲ್ಲಿ ವಾರ್ಷಿಕ 75 ಗೃಹಗಳ ನಿರ್ಮಾಣದ ಗುರಿಯನ್ನು ಹೊಂದಲಾಗಿತ್ತು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಪಂಗಡಗಳವರ ಅಭಿವೃದ್ಧಿಗಾಗಿ ಈ ಯೋಜನಾ ಅವಧಿಯಲ್ಲಿ ವ್ಯಾಪಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತಲ್ಲದೆ ಪರಿಶಿಷ್ಟವರ್ಗದ ಜನರ ಅಭಿವೃದ್ಧಿಗೆ ಆದ್ಯತೆಯನ್ನು ಕೊಡಲಾಗಿತ್ತು. ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ರೂ. 12.18 ಲಕ್ಷ ಮೀಸಲಿಟ್ಟು, ಮೂರು ಆಶ್ರಮ ಶಾಲೆಗಳು ಮತ್ತು ಒಂದು ವಿದ್ಯಾರ್ಥಿ ನಿಲಯ ನಿರ್ಮಾಣದ ಜೊತೆಗೆ 140 ವಿದ್ಯಾರ್ಥಿಗಳಿಗೆ ಊಟದ ಭತ್ಯ, 90 ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮತ್ತು ತರಬೇತಿ ವೇತನ, 300 ವಿದ್ಯಾರ್ಥಿಗಳಿಗೆ ವಸ್ತ್ರಸೌಲಭ್ಯವನ್ನೊದಗಿಸುವ ಗುರಿಯನ್ನು ಹೊಂದಲಾಗಿತ್ತು. ಇದೇ ಕಾಲಾವಧಿಯಲ್ಲಿ ಒಂದು ತರಬೇತಿ ಹಾಗೂ ಉತ್ಪಾದನಾ ಕೇಂದ್ರದ ಸ್ಥಾಪನೆ, 120 ಕೃಷಿ ಸಂಸಾರಗಳಿಗೆ ಕೃಷಿ ಉಪಕರಣಗಳ ಹಂಚಿಕೆ, ಎರಡು ಪರಿಶಿಷ್ಟ ವರ್ಗದ ಸಹಕಾರಿ ಸಂಘಗಳ ಸ್ಥಾಪನೆ, 120 ಕುಟುಂಬಗಳಿಗೆ ಗೃಹ ನಿರ್ಮಾಣಕ್ಕೆ ಸಹಾಯಧನ ಸೌಲಭ್ಯ, ಎಂಟು ಬಾವಿಗಳ ನಿರ್ಮಾಣ, 15 ಮೈಲಿಗಳಷ್ಟು ರಸ್ತೆ ನಿರ್ಮಾಣ ಮತ್ತು 75 ಕುಟುಂಬಗಳಿಗೆ ಕಾನೂನು ಸೌಲಭ್ಯವನ್ನೊದಗಿಸುವ ಗುರಿಯನ್ನಿಟ್ಟುಕೊಳ್ಳಲಾಗಿತ್ತು. ಸುಮಾರು 40,000 ರೂ.ಗಳ ವೆಚ್ಚದಲ್ಲಿ ಒಂದು ಮಹಿಳೆಯರ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸುವ ಉದ್ದೇಶವೂ ಸಹ ಇತ್ತು. ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ ಈ ಯೋಜನಾ ಅವಧಿಯಲ್ಲಿ ರೂ. 4.20ಲಕ್ಷ ವೆಚ್ಚ ಮಾಡುವ ಗುರಿಯನ್ನು ಹೊಂದಿದ್ದು ಪರಿಶಿಷ್ಟಜಾತಿಯ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳ ಹಾಸ್ಟಲ್ ನಿರ್ಮಾಣ, 500 ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, 1,500 ಪ್ರಾಥಮಿಕ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಮತ್ತು ಸ್ಲೇಟುಗಳ ವಿತರಣೆ, ಒಂದು ವಸತಿಶಾಲೆ, ಹೊರದೇಶದಲ್ಲಿ ಕಲಿಯುತ್ತಿರುವ ಒಬ್ಬ ವಿದ್ಯಾರ್ಥಿ ಹಾಗೂ ರಾಜ್ಯದಲ್ಲಿನ ಸಂಶೋಧನಾ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನ, 50 ಸಂಸಾರಗಳಿಗೆ ಕೃಷಿ ಸಹಾಯಧನ, ಒಂದು ಹೊಲಿಗೆ ತರಬೇತಿ ಕೇಂದ್ರ ಸ್ಥಾಪನೆ ಮತ್ತು ಅದರಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತರಬೇತಿ ವೇತನ, 39 ಮಂದಿಗೆ ಕೋಳಿ ಸಾಕಣೆಗೆ ಸಹಾಯಧನ, 58 ಸಂಸಾರಗಳಿಗೆ ಎತ್ತು ಮತ್ತು ಗಾಡಿ, 25 ಮಂದಿಗೆ ಹಸು ಮತ್ತು ಎಮ್ಮೆ, 9 ಸಂಸಾರಗಳಿಗೆ ಕೃಷಿ

ಭೂಮಿ ಒದಗಿಸುವುದು, 30 ಗೃಹನಿರ್ಮಾಣ ಬಡಾವಣೆಗಳಲ್ಲಿ ಆರು ನಿವೇಶನಗಳನ್ನು ಕೊಳ್ಳುವುದು ಮೊದಲಾದ ಸೌಲಭ್ಯವನ್ನು ಒದಗಿಸುವ ಗುರಿಯನ್ನು ಹೊಂದಲಾಗಿತ್ತು. ಹಿಂದುಳಿದ ಪಂಗಡಗಳ ಅಭಿವೃದ್ಧಿಗಾಗಿ ರೂ. 49,000 ವೆಚ್ಚ ಮಾಡುವ ಗುರಿಯನ್ನು ಹೊಂದಿದ್ದು, 160 ವಿದ್ಯಾರ್ಥಿಗಳಿಗೆ ಸೌಲಭ್ಯವನ್ನೊದಗಿಸಲು ಹಾಸ್ಟಲ್‌ಗಳಿಗೆ ಅನುದಾನ, 140 ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮೊದಲಾದ ಸೌಲಭ್ಯವನ್ನು ಒದಗಿಸುವ ಗುರಿಯನ್ನು ಹೊಂದಿತ್ತು.

ಸಾಮಾಜಿಕ ಕ್ಷೇಮಾಭಿವೃದ್ಧಿಗಾಗಿ ಈ ಯೋಜನಾ ಅವಧಿಯಲ್ಲಿ ರೂ. 2.16 ಲಕ್ಷ ವೆಚ್ಚ ಮಾಡುವುದು, ಒಂದು ಬಾಲಾಪರಾಧಿ ಗೃಹ ಸ್ಥಾಪಿಸುವುದು, ಮೊದಲಾದ ಗುರಿಯನ್ನು ಹೊಂದಲಾಗಿತ್ತು. ಕಾರ್ಮಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ, ಈ ಯೋಜನಾ ಅವಧಿಯಲ್ಲಿ ರೂ. 18 ಸಾವಿರ ವೆಚ್ಚ ಮಾಡಿ ಒಂದು ಕಾರ್ಮಿಕ ಕ್ಷೇಮಾಭಿವೃದ್ಧಿ ಕೇಂದ್ರವನ್ನು ಸ್ಥಾಪಿಸುವುದು, ಉದ್ಯೋಗ ವಿನಿಮಯ ಕಛೇರಿಯನ್ನು ಬಲಪಡಿಸುವುದು, ರೂ. 4.06 ಲಕ್ಷ ವೆಚ್ಚದಲ್ಲಿ ಕರಕುಶಲ ತರಬೇತಿ ಸೌಲಭ್ಯವನ್ನು ಒದಗಿಸುವುದು, ಮೊದಲಾದ ಗುರಿಗಳನ್ನು ಇಟ್ಟುಕೊಳ್ಳಲಾಗಿತ್ತು. ಈ ಯೋಜನಾ ಅವಧಿಯಲ್ಲಿ ಮಾರುಕಟ್ಟೆ ಸೌಲಭ್ಯಕ್ಕೆ ಸಂಬಂಧಿಸಿದಂತೆ ರೂ. 54,000 ವೆಚ್ಚದಲ್ಲಿ ನಿಯಂತ್ರಿತ ಮಾರುಕಟ್ಟೆ ಸಮಿತಿಯನ್ನು 30,000 ರೂ. ವೆಚ್ಚದಲ್ಲಿ ಒಂದು ದನಗಳ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಲಾಗಿತ್ತು.

ಈ ಯೋಜನಾ ಅವಧಿಯಲ್ಲಿ ರಾಜ್ಯವ್ಯಾಪ್ತಿಯನ್ನು ಹೊಂದಿರುವ ಯೋಜನೆಗಳ ಪೈಕಿ ಜಿಲ್ಲೆಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಯ ಮುಂದುವರಿಕೆಗೆ ರೂ. 20.66 ಲಕ್ಷವನ್ನು, ಹಾರಂಗಿ ಯೋಜನೆಗೆ ರೂ. 100 ಲಕ್ಷವನ್ನು ಮತ್ತು ಕಂಬದ ಕಡ ಯೋಜನೆಗೆ ರೂ. 61 ಲಕ್ಷವನ್ನು ನಿಗದಿಪಡಿಸಲಾಗಿತ್ತು. ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲೆಗೆ ರೂ. 15.50 ಲಕ್ಷವನ್ನು ನಿಗದಿಪಡಿಸಿ 117 ಮೈಲಿ ವಿದ್ಯುತ್ ಜಾಲ ಸೌಲಭ್ಯ, 12 ಹಳ್ಳಿಗಳಿಗೆ ವಿದ್ಯುತ್ ಸೌಲಭ್ಯ, ಮೊದಲಾದ ಗುರಿಗಳಿದ್ದವು. ಸಾರಿಗೆ ಸಂಪರ್ಕಕ್ಕೆ ಸಂಬಂಧಿಸಿದಂತೆ ಈ ಯೋಜನಾ ಅವಧಿಯಲ್ಲಿ ಕುಶಾಲನಗರ–ಸಂಪಾಜೆ–ಮಂಗಳೂರು ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಲಾಗಿತ್ತು. ಜಿಲ್ಲೆಯಲ್ಲಿ ಇದರ ಉದ್ದ ಸುಮಾರು 36 ಮೈಲಿಗಳು.

ನಾಲ್ಕನೇಯ ಯೋಜನೆ

ನಾಲ್ಕನೇಯ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯೋತ್ಪಾದನೆ, ನೀರಾವರಿ ಸೌಲಭ್ಯ, ವಿದ್ಯುತ್ ಉತ್ಪಾದನೆ, ಮಾನವ ಶಕ್ತಿಯ ಪೂರ್ಣ ಉಪಯೋಗ, ಕೈಗಾರಿಕಾ ಬಂಡವಾಳ ಹೂಡಿಕೆ, ಸಾಮಾಜಿಕ ಸೇವೆ ಮೊದಲಾದವುಗಳಿಗೆ ಆದ್ಯತೆ ಕೊಡಲಾಗಿತ್ತು. ಈ ಯೋಜನೆಯ ಆದಿಭಾಗದಲ್ಲಿದ್ದ ಜಿಲ್ಲೆಯ ಪ್ರಗತಿ ಮತ್ತು ರಾಜ್ಯದಲ್ಲಿ ಇದ್ದ ಸ್ಥಾನ ಕೆಳಗೆ ಕೊಟ್ಟಿರುವಂತೆ ಇತ್ತು. ಇದರ ಸ್ಥಾನವನ್ನು ಆವರಣದಲ್ಲಿ ಕೊಡಲಾಗಿದೆ. 1969–70ರ ಗ್ರಾಮಪತ್ರದ ಪ್ರಕಾರ ಜಿಲ್ಲೆಯ ಒಟ್ಟು ಭೂಮಿಯಲ್ಲಿ ಪ್ರತೀಶತ ನಿವ್ವಳ ಬಿತ್ತನೆಗೊಳಗಾದ ಭೂಮಿ 28.5 (17), 1969-70ರಲ್ಲಿದ್ದ ಪ್ರತೀ 1000 ಜನರ ನಿವ್ವಳ ಬಿತ್ತನೆ ಭೂಮಿಯ ಪೈಕಿ ಪ್ರತೀಶತ 1000 ಜನರ ನಿವ್ವಳ ನೀರಾವರಿ ಭೂಮಿ 6.9 (15), 1970–71ರಲ್ಲಿದ್ದ ಒಟ್ಟು ಜನಸಂಖ್ಯೆಯಲ್ಲಿ ಪ್ರತೀಶತ ಶಾಲೆಗೆ ಹೋಗುತ್ತಿದ್ದ ವಿದ್ಯಾರ್ಥಿಗಳು (1-5 ತರಗತಿ) 11 (5), 1971ರಲ್ಲಿ ಪ್ರತೀಶತ ವಿದ್ಯಾವಂತರು 44.4 (1), ವಿದ್ಯಾವಂತರ ಪೈಕಿ ಗಂಡಸರು 50.3 (4), ಮಹಿಳೆಯರು 37.8 (1), 1970-71ರಲ್ಲಿದ್ದ 100 ಕಿ.ಮೀ. ರಸ್ತೆಯಲ್ಲಿನ ಉತ್ತಮ ರಸ್ತೆಯ ಉದ್ದ 26.6 (6), 1970ರಲ್ಲಿದ್ದ ಆಸ್ಪತ್ರೆಗಳ ಘಟಕಕ್ಕನುಗುಣವಾಗಿದ್ದ ಜನಸಂಖ್ಯೆ 1,25,641 (19), 1972ರಲ್ಲಿದ್ದ ಪ್ರತೀ ವಾಣಿಜ್ಯ ಅಥವಾ ಸಹಕಾರಿ ಬ್ಯಾಂಕ್‌ಗಳಿಂದ ಸೇವಾ ಸೌಲಭ್ಯ ಹೊಂದುತ್ತಿದ್ದ ಜನಸಂಖ್ಯೆ 6,179 (1).

ಈ ಯೋಜನಾ ಅವಧಿಯಲ್ಲಿ ಜಿಲ್ಲೆಯ ತಲಾ ಆದಾಯ 1970–71ರಲ್ಲಿ ರೂ. 1,218 ಮತ್ತು 1974–75ರಲ್ಲಿ ರೂ. 1,394 ಇತ್ತು. 1974–75ರಲ್ಲಿ ಜಿಲ್ಲೆಯಲ್ಲಿದ್ದ ನೀರಾವರಿ ಪ್ರದೇಶವು ಒಟ್ಟು ಬಿತ್ತನೆಗೊಳಗಾಗಿರುವ ಭೂಮಿಯ ಪ್ರತೀಶತ 12.8 ರಷ್ಟಿತ್ತು. ಅಧಿಕ ಇಳುವರಿಯನ್ನು ಹೊಂದಿದ್ದ ಪ್ರದೇಶ 3,400 ಹೆ. ರಸಗೊಬ್ಬರ ಉಪಯೋಗ 4,000 ಟನ್; ಹತ್ತಿ ಬೇಲುಗಳು 710 ಕಬ್ಬು 0.09 ಲಕ್ಷ ಟನ್; ಎಣ್ಣೆ ಬೀಜಗಳು 0.007 ಲಕ್ಷ ಟನ್; ಆಹಾರಧಾನ್ಯ 0.87 ಲಕ್ಷ ಟನ್ ಇತ್ತು. ಇದೇ ಕಾಲಾವಧಿಯಲ್ಲಿ ವಿದ್ಯುತ್ ಸೌಲಭ್ಯ ಪಡೆದ ಗ್ರಾಮಗಳ ಸಂಖ್ಯೆ 129, ವಿದ್ಯುತ್ ಸೌಲಭ್ಯ ಪಡೆದ ಪಂಪುಸೆಟ್ಟುಗಳ ಸಂಖ್ಯೆ 858, ಸಣ್ಣ ಪ್ರಮಾಣದ ಕೈಗಾರಿಕೆಗಳು 205, ಪುನರ್ ವ್ಯವಸ್ಥಿತ ಸಹಕಾರ ಸಂಘಗಳು 69 ಇದ್ದವು. 16 ಆಸ್ಪತ್ರೆಗಳು, 23 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 54 ಡಿಸ್ಪೆನ್ಸರಿಗಳು, 32 ಕುಟುಂಬ ಯೋಜನಾ ಕೇಂದ್ರಗಳು

ಮತ್ತು 32 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು.

### ಐದನೇಯ ಯೋಜನೆ

ಐದನೇಯ ಪಂಚವಾರ್ಷಿಕ ಯೋಜನೆಯು ಬಡತನ ನಿರ್ಮೂಲನ ಮತ್ತು ಆರ್ಥಿಕ ಸ್ವಯಂಪರಿಪೂರ್ಣತೆಯನ್ನು ಸಾಧಿಸುವ ಮೂಲ ಉದ್ದೇಶದೊಂದಿಗೆ 1978–83ರಲ್ಲಿ ಕಾರ್ಯಾರಂಭ ಮಾಡಿತು. ಈ ಯೋಜನೆಯ ಆದಿಭಾಗದಲ್ಲಿ ಕೊಡಗು ಜಿಲ್ಲೆಯನ್ನು ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿ ನೋಡಿದಾಗ 1976–77ರಲ್ಲಿ ಸರ್ವಕ್ಷೇತ್ರಗಳ ದೃಷ್ಟಿಯಿಂದ ಅಭಿವೃದ್ಧಿ ಹೊಂದಿದ ಜಿಲ್ಲೆಯಾಗಿತ್ತು. ಆರ್ಥಿಕ ಸಂಪತ್ ಸಾಧನೆಗಳಾದ ಸಾರಿಗೆ ಸಂಪರ್ಕ, ಬ್ಯಾಂಕಿಂಗ್ ಮೊದಲಾದ ಕ್ಷೇತ್ರಗಳಲ್ಲಿ ಬಹಳ ಮುಂದುವರಿದ ಜಿಲ್ಲೆ ಎನಿಸಿತ್ತು. ಜಿಲ್ಲೆಯ ಮೂರು ತಾಲೂಕುಗಳು ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿರುವುದೇ ಅಲ್ಲದೆ 'ಆದ್ಯತೆ ಪ್ರದೇಶದ' ವ್ಯಾಪ್ತಿಗೂ ಒಳಪಟ್ಟಿದ್ದು ಇವುಗಳಲ್ಲಿ ಕೃಷಿ, ಪಶುಪಾಲನೆ, ನೀರಾವರಿ, ತೋಟಗಾರಿಕೆ, ಅರಣ್ಯ, ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಪ್ರವಾಸೋದ್ಯಮಕ್ಕೆ ಆದ್ಯತೆಯನ್ನು ಕೊಟ್ಟು ಅಭಿವೃದ್ಧಿಪಡಿಸಲು ಪಶ್ಚಿಮ ಘಟ್ಟ ಅಭಿವೃದ್ಧಿ ಮಂಡಳಿಯು 1974 ರಿಂದ ಕಾರ್ಯೋನ್ಮುಖವಾಗಿದೆ.

ಐದನೇಯ ಯೋಜನೆಯ ಆದಿಭಾಗದಲ್ಲಿದ್ದ (1978–79) ಜಿಲ್ಲೆಯ ವಿವಿಧ ಕ್ಷೇತ್ರಗಳ ಚಿತ್ರಣವನ್ನು ಇಲ್ಲಿ ಕೊಡಲಾಗಿದೆ. ಬಿತ್ತನೆಗೊಳಪಟ್ಟ ಭೂಮಿಯ ಪೈಕಿ ನೀರಾವರಿ ಸೌಲಭ್ಯವನ್ನು ಪಡೆದಿದ್ದ ಭೂಮಿ ಪ್ರತಿಶತ 13.7, ಅಧಿಕ ಇಳುವರಿ ಬಿತ್ತನೆಗೊಳಪಟ್ಟಿದ್ದ ಪ್ರದೇಶ 18,200 ಹೆ. ಉಪಯೋಗಿಸಿದ್ದ ರಸಗೊಬ್ಬರ 7,900 ಟನ್ ಮತ್ತು ಕೃಷಿ ಉತ್ಪನ್ನ 1.15 ಲಕ್ಷ ಟನ್ (1977–78); ಸಣ್ಣ ಪ್ರಮಾಣದ ಕೈಗಾರಿಕೆಗಳು 287, ಮಧ್ಯಮ ಮತ್ತು ಬೃಹತ್ ಕೈಗಾರಿಕೆ 1; ವಿದ್ಯುದೀಕರಣಗೊಂಡ ಗ್ರಾಮಗಳು 112 (38.5ಶೇ.), ವಿದ್ಯುದೀಕರಣಗೊಂಡ ಪಂಪ್‌ಸೆಟ್‌ಗಳು 1,100; ಪ್ರತೀ 100 ಚ.ಕಿ.ಮೀ.ನಲ್ಲಿದ್ದ ರಸ್ತೆಯ ಉದ್ದ 59 ಕಿ.ಮೀ.; ಅಂಚೆಕಚೇರಿಗಳು 165, ಪ್ರಾಥಮಿಕ ಶಾಲೆಗಳು 369, ಪ್ರೌಢಶಾಲೆಗಳು 50, ಕಾಲೇಜುಗಳು 6, ಆಸ್ಪತ್ರೆಗಳು 26, ಪ್ರಾಥಮಿಕ ಆರೋಗ್ಯ ಕೇಂದ್ರಗಳು 3, ಸಾರ್ವಜನಿಕ ಆರೋಗ್ಯ ಘಟಕಗಳು 17, ಆಸ್ಪತ್ರೆಗಳು ಹೊಂದಿದ್ದ ಹಾಸಿಗೆ ಸೌಲಭ್ಯ 1,295, ಕುಟುಂಬ ಕಲ್ಯಾಣ ಕೇಂದ್ರಗಳು 5, ಪಶುವೈದ್ಯಶಾಲೆಗಳು 32 (1977–78), ರಾಜ್ಯ ಪುನರ್ವಿಂಗಡಣೆಗೆ ಮುಂಚೆಯಿದ್ದ ಸಹಕಾರಿ ಸಂಘಗಳು 173, ಪುನರ್ವಿಂಗಡಣೆಯ ನಂತರ ಪ್ರಾರಂಭಗೊಂಡ ಸಹಕಾರಿ ಸಂಘಗಳು 69, ಹಂಚಿಕೆಯಾದ ಅಲ್ಪಾವಧಿ ಸಾಲ ರೂ. 301.82 ಲಕ್ಷ, ಮಧ್ಯಮಾವಧಿ ಸಾಲ ರೂ. 31.32 ಲಕ್ಷ, ದೀರ್ಘಾವಧಿ ಸಾಲ ರೂ. 28.98 ಲಕ್ಷ, ವಾಣಿಜ್ಯ ಬ್ಯಾಂಕ್ ಶಾಖೆಗಳು 66, ವಾಣಿಜ್ಯ ಬ್ಯಾಂಕುಗಳು ನೀಡಿದ ಸಾಲದ ಮೊತ್ತ ರೂ. 1,659 ಲಕ್ಷ, ವ್ಯತ್ಯಸ್ತ ಬಡ್ಡಿ ಯೋಜನೆಯಡಿಯಲ್ಲಿ ಸೌಲಭ್ಯವನ್ನು ಹೊಂದಿದ ಫಲಾನುಭವಿಗಳ ಸಂಖ್ಯೆ 2,238, ಅವರು ಪಡೆದ ಮೊತ್ತ ರೂ. 10.73 ಲಕ್ಷ.

### ಆರನೇಯ ಯೋಜನೆ

ಐದನೇ ಯೋಜನೆಯ ಅಂತ್ಯ ಮತ್ತು ಆರನೇ ಯೋಜನೆಯ ಆದಿಭಾಗದಲ್ಲಿ (1984-85) ಜಿಲ್ಲೆಯ ವಿವಿಧ ಕ್ಷೇತ್ರಗಳ ಪ್ರಗತಿಯನ್ನು ಇಲ್ಲಿ ಕೊಡಲಾಗಿದೆ. ಆಹಾರ ಧಾನ್ಯಗಳ ಉತ್ಪಾದನೆ 1.06 ಟನ್, ಬಿತ್ತನೆಯ ಭೂಮಿಯಲ್ಲಿ ನೀರಾವರಿ ಸೌಲಭ್ಯ ಪಡೆದ ಭೂಮಿ ಪ್ರತೀಶತ 3.4, ನಿವ್ವಳ ಬಿತ್ತನೆಗೊಳಗಾದ ಭೂಮಿಯಲ್ಲಿ ಅಧಿಕ ಇಳುವರಿ ಬೆಳೆಯನ್ನು ಬೆಳೆಸಿದ್ದ ಭೂಮಿ 25,400 ಹೆ. (17.3 ಶೇ.), ರಸಗೊಬ್ಬರ ಬಳಕೆ 14,700 ಟನ್‌ಗಳನ್ನು (ಪ್ರತೀ ಹೆಕ್ಟೇರ್‌ಗೆ 100 ಕೆ.ಜಿ.ಯಷ್ಟು), ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು 1, ಸಣ್ಣ ಪ್ರಮಾಣದ ಕೈಗಾರಿಕೆಗಳು 896, ಇವುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಉದ್ಯೋಗಿಗಳು 21,000 (1.7 ಶೇ.), ವಿದ್ಯುತ್ ಸೌಲಭ್ಯ ಪಡೆದಿದ್ದ ಗ್ರಾಮಗಳ ಸಂಖ್ಯೆ 259 (90 ಶೇ.) ವಿದ್ಯುದೀಕರಣಗೊಂಡ ಪಂಪ್‌ಸೆಟ್ಟುಗಳು 1,600, ಪ್ರತೀ 100 ಚ.ಕಿ.ಮೀ. ವ್ಯಾಪ್ತಿಯಲ್ಲಿದ್ದ ರಸ್ತೆಯ ಉದ್ದ 65 ಕಿ.ಮೀ. ಅಂಚೆ ಕಚೇರಿಗಳು 206, ಅಂಚೆ ಸೌಲಭ್ಯವನ್ನು ಹೊಂದಿದ್ದ ಗ್ರಾಮಗಳು 190, ಪ್ರಾಥಮಿಕ ಶಾಲೆಗಳು 404, ಪ್ರೌಢಶಾಲೆಗಳು 68, ಕಾಲೇಜುಗಳು 8, ಆಸ್ಪತ್ರೆಗಳು 26, ಪ್ರಾಥಮಿಕ ಆರೋಗ್ಯ ಕೇಂದ್ರಗಳು 6, ಸಾರ್ವಜನಿಕ ಆರೋಗ್ಯ ಘಟಕಗಳು 19, ಆಸ್ಪತ್ರೆಗಳಲ್ಲಿದ್ದ ಹಾಸಿಗೆಗಳು 1,305, ಕುಟುಂಬ ಕಲ್ಯಾಣ ಕೇಂದ್ರಗಳು 6, ಪಶುವೈದ್ಯ ಶಾಲೆಗಳು 35, ಪ್ರತೀ ವೈದ್ಯಶಾಲೆಯಿಂದಲೂ ವೈದ್ಯಕೀಯ ಸೌಲಭ್ಯ ಪಡೆದ ಸರಾಸರಿ ಪಶುಗಳು 6,600, ಸಹಕಾರಿ ಸಂಘಗಳಿಂದ ಕೊಡಲ್ಪಟ್ಟ ಅಲ್ಪಾವಧಿ ಸಾಲ ರೂ. ರೂ. 8.99 ಕೋಟಿ, ಮಧ್ಯಮಾವಧಿ ಸಾಲ ರೂ. 55.94 ಲಕ್ಷ, ದೀರ್ಘಾವಧಿ ಸಾಲ ರೂ. 1.13 ಕೋಟಿ, ವಾಣಿಜ್ಯ ಬ್ಯಾಂಕುಗಳ ಶಾಖೆ 99, ಪ್ರತೀ ಶಾಖೆಯಿಂದ ಸೇವಾ ಸೌಲಭ್ಯ ಹೊಂದಿದವರ ಸಂಖ್ಯೆ 5,000, ವಾಣಿಜ್ಯ ಬ್ಯಾಂಕು-

ಗಳು ಕೊಟ್ಟ ಸಾಲ ರೂ. 4,189 ಲಕ್ಷ, ಆದ್ಯತೆಯ ಸಾಲ ರೂ. 3,177 ಲಕ್ಷ, ವ್ಯತ್ಯಸ್ತ ಬಡ್ಡಿ ಯೋಜನೆ ಸಾಲ ರೂ. 92 ಲಕ್ಷ.

1960-61 ರಿಂದ 1985-86ರ ವರೆಗೆ ಕೊಡಗಿನ ಪ್ರಗತಿಸೂಚಿ ಮತ್ತು ಜ್ಯೇಷ್ಠತಾ ಸ್ಥಾನವನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ.

| ವರ್ಷ | ಪ್ರಗತಿಸೂಚಿ | ಜ್ಯೇಷ್ಠತೆ ಸ್ಥಾನ |
|---|---|---|
| 1960 – 61 | 124.15 | 6 |
| 1971 – 72 | 107.79 | 7 |
| 1974 – 75 | 108.63 | 7 |
| 1976 – 77 | 103.44 | 8 |
| 1985 – 86 | 94.73 | 10 |

ಆಧಾರ : ವಾರ್ಷಿಕ ಯೋಜನೆ 1987–88.

### 1983 ರಿಂದ 1989ರವರೆಗಿನ ಪ್ರಗತಿ

1983 ರಿಂದ 1989ರವರೆಗಿನ ಜಿಲ್ಲೆಯ ವಿವಿಧ ಕ್ಷೇತ್ರಗಳ ಸಂಕ್ಷಿಪ್ತ ಮಾಹಿತಿಯನ್ನು ಇಲ್ಲಿ ಕೊಡಲಾಗಿದೆ. ಕೃಷಿ ಇಲಾಖೆಯು ಪ್ರತೀ ವರ್ಷವು ಅಧಿಕ ಇಳುವರಿಯ ಬತ್ತ, ರಾಗಿ ಮೊದಲಾದ ಧಾನ್ಯಗಳ ಬಿತ್ತನೆ ಬೀಜವನ್ನು ರೈತರಿಗೆ ವಿತರಿಸಿ ಬೀಜೋಪಚಾರ, ಕೀಟನಾಶಕ, ರಸಗೊಬ್ಬರ ಮೊದಲಾದವುಗಳ ಬಗ್ಗೆ ಸೂಚನೆಗಳನ್ನು ಕೊಡುವುದರ ಮೂಲಕ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸುವಂತೆ ಮಾಡಿದೆ. ಸುಮಾರು 3 ಸಾವಿರ ಹೆ. ಭೂಮಿಯಲ್ಲಿ ಅಧಿಕ ಇಳುವರಿ ಬತ್ತ ಮತ್ತು 3,230 ಹೆ. ಭೂಮಿಯಲ್ಲಿ ಅಧಿಕ ಇಳುವರಿ ರಾಗಿಯನ್ನು ಬೆಳೆಯಲಾಗಿತ್ತು. ಗಿರಿಜನ ಉಪ ಯೋಜನೆಯಡಿಯಲ್ಲಿ ಪರಿಶಿಷ್ಟವರ್ಗದ ಕೃಷಿಕರಿಗೆ ಉಳುಮೆ ಜಾನುವಾರು, ಕೃಷಿ ಸಾಮಗ್ರಿ, ಕೃಷಿ ಉಪಕರಣಗಳು, ಕೀಟನಾಶಕ ವಿತರಣೆ, ಆಧುನಿಕ ಕೃಷಿ ತರಬೇತಿ ಮೊದಲಾದವುಗಳಿಗೆ ಸಂಬಂಧಿಸಿದಂತೆ ರೂ. 36,85,192 ಅನ್ನು 5,554 ಫಲಾನುಭವಿಗಳಿಗೆ ಒದಗಿಸಿತು. ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯ ರೈತರಿಗೆ ಕೃಷಿ ಉಪಕರಣಗಳು ಮತ್ತು ಇನ್ನಿತರ ಅಗತ್ಯಗಳಿಗೆ ಸಂಬಂಧಿಸಿದಂತೆ 1,399 ಫಲಾನುಭವಿಗಳಿಗೆ ರೂ. 10,53,228 ಒದಗಿಸಿತು. ತಂಬಾಕು ಬೆಳೆಗಾರರ ತರಬೇತಿ, ಸಸಿಮಡಿ ಮತ್ತು ಕ್ಷೇತ್ರ ಪ್ರಾತ್ಯಕ್ಷಿಕೆಗಳಿಗೆ ಸುಮಾರು ರೂ. 27,630 ವೆಚ್ಚ ಮಾಡಿದೆ. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ರೈತರಿಗೆ ಪ್ರತಿಶತ 25ರ ಸಹಾಯಧನದಲ್ಲಿ ಹಸಿರು ಸೊಪ್ಪಿನ ಗೊಬ್ಬರದ ಬೀಜ, ಕೃಷಿ ಉಪಕರಣಗಳು, ಶಿಲಾರಂಜಕ, ಸಸ್ಯ ಸಂರಕ್ಷಣಾ ಉಪಕರಣ ಮೊದಲಾದವುಗಳನ್ನು ವಿತರಿಸಲು ತಗುಲಿದ ವೆಚ್ಚ ರೂ. ಒಂದು ಲಕ್ಷಕ್ಕೂ ಹೆಚ್ಚು. 'ಕಾಡಾ' ಅಭಿವೃದ್ಧಿ ಯೋಜನೆಯಡಿಯಲ್ಲಿ ಹಾರಂಗಿ ಜಲಾಶಯ ವ್ಯಾಪ್ತಿಯಲ್ಲಿನ ನೀರಾವರಿ ಪ್ರದೇಶದ ಅಭಿವೃದ್ಧಿಗಾಗಿ ಪರಿಶ್ರಮ ವಹಿಸಲಾಗಿದೆ. ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ರೂ. 1,63,815 ವೆಚ್ಚದಲ್ಲಿ ಮುಫತ್ತಾಗಿ ಕೃಷಿಕಿಟ್‌ಗಳನ್ನು ವಿತರಿಸಲಾಗಿದೆ. ರೂ. 1,44,870 ವೆಚ್ಚದಲ್ಲಿ ಮುಫತ್ತಾಗಿ 3,117 ಮಂದಿಗೆ ಬಿತ್ತನೆ ಬೀಜದ ಕೈಚೀಲಗಳನ್ನು ಮತ್ತು ಬರಪರಿಹಾರದ ಕಾರ್ಯಕ್ರಮದನ್ವಯ ರೂ. 3,48,000 ವೆಚ್ಚದಲ್ಲಿ 2,878 ಕೈಚೀಲಗಳನ್ನು ರೈತರಿಗೆ ವಿತರಿಸಲಾಗಿದೆ.

ಆರ್ಥಿಕ ಬೆಳೆಗಳಲ್ಲೊಂದಾದ ರೇಷ್ಮೆ ಕೃಷಿ ಅಭಿವೃದ್ಧಿಗೆ ಸೋಮವಾರಪೇಟೆ ಮತ್ತು ವೀರರಾಜಪೇಟೆ ತಾಲೂಕುಗಳಲ್ಲಿ ವ್ಯಾಪಕ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಮತ್ತು ಇತ್ತೀಚಿನ ವರ್ಷಗಳಲ್ಲಿ ಮಡಿಕೇರಿ ತಾಲೂಕಿನಲ್ಲಿ ರೇಷ್ಮೆ ಕೃಷಿಯನ್ನು ಪರಿಚಯಿಸಲಾಗಿದೆ. 1984-85 ರಿಂದ 1988-89ರ ವರೆಗೆ ವಿವಿಧ ಯೋಜನೆಗಳಡಿಯಲ್ಲಿ ಸುಮಾರು ರೂ. 15 ಲಕ್ಷಕ್ಕೂ ಹೆಚ್ಚು ವೆಚ್ಚ ಮಾಡಿ 1,048 ಮಂದಿ ಫಲಾನುಭವಿಗಳಿಗೆ ರೇಷ್ಮೆ ಕೃಷಿ ಅಭಿವೃದ್ಧಿಪಡಿಸಲು ನೆರವನ್ನು ಒದಗಿಸಲಾಗಿದೆ. ಸೋಮವಾರಪೇಟೆ ಮತ್ತು ವೀರರಾಜಪೇಟೆ ತಾಲೂಕುಗಳ 12 ಗಿರಿಜನ ಕಾಲೋನಿಗಳನ್ನು ಆಯ್ಕೆಮಾಡಿ, ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದ ತಾಂತ್ರಿಕ ಸೇವೆ, ಆರ್ಥಿಕ ನೆರವು, ಉಚಿತ ಬಿತ್ತನೆ ಹಾಗೂ ರೇಷ್ಮೆ ಹುಳುಗಳನ್ನು ಸಾಕುವ ಉಪಕರಣಗಳು ಮೊದಲಾದವುಗಳನ್ನು ನೀಡಿರುವುದರ ಜೊತೆಗೆ ಆಯ್ದ ಯುವ ರೈತರಿಗೆ ರೇಷ್ಮೆ ಕೃಷಿಯಲ್ಲಿ ಉನ್ನತ ತಾಂತ್ರಿಕ ಪರಿಣತಿ ಪಡೆಯಲು ತರಬೇತಿ ನೀಡಲಾಯಿತು ಮತ್ತು ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಶಿಷ್ಯವೇತನವನ್ನು ಕೊಡಲಾಯಿತು. ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಶೇ. 50 ರಷ್ಟು ಸಹಾಯ ಧನ ಒದಗಿಸಲಾಗಿದೆ. ಚಂದ್ರಿಕೆ, ಕೀಟನಾಶಕ, ನೈಲಾನ್ ಪರದೆ, ನೂಲು ಬಿಚ್ಚುವ ಉಪಕರಣ ಮೊದಲಾದವುಗಳನ್ನು ಕೊಳ್ಳಲು ರೇಷ್ಮೆ ಇಲಾಖೆ ಸಹಾಯ ಧನ ಮತ್ತು ಪ್ರೋತ್ಸಾಹ ಧನವನ್ನು ಒದಗಿಸಿತು.

ಭೂಸಾರ ಸಂರಕ್ಷಣೆಗಾಗಿ ಸೋಮವಾರಪೇಟೆ ತಾಲೂಕಿನ ಕ್ಯಾತೆಹೊಳೆ ಜಲಾಶಯದ ಪ್ರದೇಶದ 13,500 ಹೆಕ್ಟೇರ್

ಪ್ರದೇಶವನ್ನು ಗುರುತಿಸಿಕೊಂಡಿದ್ದು, ಕೃಷಿ ಅರಣ್ಯ ಹಾಗೂ ತೋಟಗಾರಿಕಾ ಇಲಾಖೆಗಳು ಅಭಿವೃದ್ಧಿ ಕಾರ್ಯಕ್ರಮ ಕೈಗೊಂಡವು. ಈ ಪ್ರದೇಶದಲ್ಲಿ ಕೃಷಿ ಇಲಾಖೆಯು 95 ಕೃಷಿ ಹೊಂಡಗಳನ್ನು ನಿರ್ಮಿಸಿ ಅರಣ್ಯ ಇಲಾಖೆಯು ಮೂರು ಲಕ್ಷ ನರ್ಸರಿ ಗಿಡಗಳನ್ನು ಬೆಳೆಸಿತು. ತೋಟಗಾರಿಕೆ ಇಲಾಖೆಯು ಹಣ್ಣಿನ ಗಿಡಗಳು ಮತ್ತು ಕಸಿ ಮಾಡಿದ ಗಿಡಗಳನ್ನು ಬೆಳೆಸಿತು. ಅರಣ್ಯ ಇಲಾಖೆಯು ರೂ. 18.137 ಲಕ್ಷ ವೆಚ್ಚ ಮಾಡಿ 160 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನು, 200 ಕೊರಕಲು ತಡೆಗಳನ್ನು ನಿರ್ಮಿಸಿತು. ತೋಟಗಾರಿಕೆ ಇಲಾಖೆಯು 18 ಹೆಕ್ಟೇರ್ ಪ್ರದೇಶದಲ್ಲಿ ಕೈತೋಟವನ್ನು ಮತ್ತು 54.43 ಹೆಕ್ಟೇರ್ ಪ್ರದೇಶದಲ್ಲಿ ಆರ್ಚಿಡ್ ತೋಟಗಾರಿಕೆಯನ್ನು ಮಾಡಿದೆ. ಶಾಲಾ ತೋಟಗಳಿಗೆ ರೂ. 2.15 ಲಕ್ಷ ವೆಚ್ಚ ಮಾಡಲಾಗಿದೆ ಮತ್ತು ಭೂಸಾರ ಸಂರಕ್ಷಣೆಗಾಗಿ 300 ಒಡ್ಡುಗಳನ್ನು ನಿರ್ಮಿಸಲಾಗಿದೆ.

ಸಣ್ಣ ನೀರಾವರಿಯಡಿಯಲ್ಲಿ 1984-85ರಲ್ಲಿ 23 ಕಾಮಗಾರಿಗಳನ್ನು ಕೈಗೊಂಡು ರೂ. 4.64 ಲಕ್ಷ ವೆಚ್ಚ ಮಾಡಿ ಎಂಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಯಿತು. 1985-86 ರಲ್ಲಿ 45 ಕಾಮಗಾರಿಗಳನ್ನು ಕೈಗೊಂಡು 9 ಕಾಮಗಾರಿಗಳನ್ನು ಪೂರ್ಣಗೊಳಿಸಲಾಯಿತು. ಇದಕ್ಕೆ ತಗುಲಿದ ವೆಚ್ಚ ರೂ. 11.82 ಲಕ್ಷ. 1986 ರಲ್ಲಿ 32 ಕಾಮಗಾರಿಗಳನ್ನು ರೂ. 15.02 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಯಿತು. 1987-88 ರ ಜೂನ್ ಅಂತ್ಯದ ವರೆಗೆ 7 ಕಾಮಗಾರಿಗಳನ್ನು ರೂ. 4.24 ಲಕ್ಷ ವೆಚ್ಚದಲ್ಲಿ ಪೂರೈಸಲಾಯಿತು. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಪ್ರತ್ಯೇಕವಾಗಿ ರೂ. 4.22 ಲಕ್ಷ ವೆಚ್ಚ ಮಾಡಿ 9 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಪಶುಸಂಗೋಪನ ಇಲಾಖೆಯು ಜಿಲ್ಲೆಯಲ್ಲಿ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ 1983–84 ರಿಂದ 1988–89ರ ವರೆಗೆ ರೂ. 8,16,981 ವೆಚ್ಚ ಮಾಡಿದೆ. 'ಕಾಡಾ' ಯೋಜನೆಯಡಿಯಲ್ಲಿ ಸೋಮವಾರಪೇಟೆ ತಾಲೂಕಿನಲ್ಲಿ ರೂ. 0.30 ಲಕ್ಷ ವೆಚ್ಚದಲ್ಲಿ ಕೃತಕ ಗರ್ಭದಾರಣಾ ಕೇಂದ್ರಗಳ ಮೂಲಕ ಮಿಶ್ರತಳಿ ರಾಸುಗಳನ್ನು ಅಭಿವೃದ್ಧಿಪಡಿಸಲಾಯಿತು. ವಿಶೇಷ ಘಟಕ ಯೋಜನೆಯಡಿ ಹಸು ಅಭಿವೃದ್ಧಿ ಘಟಕಕ್ಕೆ ರೂ. 6,752 ಲಕ್ಷ, ಹಂದಿ ಘಟಕಕ್ಕೆ ರೂ. 5.60 ಲಕ್ಷ ಹಾಗೂ ಆಡು ಘಟಕಕ್ಕೆ ರೂ. 0.29 ಲಕ್ಷ ವೆಚ್ಚ ಮಾಡಲಾಗಿದೆ. ಗಿರಿಜನ ಯೋಜನೆಯಡಿಯಲ್ಲಿ ಹಸು ಘಟಕಕ್ಕೆ ರೂ. 14.56 ಲಕ್ಷ, ಎಮ್ಮೆ ಘಟಕಕ್ಕೆ ರೂ. 1.31ಲಕ್ಷ ಹಾಗೂ ಆಡು ಘಟಕಕ್ಕೆ ರೂ. 0.56ಲಕ್ಷ ವೆಚ್ಚ ಮಾಡಲಾಗಿದೆ. ಈ ಕಾಲಾವಧಿಯಲ್ಲಿ ಕೃತಕ ಗರ್ಭದಾರಣೆಯ ಮೂಲಕ 15,428 ಮಿಶ್ರ ತಳಿ ಕರುಗಳು ಜನಿಸಿವೆ. ಕೊಡಿಗೆಯಲ್ಲಿ ಹಂದಿ ತಳಿ ಅಭಿವೃದ್ದಿ ಘಟಕದ ಬಲವರ್ಧನೆ, ಮೇವು ಅಭಿವೃದ್ಧಿ ಮತ್ತು ಮಿಶ್ರತಳಿ ಕರುಗಳ ಸಾಕಾಣಿಗೆ ಸಹಾಯಧನ, ಗ್ರಾಮಾಂತರ ಪಶುವೈದ್ಯ ಶಾಲೆಗಳಿಗೆ ಆಧುನಿಕ ಸೌಲಭ್ಯ ಮೊದಲಾದ ಕಾರ್ಯಕ್ರಮಗಳನ್ನು ಪಶುಸಂಗೋಪನಾ ಇಲಾಖೆಯು ಹಮ್ಮಿಕೊಂಡಿದೆ.

ಮೀನುಗಾರಿಕಾ ಇಲಾಖೆಯು ಜಿಲ್ಲೆಯಲ್ಲಿ ಮೀನುಗಾರಿಕೆಯ ತರಬೇತಿ, ಮೀನುಗಾರಿಕಾ ಉಪಕರಣ ನೀಡಿಕೆ ಹಾಗೂ ಸಹಾಯಧನ ಒದಗಿಸುವಮೂಲಕ ಪ್ರಗತಿ ಸಾಧಿಸಿದೆ. ಇದರಫಲವಾಗಿ 30 ಜನ ಪರಿಶಿಷ್ಟ ಜಾತಿಯವರು, 16 ಜನ ಪರಿಶಿಷ್ಟ ವರ್ಗದವರು ಮೀನುಗಾರಿಕೆಯನ್ನು ಸ್ವಂತ ಉದ್ಯೋಗವನ್ನಾಗಿಸಿಕೊಳ್ಳಲು ಸಮರ್ಥರಾಗಿದ್ದಾರೆ. ಮೀನು ಕೃಷಿಗಾಗಿ ಸಹಾಯಧನ ರೂಪದಲ್ಲಿ ರೂ. 1.40 ಲಕ್ಷವನ್ನು ತಲಾ ರೂ. 10,000 ದಂತೆ 14 ಮಂದಿಗೆ ವಿತರಿಸಲಾಗಿದೆ. ಶೇ. 30ರ ಸಹಾಯಧನ ಯೋಜನೆಯಡಿಯಲ್ಲಿ ಬ್ಯಾಂಕ್ ಸಾಲ ಕೊಡಿಸುವುದಕ್ಕೆ ಸಹಾಯ ಧನವನ್ನು ನೀಡಿ ಮೀನುಗಾರರನ್ನು ಉತ್ತೇಜಿಸಲಾಗಿದೆ. ಪಶ್ಚಿಮಘಟ್ಟ ಅಭಿವೃದ್ದಿ ಯೋಜನೆಯಡಿಯಲ್ಲಿ ಹಾರಂಗಿಯಲ್ಲಿ ಕೈಗೊಳ್ಳುವ ಮಹಿಶೀರ್ ಮೀನು ಅಭಿವೃದ್ಧಿ ಕೇಂದ್ರವು ಇಲಾಖೆಯ ಮಹತ್ವದ ಸಾಧನೆಯಾಗಿದೆ. ಇಲಾಖೆಯು 13,69,019 ಮೀನು ಮರಿಗಳನ್ನು ಜಿಲ್ಲೆಯ ವಿವಿಧ ಎಡೆಗಳಲ್ಲಿ ಪೋಷಿಸಿ ಅವುಗಳಿಂದ ರೂ. 1,75,664 ಆದಾಯ ಗಳಿಸಿದೆ.

ತೋಟದ ಬೆಳೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ 1982–83 ರಿಂದ 1987–88ರ ವರೆಗೆ ರೂ. 2,98,023 ವೆಚ್ಚದಲ್ಲಿ 2,99,347 ಏಲಕ್ಕಿ ಸಸಿಗಳನ್ನು ಉತ್ಪಾದಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ ಮತ್ತು 214 ಎಕರೆ ಪ್ರದೇಶದಲ್ಲಿ ಹೊಸದಾಗಿ ಏಲಕ್ಕಿ ಕೃಷಿ ಅಭಿವೃದ್ಧಿಪಡಿಸಲಾಗಿದೆ. ಸಾಂಬಾರ ಬೆಳೆಗಳಲ್ಲಿ ಪ್ರಮುಖವಾದ ಕರಿಮೆಣಸು ಅಭಿವೃದ್ದಿಗಾಗಿ 2,06,803 ಕರಿಮೆಣಸು ಸಸಿಗಳನ್ನು ರೂ. 1,05,537 ವೆಚ್ಚದಲ್ಲಿ ಉತ್ಪಾದಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ ಮತ್ತು 219 ಎಕರೆ ಪ್ರದೇಶದಲ್ಲಿ ಈ ಕೃಷಿಯನ್ನು ವಿಸ್ತರಿಸಲಾಗಿದೆ. ತೆಂಗು ಅಭಿವೃದ್ಧಿಗಾಗಿ ರೂ. 4,56,095 ವೆಚ್ಚದಲ್ಲಿ 1,15,357 ತೆಂಗು ಸಸಿಗಳನ್ನು ಬಿತ್ತನೆ ಮಾಡಿ ವಿತರಿಸಲಾಗಿದೆ. ತರಕಾರಿಗಳ

ಅಭಿವೃದ್ಧಿಗಾಗಿ ರೂ. 13,845 ವೆಚ್ಚದಲ್ಲಿ 2,537 ಕೈ ತೋಟಗಳನ್ನು ನಿರ್ಮಿಸಿ ಕೃಷಿಕರನ್ನು ಉತ್ತೇಜಿಸಲಾಗಿದೆ. ಬಾಳೆ ಮತ್ತು ಕಿತ್ತಳೆಯ ಸಾಂದ್ರ ಬೇಸಾಯದ ಅಭಿವೃದ್ಧಿಗಾಗಿ ಸಸಿ ವಿತರಣೆ ಮತ್ತು ಪ್ರಾತ್ಯಕ್ಷಿಕೆಯ ತಾಕುಗಳ ನಿರ್ಮಾಣ ಕಾರ್ಯ ನಡೆದಿದೆ. ಪ್ರತಿಶತ 50ರ ಸಹಾಯ ಧನದ ಮೂಲಕ ತೋಟದ ಬೆಳೆಗಳ ರಕ್ಷಣೆಗೆ ಕ್ರಿಮಿನಾಶಕಗಳನ್ನು ಪ್ರತೀ ವರ್ಷವೂ ವಿತರಿಸಲಾಗುತ್ತಿದೆ. ಮಡಿಕೇರಿಯ ರಾಜಾಸೀಟು ಉದ್ಯಾನಕ್ಕೆ 1983-84ರಲ್ಲಿ ರೂ.36,118 ವೆಚ್ಚ ಮಾಡಿ ಅದನ್ನು ಆಕರ್ಷಣೀಯವನ್ನಾಗಿ ಮಾಡಲಾಗಿದೆ.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ 1983 ರಿಂದ 1989ರವರೆಗೆ ರೂ. 173.987 ಲಕ್ಷ ವೆಚ್ಚದಲ್ಲಿ 14,608 ಫಲಾನುಭವಿಗಳಿಗೆ ಪ್ರಯೋಜನ ಒದಗಿಸಲಾಗಿದೆ. ಅಂತ್ಯೋದಯ ಯೋಜನೆಯಡಿಯಲ್ಲಿ ರೂ. 29.372 ಲಕ್ಷ ವೆಚ್ಚದಲ್ಲಿ 2,615 ಫಲಾನುಭವಿಗಳಿಗೆ ಸಹಾಯವನ್ನೊದಗಿಸಲಾಗಿದೆ. ನೂರು ಬಾವಿ ಯೋಜನೆಯಡಿಯಲ್ಲಿ ರೂ. 24.997 ಲಕ್ಷ ವೆಚ್ಚದಲ್ಲಿ 938 ಬಾವಿಗಳನ್ನು ತೋಡಲಾಗಿದೆ. ಸ್ವಯಂಉದ್ಯೋಗ ಕೈಗೊಳ್ಳಲು ಅನುವಾಗುವಂಥ ಕೈಗಾರಿಕೆಗಳಲ್ಲಿ ರೂ. 5.077 ಲಕ್ಷ ವೆಚ್ಚದಲ್ಲಿ 593 ಮಂದಿಗೆ ತರಬೇತಿ ಮತ್ತು ಉಪಕರಣಗಳನ್ನೊದಗಿಸಲಾಗಿದೆ. ನೇಗಿಲು ಭಾಗ್ಯ ಯೋಜನೆಯಡಿಯಲ್ಲಿ ರೂ. 0.511 ಲಕ್ಷ ವೆಚ್ಚದಲ್ಲಿ 45 ಮಂದಿಗೆ, ಕಾರ್ಮಿಕ ಪುನರ್‌ವಸತಿಗಾಗಿ, ರೂ. 2 ಲಕ್ಷ ವೆಚ್ಚದಲ್ಲಿ 52 ಮಂದಿಗೆ ಸೌಲಭ್ಯ ಕಲ್ಪಿಸಿ ಕೊಡಲಾಗಿದೆ. ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಂತೆ ವಿವಿಧ ಅಭಿವೃದ್ಧಿಗಾಗಿ ನಿಗದಿಪಡಿಸಿ ವೆಚ್ಚ ಮಾಡಿದ ಹಣ ರೂ. 219.942 ಲಕ್ಷ. ಗ್ರಾಮೀಣ ಪ್ರದೇಶದಲ್ಲಿ ಉರುವಲು ಸೌಲಭ್ಯವನ್ನೊದಗಿಸಲು ಸಾಲ ಹಾಗೂ ಸಹಾಯಧನಕ್ಕಾಗಿ ರೂ. 59.600 ಲಕ್ಷ ವೆಚ್ಚ ಮಾಡಿ 952 ಜೈವಿಕ ಅನಿಲ ಘಟಕಗಳನ್ನು ರೂ. 16,460 ವೆಚ್ಚದಲ್ಲಿ 4,064 'ಅಸ್ತ್ರ' ಒಲೆಗಳನ್ನು ಒದಗಿಸಿಕೊಟ್ಟಿದೆ. ರಾಷ್ಟ್ರೀಯಉದ್ಯೋಗ ಯೋಜನೆಯನ್ವಯ ರೂ.343.500 ಲಕ್ಷ ವೆಚ್ಚದಲ್ಲಿ 15,404 ಮಾನವ ದಿನಗಳನ್ನು ಹಾಗೂ ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ರೂ. 128.300 ಲಕ್ಷ ವೆಚ್ಚದಲ್ಲಿ 7,160 ಲಕ್ಷ ಮಾನವ ದಿನಗಳ ಉತ್ಪಾದನೆಯೊಂದಿಗೆ ಉದ್ಯೋಗ ಭರವಸೆ ನೀಡಲಾಗಿದೆ.

1983 ರಿಂದ 1989ರ ವರೆಗೆ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟ ಕೈಗಾರಿಕಾ ಘಟಕಗಳ ಸಂಖ್ಯೆ 627. ಇವುಗಳಲ್ಲಿ ತೊಡಗಿಸಿರುವ ಬಂಡವಾಳ ರೂ. 2.40 ಕೋಟಿ. ಇವು 2,863 ಮಂದಿಗೆ ಉದ್ಯೋಗವನ್ನು ಒದಗಿಸಿವೆ. ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ 991 ಮಂದಿಗೆ ರೂ. 2.62 ಕೋಟಿ ಬಂಡವಾಳವನ್ನು, 153 ಮಂದಿಗೆ ರೂ. 28,14,850 ಸಹಾಯಧನ ಮತ್ತು ಸಾಲವನ್ನು, ಮತ್ತು ಬೀಜಧನ ಸಾಲವಾಗಿ 51 ಮಂದಿಗೆ ರೂ. 5.16 ಲಕ್ಷ ನೀಡಲಾಗಿದೆ. ಕೈಗಾರಿಕಾ ಅಭಿವೃದ್ಧಿಗಾಗಿ 5 ಘಟಕಗಳಿಗೆ ರೂ. 4.45 ಲಕ್ಷ ನೆರವು ಒದಗಿಸಲಾಗಿದೆ. ಜೇನು ಕೃಷಿಗೆ ಸಂಬಂಧಿಸಿದಂತೆ 630 ಮಂದಿಗೆ ತರಬೇತಿ ನೀಡಿ ರೂ. 12.50 ಲಕ್ಷ ಸಾಲ ಹಾಗೂ ಸಹಾಯಧನ ಒದಗಿಸಿ ಈ ಕೃಷಿಯಲ್ಲಿ ತೊಡಗುವಂತೆ ಮಾಡಲಾಗಿದೆ. ಅಲ್ಲದೆ ವಿಶೇಷ ಘಟಕ ಯೋಜನೆಯಡಿಯಲ್ಲಿ 347 ಮಂದಿಗೆ ರೂ. 25.58 ಲಕ್ಷವನ್ನು, ಗಿರಿಜನ ಯೋಜನೆಯಡಿಯಲ್ಲಿ 1,379 ಮಂದಿಗೆ ರೂ. 56.67 ಲಕ್ಷ ನೆರವು ಸಾಲ ಒದಗಿಸಲಾಗಿದೆ. ಗ್ರಾಮಾಂತರ ಕುಶಲಕರ್ಮಿಗಳಲ್ಲಿ 761 ಮಂದಿಯನ್ನು ಗುರುತಿಸಿ, ರೂ. 13.45 ಲಕ್ಷ ಸಾಲ, ಸಹಾಯಧನ ನೀಡಿ ಕಸುಬನ್ನು ಮುಂದುವರಿಸಲು ಪ್ರೋತ್ಸಾಹ ನೀಡಲಾಗಿದೆ. ಹಿಂದುಳಿದ ವರ್ಗಗಳ 670 ಮಂದಿಗೆ ಕೈಗಾರಿಕೋಪಕರಣಗಳನ್ನು ಉಚಿತವಾಗಿ ಒದಗಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಐ.ಎಸ್.ಬಿ. ಯೋಜನೆಗಳನ್ವಯ 1,695 ಮಂದಿಗೆ ರೂ. 22.39 ಲಕ್ಷ ವೆಚ್ಚದಲ್ಲಿ ನೆರವು ನೀಡಲಾಗಿದೆ. 'ಟ್ರೈಸಂ' (ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗ ತರಬೇತಿ) ಯೋಜನೆಯಡಿ 538 ಮಂದಿಗೆ ವಿವಿಧ ಕಸುಬುಗಳಲ್ಲಿ ತರಬೇತಿ ನೀಡಲಾಗಿದೆ. ಕೈಗಾರಿಕಾ ಬೆಳವಣಿಗೆಗಾಗಿ ಮಡಿಕೇರಿಯಲ್ಲಿ 18 ಮತ್ತು ಕುಶಾಲನಗರದಲ್ಲಿ 8 ಕೈಗಾರಿಕಾ ವಸಾಹತುಗಳನ್ನು ನಿರ್ಮಿಸಲಾಗಿದೆ. ಕುಶಾಲನಗರದಲ್ಲಿ 250 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತು ನಿರ್ಮಿಸಲು ಕಾದಿರಿಸಿದ್ದು ಈ ಪೈಕಿ 30 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತುವನ್ನು ನಿರ್ಮಿಸಲಾಗಿದೆ.

ಜಿಲ್ಲೆಯ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯನ್ನು ಸಂಯೋಜಿತ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆಯು ಸರ್ಕಾರದ ವಿವಿಧ ಇಲಾಖೆಗಳ ಮೂಲಕ ಕಾರ್ಯರೂಪಕ್ಕೆ ತಂದಿದೆ. 1987-88ನೇ ಸಾಲಿನಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಬಿಡುಗಡೆ ಮಾಡಿದ ಹಣ ರೂ. 70.19 ಲಕ್ಷ. ಇದರಲ್ಲಿ ಕೇಂದ್ರ ಸರ್ಕಾರದ ಪಾಲು ರೂ. 17.08 ಲಕ್ಷ. ಈ ಸಾಲಿನಲ್ಲಾದ ಒಟ್ಟು ವೆಚ್ಚ ರೂ. 68.48 ಲಕ್ಷ.

ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟುವುದಕ್ಕಾಗಿ 1983 ರಿಂದ 1989ರ ವರೆಗೆ ಜಿಲ್ಲೆಯಲ್ಲಿ 25,066ಮಂದಿಯನ್ನು ಕುಟುಂಬ ಯೋಜನಾ ಶಸ್ತ್ರಚಿಕಿತ್ಸೆಗೊಳಪಡಿಸಲಾಯಿತು. ತಾಯಿ ಮತ್ತು ಮಕ್ಕಳ ಆರೋಗ್ಯ ಯೋಜನೆಯಂತೆ 69,126 ಡಿ.ಪಿ.ಟಿ. 2,27,159 ಪೋಲಿಯೋ 62,789 ಟಿ.ಟಿ. ಹಾಗೂ 69,284 ಬಿ.ಸಿ.ಜಿ. ದಾಕು ಹಾಗೂ ಚುಚ್ಚು ಮದ್ದುಗಳನ್ನು ನೀಡಲಾಗಿದೆ. 88,620 ಗರ್ಭಿಣಿಯರಿಗೆ ಮತ್ತು 82,881 ಮಕ್ಕಳಿಗೆ ಕಬ್ಬಿಣದ ಸತ್ವಾಂಶ ತುಂಬಿದ ಆಹಾರ ಒದಗಿಸಿದೆ. 2,08,176 ಮಂದಿಗೆ 'ಎ' ಅನ್ನಾಂಗಭರಿತ ವಸ್ತುಗಳನ್ನು ವಿತರಿಸಲಾಗಿದೆ. ಅಂಧತ್ವ ನಿವಾರಣೆಗಾಗಿ 1,002 ಮಂದಿಗೆ ಕಣ್ಣಿನ ಪೊರೆ ಚಿಕಿತ್ಸೆ ನೀಡಲಾಗಿದೆ ಮತ್ತು ಮಲೇರಿಯಾ ನಿವಾರಣೆಗಾಗಿ ಡಿ.ಡಿ.ಟಿ. ಸಿಂಪಡಣೆ ಮಾಡಲಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು 1986 ರಿಂದ 1989ರ ವರೆಗೆ, ಕೇಂದ್ರ ಸರ್ಕಾರ ನೀಡಿದ 10,000 ರೂ.ಗಳು ಮತ್ತು ರಾಜ್ಯ ಸರ್ಕಾರ ನೀಡಿದ 16,550 ರೂ.ಗಳನ್ನು ವಿದ್ಯಾರ್ಥಿ ವೇತನ ರೂಪದಲ್ಲಿ ವಿತರಿಸಿದೆ. ವೃತ್ತಿ ತರಬೇತಿ ಪಡೆದ 29 ಮಹಿಳೆಯರಿಗೆ ರೂ. 5,476 ಅನ್ನು ಸ್ಟೈಪೆಂಡ್ ರೂಪದಲ್ಲಿ ನೀಡಲಾಗಿದೆ. ಕೃಷಿ ಕಾರ್ಮಿಕ ಮಹಿಳೆಯರ ಪೈಕಿ 7,803 ಮಂದಿ ರೂ. 23.41 ಲಕ್ಷ ಹೆರಿಗೆ ಭತ್ಯ ಪಡೆದಿದ್ದಾರೆ. ನಿರ್ಗತಿಕ ಮಕ್ಕಳ ಪಾಲನೆಗಾಗಿ ಕಾವೇರಿ ನಿರ್ಗತಿಕ ಮಕ್ಕಳ ಪಾಲನಾ ಗೃಹಕ್ಕೆ ಇಲಾಖೆಯು 50,000 ರೂ.ಗಳನ್ನು ಕೊಟ್ಟಿದೆ ಮತ್ತು 1987-88ನೇ ಸಾಲಿಗೆ 25 ಫಲಾನುಭವಿಗಳಿಗಾಗಿ ರೂ. 32,146 ಅನ್ನು ಮಂಜೂರು ಮಾಡಿತ್ತು. ಉದ್ಯೋಗಸ್ಥ ಮಹಿಳೆಯರ ಶಿಶು ಪಾಲನಾ ಕೇಂದ್ರದ ವೆಚ್ಚದಲ್ಲಿ ರೂ. 8,090 ಅನ್ನು ಇಲಾಖೆ ಭರಿಸಿದೆ. ವಿಶೇಷ ಪೌಷ್ಟಿಕ ಆಹಾರ ಕೇಂದ್ರಗಳಿಗೆ ಕಳೆದ ಮೂರು ವರ್ಷಗಳಲ್ಲಿ ರೂ. 1.35 ಲಕ್ಷವನ್ನು 1,629 ಮಂದಿ ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ. ಗೃಹ ಕಲ್ಯಾಣ ಯೋಜನೆಯಡಿಯಲ್ಲಿ 9 ಮಹಿಳಾ ಫಲಾನುಭವಿಗಳಿಗೆ ರೂ. 39 ಸಾವಿರ ಸಾಲ ನೀಡಿ, ಮೂರು ಸಾವಿರ ರೂ.ಗಳ ಸಹಾಯಧನ ಬಿಡುಗಡೆ ಮಾಡಿದೆ. ತಾಳಿಭಾಗ್ಯ ಯೋಜನೆಯಡಿಯಲ್ಲಿ 148 ವಿವಾಹಿತರಿಗೆ ರೂ. 60,520 ನೆರವು ನೀಡಲಾಗಿದೆ. ಬಾಲವಿಕಾಸಕ್ಕಾಗಿ ಜಿಲ್ಲೆಯಲ್ಲಿ 348 ಅಂಗನವಾಡಿ ಕೇಂದ್ರಗಳಿದ್ದು, ಮಕ್ಕಳ ಗರ್ಭಿಣಿಯರ ಮತ್ತು ಬಾಣಂತಿಯರ ಪೌಷ್ಟಿಕ ಆಹಾರ ವಿತರಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ರೂ. 50.42 ಲಕ್ಷ ವೆಚ್ಚವಾಗಿದೆ. 40 ಕೇಂದ್ರಗಳ ನಿರ್ವಹಣಾ ವೆಚ್ಚ ರೂ. 1.08 ಲಕ್ಷ. ಗಿರಿಜನ ಯೋಜನೆಯಲ್ಲಿ ಪೌಷ್ಟಿಕ ಆಹಾರ ವಿತರಿಸಲು ರೂ. 4.19 ಲಕ್ಷವನ್ನು, ಹರಿಜನ ವಿಶೇಷ ಘಟಕ ಯೋಜನೆಯಲ್ಲಿ ರೂ. 4.40 ಲಕ್ಷವನ್ನು, ಬಾಲವಿಕಾಸಕ್ಕಾಗಿ ವೆಚ್ಚ ಮಾಡಲಾಗಿದೆ.

1988ರ ನವೆಂಬರ್ ಅಂತ್ಯದ ವೇಳೆಗೆ ಮಡಿಕೇರಿ ತಾಲೂಕಿನಲ್ಲಿ ವೃದ್ಧಾಪ್ಯವೇತನ ಪಡೆಯುತ್ತಿದ್ದವರ ಸಂಖ್ಯೆ 957 ಮಂದಿ. ಇವರಲ್ಲಿ 89 ಮಂದಿ ಪರಿಶಿಷ್ಟಜಾತಿ ಮತ್ತು 16 ಮಂದಿ ಪರಿಶಿಷ್ಟ ವರ್ಗದವರು; ಒಟ್ಟು 2,061 ಮಂದಿ ವಿಧವಾ ವೇತನ ಪಡೆಯುತ್ತಿದ್ದು, ಆ ಪೈಕಿ 148 ಪರಿಶಿಷ್ಟಜಾತಿ ಮತ್ತು 36 ಜನ ಪರಿಶಿಷ್ಟ ವರ್ಗದ ಮಹಿಳೆಯರೂ ಸೇರಿದ್ದಾರೆ. ಒಟ್ಟು 546 ಮಂದಿ ಅಂಗವಿಕಲರು ಮಾಸಿಕ ವೇತನ ಪಡೆಯುತ್ತಿದ್ದ ಇವರಲ್ಲಿ 21 ಮಂದಿ ಪರಿಶಿಷ್ಟಜಾತಿ ಮತ್ತು 3 ಮಂದಿ ಪರಿಶಿಷ್ಟ ವರ್ಗದವರಾಗಿದ್ದಾರೆ. ಕಳೆದ ಆರು ವರ್ಷಗಳಲ್ಲಿ ತಾಲೂಕಿನಲ್ಲಿ ಒಟ್ಟು 3,428 ಮಂದಿಗೆ ಮನೆ ನಿವೇಶನ ಮಂಜೂರಾಗಿದ್ದು, ಇದರಲ್ಲಿ 644 ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿದ್ದಾರೆ. ಮಡಿಕೇರಿ ತಾಲೂಕೊಂದರಲ್ಲೇ 168 ಮಂದಿ ಪರಿಶಿಷ್ಟಜಾತಿಯವರಿಗೆ 412 ಎಕರೆ, 87 ಪರಿಶಿಷ್ಟ ವರ್ಗದವರಿಗೆ 281 ಎಕರೆ, ಮತ್ತು 570 ಮಂದಿ ಇತರರಿಗೆ 1,050 ಎಕರೆ ಭೂಮಿಯನ್ನು ಮಂಜೂರು ಮಾಡಿ ಪಟ್ಟೆಯನ್ನು ವಿತರಿಸಲಾಗಿದೆ. ವೀರರಾಜಪೇಟೆ ಮತ್ತು ಸೋಮವಾರಪೇಟೆ ತಾ||ಗಳಲ್ಲಿ ಕಳೆದ ಆರು ವರ್ಷಗಳಲ್ಲಿ 6,692 ಮಂದಿ ವಿಧವಾ ವೇತನವನ್ನು 7,816 ಮಂದಿ ವೃದ್ಧಾಪ್ಯ ವೇತನವನ್ನು ಮತ್ತು 2,696 ಮಂದಿ ಅಂಗವಿಕಲರು ಮಾಸಾಶನದ ಸೌಲಭ್ಯವನ್ನು ಪಡೆಯುತ್ತಿದ್ದರು. ವೀರರಾಜಪೇಟೆ ತಾಲೂಕಿನಲ್ಲಿ 205 ಮಂದಿ ಪರಿಶಿಷ್ಟಜಾತಿಯವರಿಗೆ 115 ಎಕರೆ, 136 ಪರಿಶಿಷ್ಟ ವರ್ಗದವರಿಗೆ 239.35 ಎಕರೆ, ಮತ್ತು 406 ಮಂದಿ ಇತರರಿಗೆ 995.78 ಎಕರೆ ಭೂಮಿಯನ್ನು ಮಂಜೂರು ಮಾಡಿ ಸಾಗುವಳಿ ಚೀಟಿಯನ್ನು ನೀಡಲಾಗಿದೆ. ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದ 432 ಮಂದಿಗೆ 239 ಎಕರೆ ಭೂಮಿಯನ್ನು ಸಕ್ರಮಗೊಳಿಸಿಕೊಡಲಾಗಿರುವುದರ ಜೊತೆಗೆ 2,075 ಮಂದಿಗೆ ಮನೆ ನಿವೇಶನಗಳನ್ನು ನೀಡಲಾಗಿದೆ. ಸೋಮವಾರಪೇಟೆ ತಾಲೂಕಿನಲ್ಲಿ 1,090 ಮಂದಿ ಪರಿಶಿಷ್ಟಜಾತಿಯವರಿಗೆ, 399 ಮಂದಿ ಪರಿಶಿಷ್ಟ ವರ್ಗದವರಿಗೆ ಮತ್ತು 4,415 ಮಂದಿ ಇತರರಿಗೆ ಮನೆನಿವೇಶನಗಳನ್ನು ಮಂಜೂರು ಮಾಡಲಾಗಿದೆ. ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದ 2,789 ಮಂದಿಗೆ 222 ಎಕರೆ ಭೂಮಿಯನ್ನು ಸಕ್ರಮಗೊಳಿಸಿ ಕೊಡಲಾಗಿದೆ. ತಾಲೂಕಿನಲ್ಲಿ

ಭೂಮಂಜೂರಾತಿ ನಿಯಮದ ಮೇರೆ ಒಟ್ಟು 1,526 ಎಕರೆ ಪ್ರದೇಶವನ್ನು ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗದವರೂ ಸೇರಿ ಒಟ್ಟು 1,248 ಮಂದಿಗೆ ವಿತರಿಸಲಾಗಿದೆ.

ಕೊಡಗು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯು ಕಳೆದ ಆರು ವರ್ಷಗಳಲ್ಲಿ ಖಾಸಗಿ ಪ್ರೌಢಶಾಲೆಗಳಿಗೆ ಗ್ರ್ಯಾಂಟ್ ನೀಡಿಕೆಗಾಗಿ ರೂ. 2,44,250, ಶಾಲಾಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ ವಿತರಣೆಗಾಗಿ ರೂ. 4,23;300, ಪ್ರಾಥಮಿಕ ಶಾಲೆಗಳ ಪೀಠೋಪಕರಣಗಳಿಗಾಗಿ ರೂ. 2,48,350, ಪ್ರೌಢಶಾಲೆಗಳ ಕ್ರೀಡಾ ಸಾಮಗ್ರಿಗಾಗಿ ರೂ. 52,000, ಶಾಲಾ ಕೊಠಡಿ ನಿರ್ಮಾಣಕ್ಕಾಗಿ ರೂ. 6,02,000, ಪುಸ್ತಕ ಭಂಡಾರಗಳು ಪುಸ್ತಕ ಖರೀದಿಸಲು ರೂ. 52,300, ವಸತಿ ಪ್ರೌಢಶಾಲೆಗಳ ನಿರ್ವಹಣೆಗಾಗಿ ರೂ. 3,34,340, ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿನ ವಿದ್ಯಾರ್ಥಿಗಳಿಗಾಗಿ ರೂ. 87,742, ವಸತಿ ಪ್ರೌಢಶಾಲೆಯ ಕೊಠಡಿಗಳ ರಿಪೇರಿಗಾಗಿ ರೂ. 1,75,000 ವ್ಯಯಮಾಡಿದೆ.

ಕೊಡಗು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ವ್ಯಾಸಂಗಕ್ಕಾಗಿ 18,740 ಮಂದಿಗೆ ರೂ. 70.45 ಲಕ್ಷ ವೆಚ್ಚ ಮಾಡಿದೆ. ಲಭ್ಯವಿರುವ ಮೂಲಗಳಿಂದ ಆರ್ಥಿಕ ಅಭಿವೃದ್ಧಿ ರೂಢಿಸಿಕೊಳ್ಳಲು 2,300 ಮಂದಿಗೆ ರೂ. 25.26 ಲಕ್ಷ ವೆಚ್ಚ ಮಾಡಲಾಗಿದೆ. ಇದೇ ಕಾಲಾವಧಿಯಲ್ಲಿ ರೂ. 1.77 ಲಕ್ಷ ವೆಚ್ಚದಲ್ಲಿ 83 ವಸತಿ ಕೇಂದ್ರಗಳನ್ನು ತೆರೆಯಲಾಗಿದೆ. ಪರಿಶಿಷ್ಟ ವರ್ಗದವರ ವ್ಯಾಸಂಗಕ್ಕಾಗಿ 3,502 ಮಂದಿಗೆ ರೂ. 3.93 ಲಕ್ಷ ವೆಚ್ಚ ಮಾಡಲಾಗಿದೆ. ಆರ್ಥಿಕೋನ್ನತಿ ಯೋಜನೆಗಳಿಗಾಗಿ 20,268 ಮಂದಿಗೆ ರೂ. 242.81 ಲಕ್ಷವನ್ನು ವೆಚ್ಚ ಮಾಡಿದೆ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರ 6 ಮತ್ತು ಪರಿಶಿಷ್ಟ ವರ್ಗದವರ 6 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿವೆ. ಪರಿಶಿಷ್ಟ ಜಾತಿ ಹಾಗೂ ವರ್ಗದವರ ಮಕ್ಕಳಿಗಾಗಿ 12 ಆಶ್ರಮ ಶಾಲೆಗಳನ್ನು ನಡೆಸಲಾಗುತ್ತಿದೆ. ಪರಿಶಿಷ್ಟ ಜಾತಿಯ ಮಹಿಳೆಯರಿಗಾಗಿ ಮಡಿಕೇರಿಯಲ್ಲಿ ಒಂದು ಹೊಲಿಗೆ ತರಬೇತಿ ಕೇಂದ್ರವಿದ್ದು, ವರ್ಷಕ್ಕೆ 20 ಮಂದಿಯಂತೆ 120 ಮಂದಿಗೆ ತರಬೇತಿ ನೀಡಿ, ಉಚಿತ ಹೊಲಿಗೆಯಂತ್ರ ನೀಡಲಾಗಿದೆ. ಆರ್ಥಿಕೋನ್ನತಿ ಯೋಜನೆಗಾಗಿ ಆರು ವರ್ಷಗಳಲ್ಲಿ ರೂ. 242.81 ಲಕ್ಷ ವೆಚ್ಚ ಮಾಡಲಾಗಿದೆ.

ಜಿಲ್ಲೆಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯು ಕಳೆದ ಆರು ವರ್ಷಗಳಲ್ಲಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ 2,830 ವಿದ್ಯಾರ್ಥಿಗಳಿಗೆ ರೂ. 36,22,546, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ 520 ವಿದ್ಯಾರ್ಥಿಗಳಿಗೆ ರೂ. 8.62 ಲಕ್ಷವನ್ನು ವೆಚ್ಚ ಮಾಡಿದೆ. ಮೆಟ್ರಿಕ್‌ಪೂರ್ವ ಮತ್ತು ನಂತರದ ಒಟ್ಟು 21,598 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರೂ. 32.26 ಲಕ್ಷವನ್ನು ವಿದ್ಯಾರ್ಥಿ ವೇತನಕೊಟ್ಟಿದೆ. ಪರಿಶಿಷ್ಟ ವರ್ಗಗಳಿಗೆ ಸೇರಿದ ಒಟ್ಟು913 ವಿದ್ಯಾರ್ಥಿಗಳಿಗೆ ಒಟ್ಟು ರೂ. 1.13 ಲಕ್ಷ ವಿದ್ಯಾರ್ಥಿ ವೇತನ ನೀಡಿದೆ. ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿ ಪಡೆದ 93 ಮಂದಿಗೆ ರೂ. 41,343 ಶಿಷ್ಯವೇತನವನ್ನು ಒದಗಿಸಿದೆ. ವಿದ್ಯಾರ್ಥಿನಿಲಯಗಳಲ್ಲಿದ್ದು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ 30 ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತೇಜನ ಬಹುಮಾನವಾಗಿ ರೂ. 4,225 ನೀಡಿದೆ. ರೂ. 40,000 ವೆಚ್ಚದಲ್ಲಿ ಪುಸ್ತಕ ಬ್ಯಾಂಕುಗಳನ್ನು, ರೂ. 15,000 ವೆಚ್ಚದಲ್ಲಿ ಆಟೋಟ ಸಾಮಗ್ರಿಗಳನ್ನು ಪೂರೈಸಿರುವುದರ ಜೊತೆಗೆ ನಿಲಯಗಳಿಗೆ ಹಾಸಿಗೆ ಹೊದಿಕೆ ಪೂರೈಸಲು ರೂ. 17,500 ವೆಚ್ಚ ಮಾಡಿದೆ. ಹೊಲಿಗೆ ತರಬೇತಿ ಕೇಂದ್ರಕ್ಕೆ ರೂ. 1,32,496 ವೆಚ್ಚ ಮಾಡಿ 116 ಮಂದಿಗೆ ತರಬೇತಿಯನ್ನು ಒದಗಿಸಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶುಲ್ಕ ವಿನಾಯತಿಗಾಗಿ ರೂ. 8,61,480 ವೆಚ್ಚಮಾಡಿದೆ. ಕೊಡ್ಲಿಪೇಟೆಯಲ್ಲಿ ರೂ. 1.10 ಲಕ್ಷ ವಚ್ಚದಲ್ಲಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ ನಡೆಸಲು ಒಂದು ಕಟ್ಟಡವನ್ನು ಕೊಂಡಿರುವುದೇ ಅಲ್ಲದೆ ಎನ್.ಆರ್.ಇ.ಪಿ. ಯೋಜನೆಯಡಿ ರೂ. 2,12,500 ವೆಚ್ಚದಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮಾಡಲಾಗಿದೆ. ಹಿಂದುಳಿದ ವರ್ಗಗಳ 68 ಮಂದಿ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ರೂ. 48,070 ವೆಚ್ಚದಲ್ಲಿ ವಾಹನ ಚಾಲನಾ ತರಬೇತಿ ನೀಡಲಾಗಿದೆ. ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ಚೈತನ್ಯ ಸಾಲವಾಗಿ 389 ಮಂದಿಗೆ ರೂ. 8.12 ಲಕ್ಷವನ್ನು ವಿತರಿಸಲಾಗಿದೆ. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ರೂ. 27, 895 ವೆಚ್ಚ ಮಾಡಿದೆ. ರೂ. 10 ಸಾವಿರ ವೆಚ್ಚದಲ್ಲಿ ಸ್ವಯಂ ತರಬೇತಿ ಕೇಂದ್ರಗಳನ್ನು ಮತ್ತು ರೂ. 24 ಸಾವಿರ ವೆಚ್ಚದಲ್ಲಿ 7 ವಿದ್ಯಾರ್ಥಿನಿಲಯಗಳ ಸುಧಾರಣೆಗೆ ವೆಚ್ಚ ಮಾಡಲಾಗಿದೆ.

ಸಹಕಾರ ಇಲಾಖೆಯು ಕಳೆದ ಆರು ವರ್ಷಗಳಲ್ಲಿ ಕೊಡಗು ಜಿಲ್ಲೆಯ ಪರಿಶಿಷ್ಟ ಜಾತಿಯವರು ಸಹಕಾರ ಸಂಘಗಳಲ್ಲಿ ಸದಸ್ಯರಾಗಲು ನೀಡಿದ ವೆಚ್ಚ ರೂ. 2.77 ಲಕ್ಷ ಮಹಿಳಾ ಸಹಕಾರ ಸಂಘಗಳಿಗೆ ಸಿಬ್ಬಂದಿ ಸಹಾಯಧನ 1.05

ಲಕ್ಷ ಮತ್ತು ಪಾಲು ಬಂಡವಾಳ ರೂ. 1.26 ಲಕ್ಷ. ಕೇಂದ್ರ ಪುರಸ್ಕೃತ ಯೋಜನೆಯಡಿ ಸಹಕಾರ ಸಂಘಗಳಿಗೆ ದೊಡ್ಡ ಪ್ರಮಾಣದ ಚಿಲ್ಲರೆ ವ್ಯಾಪಾರ ಮಳಿಗೆ ತೆರೆಯಲು ಮತ್ತು ವಿಶೇಷ ಘಟಕ ಯೋಜನೆಯಡಿ ವ್ಯಾಪಾರ ಮಳಿಗೆ ತೆರೆಯಲು ಒಟ್ಟು ರೂ. 1.52 ಲಕ್ಷ ಒದಗಿಸಿದೆ. ಪರಿಶಿಷ್ಟ ವರ್ಗದ ಸಹಕಾರ ಸಂಘಗಳಿಗೆ ದುಡಿಯುವ ಬಂಡವಾಳವಾಗಿ ಮಾರ್ಜಿನ್ ಹಣ ರೂ. 3.25 ಲಕ್ಷ ವಿತರಿಸಿದೆ. ಗ್ರಾಮೀಣ ಸಹಕಾರ ಸಂಘಗಳಿಗೆ ಗೋದಾಮು ಕಟ್ಟಲು ರೂ. 22.23 ಲಕ್ಷ ಆರ್ಥಿಕ ನೆರವನ್ನು ಒದಗಿಸಿದೆ. ಪರಿಶಿಷ್ಟಜಾತಿಯವರು ಸಹಕಾರ ಸಂಘಗಳಿಗೆ ಸಲ್ಲಿಸಬೇಕಾದ ಹೆಚ್ಚುವರಿ ಶೇರು ಹಣಕ್ಕಾಗಿ ರೂ. 3.94 ಲಕ್ಷ ಬಡ್ಡಿರಹಿತ ಸಾಲ ನೀಡಿದೆ. ಮಾರಾಟ ಸಹಕಾರ ಸಂಘಗಳಿಗೆ ಶೇರು ಬಂಡವಾಳವಾಗಿ ರೂ. 3.88 ಲಕ್ಷವನ್ನು ಒದಗಿಸಿದೆ. ಪರಿಶಿಷ್ಟವರ್ಗದ ಸಹಕಾರ ಸಂಘಗಳಿಗೆ ರೂ. 1 ಲಕ್ಷ ಶೇರು ಬಂಡವಾಳವನ್ನು, ಬಟ್ಟೆ ಹೊಲಿಯುವ ಸಹಕಾರ ಸಂಘಕ್ಕೆ ರೂ. 4,000 ಸಹಾಯ ಧನವನ್ನು ನೀಡಿದೆ. ಪರಿಶಿಷ್ಟವರ್ಗ–ಪರಿಶಿಷ್ಟಜಾತಿ ಸಹಕಾರ ಸಂಘಗಳಿಗೆ ಕಟ್ಟಿಗೆ ಡಿಪೊ ತೆರೆಯಲು ರೂ. 3.26 ಲಕ್ಷ ನೆರವು ನೀಡಿದೆ. ಪರಿಶಿಷ್ಟವರ್ಗದವರನ್ನು ಸಹಕಾರಿ ಸದಸ್ಯರನ್ನಾಗಿಸಲು ರೂ. 1.78 ಲಕ್ಷ ಸಹಾಯಧನ ಕೊಡಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ಮಧ್ಯಮಾವಧಿ ಸಾಲದ ಮೇಲಣ ಬಡ್ಡಿ ಸಹಾಯಧನವಾಗಿ ರೂ. 30,000, ಬಲಹೀನಗೊಂಡ ಒಂದು ಗ್ರಾಹಕರ ಸಹಕಾರ ಸಂಘಕ್ಕೆ ರೂ. 12,000 ಬಡ್ಡಿ ರಹಿತ ಸಾಲವನ್ನು ಕೊಟ್ಟಿದೆ. ಮಾರಾಟ ಸಹಕಾರ ಸಂಘಗಳ ಶೇರುಬಂಡವಾಳವನ್ನು ಬಲಪಡಿಸುವ ಯೋಜನೆಯಡಿ ರೂ. 3.62 ಲಕ್ಷ ಒದಗಿಸಲಾಗಿದೆ. ಪರಿಶಿಷ್ಟಜಾತಿಯವರು ಆಸ್ತಿ ಅಭಿವೃದ್ಧಿ ಪಡಿಸಲು ಪಡೆದ ಸಾಲಕ್ಕೆ ಸಹಾಯಧನ ರೂ. 1.44 ಲಕ್ಷ ನೀಡಿದೆ. ಎರಡು ನೇಕಾರ ಸಹಕಾರ ಸಂಘಗಳಿಗೆ ದುಡಿಯುವ ಬಂಡವಾಳಕ್ಕೆ ರೂ. 40,000 ಒದಗಿಸಿದೆ.

ಗ್ರಾಮಾಂತರ ವಿದ್ಯುದೀಕರಣ ಯೋಜನೆಯನುಸಾರ ಕರ್ನಾಟಕ ವಿದ್ಯುತ್ ಮಂಡಳಿಯು ಕಳೆದ ಆರು ವರ್ಷಗಳಲ್ಲಿ ಜಿಲ್ಲೆಯ 292 ಗ್ರಾಮಗಳಿಗೆ ವಿದ್ಯುತ್ ಪೂರೈಸಲಾಗಿದ್ದು, ಇವುಗಳ ಪೈಕಿ ಮಡಿಕೇರಿ ತಾಲೂಕಿನ 78 ಗ್ರಾಮಗಳು, ವೀರರಾಜಪೇಟೆ ತಾಲೂಕಿನ 98 ಗ್ರಾಮಗಳು ಮತ್ತು ಸೋಮವಾರಪೇಟೆ ತಾಲೂಕಿನ 121 ಗ್ರಾಮಗಳು ಈ ಸೌಲಭ್ಯವನ್ನು ಪಡೆದವು. ಉಪಗ್ರಾಮಗಳ ವಿದ್ಯುದೀಕರಣ ಯೋಜನೆಯಡಿಯಲ್ಲಿ ಮಡಿಕೇರಿ ತಾಲೂಕಿನ 6, ಸೋಮವಾರಪೇಟೆ ತಾಲೂಕಿನ 20 ಮತ್ತು ವೀರರಾಜಪೇಟೆ ತಾಲೂಕಿನ 18 ಉಪಗ್ರಾಮಗಳು ವಿದ್ಯುತ್ ಸೌಲಭ್ಯ ಕಂಡವು. ಮಡಿಕೇರಿ ತಾಲೂಕಿನ 4, ಸೋಮವಾರಪೇಟೆ ತಾಲೂಕಿನ 27 ಮತ್ತು ವೀರರಾಜಪೇಟೆ ತಾಲೂಕಿನ 21 ಕಾಲೋನಿಗಳು ಸೇರಿ ಒಟ್ಟು 52 ಪರಿಶಿಷ್ಟವರ್ಗದ ಕಾಲೋನಿಗಳು ವಿದ್ಯುತ್ ಸೌಲಭ್ಯ ಪಡೆದುಕೊಂಡವು. ಮಡಿಕೇರಿ ತಾ॥ 23, ಸೋಮವಾರಪೇಟೆ ತಾ॥ 43 ಮತ್ತು ವೀರರಾಜಪೇಟೆ ತಾಲೂಕಿನ 19 ಪರಿಶಿಷ್ಟ ಜಾತಿ ಕಾಲೋನಿಗಳು ವಿದ್ಯುತ್ ಪಡೆದವು. ಭಾಗ್ಯಜ್ಯೋತಿ ಯೋಜನೆಯನ್ವಯ ಜಿಲ್ಲೆಯ 2,769 ಮನೆಗಳು ವಿದ್ಯುತ್ ಸೌಲಭ್ಯ ಹೊಂದಿದವು. ಇವುಗಳ ಪೈಕಿ ಮಡಿಕೇರಿ ತಾಲೂಕಿನ 506 ಮನೆಗಳು, ಸೋಮವಾರಪೇಟೆ ತಾಲೂಕಿನ 1,624ಮನೆಗಳು ಮತ್ತು ವೀರರಾಜಪೇಟೆ ತಾಲೂಕಿನ 639 ಮನೆಗಳು ಸೇರಿವೆ. ವ್ಯವಸಾಯಕ್ಕೆ ಆದ್ಯತೆ ಕೊಡುವ ದೃಷ್ಟಿಯಿಂದ ಒಟ್ಟು 2,204 ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಿದೆ.

1980–81ರಲ್ಲಿ ಪ್ರಾರಂಭವಾದ ವಯಸ್ಕರ ಶಿಕ್ಷಣ ಕಾರ್ಯಕ್ರಮದನ್ವಯ 1987–88ರ ವರೆಗೆ 15 ರಿಂದ 35ರ ವಯೋಮಿತಿಯಲ್ಲಿ ಬರುವ 74,409 ಅನಕ್ಷರಸ್ಥರನ್ನು ದಾಖಲು ಮಾಡಿಕೊಂಡು 51,492 ಜನರನ್ನು ಅಕ್ಷರಸ್ಥರನ್ನಾಗಿ ಮಾಡಲಾಯಿತು.

ಸಾಂಬಾರ ಮಂಡಳಿಯು ಕಳೆದ ಆರು ವರ್ಷಗಳಿಂದ ಆರ್ಥಿಕ ಬೆಳೆಗಳಾದ ಏಲಕ್ಕಿ, ಕರಿಮೆಣಸು ಮೊದಲಾದ ಬೆಳೆಗಳನ್ನು ಬೆಳೆಯುವ ಕೃಷಿಕರಿಗೆ ಆರ್ಥಿಕ ನೆರವನ್ನೊದಗಿಸಿದೆ. 106 ಮಂದಿ ಏಲಕ್ಕಿ ಬೆಳೆಗಾರರಿಗೆ 106 ತುಂತುರು ಪಂಪ್ ಸೆಟ್ ಕೊಳ್ಳಲು ಮತ್ತು 106 ಮಂದಿಗೆ ಸಂಸ್ಕರಣ ಘಟಕ ಸ್ಥಾಪಿಸಲು ನೆರವು ನೀಡಿದೆ. ಪ್ರಮಾಣಿತ ಬೀಜೋತ್ಪಾದನಾ ಯೋಜನೆಯಡಿ 372 ಮಂದಿಗೆ 28 ಲಕ್ಷ ಏಲಕ್ಕಿ ಸಸಿಗಳನ್ನು ಒದಗಿಸಿದೆ. 207 ಮಂದಿಗೆ 225 ಸಸ್ಯ ಸಂರಕ್ಷಣಾ ಉಪಕರಣ ಕೊಳ್ಳಲು ಸಹಾಯ ಧನ ನೀಡಿದೆ. 1,567 ಮಂದಿಗೆ 48,834.4 ಕೆ.ಜಿ. ಕಾಪರ್ ಸಲ್ಫೇಟ್ (ಮೈಲುತುತ್ತ) ಅನ್ನು ಶೇ. 50ರ ರಿಯಾಯಿತಿ ದರದಲ್ಲಿ ಒದಗಿಸಿದೆ. ತೋಟ ನವೀಕರಣ ಯೋಜನೆಯನ್ವಯ 1,931 ಮಂದಿಗೆ 24,141.17 ಹೆಕ್ಟೇರ್ ಪ್ರದೇಶದಲ್ಲಿ ನವೀಕರಣಕ್ಕೆ ನೆರವನ್ನೊದಗಿಸಿವೆ. ಭೂಸಾರ ಸಂರಕ್ಷಣೆಗಾಗಿ 16 ಮಂದಿಗೆ ಮತ್ತು ಬಾವಿ, ಕೆರೆ ಮೊದಲಾದ ಜಲಮೂಲಗಳ ನಿರ್ಮಾಣಕ್ಕಾಗಿ 111 ಮಂದಿಗೆ ಸಹಾಯಧನ ನೀಡಿದೆ.

**1989ರ ನಂತರದ ಪ್ರಗತಿ**

1990-91ರಲ್ಲಿ ಕೃಷಿ ಇಲಾಖೆಯು ಜಿಲ್ಲೆಯ 1,900 ಫಲಾನುಭವಿಗಳಿಗೆ ರೂ. 2.30 ಲಕ್ಷವನ್ನು ಶೇ. 50 ರಿಯಾಯಿತಿ ದರದಲ್ಲಿ ಕಳೆನಾಶಕ, ಕೀಟನಾಶಕಗಳನ್ನು ವಿತರಿಸಲು ವೆಚ್ಚ ಮಾಡಿದೆ. ಕೇಂದ್ರ ಪುರಸ್ಕೃತ ಯೋಜನೆಯ ದ್ವಿದಳ ಧಾನ್ಯ ಅಭಿವೃದ್ಧಿಗೆ ರೂ. 10 ಸಾವಿರ, ಬಿತ್ತನೆ ಬೀಜವನ್ನು ರಿಯಾಯಿತಿ ದರದಲ್ಲಿ ವಿತರಿಸಲು ರೂ. 3.12 ಲಕ್ಷ, ಸಸಿ ಮಡಿಗಳಿಗೆ ಪ್ರೋತ್ಸಾಹಧನ ನೀಡಲು ರೂ. 45,000 ಸತುವಿನ ಸಲ್ಫೇಟ್ ನೀಡಲು ರೂ. 15 ಸಾವಿರ, ಕಳೆನಾಶಕ ಹಾಗೂ ಸಸ್ಯ ಸಂರಕ್ಷಣಾ ಔಷಧಿಗಳಿಗೆ ರೂ. 1.50 ಲಕ್ಷ ಮತ್ತು ಸಿಂಪಡಣೆ ಯಂತ್ರ ಕೊಳ್ಳಲು ರೂ. 75 ಸಾವಿರ ನೆರವು ನೀಡಿದೆ. ಕೃಷಿ ಉಪಕರಣ ಕೊಳ್ಳಲು ರೂ. 2.25 ಲಕ್ಷ, ಸಣ್ಣ ರೈತರುಗಳಿಗೆ ಪವರ್‌ಟಿಲ್ಲರ್ ಕೊಳ್ಳಲು ಸಹಾಯಧನವಾಗಿ ರೂ. 90,000, ಪಂಪ್‌ಸೆಟ್ ಕೊಳ್ಳಲು ರೂ. 1.50 ಲಕ್ಷ, ಕ್ಷೇತ್ರ ಪ್ರಾತ್ಯಕ್ಷಿಕೆಗಾಗಿ ರೂ. 36,000, ರೈತರ ಶೈಕ್ಷಣಿಕ ಪ್ರವಾಸಕ್ಕಾಗಿ ರೂ. 30,000, ತರಬೇತಿ ಮತ್ತು ಪ್ರಚಾರಕ್ಕಾಗಿ ರೂ. 15,000 ಮಂಜೂರಾತಿ ಮಾಡಿದೆ. ಇದೇ ಕಾಲಾವಧಿಯಲ್ಲಿ ತೋಟಗಾರಿಕೆ ಇಲಾಖೆಯು ತೆಂಗಿನ ತೋಟಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸಲು 52 ಫಲಾನುಭವಿಗಳನ್ನು ಗುರುತಿಸಿ ರೂ. 52,000 ಮೀಸಲಿರಿಸಿದೆ. ತೋಟಗಾರಿಕೆಯ ಕ್ಷೇತ್ರ ಪಾಲನೆಗೆ ರೂ. 50,000 ಸಸ್ಯ ಸಂರಕ್ಷಣೆಗೆ ರೂ. 87,000, ಪರಿಶಿಷ್ಟ ವರ್ಗಗಳ ಉಪಯೋಜನೆಗೆ ರೂ. 2 ಲಕ್ಷ ಸೇರಿದಂತೆ ಒಟ್ಟು ರೂ. 3.89 ಲಕ್ಷವನ್ನು ಕಾದಿರಿಸಿ ಬಹುಪಾಲನ್ನು ವಿತರಿಸಿದೆ. ಪಶುಸಂಗೋಪನಾ ಇಲಾಖೆಯು ಸಂಚಾರಿ ಪಶು ಚಿಕಿತ್ಸಾಲಯಗಳಿಗಾಗಿ ರೂ.2.50 ಲಕ್ಷ ಅನುದಾನ ನೀಡಲಿದೆ. ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆಗೆ ರೂ. 3 ಲಕ್ಷ, ಆರು ಪಶುವೈದ್ಯ ಶಾಲೆ ತೆರೆಯಲು ರೂ. 6 ಲಕ್ಷ ಅನುದಾನ ಮಂಜೂರಾಗಿದೆ. ಗ್ರಾಮೀಣ ಪಶುವೈದ್ಯ ಶಾಲೆಗಳ ಉನ್ನತೀಕರಣಕ್ಕೆ ರೂ. 2.70 ಲಕ್ಷ, ಆಸ್ಪತ್ರೆ ಔಷಧಾಲಯಗಳಿಗಾಗಿ ರೂ. 2 ಲಕ್ಷ ನೀಡಲಾಗಿದೆ. ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆಯಡಿ ಹಂದಿ ಸಾಕಾಣಿಕೆಗಾಗಿ ಸಣ್ಣ ರೈತರಿಗೆ ಶೇ. 25 ಹಾಗೂ ಅತಿ ಸಣ್ಣ ರೈತರಿಗೆ ಶೇ. 33 ಸಹಾಯಧನದೊಂದಿಗೆ ನೆರವು ನೀಡುತ್ತಿದೆ. ಮಿಶ್ರತಳಿ ಕರು ಸಾಕಾಣಿಕೆಗೆ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ. 50, ಕೃಷಿ ಕಾರ್ಮಿಕರಿಗೆ ಶೇ. 66, ಪರಿಶಿಷ್ಟ ವರ್ಗದವರಿಗೆ ಶೇ. 85 ಸಹಾಯಧನದೊಂದಿಗೆ ನೆರವು ನೀಡಲಾಗುತ್ತಿದೆ.

ಜಿಲ್ಲೆಯಲ್ಲಿ 1989-90ರಲ್ಲಿ 1,200 ಎಕರೆ ಪ್ರದೇಶದಲ್ಲಿ ಹಿಪ್ಪನೇರಳೆಯನ್ನು ಬೆಳೆದು 50 ಟನ್ ರೇಷ್ಮೆ ಗೂಡನ್ನು ಉತ್ಪಾದಿಸಲಾಗಿತ್ತು. 1990-91ರಲ್ಲಿ ವಿಶೇಷ ಘಟಕ ಯೋಜನೆಯಡಿ ರೂ. 2 ಲಕ್ಷ ಅನುದಾನವಿದ್ದು ಶೇ. 95 ಗುರಿ ಸಾಧಿಸಲಾಗಿದೆ. ಪರಿಶಿಷ್ಟ ವರ್ಗದವರ ಉಪಯೋಜನೆಯಡಿ ರೂ. 3.50 ಲಕ್ಷ ಅನುದಾನವಿದ್ದು ಶೇ. 100 ಗುರಿ ಸಾಧಿಸಲಾಗಿದೆ. ಮೀನು ಮರಿಗಳ ಉತ್ಪಾದನೆ, ಸಾಕಣೆ ಮತ್ತು ವಿತರಣೆಗಾಗಿ ರೂ. 2 ಲಕ್ಷ ಮತ್ತು ವೈಜ್ಞಾನಿಕ ಮೀನುಗಾರಿಕೆ ಬಗ್ಗೆ ತಿಳುವಳಿಕೆ ನೀಡಲು ರೂ. 20,000 ಅನುದಾನ ನೀಡಿದೆ.

ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆಯಡಿ 1990-91ರಲ್ಲಿ ರೂ. 4.37 ಲಕ್ಷಗಳನ್ನು ಸಾಮಾಜಿಕ ಅರಣ್ಯಾಭಿವೃದ್ಧಿಗಾಗಿ ವೆಚ್ಚ ಮಾಡಲಾಗಿದೆ. ಈ ಕಾಲಾವಧಿಯಲ್ಲಿ 66 ಹೆ. ನೆಡುತೋಪು ಪೋಷಣೆ ಮತ್ತು 5.82 ಲಕ್ಷ ಸಸಿ ಪೋಷಣೆ ಮಾಡಲಾಗಿದೆ. 200 ಬಿದಿರು ನರ್ಸರಿ ಪಾತಿ ಮತ್ತು 15 ಹೆ.ನಲ್ಲಿ ಬಿದಿರು ಬೆಳೆಸಲಾಗಿದೆ. ಶಾಲಾ ಸಸ್ಯಕ್ಷೇತ್ರಗಳಿಗಾಗಿ ರೂ. 50,000 ವೆಚ್ಚ ಮಾಡಲಾಗಿದೆ. ರಾಷ್ಟ್ರೀಯ ಬಂಜರು ಭೂಮಿ ಅಭಿವೃದ್ಧಿ ಮಂಡಳಿಯಿಂದ ವಿಕೇಂದ್ರೀಕೃತ ಸಸ್ಯಕ್ಷೇತ್ರಗಳಿಗಾಗಿ ರೂ. 4.80 ಲಕ್ಷ ಒದಗಿಸಲಾಗಿದೆ. ವಿಶೇಷ ಘಟಕ ಯೋಜನೆಯಡಿ ಮಡಿಕೇರಿ ಮತ್ತು ವೀರರಾಜಪೇಟೆ ತಾಲೂಕುಗಳಲ್ಲಿ ರೂ. 60,000 ವೆಚ್ಚದಲ್ಲಿ ಸಾಮಾಜಿಕ ಭದ್ರತಾ ನೆಡುತೋಪುಗಳ ಕೆಲಸ ನಡೆಯುತ್ತಿದೆ. ಪರಿಶಿಷ್ಟವರ್ಗದವರಿಗೆ ಉಪಯೋಜನೆಯನ್ವಯ ಮನೆ ದುರಸ್ತಿ ಮತ್ತು ಮನೆಗಾಗಿ 75 ಮಂದಿಗೆ ರೂ.2.25 ಲಕ್ಷ ಮಂಜೂರಾಗಿದೆ.

ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಪ್ರಸಕ್ತ ಸಾಲಿನಲ್ಲಿ ಏಳು ಸಣ್ಣ ನೀರಾವರಿ ಯೋಜನೆಗಳಿಗಾಗಿ ರೂ. 60.33 ಲಕ್ಷ ಅನುದಾನವನ್ನು ನೀಡಲಾಗಿದೆ. ಇದರಲ್ಲಿ ಹಳೆಯ ಕಾಮಗಾರಿಗಳ ಮುಂದುವರಿಕೆಗೆ ಮತ್ತು ಹೊಸ ಕಾಮಗಾರಿಕೆಗಳಿಗಾಗಿ ರೂ. 58.78 ಲಕ್ಷ ವೆಚ್ಚ ಮಾಡಲಾಗಿದೆ. ಪರಿಶಿಷ್ಟ ವರ್ಗದವರ ಉಪಯೋಜನೆಯಡಿಯಲ್ಲಿ ಉದ್ದೇಶಿತ ಕಾಮಗಾರಿಗಳಿಗೆ ಗೊತ್ತುಪಡಿಸಿದ್ದ ರೂ. 4 ಲಕ್ಷದಲ್ಲಿ ರೂ. 2.06 ಲಕ್ಷ ವೆಚ್ಚ ಮಾಡಿ 42 ಲಕ್ಷ ಹೆ. ಅಚ್ಚುಕಟ್ಟು ಪ್ರದೇಶವನ್ನು ನೀರಾವರಿ ವ್ಯಾಪ್ತಿಗೊಳಪಡಿಸಿ ಒಟ್ಟು 460 ಲಕ್ಷ ಹೆ. ಪ್ರದೇಶವು ನೀರಾವರಿ ಸೌಲಭ್ಯ ಪಡೆಯುವಂತೆ ಮಾಡಲಾಗಿದೆ.

ಸ್ವಯಂ ಉದ್ಯೋಗ ತರಬೇತಿಗಾಗಿ 1990-91ರಲ್ಲಿ ರೂ. 2 ಲಕ್ಷ ವೆಚ್ಚ ಮಾಡಲಾಗಿದೆ. ಗ್ರಾಮೀಣ ಪ್ರದೇಶದ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಬೀಜಧನ ನೆರವು ನೀಡಲು ರೂ. 3 ಲಕ್ಷ ಕಾದಿರಿಸಿದ್ದು ಅವರಲ್ಲಿ 40 ಮಂದಿಗೆ ಜೇನುಕೃಷಿ ತರಬೇತಿ, 400 ಜೇನುಪೆಟ್ಟಿಗೆ ಮತ್ತು 30 ಜೇನು ಯಂತ್ರ ವಿತರಿಸಲು ರೂ. 2.52 ಲಕ್ಷ ವೆಚ್ಚ ಮಾಡಲಾಗಿದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಒಟ್ಟು 86 ಘಟಕಗಳಿಗೆ ರೂ. 127.55 ಲಕ್ಷ ಸಾಲ ಸೌಲಭ್ಯವನ್ನು ಒದಗಿಸುವುದರ ಮೂಲಕ ಜಿಲ್ಲೆಯಲ್ಲಿ ಕೈಗಾರಿಕೆಗೆ ಪ್ರೋತ್ಸಾಹ ಕೊಡುತ್ತಿದೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಈ ಸಾಲಿನಲ್ಲಿ ರೂ. 7,96,035 ಅನುದಾನ ಮತ್ತು ರೂ. 24,345 ಸಹಾಯ ಧನ ಇವುಗಳನ್ನು ಮಂಜೂರಾತಿ ಮಾಡಿದ್ದುದರ ಪೈಕಿ ರೂ. 5,59, 240 ಸಾಲ ಮತ್ತು ರೂ. 18,755 ಸಹಾಯ ಧನವನ್ನು ವಿವಿಧ ಘಟಕಗಳಿಗೆ ನೀಡಲಾಗಿತ್ತು.

ಜಿಲ್ಲೆಯಲ್ಲಿ ವೈದ್ಯಕೀಯ ಸೌಲಭ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ 1990-91ರಲ್ಲಿ ಒಟ್ಟು 33 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಕ್ಕೆ ಅಗತ್ಯಕ್ಕೆ ತಕ್ಕಂತೆ ತಲಾ ರೂ. 5,000 ರಿಂದ ರೂ. 20,000ದ ವರೆಗೂ ಒದಗಿಸಲಾಗಿದೆ. ಇಷ್ಟೇ ಸಂಖ್ಯೆಯ ವಸತಿ ಗೃಹಗಳಿಗಾಗಿ ರೂ. 2.20 ಲಕ್ಷ ಒದಗಿಸಿದ್ದು, ಒಟ್ಟು ರೂ. 5 ಲಕ್ಷ ಅನುದಾನ ಒದಗಿಸಲಾಗಿದೆ. ಉಪಕರಣಗಳ ದುರಸ್ತಿಗೆ ರೂ. 2 ಲಕ್ಷ, ಔಷಧಾಲಯಗಳಿಗೆ ರೂ. 2.60 ಲಕ್ಷ, ನೂತನ ಸಾಧನ ಪೂರೈಕೆಗಾಗಿ ರೂ. 3 ಲಕ್ಷ ಕಾದಿರಿಸಲಾಗಿದೆ. ಶಿರಂಗಾಲದಲ್ಲಿ ಮತ್ತು ಕಾನೂರಿನಲ್ಲಿ ತಲಾ ಹತ್ತು ಮತ್ತು ಆರು ಹಾಸಿಗೆಗಳ ನೂತನ ಪ್ರಾಥಮಿಕ ಆರೋಗ್ಯ ಘಟಕ ಸ್ಥಾಪನೆಗಾಗಿ ರೂ. 1 ಲಕ್ಷ ಅನುದಾನ ನೀಡಲಾಗಿದೆ. ಐದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಮೊದಲ ಕಂತಿಗಾಗಿ ರೂ. 6 ಲಕ್ಷ, ಈಗಾಗಲೇ ರೂಪಿಸಲಾಗಿರುವ ಕೆಲಸಗಳಿಗಾಗಿ ರೂ. 6 ಲಕ್ಷ ಮತ್ತು ಮುಂದುವರಿದ ಕಾಮಗಾರಿಗಳಿಗಾಗಿ ರೂ. 2.50 ಲಕ್ಷ ಒದಗಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟಜಾತಿಯ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ 1990-91 ರಲ್ಲಿ ರೂ. 80 ಸಾವಿರ ಮೀಸಲಿಟ್ಟಿದ್ದು ಶೇ. 53 ರಷ್ಟು ಪ್ರಗತಿಯನ್ನು ಸಾಧಿಸಿದ್ದರೆ, ವಿದ್ಯಾರ್ಥಿ ವೇತನ ನೀಡಿಕೆಯಲ್ಲಿ ಶೇ. 100 ಸಾಧನೆಯನ್ನು ಪೂರೈಸಿದೆ. ಮೆಟ್ರಿಕ್ ನಂತರದ ಪರಿಶಿಷ್ಟಜಾತಿಯ ವಿದ್ಯಾರ್ಥಿಗಳಿಗಾಗಿ ರೂ. 2 ಲಕ್ಷ ಮತ್ತು ವಸತಿ ಶಾಲೆಗಳಿಗಾಗಿ ರೂ. ಒಂದು ಲಕ್ಷ ವೆಚ್ಚ ಮಾಡಲಾಗಿದೆ. ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳ ನಿರ್ವಹಣೆಗಾಗಿ ರೂ. 5.67 ಲಕ್ಷ ಅನುದಾನ ಒದಗಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಅನಾಥ ಮಕ್ಕಳ ಒಂದು ಪಾಲನಾಗೃಹಕ್ಕೆ ರೂ. 60,000 ಅನುದಾನ, ಮಡಿಕೇರಿ ಮತ್ತು ವೀರರಾಜಪೇಟೆಗಳಲ್ಲಿ ಒಂದೊಂದು ನಿರ್ಗತಿಕ ಮಕ್ಕಳ ಪಾಲನಾ ಗೃಹಗಳಿಗೆ ಒಟ್ಟು ರೂ. 1 ಲಕ್ಷ ಅನುದಾನ, ಉದ್ಯೋಗಸ್ಥ ಮಾತೆಯರ ಶಿಶು ಶಾಲೆಗಳ ನಿರ್ವಹಣೆಗೆ ರೂ. 11,426, ತಾಲೂಕು ಮಟ್ಟದ ಮಹಿಳಾ ಮಂಡಳಿಗಳಿಗೆ ಅನುದಾನ ನೀಡಲು ರೂ. 15 ಸಾವಿರ, 21 ಅಂಗನವಾಡಿಗಳಿಗೆ ರೂ. 75 ಸಾವಿರ ವೆಚ್ಚಮಾಡಿದೆ. ಪೌಷ್ಟಿಕ ಆಹಾರ ಯೋಜನೆಯಡಿ ಜಿಲ್ಲೆಯ 559 ಅಂಗನವಾಡಿಗಳಲ್ಲಿನ 29,109 ಫಲಾನುಭವಿಗಳಿಗೆ ರೂ. 33 ಲಕ್ಷ ಅನುದಾನ ಸೌಲಭ್ಯವನ್ನು ಒದಗಿಸಿದೆ. ಯೋಜನೇತರ ಬಾಬತ್ತಿನಲ್ಲಿ 2,068 ಕೃಷಿಕ ಮಹಿಳೆಯರಿಗೆ ಹೆರಿಗೆ ಭತ್ಯೆ ರೂ. 6,20,400, ವಿಧವಾ ವೇತನ ರೂ. 30,52,235, ವೃದ್ಧಾಪ್ಯವೇತನ ರೂ. 14,25, 212, ಮತ್ತು ಅಂಗವಿಕಲರಿಗೆ ಮಾಸಾಶನ ನೀಡಲು ರೂ. 2,45,811 ವೆಚ್ಚ ಮಾಡಲಾಗಿದೆ. ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ 8,800 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ರೂ. 11,80,325 ವೆಚ್ಚ ಮಾಡಲಾಗಿದೆ. ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ರೂ. 14,76,333 ಖರ್ಚಾಗಿದೆ.

ರಸ್ತೆ ಮತ್ತು ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ 1990-91ರಲ್ಲಿ 168 ಕಾಮಗಾರಿಗಳು ಪ್ರಗತಿಯಲ್ಲಿದ್ದು ರೂ. 64.18 ಲಕ್ಷ ಅನುದಾನದ ಸೌಲಭ್ಯ ಪಡೆದಿವೆ. ಗ್ರಾಮೀಣ ಪ್ರದೇಶದಲ್ಲಿ ಮನೆಬಳಕೆ ವಸ್ತುಗಳನ್ನು ಉತ್ಪಾದಿಸಿ ಮಾರಾಟ ಮಾಡುವ ಮಹತ್ವದ ಯೋಜನೆಯನ್ನು 'ಡ್ವಾಕ್ರ' ಎಂದು ಕರೆಯುತ್ತಾರೆ. ಈ ಯೋಜನೆಯಡಿಯಲ್ಲಿ 99 ಗುಂಪುಗಳಿಗೆ ಪ್ರಸಕ್ತ ಸಾಲಿನಲ್ಲಿ ಹಣ ಬಿಡುಗಡೆಯಾಗಿದ್ದು 73 ಗುಂಪುಗಳು ಕಾರ್ಯನಿರತವಾಗಿದ್ದು ಇವುಗಳಲ್ಲಿ ಹಂಚಿಕೆಯಾಗಿವೆ. ಇಂಥ ಗುಂಪುಗಳ ಸಂಖ್ಯೆ ಬಿದಿರು ಕೆಲಸದಲ್ಲಿ 7, ಅಗರಬತ್ತಿಯಲ್ಲಿ 14, ಚಾಪೆ ನೇಯ್ಗೆಯಲ್ಲಿ 8, ಪೊರಕೆ ತಯಾರಿಕೆಯಲ್ಲಿ 5, ಮಡಿಕೆ ತಯಾರಿಕೆಯಲ್ಲಿ 2, ಊಟದ ಎಲೆ (ಪತ್ರಾವಳಿ) ತಯಾರಿಕೆಯಲ್ಲಿ 2, ಸಿದ್ಧ ಉಡುಪು ತಯಾರಿಕೆಯಲ್ಲಿ 5, ಬೆತ್ತದ ಕುರ್ಚಿ ತಯಾರಿಕೆಯಲ್ಲಿ 1, ಫಿನಾಯಿಲ್ ತಯಾರಿಕೆಯಲ್ಲಿ 1, ಜಲ್ಲಿಕಲ್ಲು

ತಯಾರಿಕೆಯಲ್ಲಿ 4, ಲಕೋಟೆ ಮಾಡುವುದರಲ್ಲಿ 3, ಅಣಬೆ ಉತ್ಪಾದನೆಯಲ್ಲಿ 2, ನಿಟ್ಟಿಂಗ್‌ನಲ್ಲಿ 4, ಮಸಾಲೆಪುಡಿ ತಯಾರಿಕೆಯಲ್ಲಿ 12, ಜೇನು ಮತ್ತು ಇತರೆ ಉತ್ಪಾದನೆಯಲ್ಲಿ 2 ಮತ್ತು ಕಾಫಿ ನರ್ಸರಿಯಲ್ಲಿ 1, ಹೀಗಿವೆ.

ಗ್ರಾಮಾಂತರ ವಿದ್ಯುತ್ ಪೂರೈಕೆಗೆ ಸಂಬಂಧಿಸಿದಂತೆ 1990-91ರಲ್ಲಿ ನೀರಾವರಿ ಪಂಪ್‌ಸೆಟ್ಟು ವಿದ್ಯುತ್‌ಸೌಲಭ್ಯಕ್ಕೆ 270 ರೈತರು ಹೊಸದಾಗಿ ಸೇರ್ಪಡೆಯಾಗಿದ್ದು ಒಟ್ಟು ಫಲಾನುಭವಿಗಳ ಸಂಖ್ಯೆ 2,826. ಭಾಗ್ಯಜ್ಯೋತಿಯಲ್ಲಿ ಪ್ರಸಕ್ತ ವರ್ಷ 63 ಕುಟುಂಬಗಳು ಸೇರಿದ್ದು ಒಟ್ಟು ಫಲಾನುಭವಿ ಕುಟುಂಬಗಳ ಸಂಖ್ಯೆ 3,153. ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ 289 ಗ್ರಾಮಗಳಿಗೂ 150 ಉಪಗ್ರಾಮಗಳಿಗೂ ವಿದ್ಯುತ್ ಸೌಲಭ್ಯ ದೊರಕಿವೆ. ಪ್ರಸಕ್ತ ಸಾಲಿನಲ್ಲಿ 85 ಪರಿಶಿಷ್ಟ ಜಾತಿ ಕಾಲೋನಿಗಳಿಗೂ ಮತ್ತು 77 ಪರಿಶಿಷ್ಟವರ್ಗದ ಕಾಲೋನಿಗಳಿಗೂ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.

1990–91ರಲ್ಲಿ ಜಿಲ್ಲೆಯ ಒಟ್ಟು 14,120 ಮಂದಿ ವೃದ್ಧರು, 7,976 ಮಂದಿ ವಿಧವೆಯರು ಮತ್ತು 3,897 ಮಂದಿ ಅಂಗವಿಕಲರು ಸರ್ಕಾರದಿಂದ ಮಾಸಾಶನ ಪಡೆಯುತ್ತಿದ್ದರು. ತಾಲೂಕುವಾರು ಫಲಾನುಭವಿಗಳ ಸಂಖ್ಯೆಯು: ಮಡಿಕೇರಿ ತಾಲೂಕಿನಲ್ಲಿ1,982 ಮಂದಿ ವೃದ್ಧರು, 2,199 ಮಂದಿ ವಿಧವೆಯರು ಮತ್ತು 1,716 ಮಂದಿ ಅಂಗವಿಕಲರು; ವೀರರಾಜಪೇಟೆ ತಾಲೂಕಿನಲ್ಲಿ 7,706 ಮಂದಿ ವೃದ್ಧರು, 2,400 ಮಂದಿ ವಿಧವೆಯರು ಮತ್ತು 1,069 ಮಂದಿ ಅಂಗವಿಕಲರು. ಸೋಮವಾರಪೇಟೆ ತಾಲೂಕಿನಲ್ಲಿ 4,432 ಮಂದಿ ವೃದ್ಧರು 3,377 ಮಂದಿ ವಿಧವೆಯರು ಹಾಗೂ 1,112 ಮಂದಿ ಅಂಗವಿಕಲರು ಇದ್ದರು.

### ನಗರ ಯೋಜನೆ

ಜಿಲ್ಲೆಯ ಭೌಗೋಳಿಕ, ಸಾಮಾಜಿಕ ಮತ್ತು ಆರ್ಥಿಕ ಪರಿವೀಕ್ಷಣೆಯ ನಂತರ ಮಡಿಕೇರಿಯ ನಗರ ಯೋಜನಾ ಕಚೇರಿಯು ಯೋಜಿತ ಅಭಿವೃದ್ಧಿ ಮತ್ತು ಭವಿಷ್ಯದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗೆ ಕೊಟ್ಟಿರುವ ಪಟ್ಟಣಗಳು ಮತ್ತು ಗ್ರಾಮಗಳ ಅಭಿವೃದ್ಧಿ ಯೋಜನೆಯನ್ನು ತಯಾರಿಸಿದೆ. ಈ ಯೋಜನೆಗಳು ವಸತಿ ಕ್ಷೇತ್ರಗಳ ವಿಸ್ತರಣೆಯ ದೆಸೆಗಳನ್ನು ಅರಿಯಲು ಸಹಕಾರಿಯಾಗಿವೆ. ಕೊಡಗು ಜಿಲ್ಲೆಯಲ್ಲಿ ಈವರೆಗೂ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿರುವ ಪಟ್ಟಣಗಳ ಪಟ್ಟಿಯಲ್ಲಿ ಸೋಮವಾರಪೇಟೆ, ವೀರರಾಜಪೇಟೆ, ಗೋಣಿಕೊಪ್ಪಲು, ಪೊನ್ನಂಪೇಟೆ, ಕೊಡ್ಲಿಪೇಟೆ, ಶನಿವಾರಸಂತೆ, ಕುಶಾಲನಗರ ಮತ್ತು ಸುಂಟಿಕೊಪ್ಪ ಹಾಗೂ ಗ್ರಾಮಗಳ ಪಟ್ಟಿಯಲ್ಲಿ ಹೊಸಕೇರಿ, ಹುದಿಕೇರಿ, ಕರಡಿಗೋಡು, ಕೊಡಿಗೆ, ಕೊಡುಮಂಗಳೂರು, ನೋಕ್ಯ, ಬಾಳೆಲೆ, ಅಂದಗೋವೆ, ಪೆರಾಜೆ, ಬಿಳುಗುಂದ, ಕೊಳಕೇರಿ, ಭಾಗಮಂಡಲ, ಕುಟ್ಟ ಚೇರಳ ಶ್ರೀಮಂಗಲ, ಕರಿಕೆ, ಚೌಡ್ಲು, ವಾದಾಪುರ, ಮೂರ್ನಾಡುನಾಡು, ಪಾಲಿಬೆಟ್ಟ ಇವುಗಳು ಸೇರಿವೆ. ಮಡಿಕೇರಿಯ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1987ರ ಪ್ರಕಾರ ಸ್ಥಾಪನೆಗೊಂಡಿತು. ಇದು ತಯಾರಿಸಿರುವ ಸಮಗ್ರ ಅಭಿವೃದ್ಧಿ ಯೋಜನೆಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಗಳ ಯೋಜನಾ ನಿಯಮ 1961ರ ಅಡಿಯಲ್ಲಿ ತಯಾರಾಗಿದ್ದು ಸರ್ಕಾರದ ಒಪ್ಪಿಗೆಯನ್ನು ಪಡೆದಿದೆ. ಸರಕಾರದ ಅನುಮೋದನೆಗೆ ಒಳಪಟ್ಟಿರುವ ಯೋಜನಾಂಶಗಳನ್ನು ಅನುಷ್ಠಾನಕ್ಕೆ ತಂದು ಮಡಿಕೇರಿಯನ್ನು ಅಭಿವೃದ್ಧಿಪಡಿಸಲಾಗುತ್ತದೆ.

**ಪ್ರಗತಿ ಕೇಂದ್ರಗಳು :** ಕೊಡಗು ಜಿಲ್ಲೆಯು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕ್ಷೇತ್ರದ ವ್ಯಾಪ್ತಿಗೆ ಸೇರಿರುವುದರಿಂದ, ಶಿವಮೊಗ್ಗದಲ್ಲಿರುವ ನಗರ ಯೋಜನಾ ನಿರ್ದೇಶಕರು, ಪಶ್ಚಿಮಘಟ್ಟಗಳ ಕ್ಷೇತ್ರ, ಇವರು ತಯಾರಿಸಿರುವ ಪ್ರಾಂತೀಯ ಅಭಿವೃದ್ಧಿ ಯೋಜನೆಯ ವ್ಯಾಪ್ತಿಗೊಳಪಡುತ್ತದೆ. ಇರುವ ಸೌಲಭ್ಯವನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುವುದು ಮತ್ತು ಮೂಲ ಸೇವಾ ಸೌಲಭ್ಯವನ್ನು ಆದಷ್ಟು ಹತ್ತಿರದ ಪ್ರಗತಿ ಕೇಂದ್ರಗಳಿಂದ ಪಡೆಯುವುದೇ ಈ ಯೋಜನೆಯ ಮುಖ್ಯ ಉದ್ದೇಶ.

**ಪ್ರಗತಿ ಕೇಂದ್ರಗಳ ಪ್ರಕಾರಗಳು :** 1) ಉಪ ಪ್ರದೇಶ ಕೇಂದ್ರ : ಮಡಿಕೇರಿ; 2) ಮಾರುಕಟ್ಟೆ ಹಾಗೂ ಸೇವಾ ಕೇಂದ್ರಗಳು : ಅ) ಸೋಮವಾರಪೇಟೆ; ಆ) ವೀರರಾಜಪೇಟೆ; 3) ಮಾರುಕಟ್ಟೆ ಕೇಂದ್ರಗಳು : ಭಾಗಮಂಡಲ, ಕುಶಾಲನಗರ, ಕೊಡ್ಲಿಪೇಟೆ, ಸುಂಟಿಕೊಪ್ಪ ಮತ್ತು ಗೋಣಿಕೊಪ್ಪಲು; 4) ಸೇವಾಕೇಂದ್ರಗಳು : ಮಡಿಕೇರಿ ತಾಲೂಕಿನ–ಕರಿಕೆ, ಬೇತು, ಸಂಪಾಜೆ, ಕಾಂತೂರು, ಕುಂಜಿಲ, ಶನಿವಾರಸಂತೆ, ಗೋಣಿಮರೂರು, ಶಾಂತಳ್ಳಿ, ಗರ್‌ವಾಲೆ, ವಾಲ್ನೂರು, ತ್ಯಾಗತ್ತೂರು, ಕೊಡಿಗೆ, ಐಗೂರು, ಗೌಡಳ್ಳಿ, ನಿಡ್ತ ಮತ್ತು ಹೊನ್ನೆಕೋಡಿ. ವೀರರಾಜಪೇಟೆ ತಾಲೂಕಿನ ಪೊನ್ನಂಪೇಟೆ, ನೋಕ್ಯ, ಬಾಳೆಲೆ, ಸಿದ್ದಾಪುರ, ಹುದಿಕೇರಿ, ಪರಕಟಗೇರಿ, ಕುಮಟೂರು, ನಿಟ್ಟೂರು, ಕೆದಮುಳ್ಳೂರು, ಕಡಂಗ, ಮರೂರು, ಹಾಲಗುಂದ, ಕುಟ್ಟ ಮತ್ತು ಮಾಲ್ದರೆ.

**ಕಾಮಗಾರಿಗಳು**

ಶಾಲಾ ಮತ್ತು ಸಾರ್ವಜನಿಕ ಉಪಯುಕ್ತ ಕಟ್ಟಡಗಳು, ಗೃಹನಿರ್ಮಾಣ ಕಾರ್ಯಗಳು, ನೀರಾವರಿ ಯೋಜನೆಗಳು (ಸಣ್ಣ, ಮಧ್ಯಮ ಮತ್ತು ದೊಡ್ಡ ಪ್ರಮಾಣದವುಗಳು), ಅಣೆಕಟ್ಟುಗಳು, ಸೇತುವೆಗಳು, ಮುಂತಾದ ಕಾಮಗಾರಿಗಳು ಇಲಾಖಾ ವ್ಯಾಪ್ತಿಗೆ ಸೇರುತ್ತವೆ. ಲೋಕೋಪಯೋಗಿ ಇಲಾಖಾ ಕಚೇರಿಯ ವ್ಯಾಪ್ತಿಗೆ ಭೂಸಾರಿಗೆ ಸಂಪರ್ಕ ಮತ್ತು ಕಟ್ಟಡ ಕಾಮಗಾರಿಗಳು ಸೇರುತ್ತವೆ. ಜಿಲ್ಲೆಯಲ್ಲಿ 1990-91ರ ಆಯ – ವ್ಯಯ ಪಟ್ಟಿಯಲ್ಲಿ ಸೇರಿಸಲು ಉದ್ದೇಶಿಸಿರುವ ಕಟ್ಟಡ, ರಸ್ತೆ ಮತ್ತು ಸೇತುವೆಗಳ ಪಟ್ಟಿಯಲ್ಲಿ ವೀರರಾಜಪೇಟೆಯ ಸಂಯೋಜಿತ ನ್ಯಾಯಾಲಯದ ಕಟ್ಟಡದ ಒಂದನೇ ಅಂತಸ್ತು, ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲಿಸ್ ಕಚೇರಿಯ ಕಟ್ಟಡಗಳು (ಕುಶಾಲನಗರ), ಮತ್ತು ವೀರರಾಜಪೇಟೆ ವಲಯ ನಿರೀಕ್ಷಕರ ಕಚೇರಿ ಕಟ್ಟಡ (ಸೋಮವಾರಪೇಟೆ), ಲೋಕೋಪಯೋಗಿ ಇಲಾಖಾ ಕೊಡಗು ವಿಭಾಗ ಕಚೇರಿ (ಮಡಿಕೇರಿ), ಸರಕಾರಿ ಮುದ್ರಣಾಲಯದ ಬುಕ್ ಡಿಪೋ ಕಟ್ಟಡ (ಮಡಿಕೇರಿ), ವಾಣಿಜ್ಯ ತೆರಿಗೆ ಅಧಿಕಾರಿಯವರ ಕಚೇರಿ ಕಟ್ಟಡ (ಮಡಿಕೇರಿ), ಜಿಲ್ಲಾಧಿಕಾರಿಗಳ ಕಚೇರಿ (ಮಡಿಕೇರಿ), ಅಗ್ನಿಶಾಮಕದಳದ ಕಚೇರಿ (ಕುಶಾಲನಗರ), ಕಂದಾಯ ಇಲಾಖಾ ನೌಕರರ ವಸತಿ ಗೃಹ (ಮಡಿಕೇರಿ), ಉಪ-ನೋಂದಣಿಅಧಿಕಾರಿ ಮತ್ತು ನೌಕರರ ವಸತಿ ಗೃಹನಿರ್ಮಾಣ ಉಪ-ಖಜಾನಾಧಿಕಾರಿಗಳ ವಸತಿಗೃಹ ನಿರ್ಮಾಣ (ಸೋಮವಾರಪೇಟೆ), ರೀಮ್ಯಾಂಡ್ ಹೋಂ ಅಧಿಕಾರಿ ಮತ್ತು ನೌಕರರ ವಸತಿ ಗೃಹ, ಸಾರಿಗೆ ನೌಕರರ ವಸತಿಗೃಹ, ಎನ್.ಸಿ.ಸಿ. ಅಧಿಕಾರಿಗಳ ವಸತಿಗೃಹ (ಸೋಮವಾರಪೇಟೆ), ಪ್ರಥಮ ದರ್ಜೆ ಕಾಲೇಜಿನ ಬೋಧಕರ ಮತ್ತು ನೌಕರರ ವಸತಿಗೃಹ, ಸಾರ್ವಜನಿಕ ಆಸ್ಪತ್ರೆಯ ವೈದ್ಯರುಗಳ ಮತ್ತು ನೌಕರರ ವಸತಿಗೃಹ (ಮಡಿಕೇರಿ), ಆರಕ್ಷಕ ಉಪನಿರೀಕ್ಷಕರ ಮತ್ತು ಪೋಲಿಸರ ವಸತಿಗೃಹ (ಸೋಮವಾರಪೇಟೆ), ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲಿಸರ ವಸತಿಗೃಹಗಳು (ವೀರರಾಜಪೇಟೆ ಮತ್ತು ಕುಶಾಲನಗರ), ಸಾರ್ವಜನಿಕ ಆಸ್ಪತ್ರೆಯ ಮೂರನೇಯ ಹಂತದ ಕಟ್ಟಡ, ಸಾರ್ವಜನಿಕ ಆಸ್ಪತ್ರೆಯ ಪಿ. ಎಚ್. ಸಿ., ದಾದಿಯರ ಹಾಸ್ಟಲ್ ಕಟ್ಟಡ ನಿರ್ಮಾಣ(ಎಲ್ಲವೂ ಮಡಿಕೇರಿ) ಇವು ಪ್ರಮುಖವಾದವುಗಳು. ಮೈಸೂರು-ಬಂಟ್ವಾಳ ರಸ್ತೆಯಲ್ಲಿ 98ನೇಯ ಕಿ.ಮೀ. 128.8ನೇಯ ಕಿ.ಮೀ. ಮತ್ತು 146ನೇಯ ಕಿ.ಮೀ. ಅಂತರದಲ್ಲಿ ಹೊಳೆಗಳಿಗೆ ಹಾಕಿರುವ ಸೇತುವೆಯ ಪುನರ್‌ನಿರ್ಮಾಣ, ಹುಣಸೂರು-ವೀರರಾಜಪೇಟೆ ರಸ್ತೆಯ 36.4ನೇಯ ಕಿ.ಮೀ. ಅಂತರದಲ್ಲಿ ಹೊಳೆಗೆ ಹಾಕಿರುವ ಸೇತುವೆಯ ಪುನರ್‌ನಿರ್ಮಾಣ, ಮಡಿಕೇರಿ, ಭಾಗಮಂಡಲ ರಸ್ತೆಯ 22.8ನೇಯ ಹಾಗೂ 33ನೇಯಕಿ.ಮೀ. ಅಂತರದಲ್ಲಿ ಹೊಳೆಗಳಿಗೆ ಹಾಕಿರುವಸೇತುವೆಗಳ ಪುನರ್‌ನಿರ್ಮಾಣ, ಬೆಟ್ಟಗೇರಿಯ ನಾಲ್ಕುನಾಡು ರಸ್ತೆಯ 21.8ನೇಯ ಕಿ.ಮೀ. ಅಂತರದಲ್ಲಿ ಕೋಟೇರಿ ಹೊಳೆ ಸೇತುವೆಯ ಪುನರ್‌ನಿರ್ಮಾಣ ಸಿದ್ದಾಪುರ-ಮೈಸೂರು ರಸ್ತೆಯ 2.2 ಕಿ.ಮೀ. ಅಂತರದಲ್ಲಿ ಹೊಳೆಗೆ ಹಾಕಿರುವ ಸೇತುವೆಯ ಪುನರ್‌ನಿರ್ಮಾಣ, ಸೋಮವಾರಪೇಟೆ-ಕೊಣನೂರು ರಸ್ತೆಯ 4.5 ಕಿ.ಮೀ.ನಲ್ಲಿನ ಅಂತರದಲ್ಲಿ ಹೊಳೆಗೆ ಇರುವ ಸೇತುವೆಯ ಪುನರ್‌ನಿರ್ಮಾಣ, ಕಗ್ಗೋಡು-ಕಾಟಗೇರಿ ರಸ್ತೆಯ 1.4ನೇಯ ಕಿ.ಮೀ. ನಲ್ಲಿರುವ ಗೋಣಿಕೊಪ್ಪಲು ನೈನಾಡು ರಸ್ತೆಯ ಕಿ.ಮೀ. 26.6ರಲ್ಲಿ, ಪಿರಿಯಾಪಟ್ಟಣ-ಹಾಸನ ರಾಜ್ಯ ಹೆದ್ದಾರಿಯ 120.1 ಕಿ.ಮೀ.ನಲ್ಲಿ, ಶನಿವಾರ ಸಂತೆ-ಬಾಣಾವರ ರಸ್ತೆಯ 11ನೇಯ ಕಿ.ಮೀ.ನಲ್ಲಿ,ಮಡಿಕೇರಿ ಕೊಡ್ಲಿಪೇಟೆ ರಸ್ತೆಯ 15.7 ಕಿ.ಮೀ.ನಲ್ಲಿ, ಶೆಟ್ಟಿಗೇರಿ-ಬೀರಗ ಮಾರ್ಗದ ರಸ್ತೆಯ 12.05 ಕಿ.ಮೀ ನಲ್ಲಿ, ಮಡಿಕೇರಿ-ಭಾಗಮಂಡಲ ರಸ್ತೆಯ 7.6 ಕಿ.ಮೀ.ನಲ್ಲಿ ಹಾಗೂ 29ಕಿ.ಮೀನಲ್ಲಿ, ಹುದಿಕೇರಿ-ಕುಟ್ಟಗಡಿ ರಸ್ತೆಯ 125.9 ಕಿ.ಮೀ.ನಲ್ಲಿ, ಮಡಿಕೇರಿ-ಕೊಡ್ಲಿಪೇಟೆ ರಸ್ತೆಯ 51 ಕಿ.ಮೀ. ನಲ್ಲಿ, ಸುಂಟಿಕೊಪ್ಪ-ಸಿದ್ದಾಪುರ ರಸ್ತೆಯ 8.0 ಕಿ.ಮೀ.ನಲ್ಲಿ, ಸಿದ್ದಾಪುರ-ಮೈಸೂರು ರಸ್ತೆಯ 33.4 ಕಿ.ಮೀ.ನಲ್ಲಿ, ಸೋಮವಾರಪೇಟೆ ಕೊಣನೂರು ರಸ್ತೆಯ 6.7 ಕಿ.ಮೀ.ನಲ್ಲಿ ಮಡಿಕೇರಿ-ಕೊಡ್ಲಿಪೇಟೆ ರಸ್ತೆಯ 20, 60.9 ಹಾಗೂ 30 ನೇಯ ಕಿ.ಮೀ.ನಲ್ಲಿ, ಫ್ರೇಜರ್‌ಪೇಟೆ–ಸೋಮವಾರಪೇಟೆ ರಸ್ತೆಯ 9.8 ಕಿ.ಮೀ.ನಲ್ಲಿ, ಫ್ರೇಜರ್‌ಪೇಟೆ-ಸಿದ್ದಾಪುರ ರಸ್ತೆಯ 1.8 ಕಿ.ಮೀ.ನಲ್ಲಿ, ಸೇತುವೆಯ ಪುನರ್‌ನಿರ್ಮಾಣ ಕಾರ್ಯವನ್ನೂ; ಚೆನ್ನಯ್ಯನಕೋಟೆ - ಚೆನ್ನಂಗಿ ಅಬ್ಬೂರು ರಸ್ತೆಯ 6.0 ಕಿ.ಮೀ.ನಿಂದ 9.3 ಕಿ.ಮೀ.ವರೆಗೆ, ಚೆಂಬೆ ಬೆಳ್ಳೂರು-ಕೊಡಂಗೇರಿ ರಸ್ತೆಯ 3.5 ಕಿ.ಮೀ.ನಿಂದ 6.1 ಮತ್ತು 6.45 ರಿಂದ 7.5 ಕಿ.ಮೀ.ವರೆಗೆ, ಭಾಗಮಂಡಲ–ಕರಿಕೆ ರಸ್ತೆಯ ಆರಂಭದಿಂದ 12 ನೇಯ ಕಿ.ಮೀ. ವರೆಗೆ, ಮಾದಾಪುರ–ಶಾಂತಳ್ಳಿ ರಸ್ತೆಯ 24 ನೇಯ ಕಿ.ಮೀ.ನಿಂದ 29.0 ಕಿ.ಮೀ. ವರೆಗೆ, ಕುಮ್ಮೆಹೊಳೆ-ಹಾತೂರು ರಸ್ತೆಯ 3.6 ರಿಂದ 5.4 ಕಿ.ಮೀ. ವರೆಗೆ, ಮೈಸೂರು-ಬಂಟ್ವಾಳ ರಸ್ತೆಯ 120 ರಿಂದ 148 ಕಿ.ಮೀ.ಗಳ ವರೆಗೆ, ಮಡಿಕೇರಿ-ಕೊಡ್ಲಿಪೇಟೆ ರಸ್ತೆಯ 10.0 ರಿಂದ 40 ನೇಯ ಕಿ. ಮೀ. ವರೆಗೆ, ಮಡಿಕೇರಿ – ಮಾಕುಟ್ಟ ರಸ್ತೆಯ 25.0 ರಿಂದ 40.0 ಕಿ.ಮೀ.ಯವರೆಗೆ, ಟಾರು (ಡಾಂಬರ್) ಹಾಗೂ ಆರಿಸಿದ ಭಾಗಗಳಿಗೆ ಮರು ಟಾರು ಹಾಕುವ

ಕಾಮಗಾರಿ ಕೆಲಸವನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಲು ಉದ್ದೇಶಿಸಲಾಗಿದೆ. ಭಾಗಮಂಡಲ–ಕರಿಕೆ ರಸ್ತೆ ಕಿ.ಮೀ. 15.0 ರಿಂದ 30.0ರ ವರೆಗೆ ಮಡಿಕೇರಿ-ಮಾಕುಟ್ಟ ರಸ್ತೆಯ 50.0 ರಿಂದ 65.0 ಕಿ.ಮೀ. ವರೆಗೆ, ಮಡಿಕೇರಿ–ಕೊಡ್ಲಿಪೇಟೆ ರಸ್ತೆಯ 41 ಕಿ.ಮೀ. ರಿಂದ 60ನೇಯ ಕಿ.ಮೀ ವರೆಗೆ, ಕತ್ತಲೆಕಾಡು–ಮರಗೋಡು–ಕೋಡಂಗೇರಿ ರಸ್ತೆಯ ಆರಂಭದಿಂದ 14.8 ಕಿ.ಮೀ.ರ ವರೆಗೆ, ಹುಣಸೂರು–ವೀರರಾಜಪೇಟೆ–ಶಿರಂಗಾಲ ರಸ್ತೆಯ 5ಕಿ.ಮೀ.ನಿಂದ 15.0 ಕಿ.ಮೀ.ರ ವರೆಗೆ, ಕುಶಾಲನಗರ ಸಿದ್ದಾಪುರ ರಸ್ತೆಯ ಆರಂಭದಿಂದ 18.0 ಕಿಮೀ.ವರೆಗೆ, ಹೊಳೆನರಸೀಪುರ–ಹಾಸನ ಗಡಿ ಹೆದ್ದಾರಿ 93.6 ರಿಂದ 131.2 ಕಿ.ಮೀ. ವರೆಗೆ, ಸಿದ್ದಾಪುರ–ಮೈಸೂರು ರಸ್ತೆಯ 28.0 ಕಿ.ಮೀ. ನಿಂದ 45.5 ವರೆಗೆ, ಚನ್ನರಾಯಪಟ್ಟಣ–ಶನಿವಾರಸಂತೆ ರಸ್ತೆಯ 59.5 ಕಿ.ಮೀ. ನಿಂದ 63.9 ಕಿ.ಮೀ. ವರೆಗೆ ಆಯ್ದ ಭಾಗಗಳ ಅಭಿವೃದ್ಧಿಯನ್ನೂ, ಭಾಗಮಂಡಲ–ತಲಕಾವೇರಿ ರಸ್ತೆಯ ಆರಂಭದಿಂದ 8.0 ಕಿ.ಮೀ. ವರೆಗೆ, ಹಾನಗಲ್–ತಲ್ತಾರೆ–ಶೆಟ್ಟಹಳ್ಳಿ–ತಾಕೇರಿ–ಗರವಾಲೆ ರಸ್ತೆಯ 16.2 ಕಿ.ಮೀ. ನಿಂದ 18.2 ಕಿ.ಮೀ. ವರೆಗೆ, ಚಿರನಾಟಿ–ಹರಕಟಗೇರಿ ರಸ್ತೆಯ 2.0 ಕಿ.ಮೀ. ನಿಂದ 6.0 ಕಿ.ಮೀ. ವರೆಗೆ, ಟಿ. ಶೆಟ್ಟಗೇರಿ–ಬೀರಗ– ಇರಪು ದೇವಾಲಯ ರಸ್ತೆ 1.2 ಕಿ.ಮೀ. ನಿಂದ 4.15ಕಿ.ಮೀ. ವರೆಗೆ, ಸೋಮವಾರಪೇಟೆ–ಶಾಂತಳ್ಳಿ–ಕುಂದಳ್ಳಿ ರಸ್ತೆಯ 15.0 ಕಿ.ಮೀ. ನಿಂದ 16.3 ಕಿ.ಮೀ. ವರೆಗೆ, ಅಭಿವೃದ್ಧಿಪಡಿಸಲು ಆಯ–ವ್ಯಯ ಪಟ್ಟಿಗೆ ಸೇರಿಸಲು ಉದ್ದೇಶಿಸಲಾಗಿದೆ.

## ಜಿಲ್ಲಾ ಅಭಿವೃದ್ಧಿ ಯೋಜನೆ ಮತ್ತು ಪ್ರಗತಿ

ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಆಧೀನದಲ್ಲಿದ್ದ ಅಭಿವೃದ್ಧಿ ಯೋಜನೆಗಳೆಲ್ಲವೂ 1987 ರ ಫೆಬ್ರವರಿ ಅಂತ್ಯದ ವೇಳೆಗೆ ಜಿಲ್ಲಾ ಪರಿಷತ್ ವ್ಯಾಪ್ತಿಗೊಳಪಟ್ಟವು. ಕೊಡಗು ಜಿಲ್ಲಾ ಪರಿಷತ್ 1988-89 ಮತ್ತು 1989-90 ರಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಮತ್ತು ಅವುಗಳ ಪ್ರಗತಿಯ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಕೊಡಲಾಗಿದೆ. ಮಹಿಶೀರ್ ಮೀನು ಅಭಿವೃದ್ಧಿ ಯೋಜನೆಯನ್ನು ಹಾರಂಗಿಯಲ್ಲಿ ಕಾರ್ಯಗತಗೊಳಿಸಲು ಐದು ವರ್ಷಗಳ ಅವಧಿಗೆ ರೂ. 73 ಲಕ್ಷ ವೆಚ್ಚ ಮಾಡುವ ಗುರಿಯನ್ನು ಹೊಂದಿದ್ದು ಸುಮಾರು ರೂ. 30 ಲಕ್ಷ ವೆಚ್ಚ ಮಾಡಲಾಗಿದೆ. ಹಲವಾರು ವರ್ಷಗಳಿಂದ ಸ್ಥಗಿತಗೊಂಡಿದ್ದ ಪೊನ್ನಂಪೇಟೆಯ ಕ್ಷೀರಶೀತಲ ಘಟಕವನ್ನು ಪುನಶ್ಚೇತನಗೊಳಿಸಿ ಕಾರ್ಯಾರಂಭ ಮಾಡುವಂತೆ ಮಾಡಲಾಗಿದೆ. ಶನಿವಾರಸಂತೆ ಮತ್ತು ಕುಶಾಲನಗರ ಆಸ್ಪತ್ರೆಗಳಲ್ಲಿ ಕ್ಷ–ಕಿರಣ ಯಂತ್ರಗಳನ್ನು ಜೋಡಿಸಲಾಗಿದೆ. ಮಡಿಕೇಬೀಡಿನಲ್ಲಿ ಇರುವ ಹಾಟರಿ ಕೇಂದ್ರವನ್ನು ಪುನಶ್ಚೇತನಗೊಳಿಸಲಾಗಿದೆ. ಜಿಲ್ಲೆಯ ಮೂರು ತಾಲೂಕುಗಳಲ್ಲಿಯೂ ಮಿನಿ ಕ್ರೀಡಾಂಗಣಗಳಿಗೆ ಮಂಜೂರಾತಿ ನೀಡಿದ್ದು ಕೆಲಸ ಪ್ರಗತಿ ಪಥದಲ್ಲಿದೆ. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಗೆ 1988–89 ಮತ್ತು 1989–90ರಲ್ಲಿ ಅನುಕ್ರಮವಾಗಿ ರೂ. 68.81 ಲಕ್ಷ ಮತ್ತು ರೂ. 78.85 ಲಕ್ಷ ವೆಚ್ಚ ಮಾಡಿ ಸಣ್ಣ ನೀರಾವರಿ, ಅರಣ್ಯ, ಮೀನು ಸಾಕಣೆ, ತೋಟಗಾರಿಕೆ, ಪಶುಪಾಲನೆ, ರೇಷ್ಮೆ , ಕೈಗಾರಿಕೆ, ಕಾಲುಸೇತುವೆ, ಇತ್ಯಾದಿ ಅಭಿವೃದ್ಧಿ ಕಾರ್ಯಗಳ ಪ್ರಗತಿ ಸಾಧಿಸಲಾಗಿದೆ. ಇವುಗಳ ಪೈಕಿ 1987–88ರಲ್ಲಿ 36 ಕಾಲು ಸೇತುವೆಗಳಿಗೆ ರೂ. 2.13 ಲಕ್ಷ ಖರ್ಚು ಮಾಡಿದ್ದು, 8 ಕಾಲು ಸೇತುವೆಗಳು ಪೂರ್ಣಗೊಂಡವು ಹಾಗೂ 28 ಕಾಲು ಸೇತುವೆಗಳು ಮುಕ್ತಾಯದ ವಿವಿಧ ಹಂತದಲ್ಲಿದ್ದವು. 1988-89ರಲ್ಲಿ 38 ಕಾಲು ಸೇತುವೆಗಳಿಗೆ ರೂ. 20.98 ಲಕ್ಷ ಮಂಜೂರಾತಿ ನೀಡಲಾಗಿತ್ತು. ಇದರ ಪೈಕಿ 20 ಕಾಲು ಸೇತುವೆಗಳಿಗೆ ರೂ. 8 ಲಕ್ಷ ಖರ್ಚು ಮಾಡಿದ್ದು 5 ಕಾಲು ಸೇತುವೆಗಳನ್ನು ಪೂರ್ಣಗೊಳಿಸಲಾಯಿತು ಮತ್ತು 15 ಕಾಲು ಸೇತುವೆಗಳು ಮುಕ್ತಾಯದ ವಿವಿಧ ಹಂತದಲ್ಲಿದ್ದವು. 1989–90ರಲ್ಲಿ 11 ಕಾಲುಸೇತುವೆಗಳಿಗೆ ರೂ. 11.72 ಲಕ್ಷ ವೆಚ್ಚ ಮಾಡಲು ಮಂಜೂರಾತಿ ನೀಡಿ ಕಾಲುಸೇತುವೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿತ್ತು. ಜಿಲ್ಲೆಯ ಭಾಗಮಂಡಲ, ಮಡಿಕೇರಿ ಮತ್ತು ಮಾಯಮುಡಿ ಗ್ರಾಮಗಳಲ್ಲಿ ಮೂರು ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಕೆಲಸ ಪೂರ್ಣಗೊಳಿಸಲಾಗಿದೆ. 1989–90ರಲ್ಲಿ ಇನ್ನೂ ಐದು ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ ಕಟ್ಟಡ ಕಟ್ಟಲು ಮಂಜೂರಾತಿ ಪಡೆಯಲಾಗಿತ್ತು.

ಜಿಲ್ಲೆಯ ವಿವಿಧ ಅಭಿವೃದ್ಧಿ ಯೋಜನೆಗಳಿಗೆ 1988-89 ಮತ್ತು 1989-90ರಲ್ಲಿ ಮಾಡಿದ ವೆಚ್ಚ ಅನುಕ್ರಮವಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ರೂ. 46.12 ಲಕ್ಷ ಮತ್ತು 86.82 ಲಕ್ಷ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ರೂ. 20.98 ಲಕ್ಷ ಮತ್ತು ರೂ. 107.55 ಲಕ್ಷ, ಅಂತ್ಯೋದಯ ಯೋಜನೆ ರೂ. 1.297ಲಕ್ಷ ಮತ್ತು ರೂ. 2.00 ಲಕ್ಷ, ನೂರು ಬಾವಿ ಯೋಜನೆ ರೂ. 6.23 ಲಕ್ಷ ಮತ್ತು ರೂ. 12 ಲಕ್ಷ, ಜೈವಿಕ ಅನಿಲಸ್ಥಾವರ ಯೋಜನೆ ರೂ. 6.87 ಲಕ್ಷ ಮತ್ತು ರೂ. 11 ಲಕ್ಷ,

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ರೂ. 72.54 ಲಕ್ಷ ಮತ್ತು ರೂ. 141.17 ಲಕ್ಷ.

1982 ರ ಅಂತ್ಯದವರೆಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಅಭಿವೃದ್ಧಿ ಯೋಜನೆಯಡಿಯಲ್ಲಿ ಒಟ್ಟು ರೂ. 30,000 ವೆಚ್ಚ ಮಾಡಿ 4,06,465 ಮಾನವ ದಿನಗಳನ್ನು ಸೃಷ್ಟಿಸಲಾಯಿತು. ರಾಷ್ಟ್ರೀಯ ಉದ್ಯೋಗ ಯೋಜನೆ ಮತ್ತು ಗ್ರಾಮಾಂತರ ಉದ್ಯೋಗ ಭರವಸೆ ಯೋಜನೆ ಇವುಗಳ ಹೆಸರನ್ನು ಇತ್ತೀಚೆಗೆ ಬದಲಾಯಿಸಿ ಜವಾಹರ್ ರೋಜ್‌ಗಾರ್ ಯೋಜನೆಯೆಂದು ಕರೆಯಲಾಗುತ್ತಿದೆ. ಈ ಯೋಜನೆಯಡಿಯಲ್ಲಿ 1988-89 ಮತ್ತು 1989-90ರ ಕಾಲಾವಧಿಯಲ್ಲಿ ಗ್ರಾಮೀಣ ಜನರಿಗೆ ನಿಗದಿಪಡಿಸಿದ್ದ ಕಾಮಗಾರಿಗಳ ಸಂಖ್ಯೆಯು ಅನುಕ್ರಮವಾಗಿ 540 ಮತ್ತು 1,660. ಪ್ರತೀ ಸಾಲಿನ ಮಾರ್ಚ್ ಅಂತ್ಯದ ವೇಳೆಗೆ ಆದ ವೆಚ್ಚ ಮತ್ತು ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆಯು ಅನುಕ್ರಮವಾಗಿ ರೂ. 91.81 ಲಕ್ಷ ಮತ್ತು 359, ಹಾಗೂ ರೂ. 110.10 ಲಕ್ಷ ಮತ್ತು 957. ಇದೇ ಕಾಲಾವಧಿಯಲ್ಲಿ ಉತ್ಪತ್ತಿಯಾದ ಮಾನವ ದಿನಗಳ ಸಂಖ್ಯೆಯು ಅನುಕ್ರಮವಾಗಿ 4,682 ಮತ್ತು 5.50 ಲಕ್ಷ.

ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ 1988-89 ಮತ್ತು 1989-90 ರ ಕಾಲಾವಧಿಯಲ್ಲಿ ಧನಸಹಾಯದ ಫಲಾನುಭವಿಗಳ ಗುರಿಯು ಅನುಕ್ರಮವಾಗಿ 3,474 ಮತ್ತು 3,381 ಆಗಿದ್ದು, ಆಯಾ ಸಾಲಿನ ಮಾರ್ಚ್ ಅಂತ್ಯದ ವೇಳೆಗೆ ಆದ ಸಾಧನೆ ಅನುಕ್ರಮವಾಗಿ 3,122 (89.86 ಶೇ.) ಮತ್ತು 3,415 (101 ಶೇ.). ಇದೇ ಕಾಲಾವಧಿಯಲ್ಲಿ ನಿಗದಿ ಪಡಿಸಲಾಗಿದ್ದ ಆರ್ಥಿಕ ಗುರಿ ರೂ. 24.97 ಲಕ್ಷ ಮತ್ತು ರೂ. 65.134 ಲಕ್ಷ; ಆದ ಸಾಧನೆಯು ಅನುಕ್ರಮವಾಗಿ ರೂ. 46.77 ಲಕ್ಷ ಮತ್ತು ರೂ. 64.854 ಲಕ್ಷ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಅಂತ್ಯೋದಯ ಯೋಜನೆಯಲ್ಲಿ ತೆಗೆದುಕೊಳ್ಳುವ ಎಲ್ಲಾ ಜಾನುವಾರುಗಳಿಗೂ ಸರಕಾರದ ವತಿಯಿಂದ ಜೀವವಿಮೆ ಮಾಡಲಾಗಿದೆ. ಆರ್ಥಿಕವಾಗಿ ಹಿಂದುಳಿದ ಬಡವರನ್ನು ಬಡತನದ ರೇಖೆಯಿಂದ ಮೇಲೆ ತರುವ ಉದ್ದೇಶದಿಂದ ಅಂತ್ಯೋದಯ ಯೋಜನೆಯನ್ನು ಜಿಲ್ಲೆಯ ಮೂರು ತಾಲೂಕುಗಳಲ್ಲೂ ಕಾರ್ಯಗತಗೊಳಿಸಲಾಗಿದ್ದು 1988–89 ಸಾಲಿನಲ್ಲಿ ನಿಗದಿತ ಗುರಿ 106ಕ್ಕೆ ಬದಲಾಗಿ 79 ಫಲಾನುಭವಿಗಳಿಗೆ ರೂ. 1,297 ಲಕ್ಷ ಸಹಾಯಧನವನ್ನು ಮತ್ತು 1989–90ನೇ ಸಾಲಿನಲ್ಲಿ ನಿಗದಿತ ಗುರಿ 200ಕ್ಕೆ ಬದಲಾಗಿ 225 ಫಲಾನುಭವಿಗಳಿಗೆ ರೂ. 2.25 ಲಕ್ಷ ಸಹಾಯ ಧನವನ್ನು ನೀಡಲಾಗಿದೆ.

ನೂರು ಬಾವಿ ಯೋಜನೆಯ ಕಾರ್ಯಕ್ರಮದಡಿಯಲ್ಲಿ 1988-89ನೇ ಸಾಲಿನಲ್ಲಿ 205 ಬಾವಿಗಳು ಮತ್ತು ರೂ. 7.175ಲಕ್ಷ ವೆಚ್ಚದಗುರಿಯನ್ನು ನಿಗದಿಪಡಿಸಲಾಗಿದ್ದು 191 (93.18 ಶೇ.) ಬಾವಿಗಳನ್ನು ರೂ. 6.232 ಲಕ್ಷ (86.85 ಶೇ.) ವೆಚ್ಚದಲ್ಲಿ ಪೂರ್ಣಗೊಳಿಸಲಾಯಿತು. 1989-90ನೇ ಸಾಲಿನಲ್ಲಿ 240 ಬಾವಿಗಳನ್ನು ರೂ. 12 ಲಕ್ಷ ವೆಚ್ಚದಲ್ಲಿ ನಿರ್ಮಿಸುವ ಗುರಿಯನ್ನು ಹೊಂದಿದ್ದು, 194 (81 ಶೇ.) ಬಾವಿಗಳನ್ನು ರೂ. 6.778 ಲಕ್ಷ (57 ಶೇ.) ವೆಚ್ಚದಲ್ಲಿ ಪೂರ್ಣಗೊಳಿಸಲಾಯಿತು.

ಜೈವಿಕ ಅನಿಲ ಸ್ಥಾವರಕ್ಕೆ ಸಂಬಂಧಿಸಿದಂತೆ 1988–89 ರಲ್ಲಿ 225 ಅನಿಲ ಸ್ಥಾವರವನ್ನು ಸ್ಥಾಪಿಸುವ ಗುರಿಯನ್ನು ಹೊಂದಿದ್ದು, ಈ ಸಾಲಿನ ಅಂತ್ಯದ ವೇಳೆಗೆ ರೂ. 6.87 ಲಕ್ಷ ಸಹಾಯಧನದ ನೆರವನ್ನು ಪಡೆದು 124 ಅನಿಲ ಸ್ಥಾವರಗಳನ್ನು ಪೂರ್ಣಗೊಳಿಸಲಾಯಿತು. 1989–90ನೇ ಸಾಲಿನಲ್ಲಿ 425 ಅನಿಲ ಸ್ಥಾವರಗಳ ಗುರಿಯನ್ನು ಹೊಂದಿದ್ದು ವರ್ಷದ ಅಂತ್ಯದ ವೇಳೆಗೆ ರೂ. 6.37 ಲಕ್ಷ ಸಹಾಯಧನದ ನೆರವನ್ನು ಪಡೆದು 120 ಅನಿಲ ಸ್ಥಾವರಗಳನ್ನು ಪೂರ್ಣಗೊಳಿಸಲಾಯಿತು.

ಪ. ಜಾತಿ, ಪ. ವರ್ಗದ ಜನತಾ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ 1988–89ರಲ್ಲಿ ರೂ. 20.65 ಲಕ್ಷ ವೆಚ್ಚದಲ್ಲಿ 860 ಮನೆಗಳ ನಿರ್ಮಾಣದ ಗುರಿಯಿದ್ದು, ವರ್ಷದ ಅಂತ್ಯದ ವೇಳೆಗೆ ರೂ. 10.93 ಲಕ್ಷ ವೆಚ್ಚದಲ್ಲಿ 550 (64 ಶೇ.) ಮನೆಗಳನ್ನು ನಿರ್ಮಾಣ ಮಾಡಲಾಗಿದೆ. 1988-89ರ ಕಾರ್ಯಕ್ರಮದಂತೆ ಬಾಕಿ ಉಳಿದ ಮನೆಗಳಲ್ಲಿ ಹುಡ್ಕೋ ಮನೆಗಳು 767, ವಿಶೇಷ ಘಟಕ ಯೋಜನೆಯ ಮನೆಗಳು 157, ಮತ್ತು ಪರಿಶಿಷ್ಟ ವರ್ಗದವರಿಗೆ ಉಪ ಯೋಜನೆಯ ಮನೆಗಳು 109, ಒಟ್ಟು 1,322 ಮನೆಗಳನ್ನು 1989-90ರಲ್ಲಿ ಪೂರ್ಣಗೊಳಿಸಲಾಗಿದೆ.

ಜಿಲ್ಲೆಯ ಶಿಕ್ಷಣಾಭಿವೃದ್ಧಿಗಾಗಿ 1988-89ರ ಯೋಜನೆಯಲ್ಲಿ ರೂ. 42.99 ಲಕ್ಷ, ಯೋಜನೇತರದಲ್ಲಿ ರೂ. 676 ಲಕ್ಷ ನೀಡಲಾಗಿದ್ದು, ಯೋಜನೆಯಲ್ಲಿ ರೂ. 41.21 ಲಕ್ಷ ಮತ್ತು ಯೋಜನೇತರದಲ್ಲಿ ರೂ. 624 ಲಕ್ಷ ಖರ್ಚು ಮಾಡಲಾಗಿದೆ. 1989.90ರ ಯೋಜನೆಯಲ್ಲಿ ರೂ. 43.15

ಲಕ್ಷ, ಯೋಜನೇತರದಲ್ಲಿ ರೂ.719.34ಲಕ್ಷ ನೀಡಲಾಗಿದ್ದು, ಯೋಜನೆಯಲ್ಲಿ ರೂ. 63.16 ಲಕ್ಷ ಮತ್ತು ಯೋಜನೇತರದಲ್ಲಿ ರೂ. 703.88 ಲಕ್ಷ ಖರ್ಚು ಮಾಡಲಾಗಿದೆ. ಶಾಲೆಗಳಿಗೆ ಹೆಚ್ಚಿನ ಕೊಠಡಿ, ಉಪಕರಣ ಮತ್ತು ಅಧ್ಯಾಪಕರನ್ನು ಒದಗಿಸುವ ಆಪರೇಷನ್ ಬ್ಲಾಕ್ ಬೋರ್ಡ್ (ಕರಿಹಲಗೆ) ಯೋಜನೆ ಇವುಗಳಿಗಾಗಿ ಸರ್ಕಾರದಿಂದ 1988-89 ಮತ್ತು 1989-90 ಸಾಲಿಗೆ ಅನುಕ್ರಮವಾಗಿ ರೂ. 3.44 ಲಕ್ಷ ಮತ್ತು ರೂ. 13 ಲಕ್ಷ ಮಂಜೂರಾತಿ ದೊರತಿದೆ. ವಯಸ್ಕರ ಶಿಕ್ಷಣಕ್ಕಾಗಿ 1988-89ರಲ್ಲಿ ರೂ. 14.13 ಲಕ್ಷ ಮಂಜೂರಾತಿ ದೊರಕಿದ್ದು, ವರ್ಷದ ಅಂತ್ಯದ ವೇಳೆಗೆ ರೂ. 13.72 ಲಕ್ಷ ಖರ್ಚಾಗಿದ್ದು ಜಿಲ್ಲೆಯ 300 ಶಿಕ್ಷಣ ಕೇಂದ್ರಗಳಲ್ಲಿ 7,522 ವಯಸ್ಕರು ಇದರಿಂದ ಪ್ರಯೋಜನ ಪಡೆದಿದ್ದರು. 1989-90ನೇಯ ಸಾಲಿನಲ್ಲಿ ರೂ. 20.33 ಲಕ್ಷ ವೆಚ್ಚಕ್ಕೆ ಮಂಜೂರಾತಿ ದೊರಕಿದ್ದು ವರ್ಷದ ಅಂತ್ಯದ ವೇಳೆಗೆ ರೂ. 16.21 ಲಕ್ಷ ಖರ್ಚಾಗಿದ್ದು, 500 ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ 11,796 ವಯಸ್ಕರು ಪ್ರಯೋಜನ ಪಡೆದಿದ್ದರು.

'ಅಸ್ತ್ರ' ಒಲೆ ಯೋಜನೆಯಡಿಯಲ್ಲಿ 1988-89ರ ಸಾಲಿನಲ್ಲಿ 2,000 ಅಸ್ತ್ರ ಒಲೆಗಳ ನಿರ್ಮಾಣದ ಗುರಿಯಿದ್ದು ವರ್ಷಾಂತ್ಯದಲ್ಲಿ 700 ಒಲೆಗಳು ನಿರ್ಮಾಣಗೊಂಡಿದ್ದವು. ಇದಕ್ಕಾಗಿ ಮಂಜೂರಾಗಿದ್ದ ರೂ. 1.50 ಲಕ್ಷದಲ್ಲಿ ರೂ. 0.718 ಲಕ್ಷ ವೆಚ್ಚ ಮಾಡಲಾಗಿದೆ. 1989-90ನೇ ಸಾಲಿನಲ್ಲಿದ್ದ 2,000 ಅಸ್ತ್ರ ಒಲೆಗಳ ನಿರ್ಮಾಣದ ಗುರಿಯ ಪೈಕಿ 1,600 ಅಸ್ತ್ರ ಒಲೆಗಳ ನಿರ್ಮಾಣ ಕಾರ್ಯವಾಗಿದೆ. ಇದಕ್ಕಾಗಿ ಮಂಜೂರಾಗಿದ್ದ ರೂ. 75 ಸಾವಿರಕ್ಕೆ ಬದಲಾಗಿ ರೂ. 1.44 ಲಕ್ಷ ಖರ್ಚು ಮಾಡಲಾಗಿದೆ. ಅಭಾವ ಪರಿಹಾರ ಯೋಜನೆಯಡಿಯ ಕಾಮಗಾರಿಗಳಿಗೆ 1988-89ರಲ್ಲಿ ರೂ. 5.80 ಲಕ್ಷ ವೆಚ್ಚದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇದೇ ಕಾಲಾವಧಿಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ರೂ. 4.47 ಲಕ್ಷ ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ. 1989-90ರಲ್ಲಿ ರೂ. 24.66 ಲಕ್ಷ ವೆಚ್ಚದಲ್ಲಿ ರಸ್ತೆ, ಸೇತುವೆ, ಕಾಮಗಾರಿಗಳನ್ನು, ರೂ. 6.25ಲಕ್ಷ ವೆಚ್ಚದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

1990-91ನೇ ಸಾಲಿಗೆ ಜಿಲ್ಲಾ ಯೋಜನೆಗೋಸ್ಕರ ಒಟ್ಟು ರೂ. 10.64 ಕೋಟಿ ಬಿಡುಗಡೆ ಮಾಡಲಾಗಿತ್ತು. ಈ ಒಟ್ಟು ಮೊಬಲಗಿನ ಪೈಕಿ ರೂ. 5.65 ಕೋಟಿ ರಾಜ್ಯ ಸರ್ಕಾರದ ದೇಣಿಗೆಯಾದರೆ ರೂ. 4.99 ಕೋಟಿ ಕೇಂದ್ರ ಸರ್ಕಾರದ ದೇಣಿಗೆಯಾಗಿರುತ್ತದೆ. ಗಿರಿಜನ ಉಪಯೋಜನೆ, ಗ್ರಾಮೀಣ ಅಭಿವೃದ್ಧಿಯ ವಿಶೇಷ ಕಾರ್ಯಕ್ರಮಗಳು, ಜವಾಹರ್‌ರೋಜ್‌ಗಾರ್ ಯೋಜನೆ ಮತ್ತು ಪಶ್ಚಿಮಘಟ್ಟಗಳ ಪ್ರದೇಶದ ಸುಸಂಘಟಿತ ಅಭಿವೃದ್ಧಿಗಾಗಿ ಜಿಲ್ಲಾ ಯೋಜನೆಯಲ್ಲಿ ಸುಮಾರು ಶೇ. 60 ರಷ್ಟು ಹಣವನ್ನು ಖರ್ಚು ಮಾಡಲಾಗಿದೆ.

### ಬಡತನ ನಿವಾರಣೆ

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಬಡವರ ಅಭಿವೃದ್ಧಿಗಾಗಿ ಗ್ರಾಮೀಣ ಅಭಿವೃದ್ಧಿ ಯೋಜನೆ, ಅಂತ್ಯೋದಯ ಯೋಜನೆ, 100 ಬಾವಿಗಳ ಯೋಜನೆ, ಟ್ರೈಸಂ ಯೋಜನೆ, ಗಂಗಾ ಕಲ್ಯಾಣ ಯೋಜನೆ ಮತ್ತು ಜವಾಹರ್‌ರೋಜ್‌ಗಾರ್ ಯೋಜನೆ ಇವುಗಳಿಗೆ ಆದ್ಯತೆ ದೊರಕಿದ್ದು, ಪ್ರಸ್ತುತ ಸಾಲಿನಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ 2,576 ಜನರು, ಅಂತ್ಯೋದಯ ಯೋಜನೆಯಡಿಯಲ್ಲಿ 164ಜನರು, 100 ಬಾವಿ ಯೋಜನೆಯಡಿಯಲ್ಲಿ 151 ಜನರು, ಟ್ರೈಸಂ ಯೋಜನೆಯಡಿಯಲ್ಲಿ 240 ಜನರು ಪ್ರಯೋಜನ ಪಡೆದಿದ್ದಾರೆ. ಜವಾಹರ್‌ರೋಜ್‌ಗಾರ್ ಯೋಜನೆಯಡಿಯಲ್ಲಿ 6.4 ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದ್ದು 341.4 ಟನ್ ಆಹಾರ ಧಾನ್ಯಗಳನ್ನು ಉಪಯೋಗಿಸಲಾಗಿದೆ. ಇದೇ ಸಾಲಿನಲ್ಲಿ ಒಟ್ಟು 59 ಕುಡಿಯುವ ನೀರಿನ ಬಾವಿಗಳನ್ನು ತೋಡಿದೆ. ಇದುವರೆಗೆ 4,151 ಮನೆ ನಿವೇಶನಗಳನ್ನು ಹಂಚಲಾಗಿದ್ದು, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 63 ಮನೆಗಳನ್ನು ಕಟ್ಟಿಸಿಕೊಡಲಾಗಿದೆ. 59 ಜೈವಿಕ ಅನಿಲ ಯಂತ್ರಗಳನ್ನು, 155 ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿರುವುದರ ಜೊತೆಗೆ 9 ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದೆ.

ವಿಶೇಷ ಘಟಕ ಯೋಜನೆಯಡಿಯಲ್ಲಿ ಜನಾರೋಗ್ಯ ಇಲಾಖೆಯಿಂದ 9 ಕೊಳವೆ ಬಾವಿಗಳು ಮತ್ತು 1 ಕಿರು ನೀರು ಸರಬರಾಜು, ಗ್ರಾಮೀಣ ವಸತಿಯಿಂದ 44 ಜನರಿಗೆ, ಕೃಷಿ ಇಲಾಖೆಯಿಂದ 174 ಜನರಿಗೆ, ಪಶುಸಂಗೋಪನಾ ಇಲಾಖೆಯಿಂದ 16 ಜನರಿಗೆ, ಸಹಕಾರ ಇಲಾಖೆಯಿಂದ 5 ಜನರಿಗೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ 30 ಜನರಿಗೆ, ರೇಷ್ಮೆ ಇಲಾಖೆಯಿಂದ 144 ಜನರಿಗೆ ಸೌಲಭ್ಯವನ್ನೊದಗಿಸಿರುವುದರ ಜೊತೆಗೆ, ಸಣ್ಣ ನೀರಾವರಿಯಿಂದ 2 ಘಟಕಗಳನ್ನು ನಿರ್ಮಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆ

ಯಿಂದ 42 ಜನರಿಗೆ ಎತ್ತುಗಳನ್ನು ಸರಬರಾಜು ಮಾಡಲಾಗಿದೆ. ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದಿಂದ 82 ಕಿ.ಮೀ. ಉದ್ದದ ರಸ್ತೆ ನಿರ್ಮಿಸಲಾಗಿದೆ. ಅರಣ್ಯ ಇಲಾಖೆಯಿಂದ 14.80 ಹೆ.ಗಳಲ್ಲಿ, ತೋಟಗಾರಿಕೆ ಇಲಾಖೆಯಿಂದ 135 ಹೆ.ಗಳಲ್ಲಿ ಅಭಿವೃದ್ಧಿ ಪಡಿಸಲಾಗಿದ್ದು, ಈ ವಿಶೇಷ ಘಟಕ ಯೋಜನೆಯಡಿಯಲ್ಲಿ ಒಟ್ಟು 30.23 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಸಮಾಜ ಕಲ್ಯಾಣ ಯೋಜನೆಯಡಿಯಲ್ಲಿ ಹೊಲಿಗೆ ಯಂತ್ರಗಳು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಯೋಗ್ಯತಾ ಪ್ರಶಸ್ತಿ, ವಸತಿ ಶಾಲೆಗಳು, ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು, ಪರಿಶಿಷ್ಟ ಜಾತಿಯ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಮಗ್ರಿ ಪೂರೈಕೆ, ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ವೇತನ, ಅಸ್ಪೃಶ್ಯತಾ ನಿವಾರಣಾ ಯೋಜನೆ, ಆಶ್ರಮಶಾಲೆ ಹಾಗೂ ಪರಿಶಿಷ್ಟ ಜಾತಿಯ ಬಾಲಕಿಯರ ವಸತಿ ಗೃಹಗಳಿಗಾಗಿ ಒಟ್ಟು 15.21 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೆಟ್ರಿಕ್‌ಪೂರ್ವ ಮತ್ತು ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿದ್ಯಾರ್ಥಿ ನಿಲಯಗಳ ನಿರ್ವಹಣೆ ಮತ್ತು ಸುಧಾರಣೆ, ಸ್ವಯಂಭೋಧನಾ ಕೇಂದ್ರಗಳ ನಿರ್ವಹಣೆ, ಆಟದ ಸಾಮಾನುಗಳ ಸರಬರಾಜು, ಪುಸ್ತಕ ಬ್ಯಾಂಕ್ ಸ್ಥಾಪನೆ, ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮೊದಲಾದವುಗಳಿಗೆ ಪ್ರಸ್ತುತ ಸಾಲಿನಲ್ಲಿ ಒಟ್ಟು 52 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದ್ದು ಒಟ್ಟು 2,943 ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ವೃತ್ತಿ ತರಬೇತಿ ಪಡೆಯುವ 12 ಜನ ಬಡಮಹಿಳೆಯರಿಗೆ ಸಹಾಯ ಧನ ನೀಡಿಕೆ, ಉದ್ಯೋಗಸ್ಥ ಮಹಿಳೆಯರ ಶಿಶುಪಾಲನಾ ಕೇಂದ್ರಗಳ ನಿರ್ವಹಣೆ, ನಿರ್ಗತಿಕ ಮಕ್ಕಳ ಪಾಲನಾಗೃಹ ನಿರ್ವಹಣೆ ಮೊದಲಾದವುಗಳ ಜೊತೆಗೆ 22 ಫಲಾನುಭವಿಗಳಿಗೆ ಗೃಹಕಲ್ಯಾಣ ಯೋಜನೆಯಡಿಯಲ್ಲಿ ಸಹಾಯಧನ ನೀಡಲಾಗಿದೆ. 81 ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, 7,964 ಜನರಿಗೆ ವಿಧವಾ ವೇತನ, 3,893 ಜನರಿಗೆ ಅಂಗವಿಕಲ ವೇತನ ಮತ್ತು 14,116 ಜನರಿಗೆ ವೃದ್ಧಾಪ್ಯವೇತನವನ್ನು ಕಂದಾಯ ಇಲಾಖೆಯ ಮೂಲಕ ನೀಡಲಾಗಿದೆ. ಸಮಗ್ರ ಬಾಲವಿಕಾಸ ಯೋಜನೆಯಡಿಯಲ್ಲಿ ಒಟ್ಟು 559 ಅಂಗನವಾಡಿ ಕೇಂದ್ರಗಳಿದ್ದು, ಅವುಗಳ ಮೂಲಕ ಮಕ್ಕಳಿಗೆ, ಗರ್ಭಿಣಿಯರಿಗೆ, ಬಾಣಂತಿಯರಿಗೆ ಪೌಷ್ಟಿಕ ಆಹಾರವನ್ನು ವಿತರಣೆ ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳಕಲ್ಯಾಣಕ್ಕೋಸ್ಕರ ಯೋಜನೆ ಮತ್ತು ಯೋಜನೇತರ ಬಾಬಿನಿಂದ ಒಟ್ಟು 87 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯ ಪಟ್ಟಿ :

| ಕ್ರ.ಸಂ. | ವಿಷಯ | ಘಟಕ | 1970-71 | 1980-81 | 1990-91 |
|---|---|---|---|---|---|
| 1 | 2 | 3 | 4 | 5 | 6 |
| 1. | ಜನಸಾಂದ್ರತೆ (ಚ.ಕಿ.ಮೀ.ಗೆ) | ಸಂಖ್ಯೆ | 93 | 113 | 118 |
| 2. | ದಶಕದ ಜನಸಂಖ್ಯೆ ಬೆಳವಣಿಗೆ | ಶೇ. | 40.72 | 22.10 | 5.05 |
| 3. | ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಜನತೆ | ಶೇ. | 84.48 | 84.63 | 83.96 |
| 4. | ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು. | ಶೇ. | 16.80 | 18.61 | ಲಭ್ಯವಿಲ್ಲ |
| 5. | ಒಟ್ಟು ಜನಸಂಖ್ಯೆಯಲ್ಲಿ ಕೆಲಸಗಾರರು | ಶೇ. | 40.40 | 47.18 | ಲಭ್ಯವಿಲ್ಲ |
| 6. | ಒಟ್ಟು ಕೆಲಸಗಾರರಲ್ಲಿ ವ್ಯವಸಾಯದಲ್ಲಿ ತೊಡಗಿರುವವರು | ಶೇ. | 7.94 | 22.37 | ಲಭ್ಯವಿಲ್ಲ |

| 1 | 2 | 3 | 4 | 5 | 6 |
|---|---|---|---|---|---|
| 7. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಅರಣ್ಯ ಪ್ರದೇಶ | ಶೇ. | 33.00 | 33.00 | 33.00 |
| 8. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಒಟ್ಟು ಬಿತ್ತನೆ ಪ್ರದೇಶ | ಶೇ. | 33.58 | 34.47 | 36.69 |
| 9. | ಒಟ್ಟು ಬಿತ್ತನೆ ಪ್ರದೇಶದಲ್ಲಿ ನಿವ್ವಳ ಬಿತ್ತನೆ ಪ್ರದೇಶ | ಶೇ. | 89.80 | 99 18 | 97.98 |
| 10. | ತಲಾ ಬಿತ್ತನೆಯಾದ ಪ್ರದೇಶ | ಹೆ. | 0.32 | 0.30 | 0.30 |
| 11. | ವ್ಯವಸಾಯಗಾರರಲ್ಲಿ ತಲಾ ಬಿತ್ತನೆಯಾದ ಪ್ರದೇಶ | ಹೆ. | 3.47 | 2.91 | 3.11 |
| 12. | ನಿವ್ವಳ ಬಿತ್ತನೆ ಪ್ರದೇಶದಲ್ಲಿ ನಿವ್ವಳ ನೀರಾವರಿಯಾದ ಪ್ರದೇಶ | ಶೇ. | 7.72 | 2.30 | 2.83 |
| 13. | ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಒಟ್ಟು ನೀರಾವರಿ ಯಾದ ಪ್ರದೇಶ | ಶೇ. | 7.52 | 2.40 | 3.90 |
| 14. | ಒಟ್ಟು ಬಿತ್ತನೆಯಲ್ಲಿ ಅಧಿಕ ಇಳುವರಿ ತಳಿಗಳ ಪ್ರದೇಶ | ಶೇ. | 10.25 | 18.17 | 19.86 |
| 15. | ಒಟ್ಟು ಬಿತ್ತನೆಯಲ್ಲಿ ಏಕದಳ ದಾನ್ಯಗಳ ಪ್ರದೇಶ | ಶೇ. | 40.23 | 32.36 | 31.17 |
| 16. | ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ದ್ವಿದಳ ಧಾನ್ಯಗಳ ಪ್ರದೇಶ | ಶೇ. | 1.76 | 0.65 | 0.64 |
| 17. | ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಎಣ್ಣೆ ಕಾಳುಗಳ ಪ್ರದೇಶ | ಶೇ. | 0.20 | 0.04 | 0.06 |
| 18. | ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಕಾಫಿ ಬೆಳೆಯ ಪ್ರದೇಶ | ಶೇ. | ಲಭ್ಯವಿಲ್ಲ | 49.00 | 49.27 |
| 19. | ಅಕ್ಕಿಯ ಉತ್ಪತ್ತಿ ಹೆ.ಗೆ | ಕೆ.ಜಿ.ಗಳಲ್ಲಿ | 1,726 | 2,176 | 2,143 |
| 20. | ರಾಗಿಯ ಉತ್ಪತ್ತಿ ಹೆ.ಗೆ | ಕೆ.ಜಿ.ಗಳಲ್ಲಿ | 1,036 | 1,017 | ಲಭ್ಯವಿಲ್ಲ |
| 21. | ನೆಲಗಡಲೆಯ ಉತ್ಪತ್ತಿ ಹೆ.ಗೆ | ಕೆ.ಜಿ.ಗಳಲ್ಲಿ | 1,168 | 1,017 | ಲಭ್ಯವಿಲ್ಲ |
| 22. | ಗ್ರಾಮಗಳ ವಿದ್ಯುದೀಕರಣ | ಶೇ. | 28.35 | 47.00 | 99.00 |
| 23. | ಪಂಪುಸೆಟ್ಟುಗಳ ವಿದ್ಯುದ್ದೀಕರಣ | ಸಂಖ್ಯೆ | 800 | 1,200 | 2,800 |
| 24. | ಪ್ರತೀಲಕ್ಷ ಜನಸಂಖ್ಯೆಗೆ ಬ್ಯಾಂಕುಗಳು | ಸಂಖ್ಯೆ | 11 | 15 | 19 |

| 1 | 2 | 3 | 4 | 5 | 6 |
|---|---|---|---|---|---|
| 25. | ಪ್ರತೀ ಲಕ್ಷ ಜನಸಂಖ್ಯೆಗೆ ಬ್ಯಾಂಕು ಠೇವಣಿ ಕೋಟಿ | ರೂ.ಗಳಲ್ಲಿ | ಲಭ್ಯವಿಲ್ಲ | ಲಭ್ಯವಿಲ್ಲ | 33 |
| 26. | ಒಂದು ಸಾವಿರ ಜನಸಂಖ್ಯೆಗೆ ಸಹಕಾರ ಸಂಘಗಳ ಸದಸ್ಯರು | ಸಂಖ್ಯೆ | 410 | 495 | 506 |
| 27. | ಸಹಕಾರ ಸಂಘಗಳ ಸದಸ್ಯರಿಗೆ ತಲಾ ಸಾಲ ವಿತರಣೆ | ರೂ.ಗಳಲ್ಲಿ | ಲಭ್ಯವಿಲ್ಲ | 1,490 | ಲಭ್ಯವಿಲ್ಲ |
| 28. | ಒಂದು ಸಾವಿರ ಸಂಖ್ಯೆಗೆ ಮೋಟಾರ್ ವಾಹನಗಳು | ಸಂಖ್ಯೆ | 6 | 16 | 35 |
| 29. | ಪ್ರತೀ ಲಕ್ಷ ಜನಸಂಖ್ಯೆಗೆ ರಸ್ತೆಯ ಉದ್ದಳತೆ | ಕಿ.ಮೀ. | 329 | 527 | 574 |
| 30. | 100 ಚ.ಕಿ.ಮೀ.ಗೆ ರಸ್ತೆಯ ಉದ್ದಳತೆ | ಕಿ.ಮೀ. | 30 | 59 | 67 |
| 31. | ಪ್ರತೀ ಲಕ್ಷ ಜನಸಂಖ್ಯೆಗೆ ಅಂಚೆ ಕಚೇರಿಗಳು | ಸಂಖ್ಯೆ | 42 | 43 | 44 |
| 32. | ಒಂದು ಸಾವಿರ ಜನಸಂಖ್ಯೆಗೆ ಅಂಚೆ ಕಚೇರಿಗಳು | ಸಂಖ್ಯೆ | 2 | 5 | 13 |
| 33. | ಪ್ರತೀ ಲಕ್ಷ ಜನಸಂಖ್ಯೆಯಲ್ಲಿ ಕೆಲಸಕ್ಕಾಗಿ ನೋಂದಣಿಯಾದ ಅಭ್ಯರ್ಥಿಗಳು | ಸಂಖ್ಯೆ | 797 | 1,240 | 2,887 |
| 34. | ತಲಾ ಆದಾಯ–ಚಾಲ್ತಿ ಬೆಲೆಗಳಲ್ಲಿ | ರೂ. | 2,008 | 2,755 | 4,802 |
| 35. | ತಲಾ ಆದಾಯ–ಸ್ಥಿರ ಬೆಲೆಗಳಲ್ಲಿ | ರೂ. | 2,008 | 1,684 | ಲಭ್ಯವಿಲ್ಲ |
| 36. | ವ್ಯವಸಾಯ ವಲಯದಲ್ಲಿ ತಲಾ ವರಮಾನ–ಚಾಲ್ತಿ ಬೆಲೆಗಳಲ್ಲಿ | ರೂ. | 1,947 | 3,839 | ಲಭ್ಯವಿಲ್ಲ |
| 37. | ವ್ಯವಸಾಯ ವಲಯದಲ್ಲಿ ತಲಾ ವರಮಾನ–ಸ್ಥಿರ ಬೆಲೆಗಳಲ್ಲಿ | ರೂ. | 1,642 | ಲಭ್ಯವಿಲ್ಲ | ಲಭ್ಯವಿಲ್ಲ |
| 38. | ಒಟ್ಟು ಮಕ್ಕಳಲ್ಲಿ 5-14 ವರ್ಷ ವಯಸ್ಸಿನವರು | ಶೇ. | 70.00 | 70.60 | ಲಭ್ಯವಿಲ್ಲ |
| 39. | ಪ್ರಾಥಮಿಕ ಶಾಲೆಗಳಲ್ಲಿದ್ದ ಸರಾಸರಿ ಮಕ್ಕಳು | ಸಂಖ್ಯೆ | 197 | 194 | 180 |
| 40. | ಸಾಕ್ಷರತೆ ಗಂಡಸರು | ಶೇ. | 20.22 | 56.53 | ಲಭ್ಯವಿಲ್ಲ |
| 41. | ಸಾಕ್ಷರತೆ ಹೆಂಗಸರು | ಶೇ. | 37.79 | 43.80 | ಲಭ್ಯವಿಲ್ಲ |
| 42. | ಸಾಕ್ಷರತೆ ಒಟ್ಟು | ಶೇ. | 44.80 | 50.18 | ಲಭ್ಯವಿಲ್ಲ |
| 43. | ಒಂದು ಆರೋಗ್ಯ ಸಂಸ್ಥೆಗೆ(ಆಸ್ಪತ್ರೆಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾಥಮಿಕ ಆರೋಗ್ಯ ಘಟಕ ಚಿಕಿತ್ಸಾಲಯಗಳು) ಸೇರಿದಂತೆ ಇರುವ ಜನಸಂಖ್ಯೆ | | 5,000 | 8,000 | 2,000 |

| 1 | 2 | 3 | 4 | 5 | 6 |
|---|---|---|---|---|---|
| 44. | ಪ್ರತೀ ಲಕ್ಷ ಜನಸಂಖ್ಯೆಗೆ ಆಸ್ಪತ್ರೆಯಲ್ಲಿರುವ ಹಾಸಿಗೆ. | ಸಂಖ್ಯೆ | 324 | 368 | 312 |
| 45. | ಪತೀ ಲಕ್ಷ ಜನಸಂಖ್ಯೆಗೆ ಸಂತಾನಹರಣ ಶಸ್ತ್ರ ಚಿಕಿತ್ಸೆಗಳು | ಸಂಖ್ಯೆ | ಲಭ್ಯವಿಲ್ಲ | ಲಭ್ಯವಿಲ್ಲ | 844 |
| 46. | ಪ್ರತೀ ಲಕ್ಷ ಜನಸಂಖ್ಯೆಗೆ ನ್ಯಾಯಬೆಲೆ ಅಂಗಡಿಗಳು | ಸಂಖ್ಯೆ | 42 | 38 | 52 |
| 47. | ಒಟ್ಟು ಗ್ರಾಮಗಳಲ್ಲಿ ಕುಡಿಯುವ ನೀರು ಒದಗಿಸಲ್ಪಟ್ಟ ಗ್ರಾಮಗಳು | ಶೇ. | ಲಭ್ಯವಿಲ್ಲ | 72 | ಲಭ್ಯವಿಲ್ಲ |
| 48. | ಪ್ರತೀ ಸಾವಿರ ಜನಸಂಖ್ಯೆಗೆ ಚಿತ್ರಮಂದಿರ | | 47 | 33 | 30 |

ಆಧಾರ : ಕೊಡಗು ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ—1990-91

### ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ

ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಸಾಧಿಸುವುದು ಹಾಗೂ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಮತ್ತು ತನ್ನ ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿ ದೊರಕುವ ಸ್ವಾಭಾವಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸ್ಥಳೀಯ ಜನರ ಆರ್ಥಿಕ ಸುಧಾರಣೆ ಮಾಡುವ ಗುರಿಯೊಂದಿಗೆ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯು ಕರ್ನಾಟಕ, ಕೇರಳ, ಮಹಾರಾಷ್ಟ್ರ, ತಮಿಳುನಾಡು ಮತ್ತು ಗೋವಾ ರಾಜ್ಯಗಳ ಕೆಲವು ಜಿಲ್ಲೆಗಳ ಹಾಗೂ ಕೆಲವು ತಾಲೂಕುಗಳಲ್ಲಿ 1975 ಜನವರಿಯಿಂದ ಕಾರ್ಯಾರಂಭ ಮಾಡಿದೆ. ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ 9 ಜಿಲ್ಲೆಗಳ 55 ತಾಲೂಕುಗಳನ್ನು ಈ ಯೋಜನೆಯವ್ಯಾಪ್ತಿಗೆ ಸೇರಿಸಲು ಗುರುತಿಸಿತ್ತು. ಆದರೆ ಯೋಜನಾ ಆಯೋಗವು ಎರಡನೇಯ ನೀರಾವರಿ ಆಯೋಗದ ಶಿಫಾರಸ್ಸನ್ನು ಮಾನ್ಯ ಮಾಡಿ ರಾಜ್ಯದಲ್ಲಿನ ಜಿಲ್ಲೆಗಳಾದ ಮೈಸೂರು, ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು ಶಿವಮೊಗ್ಗ ಮತ್ತು ಬೆಳಗಾವಿ ಜಿಲ್ಲೆಗಳ 28 ತಾಲೂಕುಗಳನ್ನು ಈ ಯೋಜನೆಯ ವ್ಯಾಪ್ತಿಗೆ ಸೇರಿಸಿತು. 1979-80ರಲ್ಲಿ ಧಾರವಾಡ ಜಿಲ್ಲೆಯ 12 ತಾಲೂಕುಗಳು ಈ ಯೋಜನೆಯ ವ್ಯಾಪ್ತಿಗೆ ಸೇರಿದುದರಿಂದ ರಾಜ್ಯದ ಒಟ್ಟು 9 ಜಿಲ್ಲೆಗಳ 40 ತಾಲೂಕುಗಳು, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ ವ್ಯಾಪ್ತಿಗೆ ಸೇರಿಸಲ್ಪಟ್ಟವು. ಈ ಯೋಜನೆಯಡಿಯಲ್ಲಿ ಕೃಷಿ, ಪಶು ಸಂಗೋಪನೆ, ತೋಟಗಾರಿಕೆ, ಅರಣ್ಯ, ಸಣ್ಣ ನೀರಾವರಿ, ರೇಷ್ಮೆ, ಕೈಗಾರಿಕೆ ಮತ್ತು ಪ್ರವಾಸೋದ್ಯಮ ಇವುಗಳ ಅಭಿವೃದ್ಧಿ ಯೋಜನೆಗಳು ಕಾರ್ಯಾರಂಭಗೊಂಡವು.

1980ರ ಆಗಸ್ಟ್ ದಿನಾಂಕ 5 ರಂದು ಸೇರಿದ್ದ ಕಾರ್ಯದರ್ಶಿಗಳ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನಾ ಕಾರ್ಯಗಳ ಮೌಲ್ಯಮಾಪನ ಅಧ್ಯಯನ ಕಾರ್ಯ ಪ್ರಾರಂಭವಾಯಿತು. ಈ ಯೋಜನಾ ತಂಡವು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ ವ್ಯಾಪ್ತಿಯಲ್ಲಿನ ಕೆಲವು ತಾಲೂಕು ಹಾಗೂ ಕೆಲವು ಯೋಜನೆಗಳನ್ನು ಮಾದರಿಯಾಗಿ ತೆಗೆದುಕೊಂಡು ಮೌಲ್ಯಮಾಪನ ಮಾಡಿತು. ಇದು ಕರ್ನಾಟಕದ ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿನ ತಲಾ ಎರಡು ತಾಲೂಕುಗಳಲ್ಲಿ ಸಣ್ಣ ನೀರಾವರಿ, ಭೂಸಾರ ಸಂರಕ್ಷಣೆ ಮತ್ತು ಅರಣ್ಯ ಇವುಗಳ ಮೌಲ್ಯಮಾಪನಕ್ಕೆ ಆಯ್ಕೆ ಮಾಡಿಕೊಂಡಿತು. ಕೊಡಗು ಜಿಲ್ಲೆಯ ವೀರರಾಜಪೇಟೆ ಹಾಗೂ ಸೋಮವಾರಪೇಟೆ ತಾಲೂಕುಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ ಕುಮಟ ಹಾಗೂ ಹೊನ್ನಾವರ ತಾಲೂಕುಗಳಲ್ಲಿ ಆಯ್ದ ಯೋಜನೆಗಳ ಮೌಲ್ಯಮಾಪನ ಮಾಡಿ 1982ರಲ್ಲಿ ಪ್ರಕಟಿಸಿತು.

ಪ್ರಕಟಿತ ಮೌಲ್ಯಮಾಪನ ಅಧ್ಯಯನ ತಂಡದ ಮಾಹಿತಿಯಂತೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನಲ್ಲಿ ಎರಡು ಸಣ್ಣ ನೀರಾವರಿ ಕಾಮಗಾರಿಗಳು ಮಾತ್ರ ಪೂರ್ಣಗೊಂಡಿದ್ದು, ಈ ಎರಡು ಕಾಮಗಾರಿಗಳಿಂದ 8 ಮಂದಿ ಫಲಾನುಭವಿಗಳು ಸೌಲಭ್ಯ ಪಡೆದಿರುವರು. ಭೂಸಾರ ಸಂರಕ್ಷಣೆಗೆ ಸಂಬಂಧಿಸಿದಂತೆ ಸೋಮವಾರಪೇಟೆ ತಾಲೂಕಿನಲ್ಲಿ ಒಂದು ಘಟಕ ಮಾತ್ರ ಕಾರ್ಯನಿರ್ವಹಿಸುತ್ತಿದ್ದರೆ, ವೀರರಾಜಪೇಟೆ ತಾಲೂಕಿನಲ್ಲಿ ಎರಡು ಘಟಕಗಳು ಕಾರ್ಯನಿರ್ವಹಿಸುತ್ತಿದ್ದವು. ಸೋಮವಾರಪೇಟೆ ತಾಲೂಕಿನ ಒಂದು ಘಟಕದಲ್ಲಿ 10 ಫಲಾನುಭವಿಗಳು, ವೀರರಾಜಪೇಟೆ ತಾಲೂ

ಕಿನ ಎರಡು ಘಟಕಗಳಿಂದ 18 ಫಲಾನುಭವಿಗಳು ಸೌಲಭ್ಯ ಹೊಂದಿರುವರು. ಅರಣ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ವೀರ ರಾಜಪೇಟೆ ತಾಲೂಕಿನ ಒಂದು ಘಟಕದಲ್ಲಿ 10 ಮಂದಿ ಫಲಾನುಭವಿಗಳು ಸೌಲಭ್ಯ ಪಡೆದಿರುವರು.

ಕೊಡಗಿನ ಎಲ್ಲಾ ತಾಲೂಕುಗಳು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಗೊಳಪಟ್ಟಿದ್ದು, ಈ ಯೋಜನೆಯಡಿ ಯಲ್ಲಿ ಬರುವ ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದರೂ ಸಣ್ಣ ನೀರಾವರಿಗೆ ಅಧಿಕ ವೆಚ್ಚ ಮಾಡಲಾಗಿದ್ದು ಕೃಷಿ ಮತ್ತು ಅರಣ್ಯಗಳ ನಂತರದ ಸ್ಥಾನ ಪಡೆದಿದ್ದವು. ಪಶು ಸಂಗೋಪನೆಗೆ ಮೀಸಲಿಟ್ಟಿದ್ದ ಹಣದ ಪೈಕಿ ಶೇ.20ರಷ್ಟನ್ನು ಮಾತ್ರ ಖರ್ಚು ಮಾಡಲಾಗಿತ್ತು.

ಕೊಡಗು ಜಿಲ್ಲೆಯಲ್ಲಿ 1974–75 ರಿಂದ 1979–80 ರವರೆಗೆ ಯೋಜನಾ ಪ್ರಕಾರಗಳಿಗೆ ನಿಗದಿಪಡಿಸಿದ್ದ ಹಣ ಮತ್ತು ವೆಚ್ಚ ಮಾಡಿದ ಹಣವನ್ನು ಅನುಕ್ರಮವಾಗಿ ಲಕ್ಷ ರೂ.ಗಳಲ್ಲಿ ಕೊಡಲಾಗಿದೆ. ಆವರಣದಲ್ಲಿ ಕೊಟ್ಟಿರುವುದು ಈ ಎರಡು ಮೊಬಲಗಿನ ಪ್ರತಿಶತ. ಕೃಷಿ ರೂ. 10.47 ಮತ್ತು ರೂ. 6.52 (62.27), ಅರಣ್ಯ ರೂ. 5.13 ಮತ್ತು ರೂ. 4.77 (92.98), ಪಶುಸಂಗೋಪನೆ ರೂ. 2.87 ಮತ್ತು ರೂ. 0.57 (19.86), ಪ್ರವಾಸೋದ್ಯಮ ರೂ. 3.00 ಮತ್ತು ರೂ. 3.00 (100), ಕೈಗಾರಿಕೆ ರೂ. 1.00 ಮತ್ತು 0.61 (61.00), ಸಣ್ಣ ನೀರಾವರಿ ರೂ. 12.07 ಮತ್ತು ರೂ. 12.07 (100), ಜಿಲ್ಲಾ ಯೋಜನೆಗೆ ನಿಗದಿಪಡಿಸಿದ್ದ ಹಣದೊಂದಿಗೆ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಗೆ ನಿಗದಿಪಡಿಸಿದ್ದ ಮೊಬಲಗನ್ನು ಹೋಲಿಸಿ ನೋಡಿದಾಗ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಗೆ ನಿಗದಿಪಡಿಸಿದ್ದ ಮೊಬಲಗು ಅತ್ಯಂತ ಕಡಿಮೆ. 1978–79 ಮತ್ತು 1979–80 ಈ ಎರಡು ವರ್ಷಗಳೂ ಒಟ್ಟಿಗೆ ಸೇರಿ ಜಿಲ್ಲೆಯ ಜಿಲ್ಲಾ ಯೋಜನೆಗೆ ನಿಗದಿಪಡಿಸಿದ್ದ ಹಣ ರೂ. 374.83 ಲಕ್ಷವಾಗಿದ್ದರೆ ಪಶ್ಚಿಮ ಘಟ್ಟ ಯೋಜನೆಗೆ ನಿಗದಿಪಡಿಸಿದ್ದ ಹಣ ಕೇವಲ ರೂ.19.46 ಲಕ್ಷ.

## ಸಣ್ಣ ನೀರಾವರಿ ಸಮೀಕ್ಷೆ

ಸಣ್ಣ ನೀರಾವರಿ ಕಾಮಗಾರಿಗಳು ಲೋಕೋಪಯೋಗಿ ಇಲಾಖೆ ಮೂಲಕ ಕಾರ್ಯ ಕೈಗೊಂಡಿತು. ಮೌಲ್ಯಮಾಪನ ಅಧ್ಯಯನ ತಂಡವು ಸಣ್ಣ ನೀರಾವರಿಯ ಮೌಲ್ಯಮಾಪನಕ್ಕೆ ಜಿಲ್ಲೆಯ ಸೋಮವಾರಪೇಟೆ ತಾಲೂಕನ್ನು ಮಾತ್ರ ಆಯ್ಕೆ ಮಾಡಿಕೊಂಡು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಾರ್ಯರೂಪಕ್ಕೆ ಬಂದ ಏಳು ಕೆರೆಗಳ ಅಧ್ಯಯನ ನಡೆಸಿತು. ಈ ಏಳು ಕೆರೆಗಳ ಪೈಕಿ ಐದು ಹೊಸಕೆರೆಗಳಾಗಿದ್ದರೆ ಉಳಿದ ಎರಡು ಹಳೆಯ ಕೆರೆಗಳ ದುರಸ್ತಿಗೊಂಡದಕ್ಕೆ ಸಂಬಂಧಿಸಿದ್ದವು. ಐದು ಹೊಸಕೆರೆಗಳ ಪೈಕಿ ಮುಳ್ಳೂರು ಕೆರೆ ಮಾತ್ರ 1981ರ ಮಾರ್ಚ್‌ನಲ್ಲಿ ಪೂರ್ಣಗೊಳಿಸಿದ್ದು, ಉಳಿದ ನಾಲ್ಕು ಕೆರೆಗಳಾದ ಮಾಲಂಬಿ, ಹೊಲಗುಂದ, ಸನಗನಪುರ ಮತ್ತು ಹಾರೋಪಳ್ಳಿ ಕೆರೆಗಳು ಅಪೂರ್ಣಗೊಂಡಿದ್ದವು. ದುರಸ್ತಿಗೊಳಪಡಿಸಿದ್ದ ಶಾಂತವೇರಿ ಕೆರೆ ಮತ್ತು ಆನೆಕೇರಿಕೆರೆಗಳೆರಡೂ ಪೂರ್ಣಗೊಂಡಿದ್ದವು. ಕೆರೆಗಳ ನಿರ್ಮಾಣ ಕಾರ್ಯ ಅಪೂರ್ಣವಾಗಿರುವುದಕ್ಕೆ ಅನೇಕ ಕಾರಣಗಳು ಅಧ್ಯಯನ ತಂಡದ ಗಮನಕ್ಕೆ ಬಂದಿದೆ. ಸೌಲಭ್ಯದ ಕೊರತೆ ಇರುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿರುವುದು, ಕೂಲಿ ಕೆಲಸಗಾರರ ಅಭಾವ, ಲೋಕೋಪಯೋಗಿ ಇಲಾಖೆ ನಿಗದಿಪಡಿಸಿರುವ ಕೂಲಿ ದರವು ಕಾಫಿ ತೋಟದಲ್ಲಿ ಕೆಲಸ ಮಾಡುವ ಕೂಲಿಯವರ ಕೂಲಿದರಕ್ಕಿಂತಲೂ ಕಡಿಮೆ ಇರುವುದು ಮತ್ತು ಕಾರ್ಯನಿರ್ವಹಣಾ ಕಾಲ ವರ್ಷದಲ್ಲಿ ಆರು ತಿಂಗಳು ಮಾತ್ರ ಇರುವುದು.

ಸೋಮವಾರಪೇಟೆ ತಾಲೂಕಿನಲ್ಲಿ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಗೊಳಪಟ್ಟಿದ್ದ ಏಳು ಕೆರೆಗಳ ಪೈಕಿ ಕೂಲಂಕಷ ಅಧ್ಯಯನಕ್ಕಾಗಿ ದುರಸ್ತಿ ಮೂಲಕ ಪೂರ್ಣಗೊಂಡಿದ್ದ ಶಾಂತವೇರಿ ಮತ್ತು ಆನೇಕೇರಿ ಕೆರೆಗಳನ್ನು ಆಯ್ದುಕೊಳ್ಳಲಾಗಿತ್ತು. ಈ ಕೆರೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರ.ಸಂ. | ವಿವರ | ಶಾಂತವೇರಿ ಕೆರೆ | ಆನೇಕೇರಿ ಕೆರೆ |
|---|---|---|---|
| 1 | 2 | 3 | 4 |
| 1. | ನಿರ್ಮಾಣಗೊಂಡಿರುವ ಸ್ಥಳ | ಶಾಂತವೇರಿ | ಬಸವನೂರು |
| 2. | ನಿರ್ಮಾಣಕ್ಕೆ ನಿಗದಿಯಾದ ವೆಚ್ಚ (ರೂ.ಗಳಲ್ಲಿ) | 34,500 | 30,000 |
| 3. | ಪ್ರತೀ ಹೆಕ್ಟೇರ್ ಭೂಮಿಯ ಬೆಲೆ " | 4,980 | 2,500 |

| 1 | 2 | 3 | 4 |
|---|---|---|---|
| 4. | ಏರಿಯ ಉದ್ದ (ಮೀಟರ್‌ಗಳಲ್ಲಿ) | 240 | 125 |
| 5. | ನೀರಿನಮಟ್ಟ (ಘಟಕಗಳಲ್ಲಿ) | 1.6 | 13.30 |
| 6. | ಜಲಾನಯನ ಪ್ರದೇಶ (ಚ.ಮೈಲಿ) | 0.04 | 1.00 |
| 7. | ನೀರಾವರಿಯ ಪ್ರದೇಶ (ಹೆಕ್ಟೇರ್‌ಗಳಲ್ಲಿ) | 6.92 | 12.00 |
| 8. | ಕಾಲುವೆಯ ಉದ್ದ (ಮೀಟರ್‌ಗಳಲ್ಲಿ) | 350 | 920 |
| 9. | ಫಲಾನುಭವಿ ಹಳ್ಳಿಗಳು | ಹೆಗ್ಗಳ | ಕೊಡಿಗೆ ಕೃಷಿ ಪ್ರದೇಶ ಮತ್ತು ಬಸವನೂರು |

ಶಾಂತವೇರಿ ಕೆರೆ ದುರಸ್ತಿಯ ಕಾರ್ಯ 1979ರ ಮಾರ್ಚಿನಲ್ಲಿ ಪ್ರಾರಂಭಗೊಂಡು 1980ರ ಡಿಸೆಂಬರ್‌ನಲ್ಲಿ ಪೂರ್ಣಗೊಂಡಿತು. ಅನೇಕೇರಿ ಕೆರೆಯ ದುರಸ್ತಿ ಕಾರ್ಯವು 1979ರ ಏಪ್ರಿಲ್‌ನಲ್ಲಿ ಪ್ರಾರಂಭಗೊಂಡು 1979ರ ಆಗಸ್ಟ್‌ನಲ್ಲಿ ಪೂರ್ಣಗೊಂಡಿತು. ಈ ಎರಡು ಕೆರೆಗಳ ಕಾಲುವೆ ಕೆಲಸ 1981ರ ನವೆಂಬರ್ ವರೆಗೂ ಪೂರ್ಣಗೊಂಡಿರಲಿಲ್ಲ.

ಈ ಕೆರೆಗಳ ಆಯುಸ್ಸು ಸುಮಾರು 35–40 ವರ್ಷಗಳೆಂದು ಅಂದಾಜು ಮಾಡಲಾಗಿದೆ. ಇವುಗಳಿಗೆ ಒಟ್ಟು ನಿಗದಿಪಡಿಸಿದ್ದ ಅಂದಾಜು ವೆಚ್ಚ ರೂ. 64,500 ಆಗಿದ್ದು, ನಿಖರ ಖರ್ಚು ಹಾಗೂ ಇವುಗಳಿಂದ ಸೃಷ್ಟಿಯಾದ ಮಾನವ ದಿನಗಳ ವಿವರವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಕೆರೆಗಳು | ನಿಖರ ಖರ್ಚು (ರೂ.ಗಳಲ್ಲಿ) | ಮಾನವದಿನಗಳ ಸೃಷ್ಟಿ |
|---|---|---|
| ಶಾಂತವೇರಿ ಕೆರೆ | 33,530 | 4,350 |
| ಅನೇಕೇರಿ ಕೆರೆ | 29,154 | 3,200 |

ಈ ಎರಡು ಕೆರೆಗಳ ದುರಸ್ತಿಗೋಸ್ಕರ ನೇಮಕಗೊಂಡಿದ್ದ ಕೆಲಸಗಾರರ ಸಂಖ್ಯೆ ಅನುಕ್ರಮವಾಗಿ 280 ಮತ್ತು 250 ಆಗಿದ್ದು, ಅವರೆಲ್ಲರೂ ಸ್ಥಳೀಕರಾಗಿದ್ದರು. ಒಟ್ಟು ಕೆಲಸಗಾರರ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು ಶಾಂತವೇರಿ ಮತ್ತು ಅನೇಕೇರಿ ಕೆರೆಗಳಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ 25 ಮತ್ತು 20 ಮಂದಿ. ಈ ಕೆರೆಗಳ ನೀರಿನ ಪ್ರಮಾಣ ಅನುಕ್ರಮವಾಗಿ 3,42,108 ಟಿ.ಸಿ.ಎಂ. ಮತ್ತು 42,108 ಟಿ.ಸಿ.ಎಂ. ಇವುಗಳು ನೀರುಣಿಸುವ ಪ್ರದೇಶ ಅನುಕ್ರಮವಾಗಿ 6.92 ಹೆ. ಮತ್ತು 12.00 ಹೆ. ಶಾಂತವೇರಿ ಕೆರೆಯ ನೀರನ್ನು 1980–81 ರಲ್ಲಿ ನೀರಾವರಿ ಕೃಷಿಯ ಉಪಯೋಗಕ್ಕಾಗಿ ಬಿಡಲಾಯಿತು. ಇದರ ಉಪಯೋಗವನ್ನು ಏಳು ಕೃಷಿಕರು ಪಡೆದುಕೊಂಡರು. ಅನೇಕೇರಿ ಕೆರೆಯು ನೀರೊದಗಿಸಲು ಸಿದ್ಧವಿದ್ದರೂ ಅದರ ಹಿಂಭಾಗದ ಭೂಮಿಯು ಸರ್ಕಾರಿ ಕೃಷಿ ಕ್ಷೇತ್ರವಾಗಿದ್ದು, ನೀರಾವರಿ ಯೋಗ್ಯವನ್ನಾಗಿ ಮಾಡಿಕೊಳ್ಳದೆ ಇರುವುದರಿಂದ ನೀರಿನ ಸದುಪಯೋಗ ಆಗಿಲ್ಲ. ಶಾಂತವೇರಿಯ ಏಳು ಫಲಾನುಭವಿಗಳ ಪೈಕಿ ಐದು ಫಲಾನುಭವಿಗಳು 1 ರಿಂದ 2 ಹೆಕ್ಟೇರ್ ಭೂಮಿಯನ್ನು ಹೊಂದಿರುವ ಸಣ್ಣ ಹಿಡುವಳಿದಾರರು, ಉಳಿದ 2 ಹಿಡುವಳಿದಾರರ ಪೈಕಿ ಒಬ್ಬರು ಸೀಮಾಂತ (ಮಾರ್ಜಿನಲ್) ಕೃಷಿಕರಾಗಿದ್ದರೆ ಮತ್ತೊಬ್ಬರು 7.20 ಹೆ. ಭೂಮಿಯನ್ನು ಹೊಂದಿದವರಾಗಿದ್ದರು. ಈ ಏಳು ಕುಟುಂಬದ ಸರಾಸರಿ ಕೆಲಸಗಾರರ ಸಂಖ್ಯೆ ಮೂರು. ಈ ಏಳು ಕುಟುಂಬಗಳ ಒಟ್ಟು ಹಿಡುವಳಿ 14.80 ಹೆ. ಇದ್ದು, ಈ ಪೈಕಿ 6.92 ಹೆ. ಶಾಂತವೇರಿ ಕೆರೆಯ ಸೌಲಭ್ಯ ಪಡೆದಿತ್ತು. ಅವರ ಮುಖ್ಯ ಬೆಳೆ ಬತ್ತ ಮತ್ತು ಇಳುವರಿಯ ಪ್ರಮಾಣ ಹೆಕ್ಟೇರಿಗೆ 26.59 ಕ್ವಿಂಟಾಲ್.

### ಭೂಸಾರ ಸಂರಕ್ಷಣೆ ಸಮೀಕ್ಷೆ

ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಭೂಸಾರ ಸಂರಕ್ಷಣಾ ಯೋಜನೆಯು ಜಿಲ್ಲೆಯಲ್ಲಿ ಜಿಲ್ಲಾ ಭೂಸಾರ ಸಂರಕ್ಷಣಾ ಕಚೇರಿಯ ಮೂಲಕ 1977-78 ರಲ್ಲಿ ಕ್ಷೇತ್ರ ಹೊಂಡಗಳ ನಿರ್ಮಾಣದೊಂದಿಗೆ ಕಾರ್ಯರೂಪಕ್ಕೆ ಇಳಿಸಲಾಯಿತು. ವೀರರಾಜಪೇಟೆ ತಾಲೂಕಿನಲ್ಲಿ ಬತ್ತದ ತುಂಡು ಭೂಮಿಯನ್ನು ಒಗ್ಗೂಡಿಸುವುದರ ಮೂಲಕ ಉಳುಮೆಗೆ

ಅನುಕೂಲಮಾಡಿ ಕೊಡಲಾಗಿದೆ. ಈ ಯೋಜನೆಗೋಸ್ಕರ 1977-78 ರಿಂದ 1979-80ರ ವರೆಗೆ ಒಟ್ಟು ರೂ. 4.50 ಲಕ್ಷವನ್ನು ನಿಗದಿ ಪಡಿಸಲಾಗಿದ್ದು, ರೂ. 1.00 ಲಕ್ಷವನ್ನು ಮಾತ್ರ ವೆಚ್ಚಮಾಡಲಾಗಿದೆ. ಈ ಹಣದಲ್ಲಿ ಶೇ. 25 ರಷ್ಟು ಸಹಾಯಧನ ಮತ್ತು ಉಳಿದ ಶೇ. 75 ರಷ್ಟು ಸಾಲದ ರೂಪದಲ್ಲಿದ್ದು, ಅದನ್ನು ಸಂಬಂಧಪಟ್ಟ ರೈತರು 15 ವಾರ್ಷಿಕ ಕಂತುಗಳಲ್ಲಿ ಶೇ. 6 ರೂ. ಬಡ್ಡಿಯೊಂದಿಗೆ ಮರು ಪಾವತಿ ಮಾಡಲು ಅವಕಾಶ ಕಲ್ಪಿಸಿ ಕೊಡಲಾಗಿತ್ತು.

1980ರ ಮಾರ್ಚ್ ಅಂತ್ಯದ ವರೆಗೂ ಇದ್ದ ಜಿಲ್ಲೆಯ ಆಯ್ದ ತಾಲೂಕುಗಳ ಭೂಸಾರ ಸಂರಕ್ಷಣೆಯ ವಿವರವನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

| ತಾಲೂಕುಗಳು | ಭೂಸಾರ ಸಂರಕ್ಷಣೆಯ ಕಾಮಗಾರಿ | ಕಾಮಗಾರಿ ಸಂಖ್ಯೆ | ಕಾರ್ಯಾರಂಭ ಗೊಂಡ ವರ್ಷ | ಕಾಮಗಾರಿ ಮುಗಿಸಲು ನಿಗದಿ ಪಡಿಸಿದ ಕಾಲ | ಅದರ ಸ್ಥಿತಿ |
|---|---|---|---|---|---|
| ಸೋಮವಾರಪೇಟೆ | ಕ್ಷೇತ್ರಹೊಂಡಗಳು | 7 | ಜನವರಿ 1978 | ಮಾರ್ಚ್ 1978 | ಅಪೂರ್ಣ |
| | —ಅದೇ— | 6 | ಫೆಬ್ರುವರಿ 1980 | ಮಾರ್ಚ್ 1980 | ಏಪ್ರಿಲ್ 1980 |
| ವೀರರಾಜಪೇಟೆ | —ಅದೇ— | 12 | ಫೆಬ್ರುವರಿ 1978 | ಮಾರ್ಚ್ 1979 | ಅಪೂರ್ಣ |
| | ತುಂಡು ಭೂಮಿ ಒಕ್ಕೂಟ (ಕ್ರೋಡೀಕರಣ) | 8 | ಜನವರಿ 1978 | ಮಾರ್ಚ್ 1978 | ಜುಲೈ 1978 |

ಕ್ಷೇತ್ರ ಹೊಂಡಗಳ ಉಪಯೋಗಾವಧಿ 50 ವರ್ಷಗಳಾಗಿದ್ದರೆ, ತುಂಡು ಭೂಮಿ ಒಕ್ಕೂಟದ ಉಪಯೋಗಾವಧಿ 10–15 ವರ್ಷಗಳು. ಸೋಮವಾರಪೇಟೆ ತಾಲೂಕಿನ ಕ್ಷೇತ್ರ ಹೊಂಡಗಳು 34.25 ಹೆ. ಭೂವಿಸ್ತೀರ್ಣವಿದ್ದು 9,523 ಮಾನವ ದಿನಗಳನ್ನು ಉತ್ಪಾದಿಸಿದ್ದರೆ, ವೀರರಾಜಪೇಟೆ ತಾಲೂಕಿನ ಕ್ಷೇತ್ರ ಹೊಂಡಗಳು 46.26 ಹೆ. ಭೂ ವಿಸ್ತೀರ್ಣವಿದ್ದು 9,207 ಮಾನವ ದಿನಗಳನ್ನು ಉತ್ಪಾದಿಸಿದ್ದವು. ವೀರರಾಜಪೇಟೆ ತಾಲೂಕಿನ ಬತ್ತದ ತುಂಡು ಭೂಮಿ ಒಕ್ಕೂಟವು 13.07 ಹೆ. ನಷ್ಟಿದ್ದು 3,247 ಮಾನವ ದಿನಗಳನ್ನು ಉತ್ಪಾದಿಸಿತ್ತು. ಭೂಸಾರ ಸಂರಕ್ಷಣೆಗೆ ಸಂಬಂಧಿಸಿದಂತೆ ಜಿಲ್ಲೆಯ ವೆಚ್ಚದ ವಿವರವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

| ತಾಲೂಕುಗಳು | ಭೂಸಾರ ಸಂರಕ್ಷಣೆಯ ಕಾಮಗಾರಿ | ಸಾಲದ ಮೊಬಲಗು (ರೂ.ಗಳಲ್ಲಿ) | ಸಹಾಯಧನ (ರೂ.ಗಳಲ್ಲಿ) | ಒಟ್ಟು ವೆಚ್ಚ (ರೂ.ಗಳಲ್ಲಿ) |
|---|---|---|---|---|
| ಸೋಮವಾರಪೇಟೆ | ಕ್ಷೇತ್ರ ಹೊಂಡಗಳು | 28,159 | 9,350 | 37,509 |
| ವೀರರಾಜಪೇಟೆ | ಕ್ಷೇತ್ರ ಹೊಂಡಗಳು | 35,780 | 11,927 | 47,707 |
| | ತುಂಡು ಭೂಮಿ ಒಕ್ಕೂಟ (ಕ್ರೋಡೀಕರಣ) | 12,277 | 4,269 | 16,546 |
| | ಒಟ್ಟು | 76,216 | 25,546 | 1,01,762 |

ಹಿಂದಿನ ಪಟ್ಟಿಯ ಪ್ರಕಾರ ಒಟ್ಟು ವೆಚ್ಚ ಸುಮಾರು ರೂ. 1.02 ಲಕ್ಷವಿದ್ದು, ಸರ್ಕಾರದ ಸಹಾಯಧನ ಸುಮಾರು 25 ಸಾವಿರ ರೂ.ಗಳಾಗಿರುತ್ತದೆ. ಸೋಮವಾರಪೇಟೆ ತಾಲೂಕಿನಲ್ಲಿ 10 ಮಂದಿ ಮತ್ತು ವೀರರಾಜಪೇಟೆ ತಾಲೂಕಿನಲ್ಲಿ ಒಬ್ಬ ಮಹಿಳೆಯೂ ಸೇರಿ 18 ಮಂದಿ ಭೂಸಾರ ಸಂರಕ್ಷಣೆಯ ಫಲಾನುಭವಿಗಳಾಗಿರುವರು. ಸೋಮವಾರಪೇಟೆ ತಾಲೂಕಿನಲ್ಲಿ ಫಲಾನುಭವಿಗಳಲ್ಲಿ ಎಲ್ಲರೂ ನಾಲ್ಕು ಹೆಕ್ಟೇರ್‌ಗೂ ಹೆಚ್ಚು ಹಿಡುವಳಿಯನ್ನು ಹೊಂದಿದವರಾಗಿದ್ದರು. ವೀರರಾಜಪೇಟೆ ತಾಲೂಕಿನ 18 ಫಲಾನುಭವಿಗಳ ಪೈಕಿ ಒಬ್ಬರು 2.3 ಹೆಕ್ಟೇರ್ ಹಿಡುವಳಿಯನ್ನು, ಒಬ್ಬರು 3.4 ಹೆಕ್ಟೇರ್ ಹಿಡುವಳಿಯನ್ನು, ಉಳಿದ 16 ಮಂದಿ ನಾಲ್ಕು ಹೆಕ್ಟೇರ್‌ಗೂ ಹೆಚ್ಚು ಭೂಹಿಡುವಳಿಯನ್ನು ಹೊಂದಿದವರಾಗಿದ್ದರು.

ಒಟ್ಟು ಕೃಷಿ ಭೂಮಿಯ ಪೈಕಿ ಭೂಸಾರ ಸಂರಕ್ಷಣೆಗೊಳಪಟ್ಟಿರುವ ಭೂ ವಿಸ್ತೀರ್ಣ ಮತ್ತು ಫಲಾನುಭವಿಗಳ ಸಂಖ್ಯೆಯನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

| ತಾಲೂಕುಗಳು | ಭೂಸಾರ ಸಂರಕ್ಷಣೆ ಕಾಮಗಾರಿ | ಫಲಾನುಭವಿಗಳ ಸಂಖ್ಯೆ | ಫಲಾನುಭವಿಗಳ ಒಟ್ಟು ಭೂಮಿ (ಹೆ.ಗಳಲ್ಲಿ) | ಭೂಸಾರ ಸಂರಕ್ಷಣಾ ಕಾಮಗಾರಿ ವ್ಯಾಪ್ತಿಗೊಳಪಟ್ಟ ಭೂಮಿ (ಹೆಕ್ಟೇರ್‌ಗಳಲ್ಲಿ) |
|---|---|---|---|---|
| ಸೋಮವಾರಪೇಟೆ | ಕ್ಷೇತ್ರ ಹೊಂಡಗಳು | 10 | 588.37 | 26.05 |
| ವೀರರಾಜಪೇಟೆ | ಕ್ಷೇತ್ರ ಹೊಂಡಗಳು | 10 | 95.79 | 27.92 |
| | ತುಂಡು ಭೂಮಿ ಕ್ರೋಢೀಕರಣ | 8 | 102.00 | 14.55 |

ಮೇಲಿನ ಪಟ್ಟಿಯ ಪ್ರಕಾರ ಸೋಮವಾರಪೇಟೆ ತಾಲೂಕಿನ ಕ್ಷೇತ್ರ ಹೊಂಡ ಸೌಲಭ್ಯ ಪಡೆದ ಫಲಾನುಭವಿಗಳ ಭೂಮಿಯು ಒಟ್ಟು ಭೂಮಿಯ ಶೇ. 4.43 ಇದ್ದರೆ, ವೀರರಾಜಪೇಟೆ ತಾಲೂಕಿನಲ್ಲಿ ಅದು ಶೇ. 29.15 ಇದ್ದು, ತುಂಡು ಭೂಮಿಯ ಕ್ರೋಢೀಕರಣ ಭೂಮಿಯು ಶೇ. 14.26 ಇರುವುದು ಕಂಡುಬರುತ್ತದೆ.

ಸೋಮವಾರಪೇಟೆ ತಾಲೂಕಿನ ಭೂಸಾರ ಸಂರಕ್ಷಣಾ ಫಲಾನುಭವಿಗಳ ಪೈಕಿ ಒಬ್ಬರು 472 ಹೆಕ್ಟೇರ್ ಭೂಮಿಯನ್ನು ಹೊಂದಿದ್ದರೆ ಮತ್ತೊಬ್ಬರು 96 ಹೆಕ್ಟೇರ್ ಭೂಮಿಯನ್ನು ಹೊಂದಿದ್ದರು. ಉಳಿದ ಎಂಟು ಫಲಾನುಭವಿಗಳು 5.96 ಹೆ. ನಿಂದ 21.93 ಹೆ. ವರೆಗಿನ ಭೂ ಒಡೆತನವನ್ನು ಹೊಂದಿದವರಾಗಿದ್ದರು. ವೀರರಾಜಪೇಟೆ ತಾಲೂಕಿನಲ್ಲಿ 3 ಹೆ. ನಿಂದ 24.80 ಹೆ. ವರೆಗಿನ ಭೂ ಒಡೆತನ ಹೊಂದಿದವರು ಫಲಾನುಭವಿಗಳಾಗಿರುವವರು. ತುಂಡು ಭೂಮಿ ಕ್ರೋಢೀಕರಣದಲ್ಲಿಯೂ 3.20 ಹೆ. ನಿಂದ 23.20 ಹೆ. ವರೆಗೆ ಭೂಮಿ ಹೊಂದಿದ್ದವರೇ ಫಲಾನುಭವಿಗಳಾಗಿರುವರು. ಇದರಿಂದ ಜಿಲ್ಲೆಯ ಭೂಸಾರ ಸಂರಕ್ಷಣಾ ಸೌಲಭ್ಯವು ದೊಡ್ಡ ಭೂಮಾಲೀಕರ ಪಾಲಿಗೆ ದೊರಕಿದೆ ಎಂಬುದು ಸ್ಪಷ್ಟಪಡುತ್ತದೆ.

ಭೂಸಾರ ಸಂರಕ್ಷಣೆಯ ಕಾಮಗಾರಿಯಿಂದ ಹೊಸದಾಗಿ 4 ಹೆಕ್ಟೇರ್‌ನಷ್ಟು ಭೂಮಿಯು ಹಿಂಗಾರು ಬತ್ತದ ಬೆಳೆ ಉತ್ಪಾದನೆಗೆ ಯೋಗ್ಯವಾಗಿ ಪ್ರತಿ ಹೆಕ್ಟೇರ್‌ನಲ್ಲಿ 34.12 ಕ್ವಿಂಟಾಲ್ ಬತ್ತ ಉತ್ಪಾದಿಸಲು ಸಾಧ್ಯವಾಯಿತೆಂಬುದು ವರದಿಯಾಗಿದೆ. ಜಿಲ್ಲೆಯ ಭೂಸಾರ ಸಂರಕ್ಷಣೆಯಿಂದ ಬೆಳೆಯ ಇಳುವರಿಯಲ್ಲಿ ಹೆಚ್ಚಳ ಉಂಟಾಗಿ ಭೂ ಬೇಡಿಕೆಯ ಮೌಲ್ಯ ಸುಮಾರು ಶೇ. 25 ರಿಂದ 100ರ ವರೆಗೆ ಹೆಚ್ಚಳಗೊಂಡಿದೆ. ಕ್ಷೇತ್ರ ಹೊಂಡಗಳು ಕಾಫಿ ತೋಟಗಳ ನೀರು ಚಿಲುಮೆಗೆ (ನೀರು ಸಿಂಪಡಿಕೆಗೆ) ಸಹಾಯ ಮಾಡಿರುವುದರ ಜೊತೆಗೆ ಮುಂಗಾರು ಬತ್ತದ ಬೆಳೆಗಳಿಗೆ ಅಧಿಕವಾಗಿಯೂ ಮತ್ತು ಹಿಂಗಾರು ಬತ್ತದ ಬೆಳೆಗೆ ಸ್ವಲ್ಪಮಟ್ಟಿಗೂ ನೀರನ್ನುಣಿಸಲು ಸಹಕಾರಿಯಾಗಿವೆ.

**ಅರಣ್ಯ ಸಮೀಕ್ಷೆ**

ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ 1975–76ರಲ್ಲಿ ಸ್ಥಳೀಕರ ಅರಣ್ಯ ಉತ್ಪಾದನೆಯನ್ನು

ಹೆಚ್ಚಿಸುವ ಕಾರ್ಯಕ್ರಮ ಪ್ರಾರಂಭಗೊಂಡಿತು. ಈ ಯೋಜನೆಯಡಿಯಲ್ಲಿ ಸಣ್ಣ ಕಾಡುಗಳಲ್ಲಿ ಗೋಡಂಬಿ ಬೆಳೆಯು ವುದು ಪ್ಲೈವುಡ್ ಮತ್ತು ಬೆಂಕಿಪೊಟ್ಟಣದ ಉಪಯೋಗಕ್ಕೆ ಬರುವ ಮರಗಳನ್ನು ಬೆಳೆಸುವುದು ಮತ್ತು ಬಿದಿರು ಸಸಿಗಳನ್ನು ನೆಡುವ ಕಾರ್ಯವು ಅರಣ್ಯ ಇಲಾಖೆಯ ಮೂಲಕ ಆರಂಭ ಗೊಂಡಿತು.

1975-76 ರಿಂದ 1979-80ರ ವರೆಗೆ ಜಿಲ್ಲೆಯ ಅರಣ್ಯಾಭಿವೃದ್ಧಿಗೆ ನಿಗದಿಪಡಿಸಿದ್ದ ಮತ್ತು ಖರ್ಚು ಮಾಡಿದ ಮೊಬಲಗನ್ನು ಈ ಪಟ್ಟಿಯಲ್ಲಿ ಕೊಟ್ಟಿದೆ.

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | | ನಿಗದಿಪಡಿಸಿದ್ದ ಹಣ | ಖರ್ಚು ಮಾಡಿದ ಹಣ |
|---|---|---|---|
| 1975—76 | | 0.38 | 0.37 |
| 1976—77 | | 0.90 | 0.92 |
| 1977—78 | | 1.10 | 0.88 |
| 1978—79 | | 1.55 | 1.46 |
| 1979—80 | | 1.20 | 1.14 |
| | ಒಟ್ಟು | 5.13 | 4.77 |

ಮೌಲ್ಯಮಾಪನ ಅಧ್ಯಯನ ತಂಡವು ವೀರರಾಜಪೇಟೆ ತಾಲೂಕಿನ ಮಾಕುಟ್ಟ ಅರಣ್ಯ ತೋಟಗಾರಿಕೆ ಯೋಜನೆ ಯೊಂದರ ಅಧ್ಯಯನ ನಡೆಸಿದೆ. ಈ ಯೋಜನೆಗೆ 1975-76 ರಿಂದ 1979–80ರ ವರೆಗೆ ರೂ. 1,28,710 ಖರ್ಚು ಮಾಡಲಾಗಿದೆ. ಇದು ಸುಮಾರು 11,112 ಮಾನವ ದಿನ ಗಳ ಉದ್ಯೋಗವನ್ನೊದಗಿಸಿದ್ದರೂ ಕಾರ್ಮಿಕರ ಕೊರತೆ ಅಧಿಕವಿದ್ದುದು ಕಂಡುಬಂದಿದೆ. ಇದರ ಕಾರ್ಮಿಕರೆಲ್ಲರೂ ಹೊರ ರಾಜ್ಯದಿಂದ ಬಂದವರಾಗಿದ್ದರು. ಇದರ ಫಲಾನುಭವಿ ಗಳಾದ 10 ಮಂದಿಯೂ ಕೃಷಿ ಹಿಡುವಳಿಯನ್ನು ಹೊಂದಿರದ ಅರಣ್ಯ ಕಾರ್ಮಿಕರಾಗಿದ್ದುದೆ ಅಲ್ಲದೆ ಪರಿಶಿಷ್ಟ ಜಾತಿಗೆ ಸೇರಿ ದವರಾಗಿದ್ದರು. ಈ 10 ಕುಟುಂಬಗಳಲ್ಲಿ ಒಟ್ಟು 27 ಯುವಕ ಕಾರ್ಮಿಕರಿದ್ದು, ಆ ಪೈಕಿ 15 ಗಂಡಸರು ಮತ್ತು 12 ಹೆಂಗಸರು ಅರಣ್ಯ ಕಾರ್ಮಿಕರಾಗಿ ಕೆಲಸ ಮಾಡುವ ಸಾಮರ್ಥ್ಯ ಹೊಂದಿದ್ದರು. ಈ ಕುಟುಂಬಗಳು ಒಟ್ಟು 6,150 ಮಾನವ ದಿನಗಳು ಕೆಲಸ ಮಾಡಿ ಸರಾಸರಿ 615 ದಿನಗಳು ಗಂಡಸರಿಗೆ ದಿನಕ್ಕೆ ರೂ. 7.00, ಹೆಂಗಸರಿಗೆ ದಿನಕ್ಕೆ ರೂ. 5.00ರಂತೆ ಪ್ರತಿಫಲ ಪಡೆದಿದ್ದರು. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮದ ಪೂರ್ವದಲ್ಲಿ ಈ ಕುಟುಂಬಗಳ ಸರಾಸರಿ ವಾರ್ಷಿಕ ಆದಾಯ ರೂ. 4,952 ಇದ್ದುದು 1979–80ರಲ್ಲಿ ಅದು ರೂ. 10,297ಕ್ಕೆ ಹೆಚ್ಚಳಗೊಂಡಿತ್ತು ಎಂಬುದು ಅಧ್ಯಯನ ತಂಡದ ವರದಿಯಿಂದ ಸ್ಪಷ್ಟಗೊಂಡಿದೆ.

### ಜೈವಾನಿಲ ಮತ್ತು 'ಅಸ್ತ್ರ' ಒಲೆ

ದನಗಳ ಗೊಬ್ಬರದಿಂದ ಉತ್ಪಾದಿಸುವ ಜೈವಾನಿಲ ಘಟಕ ಗಳ ಯೋಜನೆಯು ಜಿಲ್ಲೆಯಲ್ಲಿ 1981–82 ರಿಂದ ಅನುಷ್ಠಾನಗೊಂಡಿದೆ. ಗ್ರಾಮಾಂತರ ಪ್ರದೇಶದ ಜನಗಳಿಗೆ ಸುಲಭ ದರದಲ್ಲಿ ಇದರ ಉಪಯೋಗ ದೊರಕುವಂತೆ ಮಾಡು ವುದಕ್ಕಾಗಿ ಕೇಂದ್ರ ಸರ್ಕಾರವು ಪ್ರತಿ ಘಟಕದ ಅಂದಾಜು ವೆಚ್ಚಕ್ಕೆ ಸಹಾಧನವನ್ನು ಕೊಡುವುದರ ಜೊತೆಗೆ ಬ್ಯಾಂಕುಗಳಲ್ಲಿ ಸಾಲ ಸೌಲಭ್ಯ ದೊರಕುವಂತೆ ಮಾಡಿದೆ. ಜಿಲ್ಲಾ ಪರಿಷತ್ ಮತ್ತು ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯುತಾಂತ್ರಿಕ ನೆರವಿನೊಂದಿಗೆ ಇವುಗಳ ಮೇಲ್ವಿಚಾರಣೆ ನಡೆಸುತ್ತವೆ. ಮುಂದಿನ ಪುಟದಲ್ಲಿ ಜಿಲ್ಲೆಯಲ್ಲಿ 1981-82 ರಿಂದ 1992ರ ಮಾರ್ಚ್ ಅಂತ್ಯದವರೆಗೂ ಇದ್ದ ತಾಲೂಕು ವಾರು ಜೈವಾನಿಲ ಘಟಕಗಳ ಸಂಖ್ಯೆಯನ್ನು ಕೊಟ್ಟಿದೆ.

| ವರ್ಷ | ಮಡಿಕೇರಿ ತಾಲೂಕು | ಸೋಮವಾರಪೇಟೆ ತಾಲೂಕು | ವೀರರಾಜಪೇಟೆ ತಾಲೂಕು | ಒಟ್ಟು |
|---|---|---|---|---|
| 1981–82 | — | 12 | 9 | 12 |
| 1982–83 | — | 2 | 19 | 21 |
| 1983–84 | 10 | 22 | 18 | 50 |
| 1984–85 | 9 | 18 | 8 | 35 |
| 1985–86 | 43 | 53 | 26 | 122 |
| 1986–87 | 39 | 152 | 38 | 229 |
| 1987–88 | 87 | 336 | 187 | 610 |
| 1988–89 | 39 | 34 | 50 | 123 |
| 1989–90 | 26 | 20 | 74 | 120 |
| 1990–91 | 17 | 18 | 24 | 59 |
| 1991–92 | 20 | 51 | 41 | 112 |
| ಒಟ್ಟು | 290 | 718 | 494 | 1,502 |

'ಅಸ್ತ್ರ' ಒಲೆಯನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್) 'ಅಸ್ತ್ರ' ತಂಡ ವಿನ್ಯಾಸಗೊಳಿಸಿದೆ. ಈ ಒಲೆಯು ಹೊಗೆ ರಹಿತ ಸೌಲಭ್ಯವನ್ನು ಕಲ್ಪಿಸಿಕೊಡುವುದರ ಜೊತೆಗೆ ಶೇ. 60 ರಷ್ಟು ಉರುವಲನ್ನು ಉಳಿತಾಯ ಮಾಡುತ್ತದೆ. ಇದರ ಉತ್ಪಾದನೆಯ ಅಂದಾಜು ವೆಚ್ಚ ರೂ. 150. ರಾಜ್ಯ ಸರ್ಕಾರವು ಇದರ ಖರೀದಿಗೆ ರೂ. 50 ಸಹಾಯಧನ ಕೊಡುತ್ತದೆ. ಜಿಲ್ಲಾ ಪರಿಷತ್ತು ಇದರ ಉಪಯೋಗಕ್ಕೆ ಸಂಬಂಧಿಸಿದಂತೆ ತರಬೇತಿ ಸೌಲಭ್ಯವನ್ನೊದಗಿಸುತ್ತದೆ. ಅಸ್ತ್ರ ಒಲೆ ಯೋಜನೆಯು 1984–85 ರಿಂದ ಜಿಲ್ಲೆಯಲ್ಲಿ ಜಾರಿಯಲ್ಲಿದೆ.

ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯಲ್ಲಿ 1984–85 ರಿಂದ 1992ರ ಮಾರ್ಚ್ ಅಂತ್ಯದವರೆಗೂ ಸ್ಥಾಪನೆಗೊಂಡ ತಾಲೂಕುವಾರು ಅಸ್ತ್ರ ಒಲೆ ಮತ್ತು ಚರ ಒಲೆಗಳ ಸಂಖ್ಯೆಯನ್ನು ಕೊಟ್ಟಿದೆ.

| ವರ್ಷ | ಮಡಿಕೇರಿ ತಾ॥ | | ಸೋಮವಾರಪೇಟೆ ತಾ॥ | | ವೀರರಾಜಪೇಟೆ ತಾ॥ | | ಒಟ್ಟು |
|---|---|---|---|---|---|---|---|
| | ಅಸ್ತ್ರ ಒಲೆ | ಚರಒಲೆ | ಅಸ್ತ್ರ ಒಲೆ | ಚರಒಲೆ | ಅಸ್ತ್ರ ಒಲೆ | ಚರಒಲೆ | |
| 1984–85 | 334 | — | 300 | — | 260 | — | 894 |
| 1985–86 | 50 | — | 50 | — | 132 | — | 232 |
| 1986–87 | 280 | — | 9 | — | 805 | — | 1,094 |
| 1987–88 | — | — | 200 | — | 203 | — | 403 |
| 1988–89 | 200 | — | 260 | — | 300 | — | 760 |
| 1989–90 | 380 | 100 | 570 | 150 | 650 | 150 | 2,000 |
| 1990–91 | — | 430 | — | 450 | — | 550 | 1,430 |
| 1991–92 | 200 | — | 450 | — | 350 | — | 1,000 |
| ಒಟ್ಟು | 1,444 | 530 | 1,839 | 600 | 2,700 | 700 | 7,813 |

ಆಧಾರ : ಜಿಲ್ಲಾ ಪರಿಷತ್, ಮಡಿಕೇರಿ.

## ಪ್ರವಾಹ ಮತ್ತು ಬರಪೀಡನೆ

ನೈಋತ್ಯ ಮಳೆ ಮಾರುತಗಳು ಜಿಲ್ಲೆಗೆ ಹೆಚ್ಚು ಮಳೆ ಸುರಿಸುವುದರಿಂದ ಜಿಲ್ಲೆಯಲ್ಲಿ ಪ್ರವಾಹದ ಹಾವಳಿಯೂ ಹೆಚ್ಚಾಗಿರುತ್ತದೆ. ಮಳೆಯು ಸರಾಸರಿಗಿಂತ ಕಡಿಮೆ ಬಿದ್ದ ಮತ್ತು ಅಕಾಲದಲ್ಲಿ ಮಳೆ ಬಿದ್ದ ವರ್ಷಗಳಲ್ಲಿ ಕೃಷಿ ಉತ್ಪಾದನೆಯಲ್ಲಿ ತೀವ್ರ ಕುಸಿತವಾಗುವುದರ ಜೊತೆಗೆ ಜಿಲ್ಲೆಯು ಬರಪೀಡನೆಗೊಳಗಾದ ಸಂದರ್ಭಗಳೂ ಇವೆ. 1868-69 ರಲ್ಲಿ ಜಿಲ್ಲೆಯ ಪೂರ್ವ ದಿಕ್ಕಿನಲ್ಲಿ ಮೈಸೂರು ಜಿಲ್ಲೆಗೆ ಹೊಂದಿಕೊಂಡಿರುವ ಗಡಿಭಾಗದಲ್ಲಿ ಹಿಂಗಾರು ಮಳೆಯು ಬಾರದೆ ಕೃಷಿ ಉತ್ಪಾದನೆ ತೀವ್ರ ಕುಸಿಯಿತು. ಆಹಾರ ಉತ್ಪಾದನೆ ನಿರೀಕ್ಷಿಸಿದ ಮಟ್ಟವನ್ನು ಮುಟ್ಟದೇ ಅಭಾವವುಂಟಾದುದರಿಂದ ಅಧಿಕ ಪ್ರಮಾಣದಲ್ಲಿ ಬರಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಯಿತು. ಆ ವರ್ಷ ಜಿಲ್ಲೆಯಲ್ಲಿ ಬಿದ್ದ ಸರಾಸರಿ ಮಳೆ ಕೇವಲ 93.74 ಅಂಗುಲವಿದ್ದು ಅತ್ಯಂತ ಕಡಿಮೆ ಮಳೆಯೆಂದು ಗುರ್ತಿಸಲಾಗಿದೆ. 1867-68ರಲ್ಲಿ 109.9 ಅಂಗುಲ ಮಳೆ ಬಿದ್ದಿತ್ತು. ಇದು 1870-71ರಲ್ಲಿ 108.66 ಅಂಗುಲ ಮತ್ತು 1871-72 ರಲ್ಲಿ 130.00 ಅಂಗುಲವಿತ್ತು. ಇದೇ ವರ್ಷ ಉತ್ತರ ಕೊಡಗಿನಲ್ಲಿ ನವೆಂಬರ್ ತಿಂಗಳಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ನದಿ ಮತ್ತು ಹೊಳೆಗಳಲ್ಲಿ ಪ್ರವಾಹ ಉಂಟಾಗಿ ಕಟಾವಾಗಿದ್ದ ಬೆಳೆ ಕೈಸೇರದೆ ಅಧಿಕ ನಷ್ಟ ಉಂಟಾಯಿತು. 1900-01 ರಲ್ಲಿ ಮಳೆಯ ಅಭಾವದಿಂದ ಜಿಲ್ಲೆಯು ಹಿಂದೆಂದೂ ಕಾಣದ ಬರಪೀಡನೆಗೆ ಒಳಗಾಯಿತು. ಇದರ ಜೊತೆಗೆ ಜಿಲ್ಲೆಯಲ್ಲಿದ್ದ ಆಹಾರ ಧಾನ್ಯಗಳು ಅಕ್ಕಪಕ್ಕದ ಜಿಲ್ಲೆಗಳಿಗೆ ಸಾಗಾಣಿಕೆಯಾಗಿ ಆಹಾರ ಧಾನ್ಯಗಳ ತೀವ್ರ ಕೊರತೆಯನ್ನುಂಟಾದುದೇ ಅಲ್ಲದೆ ಬೆಲೆ ಹೆಚ್ಚಿ ಜನಗಳು ತೀವ್ರ ಸಂಕಷ್ಟಕ್ಕೊಳಗಾದರು.

1923ರ ಆಗಸ್ಟ್ ಮತ್ತು 1924ರ ಜುಲೈ ತಿಂಗಳುಗಳಲ್ಲಿ ಬಿದ್ದ ಭಾರಿ ಮಳೆಯಿಂದ ಉಂಟಾದ ಪ್ರವಾಹ ಬೆಳೆಗೆ ಸಾಕಷ್ಟು ಹಾನಿಯನ್ನುಂಟು ಮಾಡಿದ್ದರೂ ಬತ್ತವನ್ನು ಮರು ನಾಟಿ ಮಾಡುವುದಕ್ಕೆ ಕಾಲಾವಕಾಶವಿದ್ದುದರಿಂದ ಬತ್ತದ ಉತ್ಪಾದನೆಗೆ ಧಕ್ಕೆ ಉಂಟಾಗಲಿಲ್ಲ. 1924ರ ಜುಲೈನಲ್ಲಿ ಬಿದ್ದ ಭಾರಿ ಮಳೆಯಿಂದ ಜಿಲ್ಲೆಯ ಎಲ್ಲಾ ನದಿಗಳಲ್ಲೂ ಪ್ರವಾಹ ಉಂಟಾಯಿತು. 1924ರ ಜುಲೈ 17ರಂದು ಮಡಿಕೇರಿಯಲ್ಲಿ 14.35 ಅಂಗುಲ ಮಳೆಬಿದ್ದು ದಾಖಲಾತಿ ಹೊಂದಿದೆ. ಜುಲೈ 25ರಂದು ಭಾಗಮಂಡಲದಲ್ಲಿ ಬಿದ್ದ ಮಳೆ 33.15 ಅಂಗುಲ ದಷ್ಟಿದ್ದು ಅದು ಬೆಂಗಳೂರು ಜಿಲ್ಲೆಯ ವಾರ್ಷಿಕ ಸರಾಸರಿ ಮಳೆಗೆ ಸಮವೆನಿಸಿದೆ. ಭಾಗಮಂಡಲದಲ್ಲಿ ಇದೇ ವರ್ಷದ ಜುಲೈ ತಿಂಗಳಲ್ಲಿ ಬಿದ್ದ ಮಳೆ 223.06 ಅಂಗುಲ. ಇದರ ಪರಿಣಾಮವಾಗಿ ಉಂಟಾದ ಪ್ರವಾಹದಿಂದ ಜಿಲ್ಲೆಯು ಸುಮಾರು ಮೂರು ದಿನಗಳವರೆಗೆ ರಸ್ತೆ ಮತ್ತು ದೂರವಾಣಿ ಸಂಪರ್ಕ ಕಳೆದುಕೊಂಡಿತ್ತು. ಸಿದ್ಧಾಪುರ, ಪೆರಂಬಾಡಿ ಘಟ್ಟ ರಸ್ತೆಗಳು, ಕುಟ್ಟಂಪೂಜ ಸೇತುವೆ ಮೊದಲಾದವುಗಳು ಕೊಚ್ಚಿಹೋಗಿದ್ದವು. ಮಂಗಳೂರು ರಸ್ತೆಗೂ ತಡೆಯುಂಟಾಗಿತ್ತು. ಭಾಗಮಂಡಲ ಅಧಿಕ ಹಾನಿಗೊಳಗಾಗಿತ್ತು. ಪ್ರವಾಹದ ಹಾವಳಿ ಫ್ರೇಜರ್ ಪೇಟೆ (ಕುಶಾಲನಗರ)ಯ ತಗ್ಗು ಪ್ರದೇಶಕ್ಕೂ ಮತ್ತು ರಾಮಪುರದ ಮುಖ್ಯ ಬೀದಿಗೂ ಹರಡಿತ್ತು. ಮಾಕುಟ್ಟದಲ್ಲಿ ನಿರ್ಮಿಸಿದ್ದ ಟ್ರಾಂವೇ ಸಹ ಕೊಚ್ಚಿಹೋಗಿತ್ತು.

1952-53ರಲ್ಲಿ ಮುಂಗಾರು ಮಳೆ ಉತ್ತಮವಾಗಿದ್ದರೂ ಸೆಪ್ಟಂಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಮಳೆಯು ಬಾರದೆ ಬೆಳೆ ಹಾನಿಗೊಳಗಾಯಿತು. 1961ರ ಮುಂಗಾರು ಅಧಿಕವಾಗಿ ಬೆಳೆ ಮತ್ತು ಆಸ್ತಿಗೆ ಹಾನಿ ಉಂಟು ಮಾಡಿತ್ತು. ಆ ವರ್ಷ ಬಿದ್ದ ಮಳೆ 240 ಅಂಗುಲ ಮತ್ತು ಉಂಟಾದ ಹಾನಿ ರೂ. 1,00,33,350ರಷ್ಟು ಎಂದು ಅಂದಾಜು ಮಾಡಲಾಗಿದ್ದು ರಾಜ್ಯ ಸರ್ಕಾರವು ರೂ. 83 ಲಕ್ಷವನ್ನು ಪರಿಹಾರ ಕಾರ್ಯಕ್ಕಾಗಿ ವೆಚ್ಚ ಮಾಡಿತ್ತು. ಈ ಸಾಲಿನಲ್ಲೂ ಸಂಪಾಜೆ ಘಟ್ಟ ರಸ್ತೆ ಕೊಚ್ಚಿಹೋಗಿತ್ತು. ಮಂಗಳೂರು ಮತ್ತು ಮಡಿಕೇರಿ ಸಂಪರ್ಕವನ್ನು ಭಾಗಮಂಡಲದ ಮಾರ್ಗವಾಗಿ ಹೋಗುವಂತೆ ಬದಲಾವಣೆ ಮಾಡಲಾಗಿತ್ತು. 1961ರ ಪ್ರವಾಹವೇ ಅತ್ಯಂತ ಹೆಚ್ಚಿನದೆಂದು ದಾಖಲಾತಿಯನ್ನು ಸಹ ಹೊಂದಿತ್ತು. (ಮಳೆಯ ಅಂಕಿ ಸಂಖ್ಯೆಗಳ ಬಗ್ಗೆ ಪು. 59-60 ಕೋಷ್ಟಕಗಳನ್ನು ನೋಡಿ).

1990-91ರಲ್ಲಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ಭಾಗಮಂಡಲದಲ್ಲಿ ಅತೀ ಹೆಚ್ಚು ಅಂದರೆ 5,673.6 ಮಿ. ಮೀ. ಮತ್ತು ಪೂರ್ವ ಸರಹದ್ದಿನಲ್ಲಿರುವ ಕುಶಾಲನಗರದಲ್ಲಿ ಅತೀ ಕಡಿಮೆ ಅಂದರೆ 507.2 ಮಿ.ಮೀ. ಮಳೆಯಾಗಿದೆ. ಇದನ್ನು ವಾಡಿಕೆ ಮಳೆ (1901-1970) ವಾರ್ಷಿಕ 2,718 ಮಿ.ಮೀ.ಗೆ ಹೋಲಿಸಿ ನೋಡಿದಾಗ ಶೇಕಡ 16.06ಕ್ಕಿಂತ ಕಡಿಮೆ ಮಳೆ ಬಿದ್ದಂತಾಗಿದೆ.
(ಪ್ರಕೃತಿ ವಿಕೋಪದಿಂದ ಸಂಭವಿಸಿದ ಹಾನಿ ಮತ್ತು ಪರಿಹಾರ ಧನ ಇವುಗಳ ಮಾಹಿತಿಯ ವಿವರವಾದ ಪಟ್ಟಿಯನ್ನು ಪುಟ 543ರಲ್ಲಿ ಕೊಟ್ಟಿದೆ).

## ಅಭಿವೃದ್ಧಿಯ ಅವಕಾಶಗಳು

ಕೊಡಗು ಜಿಲ್ಲೆಯು ಕರ್ನಾಟಕ ರಾಜ್ಯದಲ್ಲಿನ ಅತ್ಯಂತ ಚಿಕ್ಕ ಜಿಲ್ಲೆಗಳಲ್ಲಿ ಕೊನೆಯಿಂದ ಎರಡನೇಯ ಸ್ಥಾನವನ್ನು

1985-86 ರಿಂದ 1991-92ರವರೆಗೆ ಕೊಡಗು ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಸಂಭವಿಸಿದ ಹಾನಿ ಮತ್ತು ಪರಿಹಾರಧನ ಇವುಗಳ ಮಾಹಿತಿಯನ್ನು ಈ ಕೆಳಗಿನ ತಖ್ತೆಯಲ್ಲಿ ಕೊಟ್ಟಿದೆ

| ಕ್ರ. ಸಂ. | ವರ್ಷಗಳು | ಮಳೆಯಿಂದ ಮನೆ ಬಿದ್ದು ನಷ್ಟಕ್ಕೊಳಗಾದ ಕುಟುಂಬಗಳ ಸಂಖ್ಯೆ | ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಮನೆ ಹಾಗೂ ಜಾನುವಾರು ನಷ್ಟಕ್ಕೆ ನೀಡಲಾದ ಪರಿಹಾರ (ರೂ.ಗಳಲ್ಲಿ) | ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಬೆಂಕಿ ಅನಾಹುತಕ್ಕೆ ನೀಡಲಾದ ಪರಿಹಾರ (ರೂ.ಗಳಲ್ಲಿ) |
|---|---|---|---|---|---|---|---|
| 1. | 1985–86 | 15 | 108 | — | 22,030 | 59 | 19,650 |
| 2. | 1986–87 | 204 | 332 | — | 74,150 | 73 | 20,000 |
| 3. | 1987–88 | 65 | 427 | — | 71,700 | 112 | 38,750 |
| 4. | 1988–89 | 99 | 30 | — | 32,150 | 32 | 28,150 |
| 5. | 1989–90 | 1,943 | 866 | — | 10,77,490 | 90 | 42,400 |
| 6. | 1990–91 | 111 | 402 | 119(634)* | 3,24,949 | 57 | 61,450 |
| 7. | 1991–92 | 866 | 5,789 | 52 | 15,53,127 | 85 | 80,575 |

ಆಧಾರ : ಜಿಲ್ಲಾಧಿಕಾರಿಗಳು, ಮಡಿಕೇರಿ.

ಸೂಚನೆ : *ಜಾನುವಾರುಗಳ ಸಂಖ್ಯೆ

ಹೊಂದಿದೆ. ಇದು ಸಮೃದ್ಧ ಅರಣ್ಯ ಸಂಪತ್ತನ್ನು ಹೊಂದಿರುವುದರಿಂದ ಅರಣ್ಯ ಸಂಪತ್ತು ಆಧಾರಿತ ಶ್ರೀಗಂಧದ ಎಣ್ಣೆ, ಬೆಂಕಿಕಡ್ಡಿ, ಫ್ಲೈವುಡ್, ಜೇನು, ಕಾಗದ, ಮರಗೆಲಸ, ಚಿತ್ರದ ಕೆಲಸ ಮೊದಲಾದವುಗಳ ಜೊತೆಗೆ ತೋಟದ ಬೆಳೆಗಳ ಆಧಾರಿತ ಏಲಕ್ಕಿ ತೈಲ, ಟೈರುಗಳು ಮತ್ತು ಟ್ಯೂಬುಗಳು, ಹಣ್ಣು ಪರಿಷ್ಕರಣ ಘಟಕಗಳನ್ನು ಅಭಿವೃದ್ಧಿಪಡಿಸುವ ಅವಕಾಶಗಳು ವಿಪುಲವಾಗಿವೆ. ನೆರೆಯ ಜಿಲ್ಲೆಯಲ್ಲಿ ನೆಲೆ ನಿಂತ ಟಿಬೇಟನ ವಲಸೆಗಾರರಿಂದ ತರಬೇತಿ ಪಡೆದು ಜಮಖಾನೆ, ಅಲಂಕೃತ ಚಾಪೆಗಳನ್ನು ನೇಯುವ ಉದ್ಯೋಗ ನಡೆಸಲು ಸಾಧ್ಯವಿದೆ. ಕೆಲವೆಡೆ ಈ ಪ್ರಯೋಗ ಈಗಾಗಲೇ ನಡೆದಿದೆ. ಜಿಲ್ಲೆಯಲ್ಲಿ ಮೂರನೇ ಒಂದು ಭಾಗದಷ್ಟು ಪ್ರದೇಶವು ಮಾತ್ರ ಸಮಮಟ್ಟವಾಗಿದ್ದು ಉಳಿದ ಭಾಗವು ಬೆಟ್ಟಗುಡ್ಡಗಳಿಂದ ಕೂಡಿರುವುದರಿಂದ ಕೃಷಿ ಬೆಳೆಗಳಿಗಿಂತಲೂ ಅಧಿಕವಾಗಿ ತೋಟದ ಬೆಳೆಗಳಾದ ಕಾಫಿ, ಏಲಕ್ಕಿ, ರಬ್ಬರ್, ಮೆಣಸು, ಕಿತ್ತಳೆ, ಅಡಿಕೆ ಮೊದಲಾದವುಗಳನ್ನು ಬೆಳೆಯುವ ಅವಕಾಶ ಅಧಿಕವಾಗಿದೆ. ಜಿಲ್ಲೆಯ ಪ್ರಮುಖ ಬೆಳೆಗಳು ಬತ್ತ ಮತ್ತು ರಾಗಿ. ಕಾಫಿಯು ಜಿಲ್ಲೆಯ ವಿಶಾಲ ಪ್ರದೇಶವನ್ನು ಆಕ್ರಮಿಸಿಕೊಂಡು ರಾಜ್ಯದ ಪ್ರತಿಶತ 59ರಷ್ಟು ಕಾಫಿ ತೋಟವನ್ನು ಹೊಂದಿದೆ. ಜಿಲ್ಲೆಯಲ್ಲಿ ಸುಮಾರು 44,000 ಹೆ.ನಷ್ಟು ಕಾಫಿ ತೋಟವಿದ್ದು, ರಾಜ್ಯದ ಕಾಫಿ ಬೆಳೆಯುವ ಪ್ರದೇಶ ಪ್ರತಿಶತ 41ರಷ್ಟು ವಿಸ್ತಾರ ಪ್ರದೇಶವನ್ನಾಕ್ರಮಿಸಿಕೊಂಡಿದೆ. ಇಲ್ಲಿನ 12,900 ಹೆ. ವಿಸ್ತಾರದಲ್ಲಿ 3,923 ಏಲಕ್ಕಿ ತೋಟಗಳಿವೆ. ತರಕಾರಿ ಮತ್ತು ಹಣ್ಣುಗಳಿಗೆ ಅಧಿಕ ಬೇಡಿಕೆ ಇರುವುದರಿಂದ ಇವುಗಳನ್ನು ಬೆಳೆಯಲು ಪ್ರೋತ್ಸಾಹ ಬೇಕಾಗಿದೆ. ಇಲ್ಲಿ ಬೆಳೆಯುವ ಪ್ರಮುಖ ಹಣ್ಣುಗಳು ಕಿತ್ತಳೆ, ಅನಾನಸ್, ಬಾಳೆಹಣ್ಣು ಮಾವಿನಹಣ್ಣು, ಸಪೋಟ, ಪಪ್ಪಾಯಿ, ಪೇರಳೆ ಮತ್ತು ಹಲಸು. ಇವುಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಮತ್ತು ಸಂಸ್ಕರಿಸಿ ಶೇಖರಿಸಿಡುವುದಕ್ಕೆ ಗಮನ ಹರಿಸಬಹುದಾಗಿದೆ. ಜಿಲ್ಲೆಯಲ್ಲಿ ಖನಿಜ ಸಂಪತ್ತಿನ ಅಭಾವ ಮತ್ತು ವಿದ್ಯುತ್ತಿನ ಅಭಾವವಿರುವುದರಿಂದ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಿಲ್ಲ; ಆದರೆ, ಅರಣ್ಯ ಮತ್ತು ತೋಟದ ಬೆಳೆಗಳ ಆಧಾರಿತ ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಸಾಕಷ್ಟು ಅವಕಾಶವಿದೆ.

ಜಿಲ್ಲೆಯ ಕೈಗಾರಿಕೆ, ಕೃಷಿ ಮತ್ತು ಇತರ ಕ್ಷೇತ್ರಗಳ ಪ್ರಗತಿಯು ಪ್ರಧಾನವಾಗಿ ವಿದ್ಯುಚ್ಛಕ್ತಿಯ ಸೌಲಭ್ಯವನ್ನವಲಂಬಿಸಿವೆ. 1945ರಲ್ಲಿಯೇ ಬರಪೊಳೆ ಜಲವಿದ್ಯುತ್ ಯೋಜನೆಗೆ ಸಮೀಕ್ಷೆ ನಡೆದು ಸುಮಾರು 30,000 ದಿಂದ 40,000 ಕಿ.ವ್ಯಾ. ವಿದ್ಯುತ್ ಒದಗಿಸುವ ಸಾಮರ್ಥ್ಯವನ್ನು ಇದು ಹೊಂದಿದೆ ಎಂಬ ತೀರ್ಮಾನಕ್ಕೆ ಬಂದಿದ್ದರೂ ಕಾರಣಾಂತರಗಳಿಂದ ಕಾರ್ಯಗತಗೊಳ್ಳದೆ ನಿಂತುಹೋಗಿರುವ ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದರೆ ಜಿಲ್ಲೆಯ ವಿದ್ಯುತ್ ಕೊರತೆಯನ್ನು ನೀಗಬಹುದು. ಗಾಳಿ ಶಕ್ತಿಯ ಸಹಾಯದಿಂದ ವಿದ್ಯುತ್ ತಯಾರಿಸುವ ಉದ್ದೇಶದಿಂದ ತಲಕಾವೇರಿಯಲ್ಲಿ ಡೆನ್ಮಾರ್ಕಿನ ನೆರವಿನೊಂದಿಗೆ ಸ್ಥಾಪಿಸಲಾಗಿರುವ 'ವಿಂಡ್‌ಮಿಲ್' ಸಹ ಸರಿಯಾಗಿ ಕಾರ್ಯ ನಿರ್ವಹಿಸದೆ ಜಿಲ್ಲೆಯು ವಿದ್ಯುತ್ ಉತ್ಪಾದನೆಯಿಂದ ವಂಚಿತವಾಗಿದೆ. ಈ ಎರಡು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರ ಮೂಲಕ ಜಿಲ್ಲೆಯನ್ನು ವಿದ್ಯುತ್ ಉತ್ಪಾದಿಸುವ ಜಿಲ್ಲೆಗಳ ಗುಂಪಿಗೆ ಸೇರಿಸುವುದರ ಜೊತೆಗೆ ಜಿಲ್ಲೆಯ ವಿದ್ಯುತ್ ಕೊರತೆಯನ್ನು ನೀಗಿಸಬಹುದು.

ಕೃಷಿಗೆ ಪೂರಕವಾಗಿರುವ ತೋಟದ ಬೆಳೆಗಳಾದ ಕಾಫಿ, ಏಲಕ್ಕಿ, ಕರಿಮೆಣಸು ಮೊದಲಾದವುಗಳ ಜೊತೆಗೆ ರೋಗಕ್ಕೆ ತುತ್ತಾಗಿ ನಶಿಸುತ್ತಿರುವ ಕಿತ್ತಳೆ ಮತ್ತು ಪ್ರಗತಿ ಕಾಣದೆ ಬಳಲುತ್ತಿರುವ ಗಾಳಿಬೀಡು ಟೀ ಯೋಜನೆಯನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತಂದು ಅವುಗಳು ಯಶಸ್ವಿಯಾಗುವಂತೆ ಮಾಡಿದರೆ ಜಿಲ್ಲೆಯ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ದೊರಕುವುದರ ಜೊತೆಗೆ ಜಿಲ್ಲೆಯ ಆದಾಯ ಮತ್ತು ತಲಾಆದಾಯವೂ ಹೆಚ್ಚುತ್ತದೆ. ಮರದ ದಿಮ್ಮಿಗಳನ್ನು ಸಾಗಿಸುವುದಕ್ಕಾಗಿ ಮಾಕುಟ್ಟದಲ್ಲಿ ನಿರ್ಮಿಸಿದ್ದ 'ಟ್ರಾಂವೇ' 1924ರ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಹೋದ ಮೇಲೆ ಅದರ ದುರಸ್ತಿಯಾಗದೆ ತ್ವರಿತ ಸಾಗಾಣಿಕೆಗೆ ಅಡಚಣೆಯಾಗಿದೆ. ಇದರ ಜೊತೆಗೆ ಜಿಲ್ಲೆಯ ಸಣ್ಣ ನದಿಗಳು ಮತ್ತು ಹಳ್ಳಗಳು ಮಳೆಗಾಲದಲ್ಲಿ ಮರದ ದಿಮ್ಮಿಗಳ ಸಾಗಾಣಿಕೆಗೆ ಸಹಾಯಕವಾಗಿವೆ. ಈಗಿರುವ ಸೌಲಭ್ಯಗಳ ಜೊತೆಗೆ ಪ್ರಕೃತಿ ಸೌಲಭ್ಯಗಳಾದ ಸಣ್ಣ ನದಿ ಮತ್ತು ಹಳ್ಳಗಳು ಮತ್ತು ಟ್ರಾಂವೇ ಸೌಲಭ್ಯಗಳನ್ನು ಉಪಯೋಗಿಸಿಕೊಂಡರೆ ಅರಣ್ಯ ಸರಕು ಸಾಗಣೆ ತ್ವರಿತಗೊಂಡು ಜಿಲ್ಲೆಯು ಪ್ರಗತಿಪಥದಲ್ಲಿ ಸಾಗಲು ಸಾಧ್ಯವಾಗುತ್ತದೆ.

ಜಿಲ್ಲೆಯಲ್ಲಿ ಸಣ್ಣ ಕೈಗಾರಿಕಾ ಬೆಳವಣಿಗೆಯು ಅರಣ್ಯ ಮತ್ತು ತೋಟದ ಬೆಳೆಗಳನ್ನು ಅವಲಂಬಿಸಿರುವುದರ ಜೊತೆಗೆ ಬೇಡಿಕೆ ಆಧಾರಿತ ಬಣ್ಣದ ಫೋಟೋ ಉದ್ದಿಮೆ, ಕಟ್ಟಡದ ಕಲ್ಲು ತುಂಡರಿಸುವುದು ಮತ್ತು ನಯಮಾಡುವುದು, ಅವಲಕ್ಕಿ ತಯಾರಿಸುವುದು, ಕಾಗದದ ಕವರುಗಳನ್ನು ಮಾಡುವುದು,

ಗುಂಡುಸೂಜಿ ಮತ್ತು ಜೆಮ್‌ಪಿನ್ ತಯಾರಿಸುವುದು, ಮುದ್ರಿತ ಸರ್ಕ್ಯುಲೇಷನ್ ಬೋರ್ಡ್ ತಯಾರಿಸುವುದು, ಬೆಂಕಿಕಡ್ಡಿ ಮತ್ತು ಬೆಂಕಿಪೊಟ್ಟಣವನ್ನು ತಯಾರಿಸುವುದು, ಪ್ಲಾಸ್ಟಿಕ್ ಸರಕುಗಳನ್ನು ತಯಾರಿಸುವುದು ಮೊದಲಾದವು ಗಳನ್ನು ಅವಲಂಬಿಸಿರುವುದರಿಂದ ಈ ಸರಕುಗಳ ಉತ್ಪಾದನೆಗೆ ಜಿಲ್ಲೆಯು ಸಾಕಷ್ಟು ಅವಕಾಶವನ್ನು ಹೊಂದಿದೆ. ಇವುಗಳ ಉತ್ಪಾದನೆಗೆ ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಹಣಕಾಸು ಸಂಸ್ಥೆಗಳ ನೆರವು ದೊರಕುವುದರಿಂದ ಬೇಡಿಕೆ ಆಧಾರಿತ ಸಣ್ಣ ಕೈಗಾರಿಕೆಗಳು ಜಿಲ್ಲೆಯ ಕೈಗಾರಿಕಾ ಪ್ರಗತಿಗೆ ಸಹಾಯ ವಾಗುವುದೇ ಅಲ್ಲದೆ ಜಿಲ್ಲೆಯ ನಿರುದ್ಯೋಗಿಗಳಿಗೆ ಉದ್ಯೋಗ ವಕಾಶವನ್ನು ಕಲ್ಪಿಸಿಕೊಟ್ಟು ಜಿಲ್ಲೆಯಲ್ಲಿನ ಕಾರ್ಮಿಕರ ತಲಾ ದಾಯದ ಮಟ್ಟವನ್ನು ಹೆಚ್ಚಿಸಿಕೊಂಡು ಜನರ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿವೆ.

ಟೆಸ್ಸಾರ್ ರೇಷ್ಮೆ ವ್ಯವಸಾಯ ಅಪೇಕ್ಷಿತ ಗಮನವನ್ನು ಪಡೆದಿಲ್ಲ. ಈ ಜಿಲ್ಲೆಯ ಪ್ರವಾಸೋದ್ಯಮ ಸಾಮರ್ಥ್ಯ ಅನುಪಮ. ಇಲ್ಲಿಯ ಸೃಷ್ಟಿಸೌಂದರ್ಯದ ಪರಿಚಯವನ್ನು ಜಗತ್ತಿಗೆ ಮಾಡಿಕೊಡುವ ಅವಕಾಶ ಅಪಾರವಾಗಿದೆ.